
ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶುಕ್ರವಾರ, 3 ಜುಲೈ 2026
ಸಂಪುಟ 16, ಸಂಚಿಕೆ 100, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಕೀವ್ ಮೇಲೆ ರಷ್ಯಾ ದಾಳಿ: 20 ಸಾವು | ೦೭
ಅಮರನಾಥ ಯಾತ್ರೆ ಆರಂಭ | ೦೭
ಭಾರತಕ್ಕೆ ಅಂದು ಬಂದವರು ನಿರಾಶ್ರಿತರಲ್ಲ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಶ್ರವಣ

ದಿನದ ಮಾತು

ಬಿರುಗಾಳಿ ಬೀಸುತ್ತಿದ್ದಾಗ ಮಾಡಿದ ಪ್ರತಿಜ್ಞೆಗಳು ಬಿರುಗಾಳಿ ಬೀಸಿ ಹೋದ ಮೇಲೆ ಮರೆತು ಹೋಗುತ್ತವೆ.
▲ ಮಹಾಭಾರತ

ಕಿರುಸುದ್ದಿ

ಮುಸ್ಲಿಂ ಯುವಕರಿಂದ ವ್ಯಾಪಾರಿಯ ಕೊಲೆ

ಹಾವೇರಿ (ರಟ್ಟೀಹಳ್ಳಿ): ಮೊಟ್ಟೆ ಖರೀದಿಸಿ ಚಿಲ್ಲರೆ ವಾಪಸ್ ಪಡೆಯುವ ವಿಚಾರವಾಗಿ ನಡೆದ ಗಲಾಟೆಯಲ್ಲಿ ಮುಸ್ಲಿಂ ಯುವಕರು ಹಿಂದು ವ್ಯಾಪಾರಿಯ ಮೇಲೆ ಹಲ್ಲೆ ನಡೆಸಿದ ಪರಿಣಾಮವಾಗಿ ತೀವ್ರ ಗಾಯಗೊಂಡಿದ್ದ ವ್ಯಾಪಾರಿ ಚಿಕಿತ್ಸೆಗೆಂದು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಮೃತಪಟ್ಟ ಘಟನೆ ರಟ್ಟೀಹಳ್ಳಿಯಲ್ಲಿ ಪಟ್ಟಣದಲ್ಲಿ ಬುಧವಾರ ತಡರಾತ್ರಿ ನಡೆದಿದೆ. ಈ ಸಂಬಂಧ ಮೂವರನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಪುಟ ೫

ಪಾಕ್‌ನಲ್ಲಿ 125 ವರ್ಷ ಹಳೆ ಗುರುದ್ವಾರ ಧ್ವಂಸ, ಖಂಡನೆ

ಪುಟ ೦೭

ಪ್ರವೇಶ ಪರೀಕ್ಷೆಗಳಲ್ಲಿ ಸುಧಾರಣೆಗೆ ಚಿಂತನೆ

ಪುಟ ೦೭

ಐಎಸ್‌ಐ ಜಾಲ ಭೇದಿಸಿದ ಪೊಲೀಸ್, ನಾಲ್ವರ ಸೆರೆ

ಪುಟ ೦೭

ಉಗ್ರವಾದ ಕಿತ್ತೊಗೆಯಲು ಕರೆ

ಪುಟ ೦೭

ಬರಗಾಲದ ಮುನ್ಸೂಚನೆ ಹಿನ್ನೆಲೆ ರೈತರಿಗೆ ಸರ್ಕಾರ ಸಲಹೆ

ಅಣೆಕಟ್ಟು ನೀರು ನಂಬಿ ಬಿತ್ತನೆ ಮಾಡಲೇಬೇಡಿ

ಬೆಂಗಳೂರು: ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಎದುರಾಗುವ ಮುನ್ಸೂಚನೆಯಿರುವುದರಿಂದ ರೈತರು ಜಲಾಶಯದ ನೀರನ್ನು ನಂಬಿ ಬೆಳೆ ಹಾಕದಂತೆ ಜಾಗೃತಿ ಮೂಡಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.





ವಿಧಾನಸೌಧದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆ ಬಳಿಕ ಅವರು ಸಂಪುಟದ ನಿರ್ಣಯಗಳನ್ನು ಮಾಧ್ಯಮದವರಿಗೆ ವಿವರಿಸಿದರು. ರಾಜ್ಯದ ಜಲಾಶಯಗಳಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.20ಕ್ಕಿಂತ ಹೆಚ್ಚು ಒಳಹರಿವಿನ ಕೊರತೆಯಿದೆ. ಇನ್ನೂ ಕೆಲವು ಕಡೆ ಒಳಹರಿವು ಶೂನ್ಯಕ್ಕೆ ತಲುಪಿದೆ. ಆದ್ದರಿಂದ ಬರಗಾಲ ಪರಿಸ್ಥಿತಿಗಾಗಿ ನಿಯೋಜಿಸಿದ ಉಸ್ತುವಾರಿ ಸಚಿವರು ತಮ್ಮ ತಮ್ಮ ಜಿಲ್ಲೆಗಳಿಗೆ ತೆರಳಿ ಪರಿಶೀಲನೆ ನಡೆಸಬೇಕು. ನಾನು ಕೂಡ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಗೆ ಪ್ರವಾಸ ಮಾಡುತ್ತೇನೆ, ನಂತರ ಜಿಲ್ಲಾ ಕೇಂದ್ರಗಳಿಗೆ ತೆರಳಿ ಅಲ್ಲಿ ಪರಿಶೀಲನೆ ನಡೆಸುತ್ತೇನೆ ಎಂದರು. ಪ್ರಧಾನ ಮಂತ್ರಿಯವರು ಕೂಡ ಬರಗಾಲದ ಕುರಿತು ಎಚ್ಚರಿಕೆ ಕೊಟ್ಟಿದ್ದಾರೆ. ಇಡೀ ದೇಶದಲ್ಲಿ ನೀರು, ವಿದ್ಯುಚ್ಛಕ್ತಿಗೆ ಭಾರೀ ಅಭಾವವಾಗುವ ಎಲ್ಲ ಲಕ್ಷಣಗಳು ಕಾಣುತ್ತಿವೆ. ಪುಟ ೪

ರೈತರು ಒತ್ತಡ ಸೃಷ್ಟಿಸಬೇಡಿ

ನೀರು ಬಿಡುವ ವಿಚಾರದಲ್ಲಿ ರೈತರು ಒತ್ತಡ ಸೃಷ್ಟಿಸಬಾರದು. ಜಲಾಶಯದ ನೀರನ್ನು ನಂಬಿ ಯಾವುದೇ ಬೆಳೆ ಹಾಕಿಕೊಳ್ಳಬೇಡಿ. ಜಲಾಶಯದಲ್ಲಿ ನೀರಿಲ್ಲದೇ ಬೆಳೆಗಳಿಗೆ ನೀರು ಬಿಡಲು ಸಾಧ್ಯ ವಿಲ್ಲ. ಆದ್ದರಿಂದ ಮಳೆಯನ್ನು ಆಧರಿಸಿ, ಯೋಚಿಸಿ ಬಿತ್ತನೆ ಮಾಡಬೇಕು. ಜಲಾಶಯಗಳು ಭರ್ತಿ ಆಗುವವರೆಗೂ ಬೆಳೆಗಳ ಕುರಿತು ರೈತರು ಯೋಚಿಸದಿರುವುದೇ ಉತ್ತಮ. ದೇಶ ದಲ್ಲೇ ಈ ಸಮಸ್ಯೆ ಇದೆ. ಮಳೆ ಬಂದರೆ ರೈತರಿಗೆ ಖಂಡಿತ ನೀರು ಒದಗಿಸುತ್ತೇವೆ. ಈ ವರ್ಷ ಭೀಕರ ಬರಗಾಲ ಬರುವ ಸಂದೇಶವನ್ನು ಕೇಂದ್ರ ಸರ್ಕಾರ ನೀಡಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ತಿಂಗಳಿಗೆ ಎರಡು ದಿನ ಪ್ರಜಾಸೇವೆ ಅಭಿಯಾನ

ಪ್ರತಿ ಜಿಲ್ಲಾ ಉಸ್ತುವಾರಿ ಸಚಿವರು ಕಡ್ಡಾಯವಾಗಿ ತಿಂಗಳಿಗೆ 2 ದಿನ(ಮೊದಲ ಹಾಗೂ ಮೂರನೇ ಶನಿವಾರ) 2 ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ ಈ ಪ್ರಜಾಸೇವೆ ಅಭಿಯಾನದಲ್ಲಿ ಭಾಗವಹಿಸಬೇಕು. ಎಲ್ಲಾ ಇಲಾಖೆಗಳ ಶಾಖೆಗಳನ್ನು ಅಲ್ಲಿ ತೆರೆಯಲಾಗುವುದು. ಆ ಜಿಲ್ಲೆಗೆ ಸಂಬಂಧಿಸಿದ ಅಧಿಕಾರಿಗಳು ಅಲ್ಲಿ ಉಪಸ್ಥಿತರಿರಬೇಕು. ಆ ಭಾಗದ ಜನರಿಗೆ ಈ ಸಭೆ ಕುರಿತು ಮುಂಚಿತವಾಗಿ ಮಾಹಿತಿ ನೀಡಲಾಗುವುದು. ಸರ್ಕಾರವೇ ಜನರ ಮನೆ ಬಾಗಿಲಿಗೆ ಹೋಗುವಂತಾಗಬೇಕು. ನಾನೂ ಕೆಲವು ತಾಲೂಕುಗಳಿಗೆ ನಡುನಡುವೆ ಭೇಟಿ ಮಾಡುತ್ತೇನೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಪುಟ ೪

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ವಿರೋಧ



ವಿದ್ಯುತ್ ವಿತರಣೆಯನ್ನು ಖಾಸಗಿಯವರಿಗೆ ನೀಡುವ ವಿಚಾರವಾಗಿ ಎಲ್ಲಾ ಎಸ್ಕಾಂಗಳು ತಮ್ಮ ಆಕ್ಷೇಪಣೆಗಳನ್ನು ಕೆಇಆರ್‌ಸಿ ಸಲ್ಲಿಸಬೇಕು. ಆಗ ಸರ್ಕಾರವೂ ಖಾಸಗೀಕರಣಕ್ಕೆ ಸಹಮತಿ ಇಲ್ಲ ಎನ್ನಲು ಸಾಧ್ಯವಾಗುತ್ತದೆ ಎಂದು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಮನಗರದಲ್ಲಿ ಸಾಮೂಹಿಕ ಪರಿಷ್ಕರಣೆ

ಎಸ್‌ಐಆರ್ ನಿಯಮ ಉಲ್ಲಂಘಿಸಿ ಪ್ರಕ್ರಿಯೆ

ರಾಮನಗರ/ಬೆಂಗಳೂರು: ರಾಮನಗರ ವಿಧಾನ ಸಭಾ ಕ್ಷೇತ್ರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗದ ಮಾರ್ಗ ಸೂಚಿಗಳನ್ನು ಉಲ್ಲಂಘಿಸಿರುವುದು ಬೆಳಕಿಗೆ ಬಂದಿದೆ.

ಎಸ್‌ಐಆರ್ ನಿಯಮದಂತೆ ಬಿಎಲ್‌ಒಗಳು ಕಡ್ಡಾಯವಾಗಿ ಪ್ರತಿಯೊಬ್ಬ ಮತದಾರನ ಮನೆಗೆ ಭೇಟಿ ನೀಡಿ, ಎಮ್ಯುನರೇಷನ್ ಫಾರಂಗಳನ್ನು ವಿತರಿಸಬೇಕು. ಭರ್ತಿ ಮಾಡಿದ ಫಾರಂಗಳನ್ನು ಪರಿಶೀಲಿಸಿ, ನಂತರ ಅವುಗಳನ್ನು ಸ್ವೀಕರಿಸಿ ಆ್ಯಪ್‌ನಲ್ಲಿ ಅಪ್ಲೋಡ್ ಮಾಡಬೇಕು. ಆದರೆ, ಇವೆಲ್ಲವನ್ನು ಗಾಳಿಗೆ ತೂರಿ ರಾಮನಗರ ಟೌನ್ ನಗರಸಭೆಯ ವಾರ್ಡ್ ನಂ–23, ಟಿಪ್ಪುನಗರದ ಸಮುದಾಯ ಭವನವೊಂದರಲ್ಲಿ ಬೂತ್ ನಂ. 90, 92, 101, 108, 114 ವ್ಯಾಪ್ತಿಯ ಬಿಎಲ್‌ಒಗಳು ಸಾಮೂಹಿಕವಾಗಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗಿದೆ ಎಂಬ ಆರೋಪ ಕೇಳಿಬಂದಿದೆ.ಸ್ಥಳೀಯ ಮುಖಂಡರ ಒತ್ತಡಕ್ಕೆ ಮಣಿದ ಬಿಎಲ್‌ಒಗಳು, ತಮಗೂ ಕೆಲಸ ಸಲೀಸಾಗಲಿದೆ ಎಂದು ಈ ನಡೆ ಅನುಸರಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಆದ ಬೆನ್ನಲ್ಲೇ ಎಚ್ಚೆತ್ತ ಮೇಲಾಧಿಕಾರಿಗಳು ಸಾಮೂಹಿವಾಗಿ ಈ ರೀತಿ ಎಸ್‌ಐಆರ್ ಪ್ರಕ್ರಿಯೆ ಮಾಡುವುದಕ್ಕೆ ಕಡಿವಾಣ ಹಾಕಿದ್ದಾರೆ. ಕಡ್ಡಾಯವಾಗಿ ಮತದಾರರ ಮನೆ ಮನೆಗೆ ಹೋಗುವಂತೆ ಮತಗಟ್ಟೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಇದು ಕಾನೂನು ಬಾಹಿರ. ಇದನ್ನು ಯಾರೇ ಮಾಡಿದರೂ ಅದಕ್ಕೆ ಅವಕಾಶ ನೀಡುವುದಿಲ್ಲ. ನಮ್ಮ ಶಾಸಕರು ಮಾಡಿದರೂ ನಾವು ಅದಕ್ಕೆ ಅವಕಾಶ ನೀಡುವುದಿಲ್ಲ. ಜಯನಗರದಲ್ಲಿ ಬಿಜೆಪಿ ಶಾಸಕರು ಇದನ್ನೇ ಮಾಡುತ್ತಿದ್ದಾರೆ. ಎಲ್ಲೇ ಆದರೂ ಬಿಎಲ್‌ಒಗಳೇ ವಿತರಣೆ ಮಾಡಬೇಕು. ಜು.29ರವರೆಗೆ ಕಾಲಾವಕಾಶವಿದೆ. ಬಿಎಲ್‌ಒಗಳು ಮನೆಗೇ ಹೋಗಿ ಅರ್ಜಿ ನೀಡಬೇಕು.
■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ



ಬಿಜೆಪಿ–ಜೆಡಿಎಸ್ ತೀವ್ರ ಆಕ್ಷೇಪ

ರಾಮನಗರದಲ್ಲಿ ಕೇಂದ್ರ ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಮತ್ತು ನವೀಕರಿಸಲು ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಮನೆ ಮನೆಗೆ ತೆರಳಿ ಮತದಾರರ ಮಾಹಿತಿ ಪರಿಶೀಲಿಸುವ ಬದಲು, ಒಂದೇ ಕಡೆ ಜನರನ್ನು ಸೇರಿಸಿ ನಿಯಮ ಉಲ್ಲಂಘಿಸಲಾಗಿದೆ ಎಂದು ಜೆಡಿಎಸ್ ಮತ್ತು ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಪಡೆಯುವ ಬದಲು, ಕಲ್ಯಾಣ ಮಂಟಪವೊಂದರಲ್ಲಿ ಜನರನ್ನು ಗುಂಪುಗೂಡಿಸಿ ಎಸ್‌ಐಆರ್ ಪ್ರಕ್ರಿಯೆ ನಡೆಸಿದ್ದಾರೆ. ಅಧಿಕಾರಿಗಳ ಈ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಗೆ ರಾಮನಗರದಲ್ಲಿ ಬೃಹತ್ ಸ್ಕ್ಯಾಮ್ ಅಂಟಿಕೊಂಡಿದ್ದು, ವಿಡಿಯೋ ಸಮೇತವಾಗಿ ರಾಮನಗರದಲ್ಲಿ ನಡೆಯುತ್ತಿರುವ ಅಕ್ರಮವನ್ನು ಬಯಲು ಮಾಡಿದರು. ಪುಟ ೪

ಕ್ವಾರಿ ಕುಸಿದು ಏಳು ಕಾರ್ಮಿಕರ ಸಾವು

ರಾಮನಗರ: ಬೆಂಗಳೂರುದಕ್ಷಿಣತಾಲೂಕಿನ ತಾವರೆಕೆರೆ ಹೋಬಳಿಯ ಮಾದಾಪಟ್ಟಣದ ಬಳಿಯ ಕ್ವಾರಿಯೊಂದರಲ್ಲಿ ಸಂಭವಿಸಿದ ಘೋರ ದುರಂತರದಲ್ಲಿ 7 ಕಾರ್ಮಿಕರು ಮೃತಪಟ್ಟು, 5 ಮಂದಿ ಗಾಯಗೊಂಡಿದ್ದಾರೆ. ಯಾದಗಿರಿ ಜಿಲ್ಲೆಯ ರಾಮ ನಾಯ್ಕ (46),



ಮಧ್ಯಪ್ರದೇಶದ ರಾಜಪಾಲ್ ಸಿಂಗ್(35), ಸತ್ಯನಾರಾಯಣ ಸಿಂಗ್(31), ರಾಮವತಾರ ಸಿಂಗ್(31), ರಾಜೇಶ್ ಪ್ರಸಾದ್(32), ಧರ್ಮೇಶ್ ಸಿಂಗ್(30), ಛತ್ತೀಸ್‌ಗಢ ಮೂಲದ ಸಿಮ್ರಾನ್ ಖಾನ್ ಪರ್ದು(34) ಮೃತ ದುರ್ದೈವಿಗಳು. ಪುಟ ೪

ಹಲವು ಒಪ್ಪಂದಗಳಿಗೆ ಮೋದಿ–ತಕೈಚಿ ಸಹಿ

ಎಐ, ರಕ್ಷಣೆ, ಇಂಧನ, ಆರೋಗ್ಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ

ಹೊಸದಿಲ್ಲಿ: ಕೃತಕ ಬುದ್ಧಿಮತ್ತೆ, ಆರ್ಥಿಕ ಭದ್ರತೆ, ಅಪೂರ್ವ ಖನಿಜಗಳು, ರಕ್ಷಣೆ, ಆರೋಗ್ಯ ಮತ್ತು ಇಂಧನ ರಂಗಗಳಲ್ಲಿ ದ್ವಿಪಕ್ಷೀಯ ಸಹಕಾರ ಬಲಪಡಿಸುವ ಆಶಯದ, ಹಲವು ಮಹತ್ತ್ವದ ಒಪ್ಪಂದಗಳಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಸನೇ ತಕೈಚಿ ಗುರುವಾರ ಸಹಿ ಹಾಕಿದ್ದಾರೆ. ಏಷ್ಯಾದ ಅತ್ಯಂತ ಪರಿಣಾಮಕಾರಿ ವ್ಯೂಹಾತ್ಮಕ ಪಾಲುದಾರಿಕೆಗಳಲ್ಲೊಂದಾಗಿ ಭಾರತ–ಜಪಾನ್ ಪಾಲುದಾರಿಕೆಯನ್ನು ಔನ್ನತ್ಯಕ್ಕೇರಿಸುವುದು ಉಭಯ ನಾಯಕರ ಸಂಕಲ್ಪವಾಗಿದೆ. ಪುಟ ೪



ಜಪಾನ್‌ನಿಂದ 1,000 ಕೋಟಿ ರೂ. ಹೂಡಿಕೆ

ಪುಟ ೪

ಸಂಘದ ಕುರಿತ ಪ್ರಿಯಾಂಕ್ ವಾದ ತಿರಸ್ಕರಿಸಿದ ಕೋರ್ಟ್

ಬೆಂಗಳೂರು: ಆರ್‌ಎಸ್‌ಎಸ್ ನೋಂದಾಯಿತ ಸದಸ್ಯತ್ವವನ್ನು ಹೊಂದಿಲ್ಲ. ಹಾಗಾಗಿ ಸಂಘದ ಸದಸ್ಯರು ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹೂಡಲು ಸಾಧ್ಯವಿಲ್ಲ ಎನ್ನುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ವಾದವನ್ನು ಬೆಂಗಳೂರಿನ ವಿಶೇಷ ನ್ಯಾಯಾಲಯವು ತಿರಸ್ಕರಿಸಿದೆ.



ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ವಿರುದ್ಧದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ವಿಚಾರಣೆ ನಡೆಸಿದ ಬೆಂಗಳೂರಿನ ವಿಶೇಷ ನ್ಯಾಯಾಲಯವು, ಆರ್‌ಎಸ್‌ಎಸ್ ನೋಂದಾಯಿತ ಸಂಘಟನೆಯಲ್ಲ ಮತ್ತು ದೂರುದಾರ ತೇಜಸ್ ತಾವು ತೀವ್ರ ಬಲಪಂಥೀಯ ಹಿಂದು ರಾಷ್ಟ್ರೀಯತಾವಾದಿ ಸಂಘಟನೆಯ ಸದಸ್ಯ ಎಂದು ತೋರಿಸಲು ತಮ್ಮ ಸ್ವಂತ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಯಾವುದೇ ಸಾಕ್ಷ್ಯದಿಂದ ಸಾಬೀತುಪಡಿಸಿಲ್ಲ ಎಂಬ ಕಾರಣಕ್ಕೆ ದೂರು ಸಮರ್ಥನೀಯವಲ್ಲ ಎಂಬ ಖರ್ಗೆ ಪರ ವಕೀಲರ ವಾದವನ್ನು ಕೋರ್ಟ್ ತಿರಸ್ಕರಿಸಿದೆ. ಆರೆಸ್ಸೆಸ್ ನೋಂದಣಿಯಾಗಿಲ್ಲ, ಆದ್ದರಿಂದ ಸಂಘದ ಸದಸ್ಯರು ದೂರನ್ನು ನೀಡಲು ಸಾಧ್ಯವಿಲ್ಲ ಎಂಬ ಖರ್ಗೆ ವಾದ ಸಮರ್ಥನೀಯ ಅಲ್ಲ ಎಂದು ಹೇಳಿದೆ. ಪುಟ ೪

52 ಪ್ರಕರಣಗಳ ಹಿಂಪಡೆಯುವ ಸರ್ಕಾರ ಆದೇಶಕ್ಕೆ ಹೈಕೋರ್ಟ್ ತಡೆ



ಬೆಂಗಳೂರು: ಕಲಬುರಗಿ ಜಿಲ್ಲೆ ಆಳಂದ ತಾಲೂಕಿನ ಲಾಡ್ಲೆ ಮಶಾಕ್ ದರ್ಗಾ ಗಲಭೆ ಸೇರಿ ಕೆಲವು ಕೋಮುಗಲಭೆ ಪ್ರಕರಣ ಸೇರಿದಂತೆ ಹಲವು ರಾಜಕಾರಣಿಗಳು, ರೈತಪರ, ಕನ್ನಡಪರ ಹಾಗೂ ಸಾಮಾಜಿಕ ಹೋರಾಟಗಾರರ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಪ್ರಕರಣಗಳನ್ನು ಹಿಂಪಡೆದಿರುವ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಗುರುವಾರ ತಡೆ ನೀಡಿದೆ. ಮೇ 27ರಂದು ರಾಜ್ಯ ಗೃಹ ಇಲಾಖೆಯು ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುವಂತೆ ಸರ್ಕಾರಿ ಅಭಿಯೋಜಕರಿಗೆ ಆದೇಶಿಸಿತ್ತು. ಪುಟ ೪

ಕಿರುಸುದ್ದಿ

ಸಂತೋಷ ಚಾಕಾಪುರ ಸಾಧನೆ: ಸನ್ಮಾನ



ಕುಂದಗೋಳ: ಪಟ್ಟಣದ ಜೆಎಸ್ಎಸ್ ವಿದ್ಯಾಪೀಠದ ಪದವಿ ಪೂರ್ವ ಕಾಲೇಜ್ 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ರಸಾಯನಶಾಸ್ತ್ರ ವಿಷಯದಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸಿ ಗಮನಾರ್ಹ ಸಾಧನೆ ಮಾಡಿದೆ. ಈ ಅತ್ಯುತ್ತಮ ಸಾಧನೆಗೆ ಕಾರಣರಾದ ರಸಾಯನಶಾಸ್ತ್ರ ಉಪನ್ಯಾಸಕ ಸಂತೋಷ ಚಾಕಾಪುರ ಅವರನ್ನು ಧಾರವಾಡ ಜಿಲ್ಲಾ ರಸಾಯನಶಾಸ್ತ್ರ ಉಪನ್ಯಾಸಕರ ವೇದಿಕೆ ವತಿಯಿಂದ ಹುಬ್ಬಳ್ಳಿ ಚೇತನ ಕಾಲೇಜಿನಲ್ಲಿ ಆಯೋಜಿಸಿದ್ದ ಉಪನ್ಯಾಸಕರ ಕಾರ್ಯಾಗಾರದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಸಂತೋಷ ಚಾಕಾಪುರ ಬೋಧನಾ ನೈಪುಣ್ಯ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೀಡಿದ ಮಾರ್ಗದರ್ಶನ ಹಾಗೂ ಶೇ.100 ಫಲಿತಾಂಶ ಸಾಧಿಸಿರುವುದು ಕಾಲೇಜಿನ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ಮೆಗುಂಡಿ ಹರ್ಷ ವ್ಯಕ್ತಪಡಿಸಿದ್ದಾರೆ. ಈ ಸಾಧನೆಗೆ ಶಿವಾನಂದ ವಿದ್ಯಾಪೀಠದ ಆಡಳಿತ ಮಂಡಳಿ, ಪ್ರಾಚಾರ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ ಸಮೂಹ ಮತ್ತು ಪಾಲಕರು ಹರ್ಷ ವ್ಯಕ್ತಪಡಿಸಿ, ಸಂತೋಷ ಚಾಕಾಪುರಗೆ ಅಭಿನಂದನೆ ಸಲ್ಲಿಸಿದ್ದಾರೆ.

ವಿನಾಯಕಗೆ ಪ್ರಶಸ್ತಿ



ಕಲಘಟಗಿ: ಪಟ್ಟಣದ ಜಿಆ ಗರ್ಲ್ಸ್ ಸ್ಕೂಲ್ ಶಿಕ್ಷಕ ವಿನಾಯಕ ಶೆಟ್ಟರಗೆ, ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಜರುಗಿದ ಕರ್ನಾಟಕ ರಾಜ್ಯ ನಾಟಕ ಬರಹಗಾರರ ಸಂಘದವರು ಏರ್ಪಡಿಸಿದ್ದ ಗಾನಯೋಗಿ ಪಂಚಾಕ್ಷರಿ ಪುಟ್ಟರಾಜ ಗವಾಯಿಯವ ಜಯಂತೋತ್ಸವದ ನಿಮಿತ್ತ ರಾಜ್ಯ ಮಟ್ಟದ ಲೇಖಕರ ಮಹಾಸಮ್ಮೇಳನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಬಸವ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ದೇವರ ಹಿಪ್ಪರಗಿಯ ಶಾಸಕ ಭೀಮನಗೌಡ ಪಾಟೀಲ್, ಸಂಘದ ಗೌರವಾಧ್ಯಕ್ಷ ಡಿ.ಆರ್. ಪೂಜಾರ್, ರಾಜ್ಯಾಧ್ಯಕ್ಷ ಶಂಕರ ಹಿಪ್ಪರಗಿ, ಸಿದ್ದಪ್ಪ ಅಲಗೋಡ, ವಿನಾಯಕ್ ನಾಯ್ಕ್ ಇದ್ದರು.

ಮಹಿಳೆಗೆ ಕಿರುಕುಳ: ನಾಲ್ವರ ವಿರುದ್ಧ ದೂರು ದಾಖಲು

ಹುಬ್ಬಳ್ಳಿ: ಮಹಿಳೆಗೆ ಕಿರುಕುಳ ನೀಡಿದ ಆರೋಪದ ಮೇಲೆ ಗಿರೀಶ್ ಗದಿಗೆಪ್ಪಗೌಡರ ಸೇರಿ ನಾಲ್ವರ ವಿರುದ್ಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗಿರೀಶ್ ಗದಿಗೆಪ್ಪಗೌಡರ, ರಾಕೇಶ ಕರ್ಜಗಿಮಠ, ರಿಷಬ್ ಸಾಲಿಮಠ, ಸೌರವ ನಾಯಕ ಎಂಬುವರ ವಿರುದ್ಧ ಮಹಿಳೆ ದೂರು ನೀಡಿದ್ದಾರೆ. ಗಿರೀಶ್ ಗದಿಗೆಪ್ಪಗೌಡರ ದೇಶಪಾಂಡೆ ನಗರದ ಮಹಿಳೆಯೊಬ್ಬರಿಗೆ ಪದೇ ಪದೇ ವಾಟ್ಸ್ಆಪ್ ಕಾಲ್ ಮಾಡಿ ಬ್ರಾಂಡೆಡ್ ಬ್ಯಾಗ್ ಕೊಡಿಸುತ್ತೇನೆ, ಭೇಟಿಯಾಗು ಅಂತಾ ಪೀಡಿಸುತ್ತಿರುವುದಾಗಿ ಅಲ್ಲದೆ, ಗದಿಗೆಪ್ಪಗೌಡರ ಕುಮ್ಮಕ್ಕಿನಿಂದ ರಾಕೇಶ, ರಿಷಬ್, ಸೌರವ ಸೇರಿಕೊಂಡು ಮಹಿಳೆಗೆ ಹಾಗೂ ಪರಿಚಿತ ಅಕ್ಷಯ ಎಂಬಾತನಿಗೆ ಬೈದು ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಜಾತಿ ನಿಂದನೆ ಹಾಗೂ ಜೀವ ಬೆದರಿಕೆ ಹಾಕಿದ ಕುರಿತು ಗೋಕುಲ ಪೊಲೀಸ್ ಠಾಣೆಯಲ್ಲಿ ಮತ್ತೊಂದು ದೂರು ದಾಖಲಾಗಿದೆ.

ಮಣ್ಣು ಕುಸಿದು ಕಾರ್ಮಿಕ ಸಾವು

ಹುಬ್ಬಳ್ಳಿ: ಒಳಚರಂಡಿ ಪೈಪ್ ಅಳವಡಿಸುವಾಗ ಮಣ್ಣು ಕುಸಿದು ಮಹಾನಗರ ಪಾಲಿಕೆ ಗುತ್ತಿಗೆ ಪದ್ಧತಿಯಡಿ ಕೆಲಸ ಮಾಡುತ್ತಿದ್ದ ಓರ್ವ ಕಾರ್ಮಿಕ ಮೃತಪಟ್ಟಿರುವ ಘಟನೆ ದೇಶಪಾಂಡೆ ನಗರದ ಗುಜರಾತ್ ಭವನದ ಹತ್ತಿರ ನಡೆದಿದೆ. ಅಣ್ಣಿಗೇರಿ ತಾಲೂಕಿನ ಹಳ್ಳಿಕೇರಿ ಗ್ರಾಮದ ನಿವಾಸಿ ಮಲ್ಲಪ್ಪ ಜೋಗಿನ(30) ಮೃತಪಟ್ಟಿರುವ ವ್ಯಕ್ತಿ. ಮಂಜುನಾಥ ಬಮ್ಮಿಗಟ್ಟಿ ಎಂಬಾತ ಪೈಪ್‌ಲೈನ್ ಅಳವಡಿಸಲು ಕಾಮಗಾರಿಗೆ ಗುತ್ತಿಗೆ ಪಡೆದು ಗುರುವಾರ ಕೆಲಸ ಆರಂಭಿಸಿದ್ದ. ಜೆಸಿಬಿ ಮೂಲಕ ತೆಗ್ಗು ತೆಗೆಯುವ ಕಾರ್ಯ ನಡೆದಿತ್ತು. ಈ ವೇಳೆ ಮಲ್ಲಪ್ಪನ ಮೇಲೆ ಮಣ್ಣು ಕುಸಿದು ಅವಶೇಷಗಳಲ್ಲಿ ಸಿಕ್ಕು ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.



ಹುಬ್ಬಳ್ಳಿ: ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಈಸ್ಟ್, ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ವಿದ್ಯಾನಗರ ಹಾಗೂ ರಾಷ್ಟ್ರೋತ್ಥಾನ ರಕ್ತ ಕೇಂದ್ರದ ವತಿಯಿಂದ ಹುಬ್ಬಳ್ಳಿ ಚಿಟಗುಪ್ಪಿ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರ ನಡೆಯಿತು. ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಈಸ್ಟ್ ಅಧ್ಯಕ್ಷ ಡೇವಿಡ್ ಮಸ್ಕರೇನಸ್, ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ವಿದ್ಯಾನಗರ ಅಧ್ಯಕ್ಷೆ ಮೀನಲ್ ಶಾ, ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಈಸ್ಟ್ ಕಾರ್ಯದರ್ಶಿ ರುದ್ರಗೌಡ ಹರಕುಣಿ, ಸದಸ್ಯರಾದ ಸೈಮನ್ ಡಿ'ಸೋಜಾ, ಪ್ರಭು ಲಿಗಾಡಿ, ಉಮೇಶ್ ನಾಶಿಪುಡಿಮಠ, ಪ್ರಮೋದ ಕಾಮತ್ ಇದ್ದರು.

ಹುಬ್ಬಳ್ಳಿಯಲ್ಲಿ ರೈಲ್ವೆ ಕೋಚ್ ಫ್ಯಾಕ್ಟರಿ ಸ್ಥಾಪಿಸಲು ಮನವಿ

ಹುಬ್ಬಳ್ಳಿ: ಉತ್ತರ ಕರ್ನಾಟಕದ ಕೈಗಾರಿಕಾ, ಆರ್ಥಿಕ ಹಾಗೂ ಉದ್ಯೋಗ ವೃದ್ಧಿಗೆ ಮಹತ್ವದ ಕೊಡುಗೆ ನೀಡಬಲ್ಲಂತ ಹುಬ್ಬಳ್ಳಿಯಲ್ಲಿ ರೈಲ್ವೆ ಕೋಚ್ ಫ್ಯಾಕ್ಟರಿ ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಮನವಿ ಮಾಡಿದೆ. ಈ ಕುರಿತು ಕೆಸಿಸಿಐ ಸಂಸ್ಥೆ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ ಪ್ರಕಟಣೆಗೆ ತಿಳಿಸಿದ್ದು, ಉತ್ತರ ಕರ್ನಾಟಕದ ದೀರ್ಘಕಾಲದ ಕನಸನ್ನು ನನಸಾಗಿಸುವ ಈ ಯೋಜನೆ ಮುಂಬರುವ ರೈಲ್ವೆ ಅಭಿವೃದ್ಧಿ ಯೋಜನೆಗಳಲ್ಲಿ ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸುವಂತೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಆಗ್ರಹಿಸಿದ್ದಾರೆ. ಕರ್ನಾಟಕದ 2ನೇ ಅತೀದೊಡ್ಡ ವಾಣಿಜ್ಯ ಮತ್ತು ಕೈಗಾರಿಕಾ ಕೇಂದ್ರವಾಗಿರುವ ಹುಬ್ಬಳ್ಳಿ, ನೈರುತ್ಯ ರೈಲ್ವೆ ವಲಯದ ಪ್ರಧಾನ ಕಚೇರಿ ಹೊಂದಿರುವ ದೇಶದ ಪ್ರಮುಖ ರೈಲ್ವೆ ನಗರವಾಗಿದೆ. ರೈಲ್ವೆ ಕೋಚ್ ಫ್ಯಾಕ್ಟರಿ ಸ್ಥಾಪಿಸಲು ಹುಬ್ಬಳ್ಳಿ ಅತ್ಯಂತ ಸೂಕ್ತ ಸ್ಥಳವಾಗಿದೆ ಎಂದು ತಿಳಿಸಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು ಎಂಟು ಕೈಗಾರಿಕಾ ಪ್ರದೇಶಗಳು, ನೂರಾರು ಸೂಕ್ಷ್ಮ, ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳು ರೈಲ್ವೆ ಕೋಚ್ ನಿರ್ಮಾಣಕ್ಕೆ ಅಗತ್ಯವಿರುವ ಬಿಡಿ ಭಾಗಗಳು, ಯಾಂತ್ರಿಕ ಉಪಕರಣಗಳು ಹಾಗೂ ಪೂರಕ ಉತ್ಪನ್ನಗಳ ತಯಾರಿಕೆಯಲ್ಲಿ ಪ್ರಮುಖ ಪಾತ್ರವಹಿಸಲು ಸಮರ್ಥವಾಗಿವೆ. ಇದರಿಂದ ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ', 'ಆತ್ಮನಿರ್ಭರ ಭಾರತ' ಹಾಗೂ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡುವ ನೀತಿಗಳಿಗೆ ಮತ್ತಷ್ಟು ಬಲ ಸಿಗಲಿದೆ ಎಂದು ಹೇಳಿದ್ದಾರೆ. ಈ ಭಾಗವು ದೇಶದ ಪ್ರಮುಖ ಕೈಗಾರಿಕಾ ವಲಯವಾಗಿ ಬೆಳೆಯುವ ಸಾಮರ್ಥ್ಯ ಹೊಂದಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಹುಬ್ಬಳ್ಳಿ: ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಮಿಡ್‌ಟೌನ್‌ನ 2026-27ನೇ ಸಾಲಿನ ಅಧ್ಯಕ್ಷ ಸಂಜಯ್ ಕುಸ್ತಗಿ ತಂಡದ ಪದಗ್ರಹಣ ಇತ್ತೀಚೆಗೆ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು. ಪಿಡಿಜಿ ರೋ. ನಾಸಿರ್ ಬೋರ್ಸದ್ವಾಲಾ, ಅಸಿಸ್ಟೆಂಟ್ ಗವರ್ನರ್ ರೋ. ನಾಗರಾಜ ಶೆಟ್ಟಿ, ರೋ. ಮುಕೇಶ ಪಾಂಚಾಲ, ರೋ. ಅರುಣ ಆಗಡಿ ಮತ್ತು ರೋ. ಪ್ರದೀಪ್ ಶೆಟ್ಟಿ ಇದ್ದರು.

ನೀರು, ನೈರ್ಮಲ್ಯ ಸಮಿತಿ ಸಭೆ | ಸಿಇಒ ಪಾಟೀಲ ಸೂಚನೆ

ಸಮರ್ಪಕ ನೀರು ಪೂರೈಸಿ

ಧಾರವಾಡ: ಗ್ರಾಮೀಣ ಜನರು ಕುಡಿಯುವ ನೀರಿನ ಗುಣಮಟ್ಟ ಕಾಲಕಾಲಕ್ಕೆ ಪರಿಶೀಲಿಸಬೇಕು. ಜನರಿಗೆ ಶುದ್ಧ ನೀರು ಪೂರೈಸಲು ಅಧಿಕಾರಿಗಳು ಸೂಕ್ತ ಕ್ರಮ ವಹಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಭವನದಲ್ಲಿ ಗುರುವಾರ ಜಿಲ್ಲಾ ಮಟ್ಟದ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆ ಹಾಗೂ ಜಿಲ್ಲಾ ತಾಂತ್ರಿಕ ಅನುಮೋದನಾ ಸಭೆ ನಡೆಸಿದ ಅವರು, ನೀರು ಕುಡಿಯಲು ಯೋಗ್ಯವೇ? ಎಂದು ಪರಿಶೀಲಿಸುವಂತೆ ಹೇಳಿದರು.

ಜನರು ಬೋರವೆಲ್ ನೀರು ಕುಡಿಯಲು ಬಳಸುತ್ತಿದ್ದರೆ, ಸೂಚನಾ ಫಲಕವನ್ನು ಹಾಕಬೇಕು. ಕಲುಷಿತ ನೀರು ಪೂರೈಸಿದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಸಿಇಒ ಭುವನೇಶ ಪಾಟೀಲ ಎಚ್ಚರಿಕೆ ನೀಡಿದರು.



ದುರಸ್ತಿಯಲ್ಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ವಾರದೊಳಗೆ ದುರಸ್ತಿಪಡಿಸಬೇಕು. ದುರಸ್ತಿ ಕಾರ್ಯ ಕೈಗೊಳ್ಳದ ಗುತ್ತಿಗೆದಾರರನ್ನು ತೆಗೆದು ಹಾಕಲಾಗುವುದು. ಜೆಜೆಎಂ ಕಾಮಗಾರಿಗಳನ್ನು ಪರಾಮರ್ಶೆ ಮಾಡಲು ಸೂಚನೆ ನೀಡಿದರು.

ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಸಭೆಗಳಿಗೆ ಹಾಜರಾಗಬೇಕು. ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದಿದ್ದಲ್ಲಿ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ಮಾಹಿತಿಯೊಂದಿಗೆ ಹಾಜರಾಗುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಸಭೆಯಲ್ಲಿ ವಾಟರ್ ಬೋರ್ಡ್ ಕಾರ್ಯ ನಿರ್ವಾಹಕ ಎಂಜಿನೀಯರ್ ಜಗದೀಶ ಪಾಟೀಲ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪರಶುರಾಮ ಎಫ್. ಕೆ., ಡಾ.ಕಮಲಾ ಬೈಲೂರು, ತಾಪಂ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

> **ಜಿಲ್ಲೆಯ ಶಾಲೆ, ಅಂಗನವಾಡಿ ಹಾಗೂ ಮನೆಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಒದಗಿಸಬೇಕು. ಇದು ಅಧಿಕಾರಿಗಳ ಜವಾಬ್ದಾರಿಯೂ ಹೌದು. ಶುದ್ಧ ನೀರಿನ ಘಟಕಗಳು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು.**
> ■ **ಭುವನೇಶ ಪಾಟೀಲ, ಜಿಪಂ ಸಿಇಒ**

ಶಾಲೆಗೆ ಶಿಕ್ಷಣ ಇಲಾಖೆ ಅಧಿಕಾರಿಗಳ ಭೇಟಿ



ಕಡಬಗಟ್ಟಿ: ದ್ವಿಭಾಷಾ ಕಾರ್ಯದ ಅನುಷ್ಠಾನ ಮತ್ತು ಶೈಕ್ಷಣಿಕ ಪ್ರಗತಿಯ ಪರಿಶೀಲನೆಗಾಗಿ ಕಡಬಗಟ್ಟಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಣ ಇಲಾಖೆ ಜಿಲ್ಲಾ ಕಾರ್ಯಕ್ರಮ ಸಂಯೋಜಕ ಎಸ್.ಎಂ. ಹುಡೇದಮನಿ ಹಾಗೂ ವಿಷಯ ಪರಿವೀಕ್ಷಕಿ ಆರ್.ಜಿ. ದೈವಜ್ಞ ಭೇಟಿ ನೀಡಿದರು. ಅವರು ಶಾಲೆ ವಿವಿಧ ತರಗತಿಗಳ ದಾಖಲಾತಿ ಪುಸ್ತಕಗಳು, ಶೈಕ್ಷಣಿಕ ದಾಖಲೆಗಳು ಹಾಗೂ ದ್ವಿಭಾಷಾ ಕಾರ್ಯಕ್ಕೆ ಸಂಬಂಧಿಸಿದ ದಾಖಲೆ ವೀಕ್ಷಿಸಿ ಪರಿಶೀಲಿಸಿದರು. ವಿದ್ಯಾರ್ಥಿಗಳ ಕಲಿಕಾ ಪ್ರಗತಿ ಹಾಗೂ ಬೋಧನಾ ಕ್ರಮಗಳ ಕುರಿತು ಶಿಕ್ಷಕರೊಂದಿಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ದ್ವಿಭಾಷಾ ಶಿಕ್ಷಣದ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ ಅವರು, ವಿದ್ಯಾರ್ಥಿಗಳ ಭಾಷಾ ಕೌಶಲ್ಯ ವೃದ್ಧಿಗೆ ಹೆಚ್ಚಿನ ಒತ್ತು ನೀಡುವಂತೆ ಸಲಹೆ ನೀಡಿದರು. ಈ ವೇಳೆ ಮುಖ್ಯ ಶಿಕ್ಷಕ ಎ.ಕೆ.ಹೊನಗೇಕರ, ಡಿ.ಎನ್. ಖಾನಾಪೂರಕರ, ಪಿ.ಕೆ. ಶಂಬೋಜಿ, ಎಸ್.ಎಸ್. ಹಿರೇಮಠ, ಎಂ.ಎಂ. ತಿಪ್ಪಣ್ಣವರ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ವರುಣನ ಕೃಪೆಗಾಗಿ ಕತ್ತೆಗಳ ಮದುವೆ



▸ **ಶ್ರೀಶೈಲ ಗೌರಿಮಠ**

ಉಪ್ಪಿನಬೆಟಗೇರಿ: ಮುಂಗಾರಿ ಬಿತ್ತನೆ ಪೂರೈಸಿರುವ ರೈತರು ಮಳೆ ಬಾರದೇ ಈಗ ಕಂಗಾಲಾಗಿದ್ದಾರೆ. ನಿತ್ಯವೂ ಮಳೆಯ ನಿರೀಕ್ಷೆ ಹುಸಿಗೊಂಡಿದ್ದರಿಂದ ಮಳೆ ತರಿಸಲು ಭಗೀರಥ ಪ್ರಯತ್ನಗಳಿಗೆ ಈಗ ರೈತರು ಮುಂದಾಗಿದ್ದಾರೆ. ಈ ನಿಟ್ಟಿನಲ್ಲಿ ತಾಲೂಕಿನ ಅಮ್ಮಿನಬಾವಿ ಗ್ರಾಮದ ರೈತರು ಇತ್ತೀಚಿಗೆ ಅದ್ದೂರಿಯಿಂದ ಕತ್ತೆಗಳ ಮದುವೆ ಮಾಡಲು ಮುಂದಾಗಿರುವುದು ಎಲ್ಲರ ಗಮನಸೆಳೆದಿದೆ.

ಅಮ್ಮಿನಬಾವಿ ಗ್ರಾಮದ ಎಲ್ಲ ಜಾತಿ, ವರ್ಗ, ಪಂಗಡಗಳ ರೈತರು ಒಗ್ಗೂಡಿ ಯುವಕ ಸಂಘಗಳ, ಮಹಿಳಾ ಮಂಡಳಗಳ, ಭಜನಾ ಮಂಡಳಗಳ ಮತ್ತು ವಿವಿಧ ದೇವಾಲಯಗಳ ಸೇವಾ ಸಮಿತಿಗಳ ಪದಾಧಿಕಾರಿಗಳು ಸೇರಿ ಭಕ್ತಿಯ ಬದ್ಧತೆಯಿಂದ ಈ ವಿವಾಹ ಕಾರ್ಯಕ್ಕೆ ಮುಂದಾಗಿದ್ದಾರೆ. ಅಮ್ಮಿನಬಾವಿ ಗ್ರಾಮದ ದೊಡ್ಡೋಣಿಯ ಕೊನೆಯ ಹಂತದಲ್ಲಿರುವ ಗ್ರಾಮದೇವಿಯರ ಪಾದಗಟ್ಟಿ ತಾಣದ ಹಂದರದಲ್ಲಿ ಜು.4ರಂದು ಅಪರಾಹ್ನ 12.30ಕ್ಕೆ ಸಲ್ಲುವ ಅಭಿಜಿತ್ ಲಗ್ನದ ಶುಭ ಮುಹೂರ್ತದಲ್ಲಿ ಮೇಘರಾಜ ಎಂದು ಸಂಬೋಧಿಸುವ ಗಂಡು ಕತ್ತೆ ಜೊತೆಗೆ ವಸುಂಧರಾದೇವಿ ಎಂದು ಹೆಸರಿಸಿರುವ ಹೆಣ್ಣು ಕತ್ತೆ ವಿವಾಹ ಮಹೋತ್ಸವ ವಿಧ್ಯುಕ್ತವಾಗಿ ಜರುಗಲಿದೆ.

ಇದಕ್ಕೂ ಮೊದಲು ರೈತರು ವರುಣನ ಕೃಪೆಗಾಗಿ ಭಕ್ತಿಯ ಸಂಕಲ್ಪ ಪೂಜೆ ನೆರವೇರಿಸಲಿದ್ದಾರೆ.

ಜನಪದರ ನಂಬಿಕೆ: ಕತ್ತೆಗಳ ಮದುವೆ ಮಾಡಿದರೆ ಮಳೆ ಬರುತ್ತದೆ ಎನ್ನುವುದಕ್ಕೆ ಯಾವುದೇ ವೈಜ್ಞಾನಿಕ ಸಾಕ್ಷ್ಯಗಳಿಲ್ಲ. ವರುಣ ದೇವರ ಕೃಪೆಯ ಮೇಲಿನ ಭಕ್ತಿಯ ಬದ್ಧತೆ, ಮಳೆ ಬಂದೇ ಬರುತ್ತದೆ ಎಂಬ ರೈತರ ಮನದಾಳದ ಆಶಾಭಾವನೆ ಹಾಗೂ ಸರ್ವ ಸಮಾಜಗಳ ಒಗ್ಗಟ್ಟಿನ ಸಂಕೇತಾತ್ಮಕ ಅಭಿವ್ಯಕ್ತಿಯೇ ಈ ಕತ್ತೆಗಳ ಮದುವೆ. ಜಲಸಂರಕ್ಷಣೆ ಮತ್ತು ಸುಸ್ಥಿರ ಕೃಷಿಯ ಜನಪರ ಆಲೋಚನೆಗಳನ್ನು ಸಾರ್ವತ್ರಿಕಗೊಳಿಸುವ ಒಳ ಆಶಯವೂ ಇಲ್ಲಿ ಹುದುಗಿದೆ.

ಲಗ್ನ ಪತ್ರಿಕೆ ಮುದ್ರಣ: ಸಾಮಾನ್ಯವಾಗಿ ವಿವಾಹ ಕಾರ್ಯಗಳಲ್ಲಿ ಲಗ್ನಪತ್ರಿಕೆ ಮುದ್ರಿಸುವಂತೆ ಕತ್ತೆಗಳ ಮದುವೆಗೂ ಅಧಿಕೃತವಾಗಿ ಲಗ್ನಪತ್ರಿಕೆ ಮುದ್ರಿಸಲಾಗಿದ್ದು, ಅಮ್ಮಿನಬಾವಿಯ ಕೆಲವು ಓಣಿಯವರು ವರನ ಕಡೆಯವರಾಗಿ ಮತ್ತು ಇನ್ನು ಕೆಲವು ಓಣಿಯವರು ಕನ್ಯೆಯ ಕಡೆಯವರಾಗಿ ಈ ಬೀಗತನಕ್ಕೆ ಮುಂದಾಗಿದ್ದಾರೆ. ಇದಕ್ಕಾಗಿ ರೈತರನ್ನೊಳಗೊಂಡು ಸಕಲರೂ ಸ್ವಯಂಸ್ಫೂರ್ತಿಯಿಂದ ದೇಣಿಗೆ ನೀಡಿದ್ದಾರೆ. ಡೊಳ್ಳು, ಕರಡಿಮಜಲು ಸೇರಿ ವಿವಿಧ ಜನಪದ ವಾದ್ಯ ಮೇಳಗಳು ಮೇಳೈಸಲಿವೆ.

ಶಿಕ್ಷಕರ ಹೆಚ್ಚುವರಿ ಹೊರೆ ಕಡಿತಕ್ಕೆ ಕ್ರಮ: ಪಾಟೀಲ

ಕುಂದಗೋಳ: ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಬೋಧನಾ ಕಾರ್ಯಕ್ಕಿಂತ ಆಡಳಿತಾತ್ಮಕ ಹಾಗೂ ಇತರೆ ಇಲಾಖೆಗಳ ಕೆಲಸಗಳ ಹೊರೆ ಹೆಚ್ಚಾಗುತ್ತಿರುವುದರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ತೊಂದರೆಯಾಗುತ್ತಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಮುಂದಿನ ಅಧಿವೇಶನದಲ್ಲಿ ಮುಖ್ಯಮಂತ್ರಿ ಗಮನಕ್ಕೆ ತಂದು ಅಗತ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದಾಗಿ ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಅವರು ಪಟ್ಟಣದ ಜೆಎಸ್ಎಸ್ ವಿದ್ಯಾಪೀಠದ ಆವರಣದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕುಂದಗೋಳ ತಾಲೂಕು ಘಟಕದ ವತಿಯಿಂದ ನಡೆದಸ ಒಂದು ದಿನದ ತಾಲೂಕು ಮಟ್ಟದ ಕಾರ್ಯಾಗಾರ ಹಾಗೂ ಜಿಲ್ಲಾ ಮತ್ತು ತಾಲೂಕು ಹಂತಕ್ಕೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಷ್ಟ್ರಾಧ್ಯಕ್ಷ ಬಸವರಾಜ ಗುರಿಕಾರ ಹಾಗೂ ರಾಜ್ಯಾಧ್ಯಕ್ಷ ಚಂದ್ರಶೇಖರ ಮಾತನಾಡಿ, ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳು ವಾಸ್ತವವಾಗಿದ್ದು, ಅವುಗಳ ಪರಿಹಾರಕ್ಕಾಗಿ ಸಂಘ ಪ್ರಾಮಾಣಿಕವಾಗಿ ಶ್ರಮಿಸಲಿದೆ ಎಂದರು.

ಈ ವೇಳೆ ರಾಜ್ಯ ಖಜಾಂಚಿ ರಾಜಶೇಖರ ಹೊನ್ನಪ್ಪನವರ, ರಾಜ್ಯಸಭಾ ಕಾರ್ಯದರ್ಶಿ ಜಯಕುಮಾರ ಹೆಬ್ಳಿ, ಜಿಲ್ಲಾಧ್ಯಕ್ಷ ವಿ.ಎಫ್. ಝುಳಕಿ, ಜಿಲ್ಲಾ ಕಾರ್ಯದರ್ಶಿ ಅಜಿತ್ ದೇಸಾಯಿ, ಜಿ.ಉಪಾಧ್ಯಕ್ಷ ಎಂ.ಎಂ. ಘೋಡಕೆ, ತಾ. ಅಧ್ಯಕ್ಷ ಎಚ್.ಪಿ.ನದಾಫ್, ನಿವೃತ್ತ ಶಿಕ್ಷಕರ ಸಂಘದ ಅಧ್ಯಕ್ಷ ಎನ್. ಎಫ್.ನದಾಫ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಐ.ಆರ್.ಕೊಡ್ಲಿ, ತಾಲೂಕು ಕಾರ್ಯದರ್ಶಿ ಅನಂತ ನಾಗನೂರ, ವಿನಯ ನಲವಡಿ, ಎಂ.ಕೆ.ಬಡಿಗೇರ ಹಾಗೂ ಪತ್ರಕರ್ತ ಅಶೋಕ ಘೋರ್ಪಡೆ ಸೇರಿದಂತೆ ಅನೇಕರು ಇದ್ದರು.

> **ಮತಕ್ಷೇತ್ರದ ವ್ಯಾಪ್ತಿಯ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳಲ್ಲಿ ಅನಗತ್ಯ ರಾಜಕೀಯ ಹಸ್ತಕ್ಷೇಪದಿಂದ ಮುಖ್ಯ ಶಿಕ್ಷಕರು ಸಂಕಷ್ಟ ಅನುಭವಿಸುತ್ತಿದ್ದರು. ಈ ಸಮಸ್ಯೆಗೆ ಈಗ ಕಡಿವಾಣ ಹಾಕಲಾಗಿದ್ದು, ಶಾಲೆಗಳ ಶೈಕ್ಷಣಿಕ ವಾತಾವರಣ ಸುಧಾರಣೆಗೆ ಆದ್ಯತೆ ನೀಡಲಾಗಿದೆ.**
> ■ **ಎಂ.ಆರ್. ಪಾಟೀಲ, ಶಾಸಕ**



ಕಾಡು ಪ್ರಾಣಿಗಳಿಂದ ಬೆಳೆ ನಾಶ: ರೈತ ಕಂಗಾಲು



ಕಲಘಟಗಿ: ತಾಲೂಕಿನ ಸೂಳಿಕಟ್ಟಿ ಗ್ರಾಮದಲ್ಲಿ ರೈತ ಯಲ್ಲಪ್ಪ ಬುರ್ಲಿ ಅವರ ಕಬ್ಬಿನ ಬೆಳೆಗೆ ನುಗ್ಗಿದ ಕಾಡು ಪ್ರಾಣಿಗಳು ಬೆಳೆ ನಾಶ ಮಾಡಿವೆ.

ಕಾಡಂಚಿನ ಹಳ್ಳಿಗಳಾದ ಸೂಳಿಕಟ್ಟಿ, ಮಸಳಿಕಟ್ಟಿ, ಕಂದ್ಲಿ, ದಿಂಬುವಳ್ಳಿ, ಹುಲಗಿನಕೊಪ್ಪ, ಸಂಗಟಿಕೊಪ್ಪ, ಕಲಕುಂಡಿ ಇನ್ನೂ ಕೆಲ ಹಳ್ಳಿಗಳ ರೈತರಿಗೆ ಕಾಡು ಪ್ರಾಣಿಗಳಾದ ಕಾಡು ಹಂದಿ, ಮುಳ್ಳಂದಿ ಇತರೆ ಪ್ರಾಣಿಗಳು ಕಬ್ಬು ಹಾಗೂ ಈಗ ತಾನೆ ಬೆಳೆಯುತ್ತಿರುವ ಗೋವಿನಜೋಳ ತಿನ್ನಲಿಕ್ಕೆ ಪ್ರಾರಂಭಿಸಿವೆ.

ಸೂಳಿಕಟ್ಟಿ ಗ್ರಾಮದ ರೈತ ಯಲ್ಲಪ್ಪ ಬ ಬುರ್ಲಿ ಎಂಬುವರ ಎರಡು ಎಕರೆ ಮತ್ತು ಲಕ್ಷ್ಮಿ ಅರ್ಜುನ ಬುರ್ಲಿ ಅವರ ಒಂದು ಎಕರೆ ಕಬ್ಬಿನ ಹೊಲದಲ್ಲಿ ಕಾಡುಹಂದಿ ಹತ್ತು ಮರಿಗಳನ್ನ ಹಾಕಿ, ಕಬ್ಬನ್ನು ಹಾಳು ಮಾಡಿದೆ. ಮಳೆಗಾಲ ಈಗಷ್ಟೆ ಆರಂಭವಾಗಿದೆ. ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಅರಣ್ಯ ಇಲಾಖೆ ಗಮನಹರಿಸಿ ಕ್ರಮವಹಿಸುವಂತೆ ರೈತರು ಆಗ್ರಹಿಸಿದ್ದಾರೆ. ಸೂಕ್ತ ಪರಿಹಾರ ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ರೈತರು ಅರಣ್ಯ ಇಲಾಖೆ ಸಿಬ್ಬಂದಿ ಸಂಪರ್ಕಿಸಿದರೆ ಅರ್ಜಿ ಕೊಡಿ ಹೊಲಕ್ಕೆ ಬರುತ್ತೇವೆ ಎಂಬ ಹಾರಿಕೆ ಉತ್ತರ ನೀಡುತ್ತಾರೆ. ಬಿತ್ತನೆ ಬೀಜ, ದುಬಾರಿ ರಾಸಾಯನಿಕ ಗೊಬ್ಬರ, ಟ್ರ್ಯಾಕ್ಟರ್ ಉಳುಮೆ ಖರ್ಚು-ವೆಚ್ಚ ಲೆಕ್ಕ ಹಾಕಿದ್ರೆ ಆತ್ಮಹತ್ಯೆ ದಾರಿಯೇ ಹಿಡಿಯಬೇಕು. ಶೀಘ್ರ ಅರಣ್ಯ ಅಧಿಕಾರಿಗಳು ರೈತರ ವಾಸ್ತವಿಕ ಖರ್ಚು ವೆಚ್ಚದ ಮೇಲೆ ಯೋಗ್ಯ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು ಎಂದು ತಾಪಂ ಮಾಜಿ ಅಧ್ಯಕ್ಷ ಫಕೀರೇಶ್ ನೇಸರೇಕರ ಆಗ್ರಹಿಸಿದ್ದಾರೆ.

> **ಸೂಳಿಕಟ್ಟಿ ಗ್ರಾಮದ ಹೊಲಕ್ಕೆ ನಮ್ಮ ಅರಣ್ಯ ಇಲಾಖೆ ತಂಡ ಭೇಟಿ ನೀಡಿದೆ. ಹಾನಿಗೊಳಗಾದ ರೈತರು ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದು, ಇಲಾಖೆ ನಿಯಮಾನುಸಾರ ಪರಿಹಾರ ನೀಡಲಾಗುವುದು.**
> ■ **ಅರುಣಕುಮಾರ ಅಷ್ಟಗಿ, ಆರ್‌ಎಫ್‌ಒ**

ನಿಲ್ದಾಣ ತೆರವು: ಪುರಸಭೆ ವಿರುದ್ಧ ಆಕ್ರೋಶ

ನವಲಗುಂದ: ಪಟ್ಟಣದ ಹೃದಯಭಾಗದಲ್ಲಿರುವ 40 ವರ್ಷಗಳ ಇತಿಹಾಸವಿರುವ ಏಕೈಕ ಟ್ಯಾಕ್ಸಿ ನಿಲ್ದಾಣವನ್ನು ಗಾರ್ಡನ್ ನಿರ್ಮಾಣದ ನೆಪದಲ್ಲಿ ತೆರವುಗೊಳಿಸಲು ಮುಂದಾಗಿರುವ ಪುರಸಭೆಯವರ ನಿರ್ಧಾರದ ವಿರುದ್ಧ ಕರ್ನಾಟಕ ಚಾಲಕರ ಒಕ್ಕೂಟ ತಾಲೂಕ ಘಟಕದ ಅಧ್ಯಕ್ಷ ಮಂಜುನಾಥ ಮೆಣಸಿನಕಾಯಿ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಒಕ್ಕೂಟದ ತಾಲೂಕು ಘಟಕದ ವತಿಯಿಂದ ತಹಶೀಲ್ದಾರ್ ಕಚೇರಿಯ ಶಿರಸ್ತೇದಾರ ಅಜಯ ಆಯಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು ನೀಲಮ್ಮನ ಕೆರೆಯ ಪಕ್ಕದಲ್ಲಿರುವಂತಹ ಈ ಹಳೆ ನಿಲ್ದಾಣ ಬಿಟ್ಟರೆ ಬೇರೆ ಯಾವುದೇ ಸೂಕ್ತ ಟ್ಯಾಕ್ಸಿ ನಿಲ್ದಾಣಗಳಿಲ್ಲ, ಸದ್ಯ 80ಕ್ಕೂ ಹೆಚ್ಚು ಟ್ಯಾಕ್ಸಿಗಳು ಇಲ್ಲೇ ಆಶ್ರಯ ಪಡೆದಿದ್ದು, ನೂರಾರು ಕುಟುಂಬಗಳು ದಿನದ ದುಡಿಮೆಗಾಗಿ ಈ ಜಾಗವನ್ನೇ ನಂಬಿಕೊಂಡಿವೆ. ಈಗ ಇದ್ದಕ್ಕಿದ್ದಂತೆ ಉದ್ಯಾನವನದ ಹೆಸರಿನಲ್ಲಿ ಇಲಾಖೆ ಇವರನ್ನು ಇಲ್ಲಿಂದ ಒಕ್ಕಲೆಬ್ಬಿಸಲು ಸಂಚು ರೂಪಿಸುತ್ತಿದೆ ಎಂದು ಪುರಸಭೆ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಉಪಾಧ್ಯಕ್ಷ ಮಂಜುನಾಥ ಸುಣಗಾರ ಮಾತನಾಡಿ, ಇಷ್ಟು ವರ್ಷ ಇಲ್ಲೇ ವಾಹನ ನಿಲ್ಲಿಸಿ ಸಾರ್ವಜನಿಕರಿಗೆ ಸೇವೆ ನೀಡುತ್ತಿದ್ದೇವೆ. ಟ್ಯಾಕ್ಸಿಗಳನ್ನೇ ನಂಬಿ ಬದುಕುತ್ತಿರುವ ಬಡ ಕುಟುಂಬಗಳ ಹಿತದೃಷ್ಟಿಯಿಂದ ಈಗಿರುವ ಟ್ಯಾಕ್ಸಿ ನಿಲ್ದಾಣದಲ್ಲಿಯೇ ಅವಕಾಶ ಮಾಡಿ ಕೊಡದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಅಶೋಕ ಕಲಾಲ್, ಪ್ರವೀಣ್ ಕಾಳೆ, ಸಿದ್ದು ಎಸ್.ಕೆ.ಟಿ, ಕಲ್ಲಪ್ಪ ಎಸ್.ಕೆ.ಟಿ, ಪುಂಡಲೀಕ ಕಲಾಲ್, ರಮೇಶ್ ಅಂಗಡಿ, ಮಂಜುನಾಥ ಹಂಚಿನಾಳ, ಅಲ್ತಾಫ್ ಇಬ್ರಾಹಿಂಪುರ, ಸದ್ದಾಂ ಹುಗ್ಗಿ, ರಿಯಾಜ ಹುಗ್ಗಿ, ಶಿವು ಬಡಿಗೇರ, ಶಶಿ ತುಳಸಿಗೇರಿ, ರಿಯಾಜ್ ಹಂಚಿನಾಳ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.





ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠಕ್ಕೆ ಮೇಯರ್ ಜ್ಯೋತಿ ಪಾಟೀಲ ಅವರು ಭೇಟಿ ನೀಡಿ ಉಭಯ ಶ್ರೀಗಳ ಆಶೀರ್ವಾದ ಪಡೆದರು.

ದಾಸೋಹ ಭವನ ಕಾಮಗಾರಿಗೆ ಚಾಲನೆ



ಹುಬ್ಬಳ್ಳಿ: ನಗರದ ಹುಲಿಗೆಮ್ಮ ದೇವಿ ದೇವಸ್ಥಾನದ ದಾಸೋಹ ಭವನ ಕಟ್ಟಡ ಕಾಮಗಾರಿಗೆ ಶಾಸಕ ಮಹೇಶ ಟೆಂಗಿನಕಾಯಿ ಚಾಲನೆ ನೀಡಿದರು. ಸ್ವರ್ಣ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಸಿ.ಎಚ್. ವಿ.ಎಸ್.ವಿ. ಪ್ರಸಾದ, ವಿರೂಪಾಕ್ಷಪ್ಪ ಯಮಕನಮರಡಿ, ಡಾ.ಮಲ್ಲಿಕಾರ್ಜುನ ಬಾಳಿಕಾಯಿ, ತೋಟಪ್ಪ ನಿಡಗುಂದಿ, ಮಹೇಶ ದಾಬಡೆ, ಮಾಜಿ ಯೋಧರಾದ ಶಿವಾಜಿ ಗಾಂವಕರ, ಗುರು ಬನ್ನಿಕೊಪ್ಪ, ವಿನಾಯಕ ಕುಲಕರ್ಣಿ, ಪ್ರಕಾಶ ಅರಗಂಜಿ, ವಿಠ್ಠಲ ಬಗಲಿ, ವಿರೂಪಾಕ್ಷ ಚಲವಾದಿ, ಶ್ರೀಧರ ಮಗಜಿಕೊಂಡಿ, ಹಿರಿಯ ಲಕ್ಷ್ಮಣರಾವ್ ಸೂರ್ಯವಂಶಿ, ಕೀರ್ತಪ್ಪ ಗೋಟೂರ ಇದ್ದರು.

ಕುಲಪತಿ ಆಯ್ಕೆ ಶೋಧನಾ ಸಮಿತಿ ರದ್ದತಿಗೆ ಆಗ್ರಹ



ಧಾರವಾಡ: ಯುಜಿಸಿ ನಿಯಮಗಳಿಗೆ ತೂರಿ, ಧಾರವಾಡ ಕೃಷಿ ವಿವಿ ಹಾಗೂ ಶಿವಮೊಗ್ಗ ಕೃಷಿ, ತೋಟಗಾರಿಕಾ ವಿಜ್ಞಾನಗಳ ವಿವಿ ಕುಲಪತಿ ಆಯ್ಕೆ ಶೋಧನಾ ಸಮಿತಿ ರದ್ದುಗೊಳಿಸುವಂತೆ ಮಾಜಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ ಕಮ್ಮರಡಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸದ್ಯ ಆಯ್ಕೆ ಮಾಡಿದ ಶೋಧನಾ ಸಮಿತಿ ಅಧ್ಯಕ್ಷರು ಲೋಕಾಯುಕ್ತ ತನಿಖೆಗೆ ಗುರಿಯಾಗಿದ್ದು, ಈ ವ್ಯಕ್ತಿಗಳ ನೇಮಕ ಇಡೀ ಸಾರ್ವಜನಿಕ ವಿಶ್ವಾಸ ಮತ್ತು ಆಡಳಿತ ವ್ಯವಸ್ಥೆಯನ್ನೇ ಕುಗ್ಗಿಸಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಧಾರವಾಡ ಕೃಷಿ ವಿವಿಗೆ ಡಾ.ರಾಜೇಂದ್ರ ಪ್ರಸಾದ ಹಾಗೂ ಶಿವಮೊಗ್ಗ ವಿವಿಗೆ ಡಾ. ಸುರೇಶ ಅವರನ್ನು ಶೋಧನಾ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಬೇಸರ ಏನೆಂದರೆ, ಇವರಿಬ್ಬರೂ ಆಯಾ ವಿವಿಯಲ್ಲಿ ಸೇವೆ ಸಲ್ಲಿಸಿದವರು. ಇದು ಯುಜಿಸಿ ನಿಯಮಾವಳಿಗೆ ವಿರುದ್ಧವಾಗಿದೆ ಎಂದರು.

ಶೋಧನಾ ಸಮಿತಿ ಅಧ್ಯಕ್ಷರುಗಳಿಗೆ ಸ್ವಯಂ ಪ್ರೇರಿತರ ಸಮಿತಿಯಿಂದ ಹೊರ ಬರಲು ವಿನಂತಿಸಿದೆ. ವಿಧಾನಸಭೆ ಮಾಜಿ ಅಧ್ಯಕ್ಷ ಕಾಗೋಡು ತಿಮ್ಮಪ್ಪ ಅವರು ಮೇ 23ರಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಶೋಧನಾ ಸಮಿತಿ ನೇಮಕ ಮರುಪರಿಶೀಲಿಸಲು ಆಗ್ರಹಿಸಿದ್ದಾಗಿ ತಿಳಿಸಿದರು.

ಶೋಧನಾ ಸಮಿತಿ ಅಧ್ಯಕ್ಷರ ಮೇಲೆ ಇಷ್ಟೆಲ್ಲ ಆಕ್ಷೇಪಣೆ, ಲೋಕಾಯುಕ್ತರಿಗೆ ದೂರು ಸಲ್ಲಿದ ಮಧ್ಯೆಯೂ ಈ ಎರಡು ವಿವಿಗಳ ಕುಲಪತಿ ಆಯ್ಕೆಯಾಗಿ ಜುಲೈ 3ರಂದು ಸಮಿತಿ ಸಭೆ ನಡೆಸಲು ರಾಜ್ಯಪಾಲರು ತರಾತುರಿಯಲ್ಲಿ ದಿನಾಂಕ ನಿಗದಿ ಮಾಡಿದ್ದಾಗಿ ಆರೋಪಿಸಿದರು.

ಈ ವೇಳೆ ಕೃಷಿ ವಿವಿ ನಿವೃತ್ತ ಕುಲಪತಿ ಡಾ.ಡಿ.ಪಿ.ಬಿರಾದಾರ, ಗ್ರಾಮೀಣ ಅಭಿವೃದ್ಧಿ ತಜ್ಞ ಡಾ.ಪ್ರಕಾಶ ಭಟ್, ಡಾ.ಎಸ್.ಎಂ.ಮಂಟೂರ ಇದ್ದರು.

ಮಕ್ಕಳಿಗೆ ಸಮವಸ್ತ್ರ, ನೋಟ್‌ಬುಕ್ ವಿತರಣೆ

ಧಾರವಾಡ: ಬಡತನ ಮಕ್ಕಳ ಶಿಕ್ಷಣ ಅಡ್ಡಿ ಆಗಬಾರದು. ಹೀಗಾಗಿ ಸರ್ಕಾರ ಮತ್ತು ಸಮಾಜದ ಸಂಘ-ಸಂಸ್ಥೆಗಳು ಮಕ್ಕಳಿಗೆ ಪಠ್ಯಪುಸ್ತಕ, ಊಟ, ಸಮವಸ್ತ್ರ ಉಚಿತ ವಿತರಿಸಬೇಕು ಎಂದು ಜೆಎಸ್ಎಸ್ ಸಂಸ್ಥೆ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಧಾರವಾಡ ಜೈನ ಮಿಲನ್ ವತಿಯಿಂದ ಗುರುವಾರ ವಿದ್ಯಾಗಿರಿಯ ಜನತಾ ಶಿಕ್ಷಣ ಸಮಿತಿ ಕಿರಿಯ ಪ್ರಾಥಮಿಕ ಶಾಲೆಯ ಬಡ ಮಕ್ಕಳಿಗೆ ಉಚಿತ ನೋಟ್ ಬುಕ್ ವಿತರಿಸಿದ ಅವರು, ಸಂಘ-ಸಂಸ್ಥೆಗಳು ಬಡ ಮಕ್ಕಳ ಶಿಕ್ಷಣ ಆಸರೆಯಾಗಿ ಎಂದರು.

ಜೈನ ಮಿಲನ್ ಬಡ ಮಕ್ಕಳಿಗೆ ಉಚಿತ ನೋಟ್ ಬುಕ್ ನೀಡುವುದು ಶ್ರೇಷ್ಠವಾದ ಕಾರ್ಯ. ಮಕ್ಕಳು ತಮ್ಮ ತಂದೆ ತಾಯಿಂದಿರಿಗೆ ಕೀರ್ತಿ ತರಬೇಕೆಂದು ಸಲಹೆ ನೀಡಿದರು. ಜೆಎಸ್ಎಸ್ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಮಾತನಾಡಿ, ಪ್ರತಿಯೊಬ್ಬ ಶಿಕ್ಷಕರು ಪೋಷಕರು ಮತ್ತು ಸಮಾಜದ ಸದಸ್ಯರು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಪ್ರೋತ್ಸಾಹ ಮತ್ತು ಬೆಂಬಲ ನೀಡಬೇಕು. ಮಕ್ಕಳ ಸಮಾಜದ ಆಸ್ತಿಯಾಗಬೇಕು ಎಂದರು.

ಮಹಾವೀರ ಉಪಾಧ್ಯೆ, ಸುಧಾಮಣಿ ರಾವ್, ಡಾ. ಜಿನದತ್ತ ಹಡಗಲಿ, ಸುಜಾತ ಹಡಗಲಿ, ಬ್ರಹ್ಮಪ್ರಕಾಶ, ಶಾಂತಿನಾಥ ರೋಖಡೆ, ರಾಜೇಶ್ವರಿ ಶೆಟ್ಟಿ, ಮೋಹನ್ ಗೋಗಿ ಇದ್ದರು. ಡಾ.ಜಿನ್ನಪ್ಪ ಕುಂದಗೋಳ ಸ್ವಾಗತಿಸಿದರು. ಮುದಿಗೌಡರ ನಿರೂಪಿಸಿದರು. ರತ್ನಾಕರ ಹೋಳಗಿ ವಂದಿಸಿದರು.



20ನೇ ವರ್ಷದ ವಾರ್ಷಿಕೋತ್ಸವ



ಕಲಘಟಗಿ: ತಾಲೂಕಿನ ಕರ್ನಾಟಕ ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ ಇದರ 20ನೇ ವರ್ಷದ ವಾರ್ಷಿಕೋತ್ಸವ ಡಿಸೆಂಬರ್ 2026 ಕ್ಕೆ ಜರುಗಲಿದ್ದು ಜಿಲ್ಲಾಧಿಕಾರಿ ಸ್ನೇಹಲ ಆರ್ ಅವರಿಗೆ ಅವರಿಗೆ ಆಮಂತ್ರಣ ಮನವಿಯನ್ನು ನೀಡಲಾಯಿತು, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಇವರ ಸಹಯೋಗದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ ವೇಳೆ ಕಾರ್ಯಕ್ರಮಗಳ ಆಯೋಜಕ, ಸಂಸ್ಥಾಪಕ ಅಧ್ಯಕ್ಷ ವೀರಣ್ಣ ಕುಬಸದ, ಶ್ರೀಯಾ ಜನ ಸೇವಾ ಫೌಂಡೇಶನ್ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ವಿ ಜಿ ಪಾಟೀಲ ಹಾಗೂ ಕಲಘಟಗಿ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಪ್ರವೀಣ ಇಜಾರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಹೊಸ ದಿಗಂತ
ಶುಕ್ರವಾರ, 3 ಜುಲೈ 2026
ಹುಬ್ಬಳ್ಳಿ



ಕಾಣಿಕೆ ಎಣಿಕೆ ಹೇಗೆ ನಡೆಯುತ್ತಿತ್ತು?

ರಾಮಮಂದಿರ ಆವರಣದಲ್ಲಿರುವ ಯಾತ್ರಿಕರ ಸೌಲಭ್ಯ ಕೇಂದ್ರದ ನೆಲಮಾಳಿಗೆಯಲ್ಲಿ ಕಾಣಿಕೆ ಎಣಿಕೆ ಕೊಠಡಿ ಇದೆ. ಮುಖ್ಯ ಮಂದಿರದಿಂದ ಸುಮಾರು 200 ಮೀಟರ್ ದೂರದಲ್ಲಿರುವ ಈ ಕೇಂದ್ರಕ್ಕೆ ಸುಮಾರು 40 ಹುಂಡಿಗಳ ಹಣ ಮತ್ತು ಇತರ ವಸ್ತುಗಳನ್ನು ತರಲಾಗುತ್ತಿತ್ತು. ಬೆಳಗ್ಗೆ 8ರಿಂದ ಮಧ್ಯಾಹ್ನ 2ರವರೆಗೆ ಮೊದಲ ಪಾಳಿ ಹಾಗೂ ಮಧ್ಯಾಹ್ನ 2ರಿಂದ ರಾತ್ರಿ 8ರವರೆಗೆ ಎರಡನೇ ಪಾಳಿಯಲ್ಲಿ ಎಣಿಕೆ ನಡೆಯುತ್ತಿತ್ತು. ಪ್ರತಿ ಪಾಳಿಯಲ್ಲಿ ಸುಮಾರು 20 ಮಂದಿ ಏಕಕಾಲದಲ್ಲಿ ಹಣ ಎಣಿಸುತ್ತಿದ್ದರು. ನಾಲ್ಕೈದು ಎಣಿಕೆದಾರರಿಗೆ ಒಬ್ಬ ಮೇಲ್ವಿಚಾರಕನನ್ನು ನಿಯೋಜಿಸಲಾಗುತ್ತಿತ್ತು. ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ತಾಂತ್ರಿಕ ಸಂಸ್ಥೆಯ ಸಿಬ್ಬಂದಿಯೂ ಪ್ರಕ್ರಿಯೆಯ ಮೇಲ್ವಿಚಾರಣೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹುಂಡಿಯಿಂದ ಹಣ ಹೊರತೆಗೆದು ಕಬ್ಬಿಣದ ಪೆಟ್ಟಿಗೆಗಳಿಗೆ ಹಾಕುವುದು, ಗಾಡಿಗಳಲ್ಲಿ ಎಣಿಕೆ ಕೇಂದ್ರಕ್ಕೆ ಸಾಗಿಸುವುದು, ನೋಟುಗಳನ್ನು ವಿಂಗಡಿಸುವುದು, ಎಣಿಸುವುದು, ಕಟ್ಟಾಗಿಸುವುದು, ಚೀಲಗಳಲ್ಲಿ ತುಂಬುವುದು, ಮೊಹರು ಹಾಕುವುದು ಮತ್ತು ಬ್ಯಾಂಕ್‌ಗೆ ಕಳುಹಿಸುವವರೆಗೆ ಹಲವು ಹಂತಗಳಿದ್ದವು. ಈ ಪ್ರತಿಯೊಂದು ಹಂತದಲ್ಲಿಯೂ ಮಾನವರ ನೇರ ಹಸ್ತಕ್ಷೇಪ ಹೆಚ್ಚಾಗಿತ್ತು. ಇದೇ ವ್ಯವಸ್ಥೆಯ ದುರ್ಬಲತೆಯನ್ನು ಕೆಲವು ಸಿಬ್ಬಂದಿ ಬಳಸಿಕೊಂಡಿರುವ ಶಂಕೆಯಿದೆ.

7.5 ಕೋಟಿ ರೂ. ನಾಪತ್ತೆ ಆರೋಪದಿಂದ ಆರಂಭ

ಜೂ.7ರಂದು ಸಮಾಜವಾದಿ ಪಕ್ಷದ ಮಾಜಿ ಶಾಸಕ ಪವನ್ ಪಾಂಡೆ, ಮಂದಿರದ ಹುಂಡಿಗಳಲ್ಲಿ ಸಂಗ್ರಹವಾದ ಸುಮಾರು 7 ರಿಂದ 7.5 ಕೋಟಿ ರೂ. ಕಾಣಿಕೆ ಹಣ ದುರುಪಯೋಗವಾಗಿದೆ ಎಂದು ಆರೋಪಿಸಿದ್ದರು. ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಕೂಡ ಪ್ರಕರಣದ ಸ್ವತಂತ್ರ ತನಿಖೆಗೆ ಆಗ್ರಹಿಸಿದ್ದರು. ಈ ಆರೋಪಗಳಿಂದ ರಾಜಕೀಯ ಮತ್ತು ಸಾರ್ವಜನಿಕ ಒತ್ತಡ ಹೆಚ್ಚಿದ ಬಳಿಕ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಉತ್ತರ ಪ್ರದೇಶ ಸರಕಾರಕ್ಕೆ ತನಿಖೆ ನಡೆಸುವಂತೆ ಮನವಿ ಮಾಡಿತ್ತು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಸರಕಾರ ಜೂ. 13ರಂದು ವಿಶೇಷ ತನಿಖಾ ತಂಡ ರಚಿಸಿತು. ಜೂ. 23ರಂದು ತಂಡ ಪ್ರಾಥಮಿಕ ವರದಿ ಸಲ್ಲಿಸಿತು. ಅದರ ಆಧಾರದಲ್ಲಿ ಜೂ. 25ರಂದು ಪ್ರಕರಣ ದಾಖಲಿಸಿ ಕಾಣಿಕೆ ಎಣಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದ್ದ ಎಂಟು ಮಂದಿಯನ್ನು ಬಂಧಿಸಲಾಯಿತು. ಪ್ರಕರಣದ ಸಮಗ್ರ ತನಿಖೆಗೆ ವಿಶೇಷ ತನಿಖಾ ತಂಡಕ್ಕೆ ಹೆಚ್ಚುವರಿ 15 ದಿನಗಳ ಕಾಲಾವಕಾಶ ನೀಡಲಾಗಿದ್ದು, ಜು. 15ರೊಳಗೆ ಅಂತಿಮ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಹೀಗಾಗಿ 7ರಿಂದ 7.5 ಕೋಟಿ ರೂ. ನಾಪತ್ತೆಯಾಗಿದೆ ಎಂಬ ಆರೋಪದ ನಿಖರ ಮೊತ್ತ ಇನ್ನೂ ಅಂತಿಮವಾಗಿ ದೃಢಪಟ್ಟಿಲ್ಲ. ಬಂಧಿತರಾದ ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೆ, ರಾಮಶಂಕರ್ ಮಿಶ್ರಾ, ಸುಭಾಷ್ ಶ್ರೀವಾಸ್ತವ ಹಾಗೂ ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇವರಲ್ಲಿ ಆರು ಮಂದಿ ಹೊರಗುತ್ತಿಗೆ ಸಂಸ್ಥೆಯ ಮೂಲಕ ಕಾಣಿಕೆ ಎಣಿಕೆ ಕೆಲಸಕ್ಕೆ ಬಂದವರಾಗಿದ್ದರು. ಸುಭಾಷ್ ಶ್ರೀವಾಸ್ತವ ಎಣಿಕೆ ಕಾರ್ಯದ ಮೇಲ್ವಿಚಾರಕರಾಗಿದ್ದರೆ, ಟಿನ್ನು ಯಾದವ್ ಅಧಿಕೃತವಾಗಿ ಎಣಿಕೆ ಸಿಬ್ಬಂದಿಯಾಗಿರದಿದ್ದರೂ ಎಣಿಕೆ ಕೊಠಡಿಯ ಬೀಗದ ಕೀಲಿಯೊಂದನ್ನು ಹೊಂದಿದ್ದನೆಂಬ ಗಂಭೀರ ಅಂಶ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

79.85 ಲಕ್ಷ ರೂ. ವಶ; ಆಸ್ತಿ ಖರೀದಿಯೂ ತನಿಖೆಯಲ್ಲಿ

ತನಿಖೆ ಮುಂದುವರಿದಂತೆ ಬಂಧಿತರಿಂದ ಒಟ್ಟು ಸುಮಾರು 79.85 ಲಕ್ಷ ನಗದು, 1,121 ಅಮೆರಿಕನ್ ಡಾಲರ್, ಸುಮಾರು 11 ಗ್ರಾಂ ಚಿನ್ನ ಮತ್ತು 375 ಗ್ರಾಂ ಬೆಳ್ಳಿ ವಶಪಡಿಸಿಕೊಳ್ಳಲಾಗಿದೆ. ಅವಿನಾಶ್ ಶುಕ್ಲಾನಿಂದ 20.39 ಲಕ್ಷ, ಕರುಣೇಶ್ ಪಾಂಡೆಯಿಂದ 18.07 ಲಕ್ಷ, ಅನುಕಲ್ಪ್ ಮಿಶ್ರಾನಿಂದ 16.82 ಲಕ್ಷ, ಲವಕುಶ್ ಮಿಶ್ರಾನಿಂದ 14.25 ಲಕ್ಷ, ರಾಮಶಂಕರ್ ಮಿಶ್ರಾನಿಂದ 7.32 ಲಕ್ಷ, ಮನೀಶ್ ಯಾದವ್‌ನಿಂದ 2 ಲಕ್ಷ ಮತ್ತು ಟಿನ್ನು ಯಾದವ್‌ನಿಂದ 1 ಲಕ್ಷ ರೂ. ಪತ್ತೆಯಾಗಿದೆ ಎಂದು ತನಿಖಾ ಮೂಲಗಳು ತಿಳಿಸಿವೆ. ಅವಿನಾಶ್ ಶುಕ್ಲಾ ನಡೆಸುತ್ತಿದ್ದ ಯೋಗ ಕೇಂದ್ರದಿಂದ ರಾಮರಾಜ್ಯ ಕೋಶ ಎಂಬ ಹೆಸರಿನ, ಹಣ ಪಾವತಿ ಸಂಕೇತ ಹೊಂದಿದ್ದ ಪ್ರತ್ಯೇಕ ಕಾಣಿಕೆ ಪೆಟ್ಟಿಗೆಯೂ ಪತ್ತೆಯಾಗಿದೆ. ಆರೋಪಿಗಳು ಭೂಮಿ, ಮನೆ, ವಾಹನ ಅಥವಾ ಇತರ ಆಸ್ತಿಗಳ ಖರೀದಿಗೆ ದುರುಪಯೋಗದ ಹಣ ಬಳಸಿದ್ದಾರೆಯೇ ಎಂಬುದನ್ನು ತಿಳಿಯಲು ಬ್ಯಾಂಕ್ ವ್ಯವಹಾರಗಳು, ಆಸ್ತಿ ದಾಖಲೆಗಳು ಮತ್ತು ಆದಾಯ ಮೂಲಗಳನ್ನು ಪರಿಶೀಲಿಸಲಾಗುತ್ತಿದೆ. ವಶಪಡಿಸಿಕೊಂಡ ಸಂಪೂರ್ಣ ಹಣವೂ ಮಂದಿರದ ಕಾಣಿಕೆಯದ್ದೇ ಎಂಬುದನ್ನು ಅಂತಿಮ ತನಿಖೆಯಲ್ಲಿ ದೃಢಪಡಿಸಬೇಕಿದೆ.

ಮಂದಿರ ನಿರ್ಮಾಣ ನಿಧಿಗಿಲ್ಲ ಕಳಂಕ; ಬೆಳ್ಳಿ ಇಟ್ಟಿಗೆಗಳು ಸುರಕ್ಷಿತ


ಕದ್ದಿದ್ದು ಮಂದಿರ ನಿರ್ಮಾಣ ನಿಧಿಯನ್ನಲ್ಲ ರಾಮಲಲಾ ಹುಂಡಿ ಹಣವನ್ನ

ಕಾಣಿಕೆ ಎಣಿಕೆ ಕೊಠಡಿಯಲ್ಲೇ ವ್ಯವಸ್ಥಿತ ಕೈಚಳಕದ ಶಂಕೆ

79.85 ಲಕ್ಷ ರೂ. ನಗದು, ಚಿನ್ನ ಬೆಳ್ಳಿ, ವಿದೇಶಿ ಕರೆನ್ಸಿ ವಶ

ನಿರ್ಮಾಣದ ದೇಣಿಗೆಗೂ, ಪೂಜಾ ನಂತರದ ಹುಂಡಿ ಕಾಣಿಕೆಗೂ ವ್ಯತ್ಯಾಸ ಅರಿಯಬೇಕು

ಕೋಟ್ಯಂತರ ಹಿಂದೂಗಳ ಶತಮಾನಗಳ ಸಂಕಲ್ಪದ ಸಾಕಾರ ರೂಪವಾದ ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಭಕ್ತರು ಸಮರ್ಪಿಸಿದ ಕಾಣಿಕೆ ಹಣಕ್ಕೆ ಅಲ್ಲಿನ ಕೆಲವು ಸಿಬ್ಬಂದಿಯೇ ಕನ್ನ ಹಾಕಿರುವ ಆರೋಪ ಆಘಾತ ಮೂಡಿಸಿದೆ. ರಾಮಲಲಾನ ಸೇವೆಗಾಗಿ ಬಂದ ಹಣವನ್ನು ಎಣಿಸಿ, ಲೆಕ್ಕ ದಾಖಲಿಸಿ, ಬ್ಯಾಂಕ್‌ಗೆ ಸುರಕ್ಷಿತವಾಗಿ ತಲುಪಿಸಬೇಕಿದ್ದವರೇ ವ್ಯವಸ್ಥೆಯಲ್ಲಿನ ಲೋಪಗಳನ್ನು ಬಳಸಿಕೊಂಡು ಹಣ ಹಾಗೂ ಅಮೂಲ್ಯ ವಸ್ತುಗಳನ್ನು ಅಪಹರಿಸಿದ್ದಾರೆ ಎಂಬುದು ವಿಶೇಷ ತನಿಖಾ ತಂಡದ ಪ್ರಾಥಮಿಕ ತನಿಖೆಯಲ್ಲಿ ಬಯಲಾಗಿದೆ. ಆದರೆ ಈ ಪ್ರಕರಣವನ್ನು ಮುಂದಿಟ್ಟುಕೊಂಡು ಶ್ರೀರಾಮಮಂದಿರ ನಿರ್ಮಾಣಕ್ಕಾಗಿ ದೇಶದ ಜನರು ಸಮರ್ಪಿಸಿದ್ದ ಸಂಪೂರ್ಣ ನಿಧಿಯ ಮೇಲೆಯೇ ಅನುಮಾನ ಮೂಡಿಸುವುದು ಸರಿಯಲ್ಲ. ಪ್ರಸ್ತುತ ತನಿಖೆಯ ಕೇಂದ್ರಬಿಂದು ಮಂದಿರ ನಿರ್ಮಾಣದ ರಾಷ್ಟ್ರೀಯ ನಿಧಿ ಸಂಗ್ರಹವಲ್ಲ. ರಾಮಲಲಾ ದರ್ಶನ ಮತ್ತು ಪೂಜೆ ಆರಂಭವಾದ ಬಳಿಕ ಹುಂಡಿಗಳಲ್ಲಿ ಸಂಗ್ರಹವಾಗುತ್ತಿದ್ದ ದೈನಂದಿನ ಕಾಣಿಕೆಗಳನ್ನು ಎಣಿಸುವುದು, ದಾಖಲಿಸುವುದು, ಪ್ಯಾಕ್ ಮಾಡುವುದು ಹಾಗೂ ಬ್ಯಾಂಕ್‌ಗೆ ಠೇವಣಿ ಮಾಡುವ ಪ್ರಕ್ರಿಯೆಯಲ್ಲಿನ ಲೋಪಗಳೇ ತನಿಖೆಯಲ್ಲಿವೆ. ಮಂದಿರ ನಿರ್ಮಾಣದ ವೇಳೆ ಭಕ್ತರು ಸಮರ್ಪಿಸಿದ್ದ ಬೆಳ್ಳಿ ಇಟ್ಟಿಗೆಗಳು, ಬೆಳ್ಳಿಯ ಗಟ್ಟಿಗಳು ಮತ್ತು ಇತರ ಅಮೂಲ್ಯ ಕಾಣಿಕೆಗಳು ನಾಪತ್ತೆಯಾಗಿವೆ ಎಂಬ ಆರೋಪಕ್ಕೂ ತನಿಖೆಯಲ್ಲಿ ಪುರಾವೆ ದೊರೆತಿಲ್ಲ. ಸಂಬಂಧಿಸಿದ ಬೆಳ್ಳಿ ವಸ್ತುಗಳನ್ನು ದಾಖಲೆಗಳೊಂದಿಗೆ ಕರಗಿಸಲು ಅಥವಾ ಕೇಂದ್ರ ಹಣಕಾಸು ಸಚಿವಾಲಯದ ಅಧೀನದ ಟಂಕಸಾಲೆ ಸಂಸ್ಥೆಗೆ ಕಳುಹಿಸಲಾಗಿತ್ತು ಎಂಬುದು ತನಿಖೆಯಲ್ಲಿ ಕಂಡುಬಂದಿದೆ. ಭಕ್ತರು ನೇರವಾಗಿ ಟ್ರಸ್ಟ್ ಅಧಿಕಾರಿಗಳಿಗೆ ಒಪ್ಪಿಸಿದ್ದ ಬೆಳ್ಳಿ ಇಟ್ಟಿಗೆ, ಆಭರಣ ಮತ್ತು ಇತರ ವಸ್ತುಗಳು ಸುರಕ್ಷಿತವಾಗಿದ್ದು, ಅವುಗಳ ಲೆಕ್ಕವಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಕೂಡ ಸ್ಪಷ್ಟಪಡಿಸಿದೆ.



ನಿರ್ಮಾಣ ನಿಧಿಯ ಪ್ರಕರಣವಲ್ಲ

ರಾಮಮಂದಿರ ನಿರ್ಮಾಣಕ್ಕಾಗಿ ದೇಶದ ಹಳ್ಳಿಹಳ್ಳಿಗಳಿಂದ ಭಕ್ತರು ಹಣ ಸಮರ್ಪಿಸಿದ್ದರು. ಆ ನಿಧಿಯ ಆಧಾರದಲ್ಲಿಯೇ ಭವ್ಯ ಮಂದಿರ ನಿರ್ಮಾಣಗೊಂಡಿದೆ. ಈಗಿನ ಪ್ರಕರಣದಿಂದಾಗಿ ಆ ಇಡೀ ರಾಷ್ಟ್ರೀಯ ಸಮರ್ಪಣಾ ಅಭಿಯಾನವೇ ವಂಚನೆಯಾಗಿತ್ತು ಎಂಬಂತೆ ಬಿಂಬಿಸುವುದು ವಾಸ್ತವಕ್ಕೆ ವಿರುದ್ಧ. ಪ್ರಸ್ತುತ ದಾಖಲಾಗಿರುವ ಪ್ರಕರಣವು ಹುಂಡಿಗಳಿಂದ ಪ್ರತಿದಿನ ಬರುತ್ತಿದ್ದ ಹಣ ಮತ್ತು ಆಭರಣಗಳ ಎಣಿಕೆ, ದಾಖಲೀಕರಣ ವ್ಯವಸ್ಥೆಗೆ ಸಂಬಂಧಿಸಿದ್ದು, ಮಂದಿರ ನಿರ್ಮಾಣ ಕಾಮಗಾರಿಯ ಗುತ್ತಿಗೆ, ಕಲ್ಲು ಖರೀದಿ, ಕಟ್ಟಡ ವೆಚ್ಚ ಅಥವಾ ನಿರ್ಮಾಣ ನಿಧಿಯ ಲೆಕ್ಕಪತ್ರಗಳಲ್ಲಿ ಹಣ ದುರುಪಯೋಗವಾಗಿದೆ ಎಂಬುದು ಈ ವಿಶೇಷ ತನಿಖಾ ತಂಡದ ಪ್ರಾಥಮಿಕ ವರದಿಯ ನಿರ್ಣಯವಲ್ಲ. ರಾಮಮಂದಿರ ನಿರ್ಮಾಣದ ವೇಳೆ ನೀಡಿದ್ದ ಬೆಳ್ಳಿ ಇಟ್ಟಿಗೆಗಳು ಮತ್ತು ಇತರ ಅಮೂಲ್ಯ ವಸ್ತುಗಳು ಸುರಕ್ಷಿತವಾಗಿದ್ದು, ಅವುಗಳ ಲೆಕ್ಕವಿದೆ ಎಂದು ಟ್ರಸ್ಟ್ ಸಾರ್ವಜನಿಕವಾಗಿ ಭರವಸೆ ನೀಡಿದೆ. ಆದ್ದರಿಂದ ಕೆಲವು ನೌಕರರು ಹಾಗೂ ಮೇಲ್ವಿಚಾರಣಾ ವ್ಯವಸ್ಥೆಯ ವೈಫಲ್ಯದಿಂದ ಸಂಭವಿಸಿದ ಈಗಿನ ಘಟನೆಗೆ ಇಡೀ ಮಂದಿರ ನಿರ್ಮಾಣ ಕಾರ್ಯವನ್ನು ಜೋಡಿಸುವುದು ಸೂಕ್ತವಲ್ಲ.

ಆಗಿರುವ ಲೋಪಗಳೇನು?

ಲೋಪ 1

ಜೇಬಿಲ್ಲದ ಬಟ್ಟೆ ನಿಯಮವೇ ಮಾಯ

ಕಾಣಿಕೆ ಎಣಿಸುವವರು ಹಣ ಅಥವಾ ಆಭರಣವನ್ನು ಬಟ್ಟೆಯೊಳಗೆ ಅಡಗಿಸದಂತೆ ಜೇಬಿಲ್ಲದ ವಿಶೇಷ ಉಡುಪು ಧರಿಸಬೇಕು ಎಂಬ ನಿಯಮವಿತ್ತು. ಆದರೆ ಈ ಮೂಲಭೂತ ನಿಯಮವನ್ನೇ ಕಟ್ಟುನಿಟ್ಟಾಗಿ ಜಾರಿಗೆ ತಂದಿರಲಿಲ್ಲ. ಎಣಿಕೆ ಕೊಠಡಿಯ ಒಳಗೆ ಪ್ರವೇಶಿಸುವಾಗ ಮತ್ತು ಹೊರಬರುವಾಗ ಪ್ರತಿಯೊಬ್ಬ ಸಿಬ್ಬಂದಿಯನ್ನೂ ಸಂಪೂರ್ಣ ತಪಾಸಣೆಗೆ ಒಳಪಡಿಸಬೇಕಿತ್ತು. ಖಾಸಗಿ ಭದ್ರತಾ ಸಿಬ್ಬಂದಿ ಈ ಕರ್ತವ್ಯ ನಿರ್ವಹಿಸುತ್ತಿದ್ದರೂ, ಒಳಗೆ ತೆಗೆದುಕೊಂಡು ಹೋದ ಹಾಗೂ ಹೊರಗೆ ತಂದ ವಸ್ತುಗಳ ಸಮಗ್ರ ಪರಿಶೀಲನೆ ನಡೆದಿರಲಿಲ್ಲ. ಪರಿಣಾಮವಾಗಿ ನೋಟಿನ ಕಟ್ಟುಗಳು ಮತ್ತು ಆಭರಣಗಳನ್ನು ಬಟ್ಟೆಯಲ್ಲಿ ಅಡಗಿಸಿಕೊಂಡು ಹೊರತರುವ ಅವಕಾಶ ಸೃಷ್ಟಿಯಾಗಿತ್ತು.

ಲೋಪ 2



ಕ್ಯಾಮೆರಾ ಎದುರೇ ಮಾನವಗೋಡೆ

ಎಣಿಕೆ ಕೊಠಡಿಯಲ್ಲಿ ಸಿಸಿ ಕ್ಯಾಮೆರಾಗಳಿದ್ದರೂ ಆರೋಪಿಗಳು ಅವುಗಳಿರುವ ಸ್ಥಳ, ದೃಶ್ಯವ್ಯಾಪ್ತಿ, ಸಿಬ್ಬಂದಿಯ ಓಡಾಟ ಹಾಗೂ ಪ್ರವೇಶ ನಿರ್ಗಮನ ಮಾರ್ಗಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದರು ಎನ್ನಲಾಗಿದೆ. ಒಬ್ಬ ಸಿಬ್ಬಂದಿ ನೋಟಿನ ಕಟ್ಟುಗಳಿಂದ ಹಣ ತೆಗೆಯುವಾಗ ಇತರರು ಕ್ಯಾಮೆರಾದ ಮುಂದೆ ನಿಂತು ಮಾನವಗೋಡೆ ನಿರ್ಮಿಸುತ್ತಿದ್ದರು. ಇದರಿಂದ ಕ್ಯಾಮೆರಾದ ದೃಶ್ಯ ಮುಚ್ಚಿಹೋಗುತ್ತಿತ್ತು. ಕೆಲವು ದೃಶ್ಯಗಳಲ್ಲಿ ನೋಟಿನ ಕಟ್ಟನ್ನು ನಿಗದಿತ ತಟ್ಟೆ ಅಥವಾ ಮೊಹರು ಹಾಕುವ ಪೆಟ್ಟಿಗೆಗೆ ಇಡುವ ಬದಲು ನಿರ್ದಿಷ್ಟ ವ್ಯಕ್ತಿಗಳ ಕೈಗೆ ನೇರವಾಗಿ ನೀಡಿರುವುದು ಕಂಡುಬಂದಿದೆ. ಇನ್ನಷ್ಟು ಆತಂಕಕಾರಿ ಸಂಗತಿಯೆಂದರೆ, ಸಿಸಿ ಕ್ಯಾಮೆರಾದ ದೃಶ್ಯಗಳನ್ನು 180 ದಿನಗಳ ಕಾಲ ಸಂರಕ್ಷಿಸಬೇಕು ಎಂಬ ನಿಯಮವಿದ್ದರೂ, ಅವು 45 ದಿನಗಳ ಬಳಿಕ ಸ್ವಯಂಚಾಲಿತವಾಗಿ ಅಳಿಸಿಹೋಗುತ್ತಿದ್ದವು. ಹೀಗಾಗಿ ಹಲವು ತಿಂಗಳುಗಳಿಂದ ನಡೆದಿರಬಹುದಾದ ಕೈಚಳಕದ ಹಳೆಯ ದೃಶ್ಯಗಳನ್ನು ಪರಿಶೀಲಿಸುವ ಅವಕಾಶ ತನಿಖಾಧಿಕಾರಿಗಳಿಗೆ ಸಿಗಲಿಲ್ಲ.



ಲೋಪ 3

ಶೌಚಾಲಯವೇ ಹಣದ ಅಡಗುತಾಣ

ಬಂಧಿತ ಅವಿನಾಶ್ ಶುಕ್ಲಾನ ವಿಚಾರಣೆಯಿಂದ, ಎಣಿಕೆ ಕೊಠಡಿಯಿಂದ ತೆಗೆದ ಹಣವನ್ನು ಮೊದಲು ಮಂದಿರ ಆವರಣದ ಶೌಚಾಲಯಗಳಲ್ಲಿ ಅಡಗಿಸಲಾಗುತ್ತಿತ್ತು ಎಂಬ ಮಾಹಿತಿ ದೊರೆತಿದೆ. ಬಳಿಕ ಅನುಕೂಲಕರ ಸಮಯದಲ್ಲಿ ಸಣ್ಣಸಣ್ಣ ಮೊತ್ತಗಳಲ್ಲಿ ಅದನ್ನು ಹೊರಗೆ ಸಾಗಿಸಲಾಗುತ್ತಿತ್ತು. ಒಮ್ಮೆಗೇ ದೊಡ್ಡ ಮೊತ್ತ ಸಾಗಿಸಿದರೆ ತಪಾಸಣೆ ಅಥವಾ ಅನುಮಾನಕ್ಕೆ ಗುರಿಯಾಗುವ ಸಾಧ್ಯತೆ ಇದ್ದುದರಿಂದ, ಅಲ್ಪ ಪ್ರಮಾಣದಲ್ಲಿ ಹಲವು ಬಾರಿ ಹಣ ಹೊರತರುವ ತಂತ್ರ ಬಳಸಲಾಗಿತ್ತು ಎಂದು ಪೊಲೀಸರು ಶಂಕಿಸಿದ್ದಾರೆ. ಶೌಚಾಲಯಗಳ ನಿರ್ವಹಣೆ ಮತ್ತು ಸ್ವಚ್ಛತಾ ಸಿಬ್ಬಂದಿಯನ್ನೂ ವಿಚಾರಣೆಗೆ ಒಳಪಡಿಸುವ ಪ್ರಕ್ರಿಯೆ ನಡೆದಿದೆ.

ಲೋಪ 4



ನೋಟಿನ ಕಟ್ಟುಚೀಟಿ ಆಟ

ಎಣಿಕೆ ಸಂದರ್ಭದಲ್ಲಿ ನೋಟಿನ ಕಟ್ಟಿಗೆ ನಿಗದಿತ ಸಂಖ್ಯೆಯಿಗಿಂತ ಹೆಚ್ಚುವರಿ ನೋಟುಗಳನ್ನು ಸೇರಿಸಲಾಗುತ್ತಿತ್ತು. ಬ್ಯಾಂಕ್‌ನಲ್ಲಿ ಕೆಲವೊಮ್ಮೆ ಪ್ರತಿಯೊಂದು ನೋಟನ್ನೂ ಮರುಎಣಿಸದೆ, ಕಟ್ಟಿನ ಸಂಖ್ಯೆ ಆಧರಿಸಿ ಚೀಟಿ ಸಿದ್ಧಪಡಿಸಲಾಗುತ್ತಿತ್ತು ಎನ್ನಲಾಗಿದೆ. ಮಂದಿರದಿಂದ ಬ್ಯಾಂಕ್‌ಗೆ ಹಣ ಸಾಗಿಸುವ ಮಧ್ಯದ ಹಂತದಲ್ಲಿ ಹೆಚ್ಚುವರಿಯಾಗಿ ಸೇರಿಸಿದ್ದ ನೋಟುಗಳನ್ನು ಕಟ್ಟಿನಿಂದ ತೆಗೆದುಕೊಳ್ಳಲಾಗುತ್ತಿತ್ತು. ದಾಖಲೆಗಳ ಪ್ರಕಾರ ಇರಬೇಕಾದ ಮೊತ್ತ ಮತ್ತು ಬ್ಯಾಂಕ್‌ನಲ್ಲಿ ಠೇವಣಿಯಾದ ಮೊತ್ತ ಹೊಂದಿಕೆಯಾಗುವಂತೆ ತೋರಿದರೂ, ಹೆಚ್ಚುವರಿ ನೋಟುಗಳು ಆರೋಪಿಗಳ ಪಾಲಾಗುತ್ತಿದ್ದವು ಎಂಬ ಮತ್ತೊಂದು ವಿಧಾನ ತನಿಖೆಯಲ್ಲಿ ಕಂಡುಬಂದಿದೆ.

ಲೋಪ 5

ದಾಖಲೆಯಾಗುವ ಮೊದಲೇ ಆಭರಣಕ್ಕೆ ಕನ್ನ

ಭಕ್ತರು ರಾಮಲಲಾಗೆ ಸಮರ್ಪಿಸುತ್ತಿದ್ದ ಕಿವಿಯೋಲೆ, ಮೂಗುತಿ, ಬಳೆ, ಕಾಲ್ಗೆಜ್ಜೆ ಸೇರಿದಂತೆ ಸಣ್ಣ ಚಿನ್ನಬೆಳ್ಳಿಯ ಆಭರಣಗಳು ಅಧಿಕೃತ ನೋಂದಣಿ ಪುಸ್ತಕದಲ್ಲಿ ದಾಖಲಾಗುವ ಮೊದಲೇ ಅಪಹರಣವಾಗಿರುವ ಶಂಕೆಯೂ ವ್ಯಕ್ತವಾಗಿದೆ. ಕಾಣಿಕೆ ಪೆಟ್ಟಿಗೆಯಿಂದ ವಸ್ತುಗಳನ್ನು ಹೊರತೆಗೆದ ಕ್ಷಣದಿಂದಲೇ ಪ್ರತಿಯೊಂದು ವಸ್ತುವಿಗೆ ಪ್ರತ್ಯೇಕ ಸಂಖ್ಯೆ ಅಥವಾ ಗಣಕೀಕೃತ ಗುರುತು ನೀಡುವ ವ್ಯವಸ್ಥೆ ಇಲ್ಲದಿರುವುದು ದುರುಪಯೋಗಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಎಣಿಕೆ, ವಿಂಗಡಣೆ ಮತ್ತು ದಾಖಲೀಕರಣದ ನಡುವೆ ಹಲವು ಮಂದಿ ಆ ವಸ್ತುಗಳನ್ನು ಕೈಯಿಂದ ನಿರ್ವಹಿಸುತ್ತಿದ್ದುದರಿಂದ ವೈಯಕ್ತಿಕ ಹೊಣೆಗಾರಿಕೆಯನ್ನು ನಿರ್ಧರಿಸುವುದು ಕಷ್ಟವಾಗಿತ್ತು.

ಬೆಳ್ಳಿ ಇಟ್ಟಿಗೆ ಕಾಣೆಯಾಗಿದೆ ಎಂಬುದು ಸುಳ್ಳು

ಈ ಪ್ರಕರಣದ ನಡುವೆಯೇ ಮಂದಿರ ನಿರ್ಮಾಣದ ವೇಳೆ ಭಕ್ತರು ಸಮರ್ಪಿಸಿದ್ದ ನೂರಾರು ಕೆ.ಜಿ. ಬೆಳ್ಳಿ ಹಾಗೂ ಕೆಲವು ಸಂಘಟನೆಗಳು ನೀಡಿದ್ದ ಬೆಳ್ಳಿ ಇಟ್ಟಿಗೆಗಳು ಕಾಣೆಯಾಗಿವೆ ಎಂಬ ಆರೋಪಗಳು ಕೇಳಿಬಂದಿದ್ದವು. ಶಿವಸೇನೆ ಉದ್ಧವ್ ಬಣ ಸಮರ್ಪಿಸಿದ್ದ ನಾಲ್ಕು ಕೆ.ಜಿ. ಬೆಳ್ಳಿ ಇಟ್ಟಿಗೆ ಹಾಗೂ ದೇಶದ ಆಭರಣ ವ್ಯಾಪಾರಿಗಳು ನೀಡಿದ್ದ ಬೆಳ್ಳಿಯ ಗಟ್ಟಿಗಳ ಕುರಿತು ಪ್ರಶ್ನೆ ಎತ್ತಲಾಗಿತ್ತು. ಆದರೆ ತನಿಖೆ ಆಳಕ್ಕಿಳಿದಂತೆ ಬೆಳ್ಳಿ ಇಟ್ಟಿಗೆಗಳು ಮತ್ತು ಗಟ್ಟಿಗಳು ನಾಪತ್ತೆಯಾಗಿಲ್ಲ ಎಂಬುದು ದಾಖಲೆಗಳಿಂದ ದೃಢಪಟ್ಟಿದೆ. ದಾಖಲೆ ಸಂಖ್ಯೆ 96ರ ಅಡಿಯಲ್ಲಿದ್ದ ಎಂಟು ಬೆಳ್ಳಿ ಇಟ್ಟಿಗೆಗಳನ್ನು ಕರಗಿಸಲು ಕಳುಹಿಸಲಾಗಿತ್ತು. ಮತ್ತೊಂದು ಭಾಗವನ್ನು ನಾಣ್ಯ ಮತ್ತು ಇತರ ಅಧಿಕೃತ ವಸ್ತುಗಳ ತಯಾರಿಕೆಯಲ್ಲಿ ಪರಿಣತಿ ಹೊಂದಿರುವ ಕೇಂದ್ರ ಸರಕಾರದ ಭದ್ರತಾ ಮುದ್ರಣ ಮತ್ತು ಟಂಕಸಾಲೆ ನಿಗಮಕ್ಕೆ ಕಳುಹಿಸಲಾಗಿತ್ತು. ಇದಕ್ಕೆ ಟ್ರಸ್ಟ್ ಮತ್ತು ನಿಗಮದ ಅಧಿಕಾರಿಗಳ ಸಹಿ ಇರುವ ದಾಖಲೆಗಳೂ ತನಿಖಾ ತಂಡಕ್ಕೆ ಲಭ್ಯವಾಗಿವೆ. 2020ರ ಜುಲೈ 21ರಿಂದ 28ರ ನಡುವೆ 38 ಕೆ.ಜಿ. ಬೆಳ್ಳಿ ಹಾಗೂ ಜುಲೈ 29ರಂದು 25.576 ಕೆ.ಜಿ. ಬೆಳ್ಳಿ ಇಟ್ಟಿಗೆಗಳು ಸ್ವೀಕಾರವಾಗಿರುವ ನಮೂದುಗಳು ಪತ್ತೆಯಾಗಿವೆ. ಹೀಗಾಗಿ ಬೆಳ್ಳಿ ಇಟ್ಟಿಗೆಗಳೆಲ್ಲ ಕಳವಾಗಿದೆ ಎಂಬ ಆರೋಪಕ್ಕೆ ತನಿಖೆಯಲ್ಲಿ ಆಧಾರ ಸಿಕ್ಕಿಲ್ಲ.

ಇದನ್ನು ಮರೆಯಬಾರದು



ಬೆಳ್ಳಿ ಇಟ್ಟಿಗೆಗಳನ್ನು ಅವುಗಳ ಮೂಲರೂಪದಲ್ಲೇ ಮಂದಿರದ ಅಡಿಪಾಯಕ್ಕೆ ಹಾಕದಿರುವುದು, ಅವು ಕಾಣೆಯಾಗಿವೆ ಅಥವಾ ಕಳವಾಗಿವೆ ಎಂಬುದಕ್ಕೆ ಸಾಕ್ಷಿಯಲ್ಲ. ಬೆಳ್ಳಿಯ ಗುಣಮಟ್ಟ, ಮಿಶ್ರಲೋಹದ ಪ್ರಮಾಣ, ಸಂಗ್ರಹದ ಸುರಕ್ಷತೆ ಮತ್ತು ಮಂದಿರದ ವಾಸ್ತುತಾಂತ್ರಿಕ ಅಗತ್ಯಗಳನ್ನು ಗಮನಿಸಿ ಕರಗಿಸುವುದು ಅಥವಾ ಅಧಿಕೃತ ಟಂಕಸಾಲೆಗೆ ಕಳುಹಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮುಖ್ಯವಾದುದು ಆ ವಸ್ತು ಸ್ವೀಕಾರ, ತೂಕ, ಹಸ್ತಾಂತರ ಮತ್ತು ಬಳಕೆಯ ದಾಖಲೆ. ಈ ದಾಖಲೆಗಳು ತನಿಖೆಯಲ್ಲಿ ಪತ್ತೆಯಾಗಿವೆ.

ಇನ್ನು ಬೇಕಿರುವುದು ಅಭೇದ್ಯ ಕಾಣಿಕೆ ವ್ಯವಸ್ಥೆ

ರಾಮಮಂದಿರಕ್ಕೆ ಬರುವ ಕಾಣಿಕೆಯನ್ನು ಕೇವಲ ನಗದು ಎಣಿಕೆಯ ಸಾಮಾನ್ಯ ಪ್ರಕ್ರಿಯೆಯೆಂದು ಪರಿಗಣಿಸಲಾಗದು. ಅದು ಕೋಟ್ಯಂತರ ಭಕ್ತರ ಶ್ರದ್ಧೆ ಮತ್ತು ನಂಬಿಕೆಯ ಪ್ರತೀಕ. ಹೀಗಾಗಿ ಮುಂದಿನ ವ್ಯವಸ್ಥೆಯಲ್ಲಿ ಹುಂಡಿ ತೆರೆಯುವ ಕ್ಷಣದಿಂದ ಬ್ಯಾಂಕ್ ಖಾತೆಗೆ ಹಣ ಜಮೆಯಾಗುವವರೆಗೆ ಪ್ರತಿಯೊಂದು ಹಂತವೂ ಗಣಕೀಕೃತವಾಗಿ ದಾಖಲಾಗಬೇಕು. ಪ್ರತಿ ಹುಂಡಿಗೆ ಪ್ರತ್ಯೇಕ ಗುರುತು, ತೆರೆಯುವ ಸಮಯದ ದೃಶ್ಯ ದಾಖಲೆ, ಎರಡು ಅಥವಾ ಮೂರು ಅಧಿಕಾರಿಗಳ ಸಮ್ಮುಖ, ನೋಟು ಎಣಿಕೆ ಯಂತ್ರಗಳ ನೇರ ಮಾಹಿತಿ ದಾಖಲಾತಿ, ಚೀಲಗಳಿಗೆ ಸಂಖ್ಯೆ ಹೊಂದಿದ ಮೊಹರು, ಸಾಗಣೆ ವಾಹನಕ್ಕೆ ಸ್ಥಳ ಗುರುತಿಸುವ ವ್ಯವಸ್ಥೆ ಮತ್ತು ಬ್ಯಾಂಕ್‌ನಲ್ಲಿ ಮರುಎಣಿಕೆ ಕಡ್ಡಾಯವಾಗಬೇಕು. ಚಿನ್ನಬೆಳ್ಳಿಯ ಪ್ರತಿಯೊಂದು ವಸ್ತುವನ್ನೂ ತೂಕ, ಚಿತ್ರ ಮತ್ತು ಪ್ರತ್ಯೇಕ ಸಂಖ್ಯೆಯೊಂದಿಗೆ ತಕ್ಷಣ ನೋಂದಾಯಿಸಬೇಕು. ಎಣಿಕೆ ಸಿಬ್ಬಂದಿಯನ್ನು ನಿಯಮಿತವಾಗಿ ಬದಲಾಯಿಸಬೇಕು. ಸಂಬಂಧಿಕರು ಅಥವಾ ಪರಸ್ಪರ ಆಪ್ತರನ್ನು ಒಂದೇ ಪಾಳಿಯಲ್ಲಿ ನೇಮಿಸಬಾರದು. ಪೊಲೀಸ್ ಹಿನ್ನೆಲೆ ಪರಿಶೀಲನೆ, ಆಸ್ತಿ ಘೋಷಣೆ ಮತ್ತು ಸ್ವತಂತ್ರ ಲೆಕ್ಕಪರಿಶೋಧನೆ ಕಡ್ಡಾಯವಾಗಬೇಕು. ಸಿಸಿ ಕ್ಯಾಮೆರಾ ದೃಶ್ಯಗಳನ್ನು ಕನಿಷ್ಠ 180 ದಿನ ಮಾತ್ರವಲ್ಲ, ಸಾಧ್ಯವಾದಷ್ಟು ದೀರ್ಘಾವಧಿಗೆ ಸುರಕ್ಷಿತ ಸರ್ವರ್‌ನಲ್ಲಿ ಸಂರಕ್ಷಿಸಬೇಕು. ಕ್ಯಾಮೆರಾ ಎದುರು ಯಾರಾದರೂ ನಿಂತು ದೃಶ್ಯ ಮರೆಮಾಡಿದರೆ ತಕ್ಷಣ ಎಚ್ಚರಿಕೆ ನೀಡುವ ತಂತ್ರಜ್ಞಾನ ಬಳಸಬೇಕು. ಎಣಿಕೆ ನಡೆಯುವಾಗ ಪ್ರತ್ಯೇಕ ನಿಯಂತ್ರಣ ಕೊಠಡಿಯಿಂದ ನೇರ ನಿಗಾ ಇರಬೇಕು.

ಕಳಂಕ ವ್ಯಕ್ತಿಗಳದ್ದು; ರಾಮಮಂದಿರದ್ದಲ್ಲ

ಭಕ್ತರ ಕಾಣಿಕೆಗೆ ಕೈಹಾಕಿರುವ ಆರೋಪ ಅತ್ಯಂತ ಗಂಭೀರ. ದೇವರ ಸೇವೆಗಾಗಿ ಬಂದವರೇ ದುರಾಸೆಗೆ ಬಲಿಯಾಗಿ ಹಣ ಕದ್ದಿದ್ದರೆ ಅವರಿಗೆ ಕಠಿಣ ಶಿಕ್ಷೆಯಾಗಲೇಬೇಕು. ಮೇಲ್ವಿಚಾರಣೆಯಲ್ಲಿ ನಿರ್ಲಕ್ಷ್ಯ ತೋರಿದವರನ್ನೂ ಹೊಣೆಗಾರಿಕೆಯಿಂದ ಮುಕ್ತಗೊಳಿಸಲಾಗದು. ಆದರೆ ಕೆಲವು ನೌಕರರ ಅಪರಾಧ ಮತ್ತು ಆಡಳಿತಾತ್ಮಕ ಲೋಪವನ್ನು ಮುಂದಿಟ್ಟುಕೊಂಡು ಶ್ರೀರಾಮಮಂದಿರ ನಿರ್ಮಾಣದ ಶತಮಾನಗಳ ಹೋರಾಟ, ಕೋಟ್ಯಂತರ ಭಕ್ತರ ತ್ಯಾಗ ಹಾಗೂ ಮಂದಿರ ನಿರ್ಮಾಣಕ್ಕಾಗಿ ನಡೆದ ಪಾರದರ್ಶಕ ಜನಸಮರ್ಪಣೆಯನ್ನೇ ಪ್ರಶ್ನಿಸುವುದು ನ್ಯಾಯಸಮ್ಮತವಲ್ಲ. ಬೆಳ್ಳಿ ಇಟ್ಟಿಗೆಗಳು ಕಾಣೆಯಾಗಿಲ್ಲ. ನಿರ್ಮಾಣ ನಿಧಿ ದುರುಪಯೋಗವಾಗಿದೆ ಎಂಬುದು ಈ ತನಿಖೆಯ ನಿರ್ಣಯವಲ್ಲ. ಈಗ ಬಯಲಾಗಿರುವುದು ದೈನಂದಿನ ಕಾಣಿಕೆ ಎಣಿಕೆ ವ್ಯವಸ್ಥೆಯಲ್ಲಿನ ದುರ್ಬಲತೆ ಮತ್ತು ಕೆಲವು ವ್ಯಕ್ತಿಗಳ ದುರಾಸೆ. ಹೀಗಾಗಿ ಎರಡು ಸತ್ಯಗಳನ್ನು ಏಕಕಾಲದಲ್ಲಿ ಒಪ್ಪಿಕೊಳ್ಳಬೇಕಾಗಿದೆ. ಭಕ್ತರ ಹಣಕ್ಕೆ ಕೈಹಾಕಿದವರಿಗೆ ಯಾವುದೇ ರಕ್ಷಣೆ ಸಿಗಬಾರದು. ಅದೇ ವೇಳೆ ಆ ಅಪರಾಧದ ನೆಪದಲ್ಲಿ ಇಡೀ ರಾಮಮಂದಿರ ನಿರ್ಮಾಣ ಮತ್ತು ಹಿಂದೂ ಸಮಾಜದ ಸಮರ್ಪಣೆಗೆ ಮಸಿ ಬಳಿಯುವ ಪ್ರಯತ್ನಕ್ಕೂ ಅವಕಾಶ ನೀಡಬಾರದು. ರಾಮನ ಹೆಸರಿನಲ್ಲಿ ಬಂದ ಪ್ರತಿಯೊಂದು ರೂಪಾಯಿಗೂ ಲೆಕ್ಕ ಇರಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಭಕ್ತರ ನಂಬಿಕೆ ಮತ್ತೆಂದೂ ಪ್ರಶ್ನೆಗೆ ಸಿಲುಕದಂತಹ ಅಭೇದ್ಯ ವ್ಯವಸ್ಥೆ ನಿರ್ಮಾಣವಾಗಬೇಕು. ಅದೇ ಈ ಪ್ರಕರಣದಿಂದ ಪಡೆಯಬೇಕಾದ ನಿಜವಾದ ಪಾಠ.



ಆ.30ರೊಳಗೆ ಪಾಲಿಕೆ ಚುನಾವಣೆ?

• **ಬೆಂಗಳೂರು:** ಬಹು ನಿರೀಕ್ಷಿತ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಪಂಚ ಪಾಲಿಕೆಗಳ ಚುನಾವಣೆ ಈ ಸಲವಾದರೂ ಆಗಸ್ಟ್ 30 ರೊಳಗೆ ನಡೆಯುತ್ತಾ? ಎಂಬ ಚರ್ಚೆ ಬೆಂಗಳೂರಿನ ಸಾರ್ವಜನಿಕ ವಲಯದಲ್ಲಿ ಚರ್ಚೆ ಆರಂಭವಾಗಿದೆ.

ಜಿಬಿಎ ಚುನಾವಣೆ ಪದೆ ಪದೇ ವಿಳಂಬವಾಗುತ್ತಿದ್ದು, ಸುಪ್ರೀಂ ಕೋರ್ಟ್ ಆಗಸ್ಟ್ 30 ರೊಳಗೆ ಮುಗಿಸುವಂತೆ ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ. ಅದರಂತೆ ಚುನಾವಣಾ ಆಯೋಗ ನಿಗಧಿತ ಅವಧಿಯೊಳಗೆ ಅಂದರೆ ಆ.30 ರೊಳಗೆ ಚುನಾವಣೆ ನಡೆಸಲು ಸಿದ್ಧತೆಯನ್ನು ನಡೆಸಿದೆ. ಆದರೆ ಸರ್ಕಾರವೇ ಅನುಮಾನದಲ್ಲಿದೆ ಎಂದು ಹೇಳಲಾಗುತ್ತಿದೆ.

ಅದರ ನಡುವೆ ರಾಜ್ಯ ಸೇರಿದಂತೆ ಜಿಬಿಎ ವ್ಯಾಪ್ತಿಯಲ್ಲಿ ಮತದಾರರಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ನಡೆಯುತ್ತಿದ್ದು, ಅಂತಿಮ ಮತದಾರರಪಟ್ಟಿ ಅಕ್ಟೋಬರ್ 7 ಕ್ಕೆ ಪ್ರಕಟಗೊಳ್ಳಲಿದೆ. ಅಲ್ಲಿವರೆಗೆ ಅನೇಕ ಸಿಬ್ಬಂದಿಗಳು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗಿಯಾಗುವುದರಿಂದ ಜಬಿಎ ಚುನಾವಣೆ ಮತ್ತೆ ವಿಳಂಬವಾಗಬಹುದು ಎಂದು ಅಭಿಪ್ರಾಯ ವ್ಯಕ್ತವಾಗುತ್ತಿದೆ. ಚುನಾವಣಾ ಆಯೋಗ ಭರದ ಸಿದ್ಧತೆ: ಸುಪ್ರೀಂ ಕೋರ್ಟ್ ಆ.30ರೊಳಗೆ ಚುನಾವಣೆ ಪೂರ್ಣಗೊಳಿಸುವಂತೆಗಡುವು ನೀಡಿರುವ ಹಿನ್ನೆಲೆಯಲ್ಲಿ ಚುನಾವಣಾ ಚಟುವಟಿಕೆಗಳು ವೇಗ ಪಡೆದುಕೊಂಡಿವೆ.369 ವಾರ್ಡ್‌ಗಳಿಗೆ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗ ಅಗತ್ಯ ಸಿದ್ಧತೆ ಪೂರ್ಣಗೊಳಿಸಿದ್ದು,ಅಂತಿಮ ಮತದಾರರ ಪಟ್ಟಿಯನ್ನೂ ಈಗಾಗಲೇ ಪ್ರಕಟಿಸಿದೆ.ಚುನಾವಣೆಗೆ ಅಗತ್ಯವಾದ ಆಡಳಿತಾತ್ಮಕ ಹಾಗೂ ತಾಂತ್ರಿಕ ವ್ಯವಸ್ಥೆಗಳನ್ನೂ ಸಜ್ಜುಗೊಳಿಸುತ್ತಿದೆ. ಚುನಾವಣಾ ಆಯೋಗದ ಇಚ್ಛೆಯಂತೆ ನಡೆದರೆ ಇದೇ ತಿಂಗಳ 18 ರ ಆಸುಪಾಸಿನಲ್ಲಿ ಚುನಾವಣಾ ದಿನಾಂಕ ಪ್ರಕಟವಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ದಿನಾಂಕ ಪ್ರಕಟವಾದ ದಿನದಿಂದ ನೀತಿಸಂಹಿತೆ ಜಾರಿಯಾಗುವುದರಿಂದ ಜಿಬಿಎ ಆಡಳಿತ ಯಂತ್ರದಲ್ಲಿ ಚಟುವಟಿಕೆಗಳು ಹೆಚ್ಚಾಗಿವೆ.

ಬೆಳೆ ವಿಮೆ ಸಮೀಕ್ಷೆಗೆ ಸರ್ಕಾರ ಆದೇಶ

• **ಬೆಂಗಳೂರ:** 2026–27ನೇ ಸಾಲಿನಿಂದ ಜಾರಿಗೆ ಬರುವಂತೆ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯಲ್ಲಿ ಬೆಳೆ ವಿಮೆ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆ ವರದಿಯೊಂದಿಗೆ ಕಡ್ಡಾಯವಾಗಿ ತಾಳೆ ಮಾಡುವ ಮಹತ್ವದ ಆದೇಶವನ್ನು ರಾಜ್ಯ ಸರ್ಕಾರ ಹೊರಡಿಸಿದೆ.

ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಮಾಹಿತಿ ಮತ್ತು ವಿಮೆಗೆ ನೋಂದಾಯಿಸಿದ ಬೆಳೆ ವಿವರಗಳು ಹೊಂದಿಕೆಯಾಗದಿದ್ದರೆ, ಸರ್ಕಾರ ನಿಗದಿಪಡಿಸಿರುವ ಕೆಲವು ವಿನಾಯಿತಿಗಳನ್ನು ಹೊರತುಪಡಿಸಿ ಉಳಿದ ಪ್ರಸ್ತಾವನೆಗಳನ್ನು ಪರಿಶೀಲನೆಗೆ ಒಳಪಡಿಸಲಾಗುತ್ತದೆ. ಬೆಳೆ ಸಮೀಕ್ಷೆಯಲ್ಲಿ ಪಾಳು ಅಥವಾ ಕಟಾವು ಪ್ರದೇಶ ಎಂದು ದಾಖಲಾಗಿರುವ ಸರ್ವೇ ನಂಬರ್‌ಗಳಿಗೆ ಯಾವುದೇ ವಿನಾಯಿತಿ ಇರುವುದಿಲ್ಲ, ಇಂತಹ ಜಮೀನುಗಳಿಗೆ ಬೆಳೆ ವಿಮೆ ಪರಿಹಾರ ನೀಡಲಾಗುವುದಿಲ್ಲ, ಇದೇ ವೇಳೆ, ವಿಮೆಗೆ ನೋಂದಾಯಿಸಿದ ವಿಸ್ತೀರ್ಣ ಮತ್ತು ಬೆಳೆ ಸಮೀಕ್ಷೆಯಲ್ಲಿ ದಾಖಲಾದ ಬಿತ್ತನೆ ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡುಬಂದರೆ, ಗರಿಷ್ಠ ಶೇ.25 ಅಥವಾ ಒಂದು ಎಕರೆ (ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟರವರೆಗೆ) ಮಾತ್ರ ಹೆಚ್ಚುವರಿ ವಿಸ್ತೀರ್ಣಕ್ಕೆ ಪರಿಹಾರ ಪರಿಗಣಿಸಲಾಗುತ್ತದೆ.

ಒಂದೇ ಸರ್ವೇ ನಂಬರ್‌ನಲ್ಲಿ ಬೇರೆ ಹಿಸ್ಸಾದಲ್ಲಿ ಬೆಳೆ ಬೆಳೆದಿದ್ದರೆ ವಿಮೆ ಮಾನ್ಯವಾಗುವುದಿಲ್ಲ. ವಿಮೆಗೆ ನೋಂದಾಯಿಸಿದ ಹಿಸ್ಸಾದಲ್ಲಿಯೇ ಬೆಳೆ ಬೆಳೆಯಲ್ಪಟ್ಟಿರಬೇಕು ಎಂದು ಆದೇಶದಲ್ಲಿ ಸ್ಪಷ್ಟಪಡಿಸಿದೆ. ಒಂದೇ ವಿಮೆ ಪ್ರಸ್ತಾವನೆಯಲ್ಲಿ ಒಂದಕ್ಕಿಂತ ಹೆಚ್ಚು ಸರ್ವೇ ನಂಬರ್‌ಗಳಿದ್ದರೆ, ಎಲ್ಲ ಸರ್ವೇ ನಂಬರ್‌ಗಳಲ್ಲೂ ಬೆಳೆ ಸಮೀಕ್ಷೆ ಮತ್ತು ವಿಮೆ ವಿವರಗಳು ಹೊಂದಿಕೆಯಾಗಬೇಕು. ಯಾವುದೇ ಒಂದು ಸರ್ವೇ ನಂಬರ್‌ನಲ್ಲಿ ವ್ಯತ್ಯಾಸ ಕಂಡುಬಂದರೂ, ಆ ಭಾಗಕ್ಕೆ ಪರಿಹಾರ ನಿರಾಕರಿಸಲಾಗುತ್ತದೆ.

ಯಾವುದೇ ಗ್ರಾಮದ ಗಣಕೀಕೃತ ಗ್ರಾಮ ನಕ್ಷೆ ಅಥವಾ ಜಿಯೋ-ರೆಫರೆನ್ಸ್ ನಕ್ಷೆ ಲಭ್ಯವಿಲ್ಲದಿದ್ದರೆ ಅಥವಾ ಬೆಳೆ ಸಮೀಕ್ಷೆಯಲ್ಲಿ ಬಳಸದೇ ಇದ್ದರೆ, ಅಂತಹ ಗ್ರಾಮಗಳ ಎಲ್ಲಾ ವಿಮೆ ಪ್ರಸ್ತಾವನೆಗಳನ್ನು ಮಾನ್ಯವೆಂದು ಪರಿಗಣಿಸಲಾಗುತ್ತದೆ. ಹಾಗೆಯೇ, ಬೆಳೆ ಸಮೀಕ್ಷೆಯಲ್ಲಿ ಜಮೀನಿನ ಒಂದು ಭಾಗ ಕೃಷಿಯೇತರ ಪ್ರದೇಶವಾಗಿದ್ದು ಉಳಿದ ಭಾಗದಲ್ಲಿ ಬೆಳೆ ಬೆಳೆದಿರುವ ಸಂದರ್ಭಗಳಲ್ಲಿ ಸರ್ಕಾರ ನಿಗದಿಪಡಿಸಿರುವ ವಿನಾಯಿತಿಗಳ ಅಡಿಯಲ್ಲಿ ಅಂತಹ ಪ್ರಸ್ತಾವನೆಗಳನ್ನು ಮಾನ್ಯವಾಗಿ ಪರಿಗಣಿಸಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಿದೆ.

ದೂರು ಸಲ್ಲಿಸಲು 15 ದಿನಗಳ ಅವಕಾಶ : ಪ್ರಸ್ತಾವನೆಗಳ ಪರಿಶೀಲನೆಗೆ ವಾರ್ಷಿಕ ಬೆಳೆಗಳಿಗೆ 15 ದಿನ ಹಾಗೂ ಬಹುವಾರ್ಷಿಕ ಬೆಳೆಗಳಿಗೆ 45 ದಿನಗಳ ಗಡುವು ನಿಗದಿಪಡಿಸಲಾಗಿದ್ದು, ಅಂಗೀಕರಿಸಿದ ಪ್ರಸ್ತಾವನೆಗಳ ಪರಿಹಾರ ಮೊತ್ತವನ್ನು ಕ್ಲೈಮ್ ಪ್ರಾರಂಭಿಸಿದ ಬಳಿಕ 15 ದಿನಗಳೊಳಗೆ ರೈತರಿಗೆ ಪಾವತಿಸಬೇಕು ಎಂದು ಸೂಚಿಸಿದೆ. ವಿಮಾ ಸಂಸ್ಥೆ ಪ್ರಸ್ತಾವನೆಯನ್ನು ತಿರಸ್ಕರಿಸಿದರೆ ರೈತರಿಗೆ ದೂರು ಸಲ್ಲಿಸಲು 15 ದಿನಗಳ ಅವಕಾಶ ನೀಡಿದೆ.

ಸಂಘದ ಕುರಿತ ಪ್ರಿಯಾಂಕ್ ವಾದ ತಿರಸ್ಕರಿಸಿದ ಕೋರ್ಟ್

ಪುಟ ೧ ಕಾನೂನಿನಲ್ಲಿ ವ್ಯಕ್ತಿಗಳ ಗುಂಪನ್ನು ಗುರುತಿಸಲು ಪೂರ್ವನಿರ್ದಶನವಾಗಿ ಔಪಚಾರಿಕ ಸದಸ್ಯತ್ವ, ನೋಂದಣಿ, ಸಂಯೋಜನೆ ಅಥವಾ ಸಂಯೋಜನೆಯ ಸಾಕ್ಷ್ಯಚಿತ್ರ ಪುರಾವೆಗಳ ಯಾವುದೇ ಅವಶ್ಯಕತೆಯನ್ನು ಕಾನೂನು ಸೂಚಿಸುವುದಿಲ್ಲ, ಇದು ವ್ಯಕ್ತಿಯನ್ನು ಯಾವುದೇ ಕಂಪನಿ ಅಥವಾ ಸಂಘ ಅಥವಾ ವ್ಯಕ್ತಿಗಳ ಗುಂಪನ್ನು, ಅದು ಸಂಯೋಜಿಸಲ್ಪಟ್ಟಿರಲಿ ಅಥವಾ ಇಲ್ಲದಿರಲಿ ಎಂದು ವ್ಯಾಖ್ಯಾನಿಸುತ್ತದೆ.

ಸುಪ್ರೀಂ ಕೋರ್ಟ್, ಅಲಹಾಬಾದ್ ಹೈಕೋರ್ಟ್‌ಮತ್ತುಕೇರಳಹೈಕೋರ್ಟ್‌ತೀರ್ಪುಗಳನ್ನು ಉಲ್ಲೇಖಿಸಿದ ನ್ಯಾಯಾಧೀಶರು, ಆರ್‌ಎಸ್‌ಎಸ್ ಅನ್ನು ಕ್ರಿಮಿನಲ್ ಮಾನನಷ್ಟ ಕಾನೂನಿನ ಉದ್ದೇಶಗಳಿಗಾಗಿ ನಿರ್ದಿಷ್ಟ ಮತ್ತು ಗುರುತಿಸಬಹುದಾದ ಸಂಸ್ಥೆಯಾಗಿ ಈ ಹಿಂದೆ ಗುರುತಿಸಲಾಗಿತ್ತು ಎಂದು ಹೇಳಿದರು. ಆರೋಪಿಗಳೇ ಆರ್‌ಎಸ್‌ಎಸ್ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರ ವಿರುದ್ಧ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಹೇಳಲಾಗಿದ್ದು, ಅದೇ ಸಮಯದಲ್ಲಿ ಯಾವುದೇ ಗುರುತಿಸಬಹುದಾದ ಸಂಸ್ಥೆ ಅಸ್ತಿತ್ವದಲ್ಲಿಲ್ಲ ಎಂದು ವಾದಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ತಿಳಿಸಿದೆ. ಮಾನನಷ್ಟ ನ್ಯಾಯಶಾಸ್ತ್ರದಲ್ಲಿನೊಂದ ವ್ಯಕ್ತಿ ಎಂಬ ಪರಿಕಲ್ಪನೆಯು ಮಾನನಷ್ಟ ಹೇಳಿಕೆಯಲ್ಲಿ ದೂರುದಾರರನ್ನು ಪ್ರತ್ಯೇಕವಾಗಿ ಹೆಸರಿಸಬೇಕಾಗಿಲ್ಲ, ಒಂದು ನಿರ್ದಿಷ್ಟ ವರ್ಗ ಅಥವಾ ಗುರುತಿಸಬಹುದಾದ ಗುಂಪಿನ ವಿರುದ್ಧ ಆರೋಪ ಹೊರಿಸಿದ್ದರೆ ಮತ್ತು ದೂರುದಾರರು ಅಂತಹ ಗುಂಪಿನ ಭಾಗವಾಗಿದ್ದಾರೆಂದು ಪ್ರಾಥಮಿಕವಾಗಿ ತೋರಿಸಿದರೆ ಸಾಕು. ದೂರುದಾರರು ಅಂತಿಮವಾಗಿ ಅಂತಹ ಸದಸ್ಯತ್ವವನ್ನು ಸಾಬೀತುಪಡಿಸುತ್ತಾರೆಯೇ, ನಿಜವಾದ ಹಾನಿಯನ್ನು ಸಾಬೀತುಪಡಿಸುತ್ತಾರೆಯೇ ಎಂಬುದು ವಿಚಾರ ವಿಷಯವಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪ್ರಸ್ತುತ ಹಿಂದಿನ ಕಾಲಕ್ಕಿಂತ ಇಂದು ಹೆಚ್ಚು ಸೌಲಭ್ಯ ಆದಾಯವಿದ್ದರೂ ನೆಮ್ಮದಿ ಮಾತ್ರ ಕಡಿಮೆಯಾದಂತೆ ತೋರುತ್ತದೆ ಅಂತ ಅನೇಕರು ಹೇಳುತ್ತಿರುತ್ತಾರೆ
-ವೀರೇಂದ್ರ ಹೆಗ್ಗಡೆ ಲೇಖನ
-ದೊಡ್ಡ ಕಾರು, ದೊಡ್ಡ ಮನೆ, ದೊಡ್ಡ ಹುದ್ದೆಯೊಂದಿಗೆ ನೆಮ್ಮದಿ ಇದೆ ಅಂತ ತೋರಿಸಿಕೊಳ್ಳುವುದು ಒಂದು.ನಿಜವಾಗಿಯೂ ನೆಮ್ಮದಿಯಿಂದ ಇರುವುದು ಇನ್ನೊಂದು . ಈಗ ನಡೆಯುತ್ತಿರುವುದು ಮೊದಲನೆಯದು!

ದಿನ ಭವಿಷ್ಯ

ಮೇಷ
ವೃತ್ತಿ ಒತ್ತಡದಲ್ಲಿ ಕೆಲವು ಪ್ರಮುಖ ವಿಚಾರ ಕಡೆಗಣಿಸಿದ್ದೀರಿ. ಅದರತ್ತ ಗಮನ ಕೊಡಿ. ಸಾಂಸಾರಿಕ ಸಮಾಧಾನ. ಹೂಡಿಕೆಯಿಂದ ಧನಲಾಭ

ವೃಷಭ
ಜಡತ್ವ ಕಾಡಲಿದೆ. ಕೆಲಸ ನಿಧಾನ. ತುರ್ತು ಕಾರ್ಯ ಕಡೆಗಣಿಸಬೇಡಿ. ಶೇರು ಹೂಡಿಕೆಯಲ್ಲಿ ಎಚ್ಚರ ವಹಿಸುವುದೊಳಿತು. ಸ್ನೇಹಭಂಗ ಸಂಭವ.

ಮಿಥುನ
ಉದ್ವಿಗ್ನ ಪರಿಸ್ಥಿತಿ ಎದುರಿಸುವಿರಿ. ಕೆಲವು ಅನಿರೀಕ್ಷಿತ ಬೆಳವಣಿಗೆ ಅದಕ್ಕೆ ಕಾರಣ. ಮನಸು ಶಾಂತಗೊಳಿಸಲು ಹೆಚ್ಚು ಗಮನ ಕೊಡಿ.

ಕಟಕ
ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡಬಹುದು. ಹೆಚ್ಚು ಎಚ್ಚರ ಅವಶ್ಯ. ಖರೀದಿ ಹುಮ್ಮಸ್ಸಿನಲ್ಲಿ ಖರ್ಚು ಅಧಿಕ. ಬಂಧು ಭೇಟಿ.

ಸಿಂಹ
ಎಲ್ಲವೂ ನಿಮಗೆ ಪೂರಕವಾಗಿದ್ದರೂ ಏನೋ ಕೊರಗು. ಪ್ರೀತಿಯಲ್ಲಿ ಹಿನ್ನಡೆ. ಪ್ರಮುಖ ವಿಷಯದಲ್ಲಿ ನಿಮ್ಮ ನಿಲುವು ಬದಲಾದೀತು.

ಕನ್ಯಾ
ಭವಿಷ್ಯದ ಯೋಜನೆ ರೂಪಿಸಲು ಸಕಾಲ. ಉದ್ಯೋಗ ಪಡೆಯುವಲ್ಲಿ ಸಫಲ. ಧೂಳು ಸಂಬಂಧಿ ಅಲರ್ಜಿ ಉಂಟಾದೀತು. ಕೌಟುಂಬಿಕ ಸೌಹಾರ್ದ.

ತುಲಾ
ಕನಸು ಸಾಕಾರಗೊಳಿಸುವ ಸಮಯ ಸಮೀಪಿಸಿದೆ. ಆತ್ಮೀಯರ ಸಾಧನೆಯ ತೃಪ್ತಿ. ವಾಹನ ಚಾಲನೆಯಲ್ಲಿ ತುಸು ಎಚ್ಚರವಿರಲಿ.

ವೃಶ್ಚಿಕ
ಏಕತಾನತೆಯಿಂದ ಹೊರಬಂದು ಬದುಕಿನಲ್ಲಿ ಹೊಸತನ ಅಳವಡಿಸಿಕೊಳ್ಳಿ. ಅನವಶ್ಯ ಜಗಳಕ್ಕೆ ಹೋಗದಿರಿ. ತಾಳ್ಮೆ ಪ್ರದರ್ಶಿಸಿ. ಧನವ್ಯಯ.

ಧನು
ಕಡೆಗಣಿಸಿದ್ದ ವಿಷಯವೊಂದು ಮುನ್ನೆಲೆಗೆ ಬರಲಿದೆ. ಆ ಬಗ್ಗೆ ಗಮನ ಹರಿಸಿ. ವೃತ್ತಿಗೆ ಸಂಬಂಧಿಸಿ ಶುಭ ಸುದ್ದಿ. ಧನಪ್ರಾಪ್ತಿ ಅವಕಾಶ.

ಮಕರ
ಆಪ್ತರ ಜತೆಗಿನ ಭಿನ್ನಮತ ಶಮನ. ಹಣದ ವ್ಯವಹಾರದಲ್ಲಿ ಅನಿರೀಕ್ಷಿತ ತೊಡಕು ಉಂಟಾಗಲಿದೆ. ಮನೆಯ ಸಮಸ್ಯೆಯೊಂದು ನೆಮ್ಮದಿ ಕಲಕುವುದು.

ಕುಂಭ
ನೀವು ನಿರರ್ಥಕ ಅಂದುಕೊಂಡ ಕೆಲಸ ಉತ್ತಮ ಫಲಿತಾಂಶ ನೀಡಲಿದೆ. ತೃಪ್ತಿಕರ ಆರ್ಥಿಕ ಬೆಳವಣಿಗೆ. ಕೌಟುಂಬಿಕ ಸಾಮರಸ್ಯ.

ಮೀನ
ವಿವಾಹ ಸಂಬಂಧ ಕೂಡಿಬಂದೀತು. ಉದ್ವಿಗ್ನತೆ ಸೃಷ್ಟಿಸುವ ವಿಷಯಗಳಿಂದ ದೂರವಿರಿ. ವೃತ್ತಿ ಕಾರ್ಯದಲ್ಲಿ ಸಫಲತೆ. ಬಂಧುಗಳ ಸಹಕಾರ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 9,5,0,4

ಭ್ರಷ್ಟಾಚಾರಕ್ಕೆ ಆಸ್ಪದ ನೀಡದಂತೆ ಸಿಎಂ ಡಿ.ಕೆ. ಶಿವಕುಮಾರ್ ಸೂಚನೆ

ತಿಂಗಳಲ್ಲಿ ಪ್ರಮುಖ ನಿರ್ಧಾರ

• **ಬೆಂಗಳೂರು:** ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ರಾಜ್ಯದ ಎಲ್ಲಾ ಪಂಚಾಯಿತಿ, ವಾರ್ಡ್‌ಗಳಲ್ಲಿ ಭಾರತ ಜೋಡೋ ಯುವಕರ ಸಂಘ ಸ್ಥಾಪನೆ. ತಲಾ 10 ಲಕ್ಷ ರೂ. ನೀಡುವ ನಿರ್ಣಯ ಸೇರಿದಂತೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಒಂದು ತಿಂಗಳಲ್ಲಿ ಹಲವು ಪ್ರಮುಖ ನಿರ್ಣಯಗಳನ್ನು ಕೈಗೊಂಡಿದ್ದಾರೆ.

ಜೂ.3ರಂದು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಹಲವು ಮಹತ್ವದ ನಿರ್ಣಯಗಳನ್ನು ಕೈಗೊಂಡಿದ್ದಾರೆ.



ಅಲ್ಲದೇ, ರಾಜ್ಯ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ.ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ನಡೆಸಿದ್ದ ಅವರು, ಹಲವು ಮಹತ್ವದ ಸೂಚನೆಗಳನ್ನು ನೀಡಿದ್ದರು. ಭ್ರಷ್ಟಾಚಾರಕ್ಕೆ ಆಸ್ಪದ ನೀಡದಂತೆ ಹಾಗೂ ಯಾರ ಒತ್ತಡಕ್ಕೂ ಮಣಿಯದೇ ಅಧಿಕಾರಿಗಳು ಕಾರ್ಯನಿರ್ವಹಿಸುವಂತೆ ಸೂಚಿಸಿದ್ದರು.

2500 ಅಡಿವರೆಗಿನ ನೂತನ ವಸತಿ ಕಟ್ಟಡಗಳ ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಒಸಿ ವಿನಾಯಿತಿ, ರಾಜ್ಯದೆಲ್ಲೆಡೆ ಬಿ ಯಿಂದ ಎ ಖಾತಾ ಪರಿವರ್ತನೆ.ಬೆಂಗಳೂರಿನ ರಸ್ತೆಗಳನ್ನು ಗುಂಡಿಮುಕ್ತಗೊಳಿಸಲು 2 ಸಾವಿರ ಕೋಟಿ ರೂ. ಯೋಜನೆ. ಖಾಸಗಿ ವಲಯದ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಲು ತೀರ್ಮಾನ. 72 ಸಾವಿರ ಸರ್ಕಾರಿ ಹುದ್ದೆಗಳ ನೇಮಕಾತಿಗೆ 6 ತಿಂಗಳ ಗಡವು. ಸಾರ್ವಜನಿಕರ ಕುಂದುಕೊರತೆ, ಅಹವಾಲು ಆಲಿಸಲು 'ಪ್ರಜಾಸೇವೆ' ಎಂಬ ಪ್ರತ್ಯೇಕ ಸಚಿವಾಲಯ ಸೇರಿದಂತೆ ಮಹತ್ವದ ಘೋಷಣಗಳನ್ನು ಮಾಡಿದ್ದರು.

ಇತರೇ ತೀರ್ಮಾನಗಳು

- ಮೀಟರ್ ಬಡ್ಡಿ ದಂಧೆಗೆ ಕಡಿವಾಣ ಹಾಕಲು ಅಧಿಕಾರಿಗಳಿಗೆ ನಿರ್ದೇಶನ.
- ನೂತನ ಸಿಎಸ್‌ಆರ್ ನೀತಿ ತರಲು ಅಧಿಕಾರಿಗಳಿಗೆ ಸೂಚನೆ.
- ಬರ ಪರಿಸ್ಥಿತಿ ನಿರ್ವಹಣೆಗೆ ಅಗತ್ಯ ಸಿದ್ಧತೆಗೆ ಅಧಿಕಾರಿಗಳ ಜೊತೆ ಸಭೆ.
- ಮಾವು ಬೆಳೆಗಾರರಿಗೆ ಪ್ರೋತ್ಸಾಹ ಧನ
- ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ, ಗೊಬ್ಬರ ಪೂರೈಕೆ
- ವಿದ್ಯಾರ್ಥಿಗಳಿಗಾಗಿ ದೆಹಲಿಯಲ್ಲಿ ಕರ್ನಾಟಕ ಭವನ ನಿರ್ಮಾಣ
- ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯಕ್ಕೆ ಸಂಬಂಧಿಸಿದ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ವಕೀಲರ ತಂಡ
- ತುಂಗಭದ್ರಾ, ಅಣೆಕಟ್ಟೆಗೆ ನೂತನವಾಗಿ ಸ್ಪಿಲ್ ಗೇಟ್ ಗಳ ಉದ್ಘಾಟನೆ.
- ಅಣೆಕಟ್ಟೆನಲ್ಲಿ ಹೂಳು ತೆಗೆಯಲು ಕೇಂದ್ರದಿಂದ ಯೋಜನೆ.
- ಕೆಂಪೇಗೌಡ ಬಡಾವಣೆಯಲ್ಲಿ 10 ಪಥಗಳ ಎಸ್.ಎಂ ಕೃಷ್ಣ ರಸ್ತೆ ಉದ್ಘಾಟನೆ.
- ತೆರಿಗೆ ವಂಚನೆ ತಡೆಯುವಂತೆ ಅಧಿಕಾರಿಗಳಿಗೆ ಸೂಚನೆ.
- ರಾಜಕೀಯ ವ್ಯವಹಾರಗಳ ಸಮಿತಿ ರಚನೆಗೆ ತೀರ್ಮಾನ.
- ಬಂಡೀಪುರ, ನಾಗರಹೊಳೆ ಹುಲಿ ಸಫಾರಿ ಪುನರಾರಂಭ.
- ಹೆಬ್ಬಾಳ ಬಳಿ ಸಣ್ಣ ಸುರಂಗ ರಸ್ತೆ ನಿರ್ಮಾಣಕ್ಕೆ ಶಂಕುಸ್ಥಾಪನೆ
- ಬಿಡಿಎ ವತಿಯಿಂದ 15 ಲಕ್ಷ ಸಸಿ ನೆಡುವ ಕಾರ್ಯಕ್ರಮ, ಗಿನ್ನೀಸ್ ದಾಖಲೆ
- ಡ್ರಗ್ಸ್ ಜಾಲ ನಿಗ್ರಹಕ್ಕೆ ಸುಳಿವು ನೀಡಿದವರಿಗೆ ಬಹುಮಾನ ನೀಡಲು ತೀರ್ಮಾನ.

ರೌಡಿಗಳ ನಿಗ್ರಹಕ್ಕೆ ಜಿಲ್ಲೆಗೊಂದು ಪಡೆ ರಚನೆಗೆ ಸೂಚನೆ. ಕೇಂದ್ರದ ನೀತಿ ಆಯೋಗ ಸಭೆಯಲ್ಲಿ ಭಾಗಿ ಕರ್ನಾಟಕದ ಬೇಡಿಕೆಗಳ ಪ್ರಸ್ತಾಪ. ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವರುಗಳಾದ ಅಮಿತ್ ಶಾ, ಸಿ.ಆರ್. ಪಾಟೀಲ್, ನಿರ್ಮಲಾ ಸೀತಾರಾಮನ್, ಮನೋಹರ್ ಲಾಲ್ ಖಟ್ಟರ್ ಅವರನ್ನು ಭೇಟಿ ಮಾಡಿ ರಾಜ್ಯದ ನೀರಾವರಿ ಯೋಜನೆಗಳು, ಬೆಂಗಳೂರಿನ ಮೆಟ್ರೋ ರೈಲು ಹಾಗೂ ಪೊಲೀಸ್ ಇಲಾಖೆಗಳ ಯೋಜನೆಗಳು ಹಾಗೂ ವಿಶೇಷ ಅನುದಾನಗಳ ಬಗ್ಗೆ ಚರ್ಚೆ ನಡೆಸಿದ್ದರು. ದೆಹಲಿಯಲ್ಲಿರುವ ರಾಜ್ಯದ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಸಭೆ ಮಾಡಿ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಕೈ ಜೋಡಿಸಲು ಕರೆ. ಕಾಲೇಜು ಚುನಾವಣೆಗಳನ್ನು ಪ್ರಸಕ್ತ ವರ್ಷದಿಂದಲೇ ಪ್ರಾರಂಭಿಸಲು ಚಿಂತನೆ. ಭ್ರಷ್ಟಾಚಾರ ವಿರುದ್ಧ ದೂರು ನೀಡಲು ದೂರವಾಣಿ ಸಂಖ್ಯೆ. ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬೆಳಗ್ಗೆ 10 ಗಂಟೆಗೆ ಜಿಪಿಎಸ್ ತಂತ್ರಾಂಶದ ಸಿಬ್ಬಂದಿ ಹಾಜರಾತಿಗೆ ಡಿ.ಕೆ.ಶಿವಕುಮಾರ್ ಸೂಚನೆ ನಿಡಿದ್ದರು.

ಬಿಜೆಪಿ-ಜೆಡಿಎಸ್ ತೀವ್ರ ಆಕ್ಷೇಪ

ಪುಟ ೧ ಜೆಡಿಎಸ್ ಕಚೇರಿಯಲ್ಲಿ ತುರ್ತು ಮಾಧ್ಯಮಗೋಷ್ಠಿ ನಡೆಸಿದ ಕೇಂದ್ರ ಸಚಿವರು, ರಾಮನಗರ ಸೇರಿದಂತೆ ರಾಜ್ಯದ ಹಲವಾರು ಭಾಗಗಳಲ್ಲಿ ಕಾಂಗ್ರೆಸ್ ಸರ್ಕಾರ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಹಾಳುಮಾಡಲು ಹೊರಟಿದೆ. ಅದಕ್ಕೆ ರಾಮನಗರ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮವೇ ಸಾಕ್ಷಿ. ಕೂಡಲೇ ರಾಮನಗರ ಜಿಲ್ಲಾಧಿಕಾರಿಯನ್ನು ಅಮಾನತು ಮಾಡಬೇಕು ಹಾಗೂ ಇದಕ್ಕೆ ಸಂಬಂಧಿಸಿ ಕರ್ತವ್ಯಲೋಪ ಎಸಗಿರುವ ಎಲ್ಲಾ ಅಧಿಕಾರಿಗಳನ್ನು ಮನೆಗೆ ಕಳಿಸಬೇಕು ಎಂದು ಆಗ್ರಹಿಸಿದರು.

> **ಬಾಂಗ್ಲಾದೇಶದ ಅಕ್ರಮ ವಲಸಿಗರಿಗೆ ಮತದಾರರ ಗುರುತಿನ ಚೀಟಿ ಸೃಷ್ಟಿಸಲು ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಪ್ರಭಾವ ಬೀರುತ್ತಿದ್ದಾರೆ. ಇದಕ್ಕೆ ರಾಮನಗರದ ಟಿಪ್ಪುನಗರದಲ್ಲಿ ನಡೆದಿರುವ ಘಟನೆಯೇ ಸಾಕ್ಷಿ. ಕೂಡಲೇ ಕೇಂದ್ರ ಚುನಾವಣಾ ಆಯೋಗ ಮಧ್ಯಪ್ರವೇಶಿಸಬೇಕು. ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.**
> ■ **ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ**

ಕೇಂದ್ರಕ್ಕೆ ದೂರು, ಎಚ್‌ಡಿಕೆ ಎಚ್ಚರಿಕೆ

ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸುತ್ತಿರುವ ಈ ಅಕ್ರಮವನ್ನು ಸುಮ್ಮನೇ ಬಿಡಲ್ಲ. ವಿಡಿಯೋ ಸಮೇತ ಎಲ್ಲಾ ಸಾಕ್ಷ್ಯಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕೇಂದ್ರ ಚುನಾವಣಾ ಆಯೋಗಕ್ಕೆ ನೀಡುತ್ತೇನೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದಾರೆ. ತಕ್ಷಣ ಮಧ್ಯಪ್ರವೇಶಿಸಿ ಎಸ್‌ಐಆರ್ ಪ್ರಕ್ರಿಯೆ ಸ್ಥಗಿತಗೊಳಿಸಿ, ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡಬೇಕು. ಇದು ಸಂಪೂರ್ಣ ಆಡಳಿತ ವೈಫಲ್ಯ ಎಂದರು.

ಪ್ರಜಾಸೇವೆ ಇಲಾಖೆಗೆ ಹರ್ಷಗುಪ್ತ

• **ಬೆಂಗಳೂರು:** ಹಿರಿಯ ಐಎಎಸ್ ಅಧಿಕಾರಿ ಹರ್ಷಗುಪ್ತ ಸೇರಿದಂತೆ ಐವರು ಹಿರಿಯ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದೆ.

ಹಿರಿಯ ಐಎಎಸ್ ಅಧಿಕಾರಿ ಹರ್ಷ ಗುಪ್ತ ಅವರನ್ನು ನೂತನವಾಗಿ ಆರಂಭಿಸಿರುವ ಮುಖ್ಯಮಂತ್ರಿಗಳ ಬಹುನಿರೀಕ್ಷೆಯ ಪ್ರಜಾ ಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಹುದ್ದೆಯ ನಿರೀಕ್ಷೆಯಲ್ಲಿದ್ದ ಇಬ್ಬರು ಅಧಿಕಾರಿಗಳಿಗೆ ಸ್ಥಳ ನಿಯೋಜನೆ ಮಾಡಲಾಗಿದ್ದು, ರಾಗಪ್ರಿಯಾ ಅವರಿಗೆ ಕಾರ್ಮಿಕ ಇಲಾಖೆಯ ಆಯುಕ್ತರನ್ನಾಗಿ ವರ್ಗಾಯಿಸಲಾಗಿದೆ. ಡಾ. ಕೆ. ಹರೀಶ್ ಕುಮಾರ್ ಅವರನ್ನು ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರನ್ನಾಗಿ ವರ್ಗಾಯಿಸಲಾಗಿದೆ. ಕಾರ್ಮಿಕ ಇಲಾಖೆಯ ಆಯುಕ್ತರಾಗಿದ್ದ ಡಾ. ಗೋಪಾಲ ಕೃಷ್ಣ ಅವರನ್ನು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ. ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆಯಾಗಿದ್ದ ಮಂಜುಶ್ರೀ ಎನ್. ಸ್ಥಳ ನಿರೀಕ್ಷಣೆಯಲ್ಲಿರಿಸಿ ವರ್ಗಾಯಿಸಲಾಗಿದೆ.

ಕ್ವಾರಿ ಕುಸಿದು ಏಳು ಕಾರ್ಮಿಕರ ಸಾವು

ಪುಟ ೧ ಛತ್ತೀಸ್‌ಗಡದ ನೋಹಲ್(23), ವಿಜಯಪುರದ ಆನಂದ್(22), ಮಧ್ಯಪ್ರದೇಶದ ಗುಲಾಬ್ ಸಿಂಗ್(27), ರಾಜ್ ಪಾಲ್ ಸಿಂಗ್ (30) ಮತ್ತು ಚೋಟುಲಾಲ್(19) ಗಾಯಗೊಂಡವರು. ಇವರನ್ನು ಕೆಂಗೇರಿ ಬಳಿಯ ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಬೆಂಗಳೂರು ಮೂಲದ ಉದ್ಯಮಿ ಉದಯ್ ಶಂಕರ್(ಉದಯ್ ಕುಮಾರ್) ಎಂಬುವವರಿಗೆ ಸೇರಿದ ಕಾವೇರಿ ಕನ್‌ಸ್ಟ್ರಕ್ಷನ್ ಸಂಸ್ಥೆಯಲ್ಲಿ ಬಿಹಾರ, ಮಧ್ಯಪ್ರದೇಶ ಹಾಗೂ ಯಾದಗಿರಿ ಮೂಲದ ಸುಮಾರು 16ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಗುರುವಾರ(ಜುಲೈ 2)ಬೆಳಗಿನ 7.30ರ ಸುಮಾರಿಗೆ ಎಂದಿನಂತೆ ಕಾರ್ಮಿಕರು ಕೆಲಸ ಪ್ರಾರಂಭಿಸಿದ್ದರು. ಆನಂದ ಸ್ವಾಮಿ ಎಂಬುವವರ ಕಡೆಯವರು ಹಿಟಾಚಿ ಯಂತ್ರಗಳ ಮೂಲಕ ಸುಮಾರು 20 ಅಡಿ ಆಳದ ಬೃಹತ್ ಗುಂಡಿ ಮಾಡಿಕೊಂಡಿದ್ದರು. ಈ ಸಂದರ್ಭದಲ್ಲಿ ಉದಯ್ ಶಂಕರ್ ಕಡೆಯ ಕಾರ್ಮಿಕರು ಆ ಬಂಡೆಗೆ ಸೇರಿದ ಕಲ್ಲುಗಳನ್ನು ಕೀಳುತ್ತಿದ್ದಾಗ, ಭೂಮಿ ನಡುಗುವಂತೆ ಬೃಹತ್ ಬಂಡೆ ಕಾರ್ಮಿಕರ ಮೇಲೆಯೇ ಕಳಚಿ ಬಿದ್ದಿದೆ. ಬಂಡೆ ಬಿದ್ದ ರಭಸಕ್ಕೆ ಅಲ್ಲಿ ನಿಲ್ಲಿಸಲಾಗಿದ್ದ ಮೂರು ಟ್ರ್ಯಾಕ್ಟರ್‌ಗಳು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಏಳು ಕಾರ್ಮಿಕರು ಬಂಡೆಯ ಅಡಿಯಲ್ಲಿ ಸಿಲುಕಿ ಸ್ಥಳದಲ್ಲೇ ಪ್ರಾಣಬಿಟ್ಟಿದ್ದಾರೆ.

ಘಟನಾ ಸ್ಥಳಕ್ಕೆ ತಕ್ಷಣವೇ ಧಾವಿಸಿದ ಪೊಲೀಸರು ಮತ್ತು ರಕ್ಷಣಾ ಸಿಬ್ಬಂದಿ, ಹಿಟಾಚಿ ಹಾಗೂ ಜೆಸಿಬಿ ಯಂತ್ರಗಳ ಸಹಾಯದಿಂದ ಬಂಡೆಯನ್ನು ಸರಿಸುವ ಕಾರ್ಯಾಚರಣೆ ನಡೆಸಿ, ಗಾಯಾಳುಗಳನ್ನು ಕೆಂಗೇರಿ ಬಳಿಯ ರಾಜರಾಜೇಶ್ವರಿ ಆಸ್ಪತ್ರೆಗೆ ರವಾನೆ ಮಾಡಿದರು. ಬಂಡೆಗಳ ನಡುವೆ ಸಿಲುಕಿದ್ದ ಕಾರ್ಮಿಕರ ಮೃತ ದೇಹವನ್ನು ತೆಗೆಯುವ ಕಾರ್ಯ ಮಧ್ಯಾಹ್ನವಾದರೂ ಮುಂದುವರಿದಿತ್ತು. ಘಟನೆ ನಡೆದ ಸ್ಥಳ ಎರಡೂ ಕ್ರಷರ್‌ಗಳ ನಡುವಿನ ಜಾಗವಾಗಿತ್ತು ಎನ್ನಲಾಗಿದೆ. ನಿಯಮ ಉಲ್ಲಂಘಿಸಿ ತೀರಾ ಆಳವಾಗಿ ಗಣಿಗಾರಿಕೆ ಮಾಡಿದ್ದರಿಂದಲೇ ಈ ಭೀಕರ ಅವಘಡ ಸಂಭವಿಸಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಾವರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> **ಕರ್ನಾಟಕದ ಬೆಂಗಳೂರು ನಗರ ಜಿಲ್ಲೆಯ ಕಲ್ಲು ಗಣಿಯಲ್ಲಿ ಸಂಭವಿಸಿದ ದುರ್ಘಟನೆಯಲ್ಲಿ ಪ್ರಾಣಹಾನಿ ಸಂಭವಿಸಿರುವುದು ನೋವು ತಂದಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ನನ್ನ ತೀವ್ರ ಸಂತಾಪಗಳು. ಗಾಯಾಳುಗಳು ಶೀಘ್ರವಾಗಿ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ.**
> ■ **ನರೇಂದ್ರ ಮೋದಿ, ಪ್ರಧಾನಿ**

ತಲಾ 10 ಲಕ್ಷ ರೂ. ಪರಿಹಾರ: ಘಟನಾ ಸ್ಥಳಕ್ಕೆ ಭೇಟಿ ನೀಡಿದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಆಯುಕ್ತ ರಂಗಪ್ಪ, ರಾಮನಗರ ಸುತ್ತಮುತ್ತಲ 55 ಕಲ್ಲು ಕ್ರಷರ್‌ಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ, ಮೃತಪಟ್ಟ ಕಾರ್ಮಿಕರಿಗೆ ತಲಾ 10 ಲಕ್ಷ ಹಾಗೂ ಗಾಯಗೊಂಡ ಕಾರ್ಮಿಕರಿಗೆ 5 ಲಕ್ಷ ಪರಿಹಾರ ನೀಡಲಾಗುವುದು ಎಂದು ತಿಳಿಸಿದರು.

ಅಧಿಕಾರಿಗಳ ಮೇಲೆ ಎಫ್‌ಐಆರ್ ಮಾಡಿ: ಘಟನಾ ಸ್ಥಳಕ್ಕೆ ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ.ಸೋಮಶೇಖರ್ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ನಂತರ ಮಾತನಾಡಿದ ಅವರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ ಈ ದುರಂತಕ್ಕೆ ನೇರ ಹೊಣೆಗಾರರಾಗಿದ್ದಾರೆ. ಅಧಿಕಾರಿಗಳ ಮೇಲೆ ಎಫ್‌ಐಆರ್ ಮಾಡಬೇಕು ಇಲ್ಲದಿದ್ದರೆ ಪ್ರಕರಣವನ್ನು ಮುಚ್ಚಿ ಹಾಕುತ್ತಾರೆ. ಕೂಡಲೇ ತಪ್ಪಿತಸ್ಥರನ್ನು ಬಂಧಿಸಬೇಕು. ಮಾಲೀಕರು ಯಾವುದೇ ಮುಂಜಾಗೃತ ಕ್ರಮಕೈಗೊಳ್ಳದೆ ಇರುವುದೆ ಈ ದುರ್ಘಟನೆ ನಡೆದಿದೆ. ಮೃತರ ಕುಟುಂಬಕ್ಕೆ ತಲಾ ಒಂದು ಕೋಟಿ ರೂ. ಪರಿಹಾರ ನೀಡಬೇಕು ಮತ್ತು ಸಮಗ್ರ ತನಿಖೆ ನಡೆಸಬೇಕು ಎಂದು ತಿಳಿಸಿದರು.

ಅಣೆಕಟ್ಟು ನೀರು ನಂಬಿ ಬಿತ್ತನೆ ಮಾಡಲೇಬೇಡಿ

ಪುಟ ೧ ರಾಜ್ಯದ ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಆಲಮಟ್ಟಿ, ನಾರಾಯಣಪುರ, ವಾಣಿವಿಲಾಸ ಇಲ್ಲಿನ ಜಲಾಶಯಗಳಲ್ಲಿ ಶೂನ್ಯ ಒಳಹರಿವು ಇದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಒಳಹರಿವು ಬಹಳ ಕಡಿಮೆಯಾಗಿದೆ. ಕಳೆದ ವರ್ಷ ಈ ಸಮಯದಲ್ಲಿ ಹೇಮಾವತಿಯಲ್ಲಿ 80 ಅಡಿ ಇತ್ತು, ಈ ವರ್ಷ 40 ಅಡಿಗೆ ಕುಸಿದಿದೆ. ಕೃಷ್ಣರಾಜ ಸಾಗರದಲ್ಲಿ(ಕೆಆರ್‌ಎಸ್) 100 ಅಡಿ ಇದ್ದ ನೀರಿನ ಪ್ರಮಾಣ ಈಗ 22 ಅಡಿಯಷ್ಟಿದೆ, ಕಬಿನಿಯಲ್ಲಿ 79 ಅಡಿ ಇತ್ತು, ಈಗ 26 ಅಡಿಯಷ್ಟಿದೆ. ಈ ಅಣೆಕಟ್ಟುಗಳಲ್ಲಿ ಒಳಹರಿವಿನ ಪ್ರಮಾಣ ಶೇ.20ಕ್ಕೆ ಕುಸಿದಿದೆ. ಹೀಗಾಗಿ ಸಮಸ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ವಿವರಿಸಿದರು.



ತಿಂಗಳಿಗೆ ಎರಡು ದಿನ ಪ್ರಜಾಸೇವೆ ಅಭಿಯಾನ

ಪುಟ ೧ ಜನರ ಸಮಸ್ಯೆ ಆಲಿಸಲು ಪ್ರಜಾಸೇವೆ ಎಂಬ ಪ್ರತ್ಯೇಕ ಸಚಿವಾಲಯ ರೂಪಿಸುತ್ತಿದ್ದು, ಸಚಿವರಿಗೆ ಇದರ ಜವಾಬ್ದಾರಿ ವಹಿಸಲಾಗುವುದು. ಯಾರ ದೂರೇ ಇರಲಿ, ಸಮಸ್ಯೆ ಇರಲಿ, ಪ್ರತಿಭಟನೆ ಮಾಡುವವರು ತಮ್ಮ ಬೇಡಿಕೆ ಹೇಳಿಕೊಳ್ಳಲು, ಅವರ ಸಮಸ್ಯೆ ಬಗೆಹರಿಸಲು, ಸಂಬಂಧಪಟ್ಟ ಇಲಾಖೆಗಳಿಗೆ ಹಾಗೂ ಜಿಲ್ಲಾ ಸಚಿವರಿಗೆ ಆ ವಿಚಾರ ತಲುಪಿಸಲು ಈ ಇಲಾಖೆ ಕಾರ್ಯನಿರ್ವಹಿಸಲಿದೆ. ಇದಕ್ಕೆ ಐಎಎಸ್ ಅಧಿಕಾರಿಯನ್ನು ಕಾರ್ಯದರ್ಶಿಯಾಗಿ ನೇಮಿಸುತ್ತಿದ್ದು, ಅಗತ್ಯ ಅಧಿಕಾರಿಗಳನ್ನು ನೀಡಲು ಇಂದು ತೀರ್ಮಾನಿಸಲಾಗಿದೆ. ಎಲ್ಲೇ ಪ್ರತಿಭಟನೆ ನಡೆದರೂ ಅವರ ಅರ್ಜಿ ಸ್ವೀಕರಿಸಿ ಕಾನೂನುಬದ್ಧವಾಗಿ ಸಹಾಯ ಮಾಡಲು ಅವಕಾಶವಿದ್ದರೆ ನಾವು ಕಾರ್ಯನಿರ್ವಹಿಸುತ್ತೇವೆ ಎಂದರು.

ವಿದ್ಯುಚ್ಛಕ್ತಿಗೂ ಅಗತ್ಯ ಮುಂಜಾಗ್ರತೆ

ವಿದ್ಯುತ್ ವಿಚಾರವಾಗಿ ಇಂಧನ ಇಲಾಖೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾದ ಕಲ್ಲಿದ್ದಲು ಇತ್ಯಾದಿಯನ್ನು ತುರ್ತು ದಾಸ್ತಾನಿಡಲು ಕೇಂದ್ರ ಸರ್ಕಾರ ಹೇಳಿದೆ. ಜಲವಿದ್ಯುತ್ ಉತ್ಪಾದನೆಗೆ ಅಗತ್ಯ ಒಳಹರಿವು ಇಲ್ಲದಿರುವುದರಿಂದ ವಿದ್ಯುತ್ ಉತ್ಪಾದನೆ ಸಮಸ್ಯೆಯಾಗುತ್ತದೆ. ಹಿಂದೆ ನಾನು ಇಂಧನ ಸಚಿವನಾಗಿದ್ದಾಗ ಬೆಂಗಳೂರಿನಲ್ಲಿ ಅನಿಲದಿಂದ 360 ಮೆಗಾ ವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದಿಸುವ ಘಟಕವನ್ನು ಸ್ಥಾಪಿಸಿದ್ದೆ. ಅದನ್ನು ಕೂಡ ಕಾರ್ಯಾಚರಣೆಗೆ ಸಿದ್ಧವಾಗಿಟ್ಟುಕೊಳ್ಳುವಂತೆ ಸೂಚನೆ ನೀಡಿದ್ದೇನೆ. ಆದ್ದರಿಂದ ಎಲ್ಲರೂ ಮುಂಜಾಗರೂಕತೆಯಿಂದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಹಾಗೂ ಜಾಗೃತಿ ಮೂಡಿಸಲು ಹೇಳಿದ್ದೇನೆ ಎಂದರು.

ಎಐ, ರಕ್ಷಣೆ, ಇಂಧನ, ಆರೋಗ್ಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ

ಪುಟ ೧ ಹೆಚ್ಚುತ್ತಿರುವ ಜಾಗತಿಕ ಅನಿಶ್ಚಿತತೆ ಮಧ್ಯೆ ತಂತ್ರಜ್ಞಾನ, ಪೂರೈಕೆ ವ್ಯವಸ್ಥೆಯಲ್ಲಿ ಕ್ರಿಯಾಶೀಲತೆ, ಆರ್ಥಿಕ ಭದ್ರತೆ ಮತ್ತು ಪ್ರಾದೇಶಿಕ ಸ್ಥಿರತೆ ಇತ್ಯಾದಿ ರಂಗಗಳಲ್ಲಿ ಉಭಯ ರಾಷ್ಟ್ರಗಳ ನಡುವಣ ದೃಢ ಸಹಯೋಗವನ್ನು ಪ್ರಸ್ತುತ ಒಪ್ಪಂದಗಳು ಪ್ರತಿಫಲಿಸಿವೆ. ಹೊಸದಿಲ್ಲಿಯಲ್ಲಿ 16ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆ ಬಳಿಕ ಈ ಒಪ್ಪಂದಗಳನ್ನು ಘೋಷಿಸಲಾಯಿತು. ಜಪಾನ್ ಪ್ರಧಾನಿಯಾದ ನಂತರ ಭಾರತಕ್ಕೆ ಚೊಚ್ಚಲ ಭೇಟಿ ನೀಡಿದ ಸನೇ ತಕೈಚಿ ಅವರನ್ನು ಸ್ವಾಗತಿಸಿದ ಪ್ರಧಾನಿ ನರೇಂದ್ರ ಮೋದಿ, ಭಾರತ-ಜಪಾನ್ ಬಾಂಧವ್ಯಕ್ಕೆ ಆಧಾರವಾಗಿರುವ ಪ್ರಾಚೀನ ನಾಗರೀಕತೆಯ ನಂಟನ್ನು ಇದೇ ಸಂದರ್ಭ ನೆನಪಿಸಿದರು.

ನಾರಾ ಪ್ರಾಂತ್ಯ ಮೂಲದ ಪ್ರಧಾನಿ ತಕೈಚಿ: ಜಪಾನ್ ಪ್ರಧಾನಿಯಾದ ನಂತರದಲ್ಲಿ ಭಾರತ-ಜಪಾನ್ ವಾರ್ಷಿಕ ಶೃಂಗಸಭೆ ಹಿನ್ನೆಲೆಯಲ್ಲಿ ಭಾರತಕ್ಕೆ ಭೇಟಿ ನೀಡುತ್ತಿರುವ ತಕೈಚಿ ಅವರನ್ನು ಸ್ವಾಗತಿಸಲು ಸಂತಸಪಡುತ್ತೇನೆ. ಜಪಾನ್‌ನ ಪ್ರಥಮ ಮಹಿಳಾ ಪ್ರಧಾನಿಯಾಗಿರುವ ತಕೈಚಿ ಓರ್ವ ದೂರದರ್ಶಿತ್ವದ ಜನಪ್ರಿಯ ನಾಯಕಿ. ಮೇಲಾಗಿ ಭಾರತ-ಜಪಾನ್‌ಗಳು ಪರಸ್ಪರ ಹಂಚಿಕೊಂಡಿರುವ ಬೌದ್ಧ ಪರಂಪರೆಯ ಪ್ರಮುಖ ಕೇಂದ್ರವಾದ ನಾರಾ ಪ್ರಾಂತ್ಯ ಮೂಲದವರು ಎನ್ನಲು ಹೆಮ್ಮೆ ಪಡುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದರು.

ಜಾಗತಿಕ ಎಐ ಅಭಿವೃದ್ಧಿಗೆ ಹೊಸ ಆಯಾಮ: ತಂತ್ರಜ್ಞಾನವು ಶೃಂಗಸಭೆಯ ಪ್ರಧಾನ ಚರ್ಚಾ ವಿಚಾರವಾಗಿತ್ತು. ಕೃತಕ ಬುದ್ಧಿಮತ್ತೆ ರಂಗಕ್ಕೆ ಸಂಬಂಧಿಸಿ ಜಂಟಿ ಹೇಳಿಕೆ ಬಿಡುಗಡೆ ಮಾಡಿದ ಉಭಯ ನಾಯಕರು, ಈ ರಂಗದಲ್ಲಿ ಸಹಕಾರ ಗಾಢಗೊಳಿಸುವ ಒಪ್ಪಂದಗಳಿಗೆ ಸಹಿ ಹಾಕಿದರು. ತಂತ್ರಜ್ಞಾನ ರಂಗದಲ್ಲಿನ ಪಾಲುದಾರಿಕೆಯು ದ್ವಿಪಕ್ಷೀಯ ಸಹಕಾರಕ್ಕೆ ಬಲವಾದ ಆಧಾರಸ್ತಂಭವಾಗುವುದೆಂದು ತಕೈಚಿ ಮತ್ತು ತಾನು ವಿಶ್ವಾಸ ಹೊಂದಿದ್ದೇವೆ ಎಂದು ಪ್ರಧಾನಿ ಮೋದಿ ಹೇಳಿದರು.

ಕೃತಕ ಬುದ್ಧಿಮತ್ತೆ ರಂಗದ ಹಲವು ಪ್ರಮುಖ ಭಾರತೀಯ ಕಂಪೆನಿಗಳು ಇದೇ ಸಂದರ್ಭ ತಮ್ಮ ಜಪಾನಿ ಪಾಲುದಾರರ ಜತೆ ಒಪ್ಪಂದಗಳಿಗೆ ಸಹಿ ಹಾಕಿದವು. ಜಪಾನ್‌ನ ನಿಖರ ತಂತ್ರಜ್ಞಾನ ಮತ್ತು ಭಾರತದ ಸಾಫ್ಟ್‌ವೇರ್ ಸಾಮರ್ಥ್ಯಗಳ ಸಹಯೋಗವು, ಜಾಗತಿಕ ಎಐ ಅಭಿವೃದ್ಧಿಗೆ ಹೊಸ ಆಯಾಮ ನೀಡಲಿದೆ ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಕ್ಷಣಾ ಕ್ಷೇತ್ರದಲ್ಲಿ ಜಂಟಿ ಸಹಯೋಗ: ರಕ್ಷಣಾ ರಂಗದಲ್ಲಿ ಪ್ರಪ್ರಥಮವಾಗಿ ನೌಕಾ ರೇಡಿಯೋ ಆಂಟೆನಾ 'ಯುನಿಕಾರ್ನ್' ಸಹಿತ ಜಂಟಿ ಅಭಿವೃದ್ಧಿ ಯೋಜನೆಗೆ ಭಾರತ -ಜಪಾನ್‌ಗಳು ಸಹಿ ಹಾಕಿರುವುದಾಗಿ ಪ್ರಧಾನಿ ಮೋದಿ ಘೋಷಿಸಿದ್ದಾರೆ. ಈ ಯೋಜನೆಯು ನಮ್ಮ ರಕ್ಷಣಾ ತಂತ್ರಜ್ಞಾನ ಪಾಲುದಾರಿಕೆಗೆ ಸಂಬಂಧಪಟ್ಟಂತೆ ನವ ಅಧ್ಯಾಯವನ್ನು ತೆರೆಯಲಿದೆ.

ವಲಯವಾರು ಶಾಂತಿ, ಸಾಗರ ಭದ್ರತೆ ಮತ್ತು ನಿಯಾಮಾಧಾರಿತ ಆದೇಶಗಳ ಬಲಪಡಿಸಬಲ್ಲ ರಕ್ಷಣಾ ತಂತ್ರಜ್ಞಾನಗಳ ಜಂಟಿಯಾಗಿ ಅಭಿವೃದ್ಧಿಪಡಿಸಲು ಇನ್ನೀಗ ನಮಗೆ ಸಾಧ್ಯವಾಗಲಿದೆ ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದು ಉಭಯ ರಾಷ್ಟ್ರಗಳು ರಕ್ಷಣಾ ಬಾಂಧವ್ಯ ಬಲಪಡಿಸುವ ನಿಟ್ಟಿನಲ್ಲಿ ಇರಿಸಿರುವ ಮಹತ್ತ್ವದ ಹೆಜ್ಜೆಯಾಗಿದೆ.

ಹಲವು ಕ್ಷೇತ್ರಗಳಲ್ಲಿ ಸಹಕಾರ ವರ್ಧನೆ

ಸೆಮಿ ಕಂಡಕ್ಟರ್‌ಗಳು, ಕ್ವಾಂಟಮ್ ಟೆಕ್ನಾಲಜೀಸ್, ಅಪೂರ್ವ ಖನಿಜಗಳು, ಸುಧಾರಿತ ಉತ್ಪಾದನಾ ತಂತ್ರಜ್ಞಾನ, ಮುಂದಿನ ಪೀಳಿಗೆಯ ಸಾರಿಗೆ ವ್ಯವಸ್ಥೆ ಇತ್ಯಾದಿ ರಂಗಗಳು ಆರ್ಥಿಕ ಭದ್ರತೆ ಮತ್ತು ಕ್ರಿಯಾಶೀಲ ಪೂರೈಕೆ ವ್ಯವಸ್ಥೆಗಳಿಗೆ ತೀರಾ ಪೂರಕವೆಂದು ಗುರುತಿಸಿರುವ ಉಭಯ ನಾಯಕರು, ಈ ರಂಗಗಳಲ್ಲಿ ಸಹಕಾರ ವರ್ಧನೆಗೆ ನಿರ್ಧರಿಸಿದ್ದಾರೆ. ಫಾರ್ಮಾಸ್ಯುಟಿಕಲ್, ವೈದ್ಯಕೀಯ ಪರಿಕರ ರಂಗಗಳಲ್ಲೂ ಸಹಕಾರ ವಿಸ್ತರಿಸಲು ಉಭಯ ರಾಷ್ಟ್ರಗಳು ನಿರ್ಧರಿಸಿವೆ. ಈ ರಂಗಗಳ ಪಾಲುದಾರಿಕೆ ಜಾಗತಿಕ ಆರೋಗ್ಯ ಭದ್ರತೆಗೆ ಕೊಡುಗೆಯಾಗಲಿದೆ ಎಂದು ಪ್ರಧಾನಿ ಮೋದಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಪಾನ್‌ನಿಂದ 1,000 ಕೋಟಿ ರೂ. ಹೂಡಿಕೆ

ಕಳೆದ ಒಂದು ವರ್ಷದಲ್ಲಿ ಭಾರತ?ಜಪಾನ್ ನಡುವೆ ಸುಮಾರು 120 ಹೊಸ ವ್ಯಾಪಾರ ಒಪ್ಪಂದಗಳು ನಡೆದಿದ್ದು, ಇದರ ಮೂಲಕ 1 ಸಾವಿರ ಕೋಟಿ ರೂ. ಗಿಂತ ಅಧಿಕ(10 ಬಿಲಿಯನ್ ಡಾಲರ್‌ಗಿಂತ ಅಧಿಕ) ಜಪಾನ್ ಹೂಡಿಕೆ ಭಾರತಕ್ಕೆ ಹರಿದು ಬರಲಿದೆ. ಹಣಕಾಸು ಸೇವಾ ಸಂಸ್ಥೆಗಳ ನಡುವಿನ ಹೊಸ ಒಪ್ಪಂದವು ಬಂಡವಾಳ ಹಾಗೂ ಹೂಡಿಕೆ ಹರಿವನ್ನು ಮತ್ತಷ್ಟು ಸುಗಮಗೊಳಿಸಲಿದೆ. ಮುಂದಿನ ಹತ್ತು ವರ್ಷಗಳಲ್ಲಿ ಜಪಾನ್‌ನಿಂದ 10 ಟ್ರಿಲಿಯನ್ ಯೆನ್ ಹೂಡಿಕೆ ಆಕರ್ಷಿಸುವುದು ಹಾಗೂ ಭಾರತದಲ್ಲಿ ಕಾರ್ಯನಿರ್ವಹಿಸುವ ಜಪಾನ್ ಕಂಪನಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವುದು ಗುರಿಯಾಗಿದೆ.

52 ಪ್ರಕರಣಗಳ ಹಿಂಪಡೆಯುವ ಸರ್ಕಾರ ಆದೇಶಕ್ಕೆ ಹೈಕೋರ್ಟ್ ತಡೆ

ಪುಟ ೧ ಇದನ್ನು ಪ್ರಶ್ನಿಸಿ, ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರವಾಗಿ ಹಾಜರಾಗಿದ್ದ ವಕೀಲ ವೆಂಕಟೇಶ್ ದಳವಾಯಿ ಅವರು ಮೂವರು ಹಿರಿಯ ಸಚಿವರ ಶಿಫಾರಸ್ಸಿನ ಅನ್ವಯ ವಿವಿಧ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಪ್ರಾಸಿಕ್ಯೂಷನ್ ಹಿಂಪಡೆದಿದೆ. ಈ ಸಂಬಂಧ 2025ರಲ್ಲಿ ಇದೇ ನ್ಯಾಯಾಲಯ ಹೊರಡಿಸಿರುವ ಆದೇಶಕ್ಕೆ ವಿರುದ್ಧವಾದ ನಿಲುವನ್ನು ಸರ್ಕಾರ ತಳೆದಿದೆ. ಇದಕ್ಕೆ ತಡೆ ನೀಡಬೇಕು ಎಂದು ಕೋರಿದರು. ಹೆಚ್ಚುವರಿ ಅಡ್ವೊಕೇಟ್ ಜನರಲ್ ತಾರಾನಾಥ್ ಪೂಜಾರಿ ಅವರು ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು ಎಂದು ನ್ಯಾಯಾಲಯವನ್ನು ಕೋರಿದರು. ಇದನ್ನು ಆಲಿಸಿದ ಪೀಠವು ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲು ಸಮಯ ನೀಡಲಾಗುವುದು. ಗೃಹ ಇಲಾಖೆ ಮತ್ತು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಗೆ ನೋಟಿಸ್ ಜಾರಿ ಮಾಡಲಾಗಿದ್ದು, ಮುಂದಿನ ವಿಚಾರಣೆಯವರೆಗೆ ಪ್ರಕರಣಗಳನ್ನು ಹಿಂಪಡೆದಿರುವ ಆದೇಶಕ್ಕೆ ತಡೆ ನೀಡಲಾಗಿದೆ ಎಂದು ಆದೇಶಿಸಿತು. ಈ ಮಧ್ಯೆ, ಪ್ರಕರಣದಲ್ಲಿ ಮೂರನೇ ಪ್ರತಿವಾದಿಯಾಗಿರುವ ಆರೋಗ್ಯ ಸಚಿವ ಯು.ಟಿ ಖಾದರ್‌ಗೆ ನೋಟಿಸ್ ಜಾರಿಗೊಳಿಸಲು ನಿರಾಕರಿಸಿದ ನ್ಯಾಯಾಲಯವು ಸದನದಲ್ಲಿ ಸದಸ್ಯರು ನೀಡುವ ಹೇಳಿಕೆಗೆ ವಿನಾಯಿತಿ ಇರುತ್ತದೆ. ಇದನ್ನು ಆಧರಿಸಿ ಅವರನ್ನು ಪ್ರತಿವಾದಿ ಮಾಡಲಾಗದು ಎಂದು ಮೌಖಿಕವಾಗಿ ಹೇಳಿತು.

ತಪ್ಪು ಮಾಹಿತಿ ಹರಡದಂತೆ ಕ್ರಮ: ಗೃಹ ಸಚಿವ ಖರ್ಗೆ

•**ಬೆಂಗಳೂರು:** ರಾಜ್ಯದಾದ್ಯಂತ ಪೊಲೀಸ್ ಠಾಣೆಗಳು, ಜಿಲ್ಲಾ ಪೊಲೀಸ್ ಕಚೇರಿಗಳು, ನಗರ ಪೊಲೀಸ್ ಆಯುಕ್ತಾಲಯಗಳು ಹಾಗೂ ವಿಶೇಷ ಘಟಕಗಳು ಮಾಧ್ಯಮಗಳಿಗೆ ಮಾಹಿತಿ ಹಂಚುವ ಸಂದರ್ಭದಲ್ಲಿ ಏಕೀಕೃತ ವಿಧಾನವನ್ನು ಅನುಸರಿಸಲಿದ್ದು, ಇದರಿಂದ ತಪ್ಪು ಮಾಹಿತಿ ಹರಡುವುದನ್ನು ತಡೆಯುವ ಜೊತೆಗೆ ತನಿಖೆಯ ಗೌಪ್ಯತೆ ಕಾಪಾಡಲು ಸಹಾಯವಾಗಲಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಅಪರಾಧ ತನಿಖೆ ಹಾಗೂ ಸಾರ್ವಜನಿಕ ಸುರಕ್ಷತೆಗೆ ಸಂಬಂಧಿಸಿದ ಮಾಹಿತಿಯನ್ನು ಜವಾಬ್ದಾರಿಯುತವಾಗಿ ಮತ್ತು ಸಮನ್ವಯದೊಂದಿಗೆ ಸಾರ್ವಜನಿಕರಿಗೆ ತಲುಪಿಸುವ ಉದ್ದೇಶ ಹೊಂದಿದ್ದೇವೆ.

ಈ ಸಂಬಂಧ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಿಂದ ಹೊರಡಿಸಿರುವ ಹೊಸ ಮಾರ್ಗಸೂಚಿಗಳ ಮೂಲಕ, ಪೊಲೀಸ್ ಇಲಾಖೆಯ ವಿವಿಧ ಹಂತಗಳಲ್ಲಿ ಮಾಧ್ಯಮಗಳಿಗೆ ನೀಡಲಾಗುವ ಮಾಹಿತಿ, ಅಪರಾಧ ಪ್ರಕರಣಗಳ ತನಿಖಾ ವಿವರಗಳು ಹಾಗೂ ಸಾರ್ವಜನಿಕ ಪ್ರಕಟಣೆಗಳ ಕುರಿತು ಸ್ಪಷ್ಟ ನಿಯಮಾವಳಿ ಜಾರಿಗೆ ತರಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಹೊಸ ಮಾರ್ಗಸೂಚಿಗಳ ಪ್ರಕಾರ, ಠಾಣಾ ಮಟ್ಟದಲ್ಲಿ ಪೊಲೀಸ್ ಉಪನಿರೀಕ್ಷಕರು, ವೃತ್ತ ನಿರೀಕ್ಷಕರು ಹಾಗೂ ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಘಟನೆಗಳಿಗೆ ಸಂಬಂಧಿಸಿದ ಪ್ರಾಥಮಿಕ ಮಾಹಿತಿಯನ್ನು ಮಾತ್ರ ಹಂಚಿಕೊಳ್ಳಲಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು, ನಗರ ಪ್ರದೇಶಗಳಲ್ಲಿ ಪೊಲೀಸ್ ಆಯುಕ್ತರು ಹಾಗೂ ವಿಶೇಷ ಘಟಕಗಳ ಮುಖ್ಯಸ್ಥರು ಅಧಿಕೃತ ಮಾಹಿತಿಯನ್ನು ಮಾಧ್ಯಮಗಳಿಗೆ ನೀಡಲಿದ್ದಾರೆ ಎಂದಿದ್ದಾರೆ.



ಬೆಳಗಾವಿಯಲ್ಲಿ ಗುರುವಾರ ಸುರಿದ ಮಳೆಯಿಂದಾಗಿ ಮಹಿಳೆಯರು ಕೊಡೆಗಳ ಮೊರೆ ಹೋದರು.

ಪಠ್ಯಪುಸ್ತಕ ಸಂಘಕ್ಕೆ ಸರ್ಕಾರದಿಂದ ₹213 ಕೋಟಿ ಅನುದಾನ ಬಿಡುಗಡೆ

•**ಬೆಂಗಳೂರು:** ರಾಜ್ಯದ ಸರ್ಕಾರಿ ಶಾಲೆಗಳ 1ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ಒದಗಿಸುವ ವಿದ್ಯಾವಿಕಾಸ ಯೋಜನೆಯಲ್ಲಿ 2026–27ನೇ ಸಾಲಿನ ಪಠ್ಯಪುಸ್ತಕ ಮುದ್ರಣ ಮತ್ತು ಸರಬರಾಜು ವೆಚ್ಚಕ್ಕಾಗಿ ರಾಜ್ಯ ಸರ್ಕಾರವು 213 ಕೋಟಿ ರೂ. ಅನುದಾನವನ್ನು ಕರ್ನಾಟಕ ರಾಜ್ಯ ಪಠ್ಯಪುಸ್ತಕ ಸಂಘಕ್ಕೆ ಬಿಡುಗಡೆ ಮಾಡಿ ಆದೇಶಿಸಿದೆ.

ವಿದ್ಯಾರ್ಥಿಗಳಿಗೆ ಯಾವುದೇ ಅಡಚಣೆಯಿಲ್ಲದೆ ಸಕಾಲದಲ್ಲಿ ಪಠ್ಯಪುಸ್ತಕಗಳು ತಲುಪುವುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ಸಾಗಾಣಿಕೆ ವೆಚ್ಚದಲ್ಲಿ ಹೆಚ್ಚಳ: ತಾಲೂಕು ಕೇಂದ್ರಗಳಿಂದ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಸಾಗಿಸಲು ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿದ್ದ ಸಾಗಾಣಿಕೆ ವೆಚ್ಚವನ್ನು 2.50 ರೂ ರಿಂದ 4 ರೂ.ಕ್ಕೆ ಹೆಚ್ಚಿಸಲಾಗಿದೆ. ಸಾಗಾಣಿಕೆ ವೆಚ್ಚದ ಪಾವತಿಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು ಮತ್ತು ನೈಜ ವಿದ್ಯಾರ್ಥಿಗಳ ದಾಖಲಾತಿಯ ಆಧಾರದ ಮೇಲೆ ಮಾತ್ರ ವೆಚ್ಚವನ್ನು ಭರಿಸಬೇಕು ಎಂದು ಆದೇಶಿಸಲಾಗಿದೆ.

ಪಠ್ಯಪುಸ್ತಕಗಳ ಮುದ್ರಣ ಮತ್ತು ಕಾಗದದ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಯಾವುದೇ ಕಾರಣಕ್ಕೂ ಅನುದಾನ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು, ತಪ್ಪಿದಲ್ಲಿ ಆಯುಕ್ತರೇ ನೇರ ಹೊಣೆಗಾರರಾಗಿರುತ್ತಾರೆ. ಪಠ್ಯಪುಸ್ತಕಗಳ ವಿತರಣೆ ಮತ್ತು ಉಳಿಕೆ ದಾಸ್ತಾನು ವಿವರಗಳನ್ನು ನಿಗದಿತ ದಿನಾಂಕದೊಳಗೆ ಕರ್ನಾಟಕ ಪಠ್ಯಪುಸ್ತಕ ಸಂಘದ ಜಾಲತಾಣದಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು. ಈ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ಪ್ರತಿ ತಿಂಗಳು ಡಿಜಿಟಲ್ ಸಪೋರ್ಟ್ ಸಿಸ್ಟಂ (ಅವಲೋಕನ) ತಂತ್ರಾಂಶದಲ್ಲಿ ನಮೂದಿಸಬೇಕು ಮತ್ತು ತ್ರೈಮಾಸಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಇಲಾಖೆಯು ತಿಳಿಸಿದೆ. ಪಠ್ಯಪುಸ್ತಕ ಸಂಘದ ದೈನಂದಿನ ಆಡಳಿತಾತ್ಮಕ ನಿರ್ವಹಣಾ ವೆಚ್ಚಗಳಿಗಾಗಿ 10 ಕೋಟಿ ರೂ.ಗಳನ್ನು ಬಳಸಿಕೊಳ್ಳಲು ಅನುಮೋದನೆ ನೀಡಿದೆ.

ಕಿರುಸುದ್ದಿ

ನವೆಂಬರ್ ಒಳಗೆ ಗ್ರಾಪಂ, ತಾಪಂ, ಜಿಪಂ ಚುನಾವಣೆ

•**ದಾವಣಗೆರೆ:** ರಾಜ್ಯದಲ್ಲಿ ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಚುನಾವಣೆ ನಡೆಸುವ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆಯಾಗಿದ್ದು, ಅಕ್ಟೋಬರ್ ಅಥವಾ ನವೆಂಬರ್ ಒಳಗಾಗಿ ಚುನಾವಣೆ ನಡೆಸುತ್ತೇವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು. ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೆಪ್ಟೆಂಬರ್ ಒಳಗಾಗಿ ಜಿಪಂ, ತಾಪಂ, ಗ್ರಾಪಂ ಗಳ ಮೀಸಲಾತಿ, ಕ್ಷೇತ್ರ ವಿಂಗಡಣೆಯನ್ನು ಮಾಡಿ, ಅಕ್ಟೋಬರ್ ಅಥವಾ ನವೆಂಬರ್ ಒಳಗಾಗಿಯೇ ಚುನಾವಣೆ ಮಾಡುತ್ತೇವೆ. ಚುನಾವಣೆ ಕುರಿತು ಸಚಿವ ಸಂಪುಟದಲ್ಲಿ ಚರ್ಚೆಯಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸಹ ಚುನಾವಣೆ ನಡೆಸುವ ಬಗ್ಗೆ ಹೇಳಿದ್ದಾರೆ. ಈ ವರ್ಷದಲ್ಲೇ ಎಲ್ಲಾ ಚುನಾವಣೆ ನಡೆಸಲು ಅಗತ್ಯ ಸಿದ್ಧತೆ ಮಾಡುತ್ತಿದ್ದೇವೆ ಎಂದರು.

ಅಸ್ವಸ್ಥಗೊಂಡಿದ್ದ ಮಕ್ಕಳು ಗುಣಮುಖ

•**ಗದಗ:** ತಾಲೂಕಿನ ಬೆಳಧಡಿ ತಾಂಡಾದ (ಬ್ರಹ್ಮಾನಂದಪುರ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 25 ಮಕ್ಕಳು, ಮರ ಔಡಲ (ಕಾಡು ಔಡಲ) ಬೀಜ ಸೇವಿಸಿ ಬುಧವಾರ ಅಸ್ವಸ್ಥಗೊಂಡಿದ್ದರು. ಅವರಿಗೆ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ–ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದ್ದು, ಗುಣಮುಖರಾಗಿ ಗುರುವಾರ ಮನೆಗೆ ತೆರಳಿದರು. ಬುಧವಾರ ಸಂಜೆ ಶಾಲೆಯ ಕಾಂಪೌಂಡ್ ಬಳಿರುವ ಮರ ಔಡಲದ ಬೀಜವನ್ನು ವಿದ್ಯಾರ್ಥಿನಿಯೊಬ್ಬರು ಮೂರು ಹಾಗೂ ನಾಲ್ಕನೇ ತರಗತಿಯ ವಿದ್ಯಾರ್ಥಿಗಳಿಗೆ ನೀಡಿದ್ದಳು. 25 ಮಕ್ಕಳು ಇದನ್ನು ಸೇವಿಸಿದ್ದರಿಂದ ಮನೆಗೆ ತೆರಳಿದ ಬಳಿಕ ವಾಂತಿ, ಭೇದಿಯಾಗಿದೆ. ಅಸ್ವಸ್ಥಗೊಂಡಿದ್ದ ಮಕ್ಕಳನ್ನು ಪೋಷಕರು ತಕ್ಷಣ ಆಸ್ಪತ್ರೆಗೆ ಕರೆ ತಂದಿದ್ದಾರೆ ಎಂದು ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ.ನಡುವಿನಮನಿ ತಿಳಿಸಿದರು. ಘಟನಾ ಸ್ಥಳಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಅವರ ವರದಿ ಆಧರಿಸಿ, ಮಕ್ಕಳಿಗೆ ತೊಂದರೆ ಆಗದಂತೆ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂದರು. ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಅವರು ಆಸ್ಪತ್ರೆಗೆ ಭೇಟಿ ನೀಡಿ, ಮಕ್ಕಳ ಆರೋಗ್ಯ ವಿಚಾರಿಸಿದರು.

ಪ್ರಮಾಣವಚನ ಸ್ವೀಕಾರ



•**ಬೆಂಗಳೂರು:** ವಿಧಾನ ಪರಿಷತ್ ನೂತನ ಸದಸ್ಯರಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ಬಿ.ಕೆ. ಹರಿಪ್ರಸಾದ್, ಪಿ.ವಿ. ಮೋಹನ್, ಶಿವಣ್ಣ ಮಳವಳ್ಳಿ, ತಿಪ್ಪಣ್ಣಪ್ಪ ಕಮಕನೂರ್ ಹಾಗೂ ವಿನಯ್ ಕಾರ್ತಿಕ, ಬಿಜೆಪಿಯ ರಘು ಕೌಟಿಲ್ಯ ಹಾಗೂ ಲಿಂಗರಾಜ ಪಾಟೀಲ್ ಅವರು ಗುರುವಾರ ವಿಧಾನಸೌಧದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಪ್ರಮಾಣ ವಚನ ಬೋಧಿಸಿದರು. ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್, ಡಿಸಿಎಂ ಪರಮೇಶ್ವರ್, ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರು ಉಪಸ್ಥಿತರಿದ್ದರು.

ಸಂಪುಟ ಸಭೆಯಲ್ಲಿ ತೀರ್ಮಾನ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ವಿದ್ಯುತ್ ಖಾಸಗೀಕರಣ ಇಲ್ಲ

•**ಬೆಂಗಳೂರು:** ವಿದ್ಯುತ್ ವಿತರಣೆಯನ್ನು ಖಾಸಗಿಯವರಿಗೆ ನೀಡುವ ವಿಚಾರವಾಗಲಿ ಎಸ್ಕಾಂಗಳು ತಮ್ಮ ಆಸ್ತಿಪಾಸ್ತಿಗಳನ್ನು ಕೆಇಆರ್‌ಸಿಗೆ ಸಲ್ಲಿಸಬೇಕು ಎಂದು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಅವರು ಸಂಪುಟದ ನಿರ್ಣಯಗಳನ್ನು ಮಾಧ್ಯಮದವರಿಗೆ ವಿವರಿಸಿದರು.



ಹಿಂದೆ ಬಿಜೆಪಿ ಸರ್ಕಾರ ಖಾಸಗಿಯವರಿಗೆ ಪರವಾನಗಿ ಪಡೆಯಲು ಅವಕಾಶ ನೀಡಿತ್ತು. ಅದರ ಆಧಾರದ ಮೇಲೆ ಟಾಟಾ ಸಂಸ್ಥೆಯವರು ಅರ್ಜಿ ಹಾಕಿದ್ದಾರೆ. ಕೆಇಆರ್‌ಸಿ ಅವರು ಈ ಬಗ್ಗೆ ತೀರ್ಮಾನ ಮಾಡಲಿದೆ. ನಮ್ಮ ಸರ್ಕಾರದ ತೀರ್ಮಾನವನ್ನು ಎಸ್ಕಾಂಗಳಿಗೆ ತಿಳಿಸಲಾಗಿದೆ. ಖಾಸಗಿಯವರು ಸರ್ಕಾರಕ್ಕೆ ಅರ್ಜಿ ಹಾಕಿಲ್ಲ, ಕೆಇಆರ್‌ಸಿಗೆ ಅರ್ಜಿ ಹಾಕಿದ್ದಾರೆ. ಕೆಇಆರ್‌ಸಿ ಅವರು ಎಸ್ಕಾಂಗಳಿಗೆ ತಿಳಿಸಿದ್ದು, ಎಸ್ಕಾಂಗಳು ನಮ್ಮ ಬಳಿ ಚರ್ಚೆ ಮಾಡುವ ಹಿನ್ನೆಲೆಯಲ್ಲಿ ಇದಕ್ಕೆ ನಮ್ಮ ಸಹಮತವಿಲ್ಲ ಎಂದು ಎಸ್ಕಾಂಗಳಿಗೆ ಸೂಚಿಸಿದ್ದೇವೆ ಎಂದರು.

ಒಸಿ, ಸಿಸಿ ಸಂಬಂಧಿಸಿದಂತೆ ವಿನಾಯಿತಿ ನೀಡಬೇಕು ಎಂದು ರಾಜ್ಯದ ಎಲ್ಲೆಡೆಯಿಂದ ಮನವಿ ಬಂದಿದ್ದರಿಂದ ನಾವು ಅವಕಾಶ ಕಲ್ಪಿಸಿದ್ದೆವು. ಆದರೆ, ಕೆಲವರು ನಾವು ಕಟ್ಟಡ ನಿರ್ಮಾಣ ಮಾಡಿದ್ದು, ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಹಾಕಿಲ್ಲ ಎಂದು ಮನವಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಯಾರೆಲ್ಲ ವಸತಿ ಕಟ್ಟಡ ನಿರ್ಮಾಣ ಮಾಡಿದ್ದಾರೋ ಅವರ ದಾಖಲೆ, ಫೋಟೋಗಳೊಂದಿಗೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಹಾಕಲು ಆಗಸ್ಟ್ 15ರವರೆಗೆ ಅವಕಾಶ ಕಲ್ಪಿಸಿದ್ದೇವೆ ಎಂದು ತಿಳಿಸಿದರು.

ವಿಬಿ ಜಿ ರಾಮ್ ಜಿ ಯೋಜನೆ ಜಾರಿ: ಕೇಂದ್ರ ಸರ್ಕಾರದ ವಿಬಿ ಜಿ ರಾಮ್ ಜಿ ಯೋಜನೆ ವಿರುದ್ಧ ನಾವು ಹೋರಾಟ ಮಾಡಿದ್ದು, ನ್ಯಾಯಾಲಯದ ಮೆಟ್ಟಿಲು ಏರಿದ್ದೇವೆ. ಯೋಜನೆಯಲ್ಲಿ ಶೇ.40 ವೆಚ್ಚ ಭರಿಸಲು ಸಾಧ್ಯವಿಲ್ಲ ಎಂದು ಹೇಳಿದ್ದು, ನಾವು ಷರತ್ತಿನ ಆಧಾರದ ಮೇಲೆ ಯೋಜನೆ ಜಾರಿ ಮಾಡಬೇಕಾಗಿದೆ. ನಮ್ಮ ರಾಜ್ಯಕ್ಕೆ ಇದರಿಂದ ವಾರ್ಷಿಕ 3,806 ಕೋಟಿ ರೂ. ವೆಚ್ಚ ಬೀಳಲಿದೆ. ಎಲ್ಲೆಲ್ಲಿ ಈ ಕೆಲಸ ಕೈಗೊಳ್ಳಬೇಕು ಎಂದು ಇವತ್ತಿನಿಂದ ಅಧಿಸೂಚನೆ ಹೊರಡಿಸಲಾಗುತ್ತಿದೆ. ಇದಕ್ಕೆ ಆಡಳಿತಾತ್ಮಕ ಅನುಮೋದನೆ ಕೊಟ್ಟಿದ್ದೇವೆ ಎಂದರು.

ಎಸ್‌ಐಆರ್ ಬಳಿಕ ಮುಂಗಾರು ಅಧಿವೇಶನ

ಈ ವರ್ಷ ಮುಂಗಾರು ಅಧಿವೇಶನ ಕರೆಯಬೇಕಾಗಿತ್ತು. ಸದ್ಯಕ್ಕೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ಮುಗಿಯುವವರೆಗೂ ಕಾಯಲು ತೀರ್ಮಾನಿಸಲಾಗಿದೆ. ಎಲ್ಲಾ ಶಾಸಕರು ತಮ್ಮ ಕ್ಷೇತ್ರದ ಮತದಾರರ ರಕ್ಷಣೆ ಮಾಡಿಕೊಳ್ಳಬೇಕಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ನಿರ್ಣಯಗಳು

- ಪಂಚಾಯತ್‌ಗಳಲ್ಲೂ ದಾಖಲೆ ಶುದ್ಧೀಕರಣಕ್ಕೆ ಭೂಗ್ಯಾರಂಟಿ ನೀಡಲಾಗುತ್ತಿದ್ದು, ಎಲ್ಲಾ ರಸ್ತೆಗಳನ್ನು ಸರ್ಕಾರಿ ರಸ್ತೆಗಳಾಗಿ ಘೋಷಿಸಲು ತೀರ್ಮಾನ. ಇದಕ್ಕಾಗಿ ಕಾನೂನಿನಲ್ಲಿ ಅವಕಾಶ
- ರಾಷ್ಟ್ರೀಯ ಅಂಧತ್ವ ನಿಯಂತ್ರಣದಿಂದ ಸಣ್ಣ ಮಕ್ಕಳಲ್ಲಿ ದೃಷ್ಟಿ ಆರೈಕೆ ಬಲಪಡಿಸಲು 25.95 ಕೋಟಿ ರೂ. ಅನುದಾನಕ್ಕೆ ಒಪ್ಪಿಗೆ
- ಬಾಗಲಕೋಟೆಯ ಬೀಳಗಿ ತಾಲೂಕಿನಲ್ಲಿ ಕೃಷ್ಣಾ ನದಿಯಿಂದ 7 ಸಾವಿರ ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಬೀಳಗಿ ಏತ ನೀರಾವರಿ ಯೋಜನೆಗೆ 98.50 ಕೋಟಿ ರೂ.ಗೆ ಆಡಳಿತಾತ್ಮಕ ಅನುಮೋದನೆ
- ಕಲಬುರಗಿಯಲ್ಲಿ ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಸಹಕಾರದಲ್ಲಿ ಜವಳಿ ಪಾರ್ಕ್ ನಿರ್ಮಾಣಕ್ಕೆ ಕೆಐಎಡಿಬಿ ವತಿಯಿಂದ 700 ಕೋಟಿ ರೂ. ವೆಚ್ಚದ ಯೋಜನೆಗೆ ಮೊದಲ ಹಂತಕ್ಕೆ 320 ಕೋಟಿ ರೂ.ಗೆ ಸಮ್ಮತಿ

ಪಕ್ಷದಲ್ಲಿ ಗೊಂದಲ ಇಲ್ಲ: ವಿಜಯೇಂದ್ರ

•**ಮೈಸೂರು:** ಬಿಜೆಪಿ ಪಕ್ಷದೊಳಗಿನ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಹಾಗೂ ಗೊಂದಲಗಳು ಈಗ ಸಂಪೂರ್ಣವಾಗಿ ಅಂತ್ಯಗೊಂಡಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.



ಗುರುವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ನಡೆದಿರುವುದು ಸೇರಿದಂತೆ ಎಲ್ಲಾ ಪ್ರಮುಖ ಬೆಳವಣಿಗೆಗಳ ಕುರಿತು ದೆಹಲಿಯ ವರಿಷ್ಠರಿಗೆ ಸಮಗ್ರ ಮಾಹಿತಿ ನೀಡಲಾಗಿದೆ. ಈ ವಿಚಾರವನ್ನು ಮತ್ತೆ ಸಾರ್ವಜನಿಕವಾಗಿ ಚರ್ಚಿಸುವ ಅಗತ್ಯವಿಲ್ಲ ಎಂದರು.

ಇದೇ ವೇಳೆ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರದ್ದು ಎಂದು ಹೇಳಲಾದ ವೈರಲ್ ಆಡಿಯೋ ಕುರಿತು ಪ್ರತಿಕ್ರಿಯಿಸಿ, ಆ ಧ್ವನಿ ತಮ್ಮದಲ್ಲ ಎಂದು ಸ್ವತಃ ಸದಾನಂದಗೌಡರೇ ಸ್ಪಷ್ಟನೆ ನೀಡಿದ್ದಾರೆ ಎಂದು ಹೇಳಿದರು. ಶಾಸಕ ಎಸ್.ಆರ್. ವಿಶ್ವನಾಥ್ ಅವರ ಜೊತೆಗೆ ಸಹ ಈ ಬಗ್ಗೆ ಚರ್ಚಿಸಲಾಗಿದೆ. ದೊಡ್ಡ ಪಕ್ಷದಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಸಹಜವಾಗಿದ್ದು, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಸರ್ಕಾರ ತನ್ನ ನಿಲುವಿನಲ್ಲಿ ಹಠಮಾರಿ ಧೋರಣೆ ತಳೆದಿದೆ. ಶೇ.79ರಷ್ಟು ಸ್ಥಳೀಯ ರೈತರ ವಿರೋಧ ಇದ್ದರೂ, ಸರ್ಕಾರ ಯಾವುದೇ ವಿರೋಧವಿಲ್ಲ ಎಂದು ಹೇಳುತ್ತಿರುವುದು ಸರಿಯಲ್ಲ ಎಂದು ಟೀಕಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಕ್ಕೆ ಬಂದ ದಿನದಿಂದಲೇ ಈ ಯೋಜನೆಗೆ ತೀವ್ರ ಆಸಕ್ತಿ ತೋರಿಸುತ್ತಿದ್ದಾರೆ ಎಂದರು.

ತಳಮಟ್ಟದಿಂದ ಪಕ್ಷ ಸಂಘಟನೆ

ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ತಳಮಟ್ಟದಿಂದ ಸಂಘಟನೆಗೆ ಒತ್ತು ನೀಡಬೇಕು. ಪ್ರತಿಯೊಂದು ಬೂತ್‌ನಲ್ಲಿ ಪಕ್ಷದ ಸಂಘಟನೆಯನ್ನು ಗಟ್ಟಿಗೊಳಿಸಿ, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವ ಮೂಲಕ ಪಕ್ಷದ ಮೇಲೆ ವಿಶ್ವಾಸ ಹೆಚ್ಚಿಸಬೇಕು. ಪಕ್ಷದ ಶಕ್ತಿ ಕಾರ್ಯಕರ್ತರೇ ಆಗಿದ್ದು, ಅವರ ಶ್ರಮ ಮತ್ತು ಸಮರ್ಪಣೆಯಿಂದ ಬಿಜೆಪಿ ಮತ್ತಷ್ಟು ಬೆಳೆಯಲಿದೆ ಎಂದು ವಿಜಯೇಂದ್ರ ತಿಳಿಸಿದರು.

ನೀರಿನ ಸಮಸ್ಯೆ ನಿವಾರಣೆಗೆ ಕ್ರಮ

•**ಬೆಂಗಳೂರು:** ಎಲ್ ನಿನೋ ಪ್ರಭಾವದಿಂದ ರಾಜ್ಯದಲ್ಲಿ ಮಳೆಯ ಕೊರತೆ ಆಗಿದ್ದು, ಗ್ರಾಮಗಳಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ಮುಂಗಡವಾಗಿ 117 ಕೋಟಿ ರೂ. ಬಿಡುಗಡೆ ಮಾಡಲಾಗಿದೆ, ನೀರು ಪೂರೈಕೆಗೆ ಹಣದ ಕೊರತೆ ಇಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈಗಾಗಲೇ ಸುಮಾರು 85 ಕೋಟಿ ರೂ.ಗಳಿಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ. 30 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತೊಂದರೆ ಆಗದಂತೆ ಕ್ರಮ ವಹಿಸಲಾಗಿದೆ ಎಂದರು.

ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದರೆ 24 ಗಂಟೆಗಳ ಒಳಗಾಗಿ ಪರಿಹರಿಸುವಂತೆ ಸೂಚಿಸಲಾಗಿದೆ. ಖಾಸಗಿ ತೆರೆದ ಬಾವಿ, ಬೋರ್‌ವೆಲ್‌ಗಳಿಂದ ನೀರು ಪಡೆದು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ತೀರಾ ಅಗತ್ಯಬಿದ್ದ ಸಂದರ್ಭದಲ್ಲಿ ಮಾತ್ರ ಕೊಳವೆ ಬಾವಿ ಕೊರೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಪ್ರಜಾಸೇವಾ ಇಲಾಖೆ ರಚನೆ

•**ಬೆಂಗಳೂರು:** ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಆಡಳಿತಾತ್ಮಕ ದಕ್ಷತೆಯನ್ನು ಹೆಚ್ಚಿಸಲು ಹಾಗೂ ಸಾರ್ವಜನಿಕರ ಅಹವಾಲುಗಳನ್ನು ಒಂದೇ ಸೂರಿನಡಿ ತ್ವರಿತವಾಗಿ ವಿಲೇವಾರಿ ಮಾಡಲು ಹೊಸ ಪ್ರಜಾಸೇವಾ ಇಲಾಖೆಯನ್ನು ಸ್ಥಾಪಿಸಿದೆ. ಹೊಸ ಇಲಾಖೆಯನ್ನು ಅಧಿಕೃತವಾಗಿ ರೂಪುಗೊಳಿಸಿ ಗುರುವಾರ ಸುತ್ತೋಲೆ ಹೊರಡಿಸಲಾಗಿದೆ. ಹೊಸ ಇಲಾಖೆಯಡಿ, ಪ್ರಸ್ತುತ ಇರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಯ ಅಧೀನದಲ್ಲಿದ್ದ ಸಕಾಲ ಮಿಷನ್ ಮತ್ತು ದೂರುಗಳು ಹಾಗೂ ಕುಂದುಕೊರತೆಗಳ ವಿಭಾಗಗಳು ವಿಲೀನಗೊಂಡಿವೆ. ಇದರಿಂದ ಸಾರ್ವಜನಿಕರ ಅಹವಾಲುಗಳು, ದೂರುಗಳು ಮತ್ತು ಸೇವಾ ಸಂಬಂಧಿತ ಸಮಸ್ಯೆಗಳ ಪರಿಹಾರವನ್ನು ವೇಗವಾಗಿ ಮತ್ತು ಪಾರದರ್ಶಕವಾಗಿ ನಿರ್ವಹಿಸಲು ಸಾಧ್ಯವಾಗಲಿದೆ. ಐಎಎಸ್ ಅಧಿಕಾರಿ ಹರ್ಷ ಗುಪ್ತಾ ಪ್ರಜಾಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

ಮಗುವಿನ ರಕ್ಷಣೆ ಶಾಲಾ ಮಂಡಳಿ ಹೊಣೆ: ಹೈ

•**ಬೆಂಗಳೂರು:** ಶಾಲಾ ಬಸ್ ಶಾಲಾ ಆವರಣದಲ್ಲಷ್ಟೇ ಅಲ್ಲದೇ, ಮಗು ಬಸ್ ಹತ್ತಿದಾಗಿನಿಂದ ಸುರಕ್ಷಿತವಾಗಿ ಪೋಷಕರಲ್ಲಿಗೆ ಸೇರುವವರೆಗೂ ಮಗುವಿನ ರಕ್ಷಣೆಯ ಜವಾಬ್ದಾರಿ ಶಾಲಾ ಆಡಳಿತ ಮಂಡಳಿಯದ್ದೇ ಆಗಿರಲಿದೆ ಎಂದು ಹೈಕೋರ್ಟ್ ತಿಳಿಸಿದೆ.

ಶಾಲಾ ಬಸ್‌ನಲ್ಲಿ ನಡೆದ ಅಪಘಾತದಲ್ಲಿ 4ನೇ ತರಗತಿಯ ವಿದ್ಯಾರ್ಥಿ ಕಣ್ಣು ಕಳೆದುಕೊಂಡ ಪ್ರಕರಣ ಸಂಬಂಧ ದಾಖಲಾಗಿದ್ದ ಪ್ರಕರಣ ರದ್ದುಕೋರಿ ಮಂಡ್ಯ ಜಿಲ್ಲೆಯ ಮದ್ದೂರಿನ ದಿವ್ಯಜ್ಯೋತಿ ಶಾಲಾ ಆಡಳಿತ ಮಂಡಳಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಆದೇಶ ನೀಡಿದ್ದು, ಅರ್ಜಿ ವಜಾಗೊಳಿಸಿದೆ.

ಶಾಲಾ ಬಸ್‌ನಲ್ಲಿ ಮಕ್ಕಳ ಸುರಕ್ಷತೆ ಎನ್ನುವುದು ಕೇವಲ ದಾಕ್ಷಿಣ್ಯ ಅಥವಾ ಅನುಕೂಲದ ವಿಷಯವಲ್ಲ, ಇದು 'ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮಾವಳಿಗಳು 2018 ರ ಅಡಿ ಕಡ್ಡಾಯವಾಗಿ ಪಾಲಿಸಬೇಕಾದ ಶಾಸನಬದ್ಧ ಜವಾಬ್ದಾರಿಯಾಗಿದೆ. ಮಗು ಶಾಲಾ ಬಸ್ ಹತ್ತಿದ ಮೇಲೆ, ಕೊನೆಯ ಸ್ಟಾಪ್ ಬರುವವರೆಗೂ ಶಾಲಾ ಮಂಡಳಿ ತನ್ನ ಹೊಣೆಗಾರರಲ್ಲ ಎಂದು ಹೇಳಲಾಗುವುದಿಲ್ಲ. ಹೀಗಾಗಿ, ಘಟನೆ ನಡೆದ ಸಂದರ್ಭದಲ್ಲಿ ಬಸ್‌ನಲ್ಲಿ ಅಟೆಂಡರ್ ಇದ್ದರೇ? ಸಿಸಿಟಿವಿ ಕೇವಲ ಅಲಂಕಾರಿಕ ವಸ್ತು ಆಗಿತ್ತೇ ಅಥವಾ ಚಾಲನೆಯಲ್ಲಿತ್ತೇ? ನಿಷೇಧಿತ ಅಥವಾ ಅಪಾಯಕಾರಿ ವಸ್ತುಗಳನ್ನು ಮಕ್ಕಳು ಬಸ್‌ನ ಒಳಗೆ ತರಲು ಹೇಗೆ ಸಾಧ್ಯವಾಯಿತು? ಈ ಎಲ್ಲ ಪ್ರಶ್ನೆಗಳಿಗೆ ತನಿಖೆಯಿಂದಲೇ ಉತ್ತರ ಸಿಗಬೇಕಾಗಿದೆ.

ಅಲ್ಲದೇ, ಬೆಳೆಯುವ ವಯಸ್ಸಿನ ಪುಟ್ಟ ಮಗುವೊಂದು ಇಡೀ ಜೀವನವನ್ನು ದೃಷ್ಟಿಹೀನತೆಯ ಶಾಪದೊಂದಿಗೆ ಕಳೆಯುವಂತಾಗಿದೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ, ತನಿಖೆಯ ಆರಂಭಿಕ ಹಂತದಲ್ಲೇ ರದ್ದುಗೊಳಿಸಲು ಸಾಧ್ಯವಿಲ್ಲ ಎಂದು ತಿಳಿಸಿದೆ.

ಮುಸ್ಲಿಂ ಯುವಕರಿಂದ ವ್ಯಾಪಾರಿ ಕೊಲೆ

•**ಹಾವೇರಿ (ರಟ್ಟೀಹಳ್ಳಿ):** ಮೊಟ್ಟೆ ಖರೀದಿಸಿ ಚಿಲ್ಲರೆ ವಾಪಾಸ್ ಪಡೆಯುವ ವಿಚಾರವಾಗಿ ನಡೆದ ಗಲಾಟೆಯಲ್ಲಿ ಮುಸ್ಲಿಂ ಯುವಕರು ಹಿಂದೂ ವ್ಯಾಪಾರಿಯ ಮೇಲೆ ತೀವ್ರ ಹಲ್ಲೆ ನಡೆಸಿದ ಪರಿಣಾಮವಾಗಿ ತೀವ್ರ ಗಾಯಗೊಂಡಿದ್ದ ವ್ಯಾಪಾರಿ ಚಿಕಿತ್ಸೆಗೆಂದು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಮೃತಪಟ್ಟ ಘಟನೆ ರಟ್ಟೀಹಳ್ಳಿಯಲ್ಲಿ ಪಟ್ಟಣದಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಶಿವಾಜಿರಾವ್ ಬೈರೋಜಿ (54) ಹಲ್ಲೆಯಲ್ಲಿ ಮೃತಪಟ್ಟ ವ್ಯಾಪಾರಿ. ರಟ್ಟೀಹಳ್ಳಿಯಲ್ಲಿ ಬುಧವಾರ ರಾತ್ರಿ ಶಿವಾಜಿರಾವ್ ಬೈರೋಜಿ ಅವರ ಅಂಗಡಿಗೆ ಬಂದ ವಾಸೀಮ್ ಮುಲ್ಲಾ, ಸರ್ಫರಾಜ್ ಮುಲ್ಲಾ, ಸಾದಿಕ್ ಮುಲ್ಲಾ ಹಾಗೂ ಶಿರಾಜ್ ಮುಲ್ಲಾ 100 ರೂ. ನೀಡಿ 5 ಮೊಟ್ಟೆ ಖರಿಸಿದ್ದರು. ಚಿಲ್ಲರೆ ವಾಪಾಸ್ ಕೇಳುವಾಗ ತಾವು 500 ನೀಡಿದ್ದಾಗಿ ಗದ್ದಲ ನಡೆಸಿದ್ದಾರೆ. ಈ ವೇಳೆ ಅಂಗಡಿಯಲ್ಲಿ ಶಿವಾಜಪ್ಪ ಅವರ ಮಗ ಭರತನಿದ್ದು, ಚಿಲ್ಲರೆ ವಿಚಾರವಾಗಿ ವಾಗ್ವಾದ ಆರಂಭವಾಗಿದೆ. ಇವರ ಗಲಾಟೆ ಕೇಳಿ ಬಿಡಿಸಲೆಂದು ಶಿವಾಜಿರಾವ್ ಮಧ್ಯಸ್ಥಿಕೆಗೆ ಮುಂದಾಗಿದ್ದಾರೆ.

ಈ ವೇಳೆ ವಾಸೀಂ ಮತ್ತು ಇತರರು, ಶಿವಾಜಿರಾವ್ ಅವರ ಮೇಲೆ ಮನಸೋ ಇಚ್ಛೆ ಥಳಿಸಿದ್ದಾರೆ. ಇದರಿಂದ ಆಯತಪ್ಪಿ ಶಿವಾಜಿರಾವ್ ಕೆಳಗೆ ಬೀಳುತ್ತಿದ್ದಂತೆಯೇ ಕಾಲಿನಿಂದ ಹಿಗ್ಗಾಮುಗ್ಗಾ ಒದ್ದಿದ್ದಾರೆ. ಕೇವಲ ಒಂದೂವರೆ ವರ್ಷದ ಹಿಂದೆ ಶಿವಾಜಿರಾವ್ ಹೃದಯಾಘಾತದಿಂದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಈ ದಾಳಿ ಮತ್ತು ಹಲ್ಲೆಗೆ ಕುಸಿದು ಬಿದ್ದ ಅವರನ್ನು ನೆರೆ-ಹೊರೆಯವರು ಯುವಕರಿಂದ ಬಿಡಿಸಿ ಆಸ್ಪತ್ರೆಗೆ ದಾಖಲಿಸಲು ಕರೆದೊಯ್ಯುವ ಮಾರ್ಗ ಮಧ್ಯದಲ್ಲೇ ಅವರು ಕೊನೆಯುಸಿರು ಎಳೆದಿದ್ದಾರೆ.


ದುರುಳರಿಗೆ ಕಾನೂನಿನ ಭಯ, ದಂಡನೆಯ ಭಯ ಕಿಂಚಿತ್ತೂ ಇಲ್ಲದಂತಾಗಿದೆ. ಹಾವೇರಿ ಜಿಲ್ಲೆಯ ರಟ್ಟೀಹಳ್ಳಿಯಲ್ಲಿ ಉದ್ದೇಶಪೂರ್ವಕವಾಗಿ ಗಲಾಟೆ ಮಾಡಿ ಹಲ್ಲೆ ನಡೆಸಿ, ಒಬ್ಬ ಅಮಾಯಕ ಹಿಂದೂ ವ್ಯಾಪಾರಿಯನ್ನು ಮುಸ್ಲಿಂ ಯುವಕರು ಹತ್ಯೆ ಮಾಡಿರುವುದು ಅತ್ಯಂತ ಘೋರ ರಾಕ್ಷಸೀ ಕೃತ್ಯ ಹಾಗೂ ಖಂಡನೀಯ. ತಪ್ಪಿತಸ್ಥ ಗೂಂಡಾಗಳನ್ನು ಕೂಡಲೇ ಪತ್ತೆಮಾಡಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಅತ್ಯಂತ ತೀಕ್ಷ್ಣವಾಗಿ ಆಗ್ರಹಿಸುತ್ತೇನೆ.
■ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

80 ಕೋಟಿಗೂ ಹೆಚ್ಚು ಅರ್ಹ ಫಲಾನುಭವಿಗಳಿಗೆ ಅನುಕೂಲ

ಗುಣಮಟ್ಟದ ಪಡಿತರ ವಿತರಣೆ

•**ಹೊಸದಿಲ್ಲಿ:** ದೇಶದ ಆಹಾರ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಐತಿಹಾಸಿಕ ನಿರ್ಧಾರ ಕೈಗೊಂಡಿದೆ.

ದೇಶಾದ್ಯಂತ 80 ಕೋಟಿಗೂ ಹೆಚ್ಚು ಅರ್ಹ ಫಲಾನುಭವಿಗಳಿಗೆ ಶ್ರೇಷ್ಠ ಗುಣಮಟ್ಟದ ಆಹಾರ ಧಾನ್ಯ ವಿತರಿಸುವ ನಿಟ್ಟಿನಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಮಹತ್ತರ ಬದಲಾವಣೆಗೆ ನಾಂದಿ ಹಾಡಿದ್ದು, ಇದೀಗ ಕೇಂದ್ರ ಸಚಿವ ಸಂಪುಟ ಗೌರವಯುತ ಆಹಾರ ಪೂರೈಕೆಗೆ ಅನುಮೋದನೆ ನೀಡಿದೆ. ಪಡಿತರದಾರರಿಗೆ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಕ್ಕಿ ವಿತರಣೆಯಲ್ಲಿ ಈ ಮೊದಲಿನಷ್ಟೇ ಆಹಾರ ಪ್ರಮಾಣವನ್ನು ಕಾಯ್ದುಕೊಳ್ಳುವುದರ ಜತೆಗೆ ಅಕ್ಕಿಯ ಗುಣಮಟ್ಟವನ್ನು ಶ್ರೇಷ್ಠಗೊಳಿಸುವಲ್ಲಿ ಸಚಿವ ಜೋಶಿ ಆದ್ಯತೆ ನೀಡಿದ್ದಾರೆ. ನುಚ್ಚಿನ ಪ್ರಮಾಣವನ್ನು ಗರಿಷ್ಠ ಪ್ರಮಾಣದಲ್ಲಿ ಕಡಿತಗೊಳಿಸಿದ್ದಾರೆ.



ರಾವ್ ರೈಸ್‌ನಲ್ಲಿ ಈ ಮೊದಲು ಇದ್ದ ಶೇ.25ರಷ್ಟು ನುಚ್ಚು ಪ್ರಮಾಣವನ್ನು ಶೇ.10ಕ್ಕೆ ಇಳಿಸಿದ್ದು, ಶೇ.15ರಷ್ಟು ನುಚ್ಚಿನ ಪ್ರಮಾಣ ಕಡಿತಗೊಳಿಸಲಾಗಿದೆ. ಅಲ್ಲದೇ ಬೇಯಿಸಿದ ಅಕ್ಕಿಯಲ್ಲಿ ಈ ಮೊದಲಿದ್ದ ಶೇ.16ರಷ್ಟು ನುಚ್ಚಿನ ಪ್ರಮಾಣವನ್ನ ಇದೀಗ ಶೇ.5ಕ್ಕೆ ಇಳಿಸಲು ಕ್ರಮ ವಹಿಸಲಾಗಿದೆ. ಈ ಮೂಲಕ ಅತ್ಯಂತ ಶ್ರೇಷ್ಠ ಗುಣಮಟ್ಟದ ಹಾಗೂ ಗಟ್ಟಿತನದ ಅಕ್ಕಿ ಪೂರೈಕೆಗೆ ಕೇಂದ್ರ ಸಚಿವ ಜೋಶಿ ಮುಂದಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ನಾಯಕತ್ವದಲ್ಲಿ ಕಳೆದ ಮೂರು ದಶಕಗಳಲ್ಲಿ ಇದೇ ಮೊದಲ ಬಾರಿ ''ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ'' ಅಕ್ಕಿ ವಿತರಣೆಯಲ್ಲಿ ಶ್ರೇಷ್ಠ ಗುಣಮಟ್ಟ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಮಾನದಂಡಗಳನ್ನು ರೂಪಿಸಲಾಗಿದೆ. ಈ ಮೂಲಕ ದೇಶದ 80 ಕೋಟಿಗೂ ಅಧಿಕ ಫಲಾನುಭವಿಗಳಿಗೆ ಗೌರವಯುತವಾಗಿ ಉತ್ತಮ ಗುಣಮಟ್ಟ ಮತ್ತು ಪೌಷ್ಟಿಕಯುತ ಆಹಾರ ದೊರೆಯುವಂತೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ತೆಗೆದುಕೊಂಡಿದೆ.

ಅಕ್ಕಿ ಪ್ರಮಾಣದಲ್ಲಿಲ್ಲ ಕಡಿತ

ದೇಶದ ಪ್ರತಿಯೊಂದು ಅರ್ಹ ಕುಟುಂಬವೂ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಲ್ಲಿ ಮೊದಲಿನಷ್ಟೇ ಪ್ರಮಾಣದ ಆಹಾರ ಧಾನ್ಯ ಪಡೆಯಲಿದೆ. ಇದರಲ್ಲಿ ಯಾವುದೇ ರೀತಿ ಕಡಿತ ಮಾಡಲಾಗಿಲ್ಲ. ಆದರೆ, ಗುಣಮಟ್ಟದಲ್ಲಿ ಮಾತ್ರ ಪರಿವರ್ತನೆ ತೋರಲಾಗಿದೆ. ಅದರಂತೆ ಇನ್ನು ಮುಂದೆ ಶೇ.90ರಿಂದ 95ರಷ್ಟು ಉತ್ಕೃಷ್ಟ ಗುಣಮಟ್ಟದ ಅಕ್ಕಿ ಪಡಿತರದಾರರ ಕೈಸೇರಲಿದೆ.

1.12 ಕೋಟಿ ಗಣತಿ ನಮೂನೆ ವಿತರಣೆ

•**ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ(ಎಸ್‌ಐಆರ್) ಪ್ರಕ್ರಿಯೆ ಕಳೆದ ಎರಡು ದಿನಗಳಿಗಿಂತ ಮೂರನೆ ದಿನವಾದ ಜು.2 ರಂದು ತೀವ್ರ ವೇಗಪಡೆದುಕೊಂಡಿದೆ. ರಾಜ್ಯದಲ್ಲಿ ಒಟ್ಟು 1.12 ಕೋಟಿ ಗಣತಿ ನಮೂನೆ(ಎನ್ಯುಮರೇಷನ್ ಫಾರಂ) ವಿತರಿಸಲಾಗಿದ್ದು, ಶೇ. 20.32 ರಷ್ಟು ಪ್ರಗತಿ ಕಂಡಿದೆ.

ಸಂಬಂಧಿಸಿದಂತೆ ಮನೆಮನೆ ಗಣತಿ ನಮೂನೆ(ಎನ್ಯುಮರೇಷನ್) (ಗಣತಿ) ಹಾಗೂ ಡಿಜಿಟಲೀಕರಣ ಪ್ರಕ್ರಿಯೆಯು ಬಿರುಸಿನಿಂದ ಸಾಗುತ್ತಿದೆ. ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಅಧಿಕೃತ ಮಾಹಿತಿ ಪ್ರಕಾರ, 16.06.2026ರ ಅನ್ವಯ ರಾಜ್ಯದಲ್ಲಿ ಒಟ್ಟು 1,12,65,893 ಎನ್ಯುಮರೇಷನ್ ಫಾರಂ ವಿತರಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ತಿಳಿಸಿದೆ. ಕಳೆದ 2 ದಿನದಲ್ಲಿ ಶೇ.9.87 ರಷ್ಟಿದ್ದ ಗಣತಿ ನಮೂನೆ ವಿತರಣೆ ಪ್ರಗತಿ, ಗುರುವಾರ ಒಂದೇ ದಿನ ಶೇ.10.45 ರಷ್ಟು ಏರಿಕೆ ಕಂಡು ಒಟ್ಟು ಶೇ. 20.32 ರಷ್ಟು ಪ್ರಗತಿ ಕಂಡಿದ್ದು ಆಶಾದಾಯಕ ಬೆಳವಣಿಗೆಯಾಗಿದೆ. ಕ್ಷೇತ್ರ ಪರಿಶೀಲನೆಯ ಸಂದರ್ಭದಲ್ಲಿ ಒಟ್ಟು 7,582 (ಶೇ. 0.01) ಮತದಾರರನ್ನು ಗೈರುಹಾಜರು, ಸ್ಥಳಾಂತರ, ಮರಣ, ನಕಲು ಮತ್ತು ಇತರರು ಅಡಿಯಲ್ಲಿ ಗುರುತಿಸಲಾಗಿದೆ ಎಂದು ಆಯೋಗ ಮಾಹಿತಿ ನೀಡಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಾಕೀತು

ಮನೆ ಮನೆಗೆ ಫಾರಂ ವಿತರಿಸಿ

•**ಬೆಂಗಳೂರು:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿ(ಬಿಎಲ್‌ಒ)ಗಳೇ ಮನೆ ಮನೆಗೆ ಹೋಗಿ ಗಣತಿ ನಮೂನೆ (ಎನ್ಯುಮರೇಶನ್ ಫಾರಂ) ವಿತರಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಾಕೀತು ಮಾಡಿದ್ದಾರೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಎಲ್‌ಒಗಳೇ ಮನೆ ಮನೆಗೆ ಹೋಗಿ ಗಣತಿ ನಮೂನೆ ವಿತರಿಸಬೇಕು. ಶಾಸಕರು ಹೇಳಿದರು ಎಂದು ಅವರಿಂದ ವಿತರಣೆ ಆಗಬಾರದು. ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಬೇಕಾದರೆ ಮತಗಟ್ಟೆ ಮಟ್ಟದ ಏಜೆಂಟ್ (ಬಿಎಲ್‌ಎ)ಗಳು ಜನರಿಂದ ಸಂಗ್ರಹಿಸಿ ಬಿಎಲ್‌ಒಗಳಿಗೆ ನೀಡಲು ಅವಕಾಶವಿದೆ ಎಂದು ತಿಳಿಸಿದರು.

ಕಲ್ಯಾಣ ಮಂಟಪಗಳಲ್ಲಿ ಗಣತಿ ನಮೂನೆ ವಿತರಣೆ ಮಾಡಲಾಗುತ್ತಿದೆ ಎಂಬ ಆರೋಪಗಳ ಬಗ್ಗೆ ಕೇಳಿದಾಗ, ಈ ವಿಚಾರ ನನ್ನ ಗಮನಕ್ಕೂ ಬಂದಿದೆ. ಇದು ಕಾನೂನು ಬಾಹಿರ. ಇದನ್ನು ಯಾರೇ ಮಾಡಿದರೂ ಅದಕ್ಕೆ ಅವಕಾಶ ನೀಡುವುದಿಲ್ಲ. ನಮ್ಮ ಶಾಸಕರು ಮಾಡಿದರೂ ನಾವು ಅದಕ್ಕೆ ಅವಕಾಶ ನೀಡುವುದಿಲ್ಲ. ಬಿಎಲ್‌ಒಗಳು ಮೂರು ಬಾರಿ ಮನೆಗೆ ಹೋಗಲು ಅವಕಾಶವಿದೆ ಎಂದು ಹೇಳಿದರು.

ಕುಮಾರಸ್ವಾಮಿ ಅವರು ರಾಮನಗರವನ್ನು ಉಲ್ಲೇಖಿಸಿ ಈ ಆರೋಪ ಮಾಡಿದ್ದಾರೆ ಎಂದಾಗ, ಜಯನಗರದಲ್ಲಿ ಬಿಜೆಪಿ ಶಾಸಕರು ಇದನ್ನೇ ಮಾಡುತ್ತಿದ್ದಾರೆ. ಎಲ್ಲೇ ಆದರೂ ಬಿಎಲ್‌ಒಗಳೇ ವಿತರಣೆ ಮಾಡಬೇಕು. ಜು.29ರವರೆಗೆ ಕಾಲಾವಕಾಶವಿದೆ. ಬಿಎಲ್‌ಒಗಳೇ ಮನೆಗೇ ಹೋಗಿ ಅರ್ಜಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸುತ್ತಿದ್ದೇನೆ ಎಂದರು.

ಎಸ್‌ಐಆರ್ ಪ್ರಕ್ರಿಯೆಯನ್ನು ನೀವು ಬಹಳ ಗಂಭೀರವಾಗಿ ಪರಿಗಣಿಸಿದ್ದೀರಿ ಎಂದು ಕೇಳಿದಾಗ, ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕನ್ನು ಕಾಪಾಡುವುದು ನಮ್ಮ ಸರ್ಕಾರದ ಜವಾಬ್ದಾರಿ. ಹೀಗಾಗಿ ಪ್ರತಿ ವಾರ್ಡ್ ಹಾಗೂ ಬೂತ್‌ನಲ್ಲಿ ಸಹಾಯ ಕೇಂದ್ರ ಸ್ಥಾಪಿಸಲು ಮುಂದಾಗಿದ್ದೇವೆ ಎಂದು ಉತ್ತರಿಸಿದರು.

ಸಂಪಾದಕೀಯ

ಭಾರತ- ಜಪಾನ್ ಸ್ನೇಹಕ್ಕೆ ಹೊಸ ದಿಕ್ಕು



ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಸನಾಯೆ ತಕೈಚಿ ನಡುವಿನ 16ನೇ ವಾರ್ಷಿಕ ಶೃಂಗಸಭೆಯು ಉಭಯ ರಾಷ್ಟ್ರಗಳ ಸಂಬಂಧವನ್ನು ಸಾಂಪ್ರದಾಯಿಕ ಮೂಲಸೌಕರ್ಯ ಸಹಕಾರದಿಂದ ತಂತ್ರಜ್ಞಾನ, ರಕ್ಷಣೆ ಮತ್ತು ಆರ್ಥಿಕ ಭದ್ರತೆಯ ಹೊಸ ಹಂತಕ್ಕೆ ಕೊಂಡೊಯ್ದಿದೆ. ಕೃತಕ ಬುದ್ಧಿಮತ್ತೆ, ಅರೆವಾಹಕ, ಕ್ವಾಂಟಂ ತಂತ್ರಜ್ಞಾನ, ನಿರ್ಣಾಯಕ ಖನಿಜಗಳು, ಶುದ್ಧ ಇಂಧನ, ಆರೋಗ್ಯ ಹಾಗೂ ರಕ್ಷಣಾ ಉತ್ಪಾದನೆ ಕುರಿತು ಕೈಗೊಂಡ ಒಪ್ಪಂದಗಳು ಕಾಲದ ಅಗತ್ಯಕ್ಕೆ ತಕ್ಕ ಹೆಜ್ಜೆಗಳಾಗಿವೆ.

ಜಾಗತಿಕ ಪೂರೈಕೆ ಸರಪಳಿಗಳು ಅಸ್ಥಿರವಾಗಿರುವ, ತಂತ್ರಜ್ಞಾನವೇ ರಾಷ್ಟ್ರಶಕ್ತಿಯ ಮಾನದಂಡವಾಗುತ್ತಿರುವ ಸಂದರ್ಭದಲ್ಲಿ ಭಾರತಕ್ಕೆ ಜಪಾನ್‌ನ ನಿಖರ ತಂತ್ರಜ್ಞಾನ ಮತ್ತು ಬಂಡವಾಳ ಅಗತ್ಯ. ಜಪಾನ್‌ಗೆ ಭಾರತದ ವಿಶಾಲ ಮಾರುಕಟ್ಟೆ, ತಂತ್ರಾಂಶ ಸಾಮರ್ಥ್ಯ, ಯುವ ಮಾನವ ಸಂಪನ್ಮೂಲ ಮತ್ತು ಉತ್ಪಾದನಾ ಅವಕಾಶಗಳು ಮುಖ್ಯ. ಈ ಪರಸ್ಪರ ಪೂರಕತೆಯನ್ನು ಕೇವಲ ಘೋಷಣೆಗಳಲ್ಲಿ ಉಳಿಸದೆ, ದೇಶೀಯ ಉದ್ಯಮ, ಸಂಶೋಧನಾ ಸಂಸ್ಥೆಗಳು ಮತ್ತು ನವೋದ್ಯಮಗಳಿಗೆ ನೇರ ಪ್ರಯೋಜನವಾಗುವಂತೆ ರೂಪಿಸಬೇಕು.

ನೌಕಾಪಡೆಯ ಯುನಿಕಾರ್ನ್ ರೇಡಿಯೊ ಆಂಟೆನಾ ಸಹ-ಅಭಿವೃದ್ಧಿ ಯೋಜನೆಯು ರಕ್ಷಣಾ ತಂತ್ರಜ್ಞಾನದಲ್ಲಿ ವಿಶ್ವಾಸದ ಹೊಸ ಅಧ್ಯಾಯವಾಗಿದೆ. ಹತ್ತು ಟ್ರಿಲಿಯನ್ ಯೆನ್ ಹೂಡಿಕೆ ಸೇರಿಯ ಗುರಿ, ಭಾರತದಲ್ಲಿರುವ ಜಪಾನ್ ಕಂಪನಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವ ಸಂಕಲ್ಪ ಮತ್ತು ಸಾವಿರ ಜೈವಿಕ ಅನಿಲ ಸಾವಯವ ಗೊಬ್ಬರ ಘಟಕಗಳ ಯೋಜನೆ ಉದ್ಯೋಗ, ಗ್ರಾಮೀಣ ಆದಾಯ ಹಾಗೂ ಇಂಧನ ಭದ್ರತೆಗೆ ಬಲ ನೀಡಬಲ್ಲವು. ಆದರೆ ಒಪ್ಪಂದಗಳ ಯಶಸ್ಸು ಅವುಗಳ ಅನುಷ್ಠಾನದಲ್ಲಿದೆ. ಭೂಸ್ವಾಧೀನ, ಅನುಮತಿ, ಕೌಶಲ್ಯ ಮತ್ತು ನೀತಿ ಸ್ಥಿರತೆಯ ಅಡೆತಡೆಗಳನ್ನು ಭಾರತ ತ್ವರಿತವಾಗಿ ನಿವಾರಿಸಬೇಕು. ಹಾಗೆಯೇ ಮುಕ್ತ ಹಾಗೂ ನಿಯಮಾಧಾರಿತ ಇಂಡೋಪೆಸಿಫಿಕ್‌ಗಾಗಿ ಭಾರತ-ಜಪಾನ್ ಸಹಭಾಗಿತ್ವವು ಯಾರ ವಿರುದ್ಧದ ಕೂಟವಲ್ಲ, ಬದಲಿಗೆ ಶಾಂತಿ, ಸಮೃದ್ಧಿ ಮತ್ತು ಸ್ವಾವಲಂಬಿ ಏಷ್ಯಾಕ್ಕೆ ಅಗತ್ಯವಾದ ಸಮತೋಲನ ಶಕ್ತಿಯಾಗಿದೆ.

ಇದರ ಜೊತೆಗೆ, ಉಭಯ ರಾಷ್ಟ್ರಗಳ ಜನರ ನಡುವಿನ ಸಂಪರ್ಕಕ್ಕೂ ಹೆಚ್ಚಿನ ಆದ್ಯತೆ ನೀಡಬೇಕು. ವಿದ್ಯಾರ್ಥಿ ವಿನಿಮಯ, ಕೌಶಲ್ಯ ತರಬೇತಿ, ಜಪಾನಿ ಭಾಷಾ ಶಿಕ್ಷಣ ಮತ್ತು ಸಂಯುಕ್ತ ಸಂಶೋಧನಾ ಯೋಜನೆಗಳು ದೀರ್ಘಕಾಲೀನ ಬಾಂಧವ್ಯಕ್ಕೆ ಭದ್ರ ನೆಲೆಯಾಗಲಿವೆ.

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಡುವೆ ನೇರ ಸಹಕಾರ ಬೆಳೆದರೆ, ಜಪಾನ್‌ನ ಗುಣಮಟ್ಟದ ಉತ್ಪಾದನಾ ಸಂಸ್ಕೃತಿ ಭಾರತದ ಉದ್ಯಮಶೀಲತೆಗೆ ಸೇರುತ್ತದೆ. ಇದರಿಂದ ಸ್ಥಳೀಯ ಉತ್ಪಾದನೆ, ರಫ್ತು ಮತ್ತು ಹೊಸ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಭಾರತ-ಜಪಾನ್ ಸ್ನೇಹದ ನಿಜವಾದ ಯಶಸ್ಸು ದೊಡ್ಡ ಘೋಷಣೆಗಳಲ್ಲಿ ಅಲ್ಲ, ನೆಲಮಟ್ಟದಲ್ಲಿ ಮೂಡುವ ಕಾರ್ಖಾನೆ, ಸಂಶೋಧನಾ ಕೇಂದ್ರ, ಉದ್ಯೋಗ ಮತ್ತು ಸುರಕ್ಷಿತ ಭವಿಷ್ಯದಲ್ಲಿ ಅಳೆಯಲ್ಪಡಬೇಕು.

ಪ್ರಜ್ವಲಿಸದ ಹೋಮ ವ್ಯರ್ಥ

ಅನಿಜ್ವಲಿತೇಽಗ್ನೌ ಹತೋ ಹೋಮೋ ಹತಾಧ್ಯಾತ್ಮಾರ್ಥಾ।
ಉಪಜೀವ್ಯಾ ಹತಾ ಕನ್ಯಾ ಸಾರ್ಥೇನ ಪಾಕ್ಕೈಯಾ ಹತಾ॥ - ಮಹಾಸುಭಾಷಿತ ಸಂಗ್ರಹ

ಅಗ್ನಿಯು ಪ್ರಜ್ವಲಿಸದಿದ್ದರೆ ಹೋಮ ಮಾಡಿದ್ದು ವ್ಯರ್ಥ, ಒಬ್ಬನೇ ಕುಳಿತು ಊಟ ಮಾಡಿದಲ್ಲಿ ಊಟ ಮಾಡಿದ್ದು ವ್ಯರ್ಥ. ಕನ್ಯೆಯಾದವಳು ಮತ್ತೊಬ್ಬರ ಆಶ್ರಯದಲ್ಲಿರುವುದು ಅವಳಿಗೆ ಕಷ್ಟ. ತನಗಾಗಿ ಅಡುಗೆ ಮಾಡಿದಲ್ಲಿ ಅದು ಹಾಳು – ಎಂಬುದು ಶ್ಲೋಕಾರ್ಥ.



ಯಜ್ಞ, ಯಾಗ, ಹೋಮ ಇವೆಲ್ಲ ಅಗ್ನಿಗೆ ಆಹುತಿ ಹಾಕುವ ಕ್ರಮವನ್ನು ಅವಲಂಬಿಸಿ ಬಂದ ಹೆಸರುಗಳು. ಅಗ್ನಿಗೆ ಏನನ್ನು ಹಾಕಿದರೂ ಅದು ಯಜ್ಞವಾಗುವುದಿಲ್ಲ. ಅದಕ್ಕೆ ಅದರದೇ ಆದ ವಿಧಾನವಿದೆ. ಮೇಲ್ನೋಟಕ್ಕೆ ಈ ಎಲ್ಲ ಹೆಸರುಗಳು ಒಂದೇ. ಇದೊಂದು ಪವಿತ್ರ ಕಾರ್ಯ. ಭಗವದಾರಾಧನೆಯ ಶ್ರೇಷ್ಠ ವಿಧಾನ. ಇಂತಹ ಧಾರ್ಮಿಕ ವಿಧಿ ನಡೆಯುವಲ್ಲಿ ಆಮಂತ್ರಣವಿಲ್ಲದಿದ್ದರೂ ತೆರಳಿ ಧನ್ಯತೆಯನ್ನು ಪಡೆದುಕೊಳ್ಳಬಹುದು.

ಲೋಕೋಕ್ತಿಯೊಂದು 'ಯಜ್ಞಂ ಗಚ್ಛೇತ್ ಅನಾಹೂತಃ' ಎಂದು ಹೇಳುತ್ತದೆ. ಯಜ್ಞದ ಮಹಿಮೆಯನ್ನು ಹೇಳುವಾಗ ''ಯಜ್ಞೇನ ದೇವಾ ಅದಾಮ ಯಜ್ಞಂ'' ಎಂಬ ಮಾತನ್ನು ಯಜ್ಞಫಲ ಎಂಬ ನಾಟಕದಲ್ಲಿ ನೋಡುತ್ತೇವೆ. ಜ್ಞಾನ ಯಜ್ಞ, ತಪೋಯಜ್ಞ ಇತ್ಯಾದಿ ಯಜ್ಞ ಶಬ್ದದ ವ್ಯಾಪ್ತಿಯನ್ನು ಗೀತೆಯಲ್ಲಿ ಹೇಳಲಾಗಿದೆ. ಹೀಗಿದ್ದರೂ ಅಗ್ನಿ ಮಂತ್ರ ಪುರಸ್ಸರವಾಗಿ ದ್ರವ್ಯಾಹುತಿಯನ್ನು ನೀಡುವುದನ್ನು ಯಜ್ಞವೆಂದು ಪರಿಗಣಿಸುವುದು ಬಹು ಜನರ ಕಲ್ಪನೆಯಾಗಿದೆ. ಹೀಗೆ ಅಗ್ನಿಗೆ ಆಹುತಿಯನ್ನು ಹಾಕುವಾಗ ಅಥವಾ ಹಾಕಿದಾಗಲಗ್ನಿ ಚೆನ್ನಾಗಿ ಪ್ರಜ್ವಲಿಸಬೇಕು. ಕೇವಲ ಹೊಗೆಯೇರಬಾರದು. ಪದೇಪದೇ ಗಾಳಿ ಹಾಕಿ ಅಗ್ನಿಯು ಜ್ವಲಿಸುವಂತೆ ಮಾಡಬಾರದು. ಈ ಬಗ್ಗೆ ಯಜ್ಞದೀಕ್ಷಿತರಾದವರೆಲ್ಲರೂ ಎಚ್ಚರಿಕೆ ವಹಿಸಬೇಕು. ಸಾಕಷ್ಟು ಹೋಮದ ಕಟ್ಟಿಗೆ, ತುಪ್ಪ.... ಇತ್ಯಾದಿ ಸಮರ್ಪಿಸಿ ಪ್ರಸನ್ನಗೊಳಿಸಬೇಕು. ಅದಿಲ್ಲದೇ ಅಲ್ಪಸ್ವಲ್ಪ ಹಾಕಿ ಹೊಗೆಯೆಬ್ಬಿಸುವುದು, ಅರ್ಧದಲ್ಲೇ ನಂದಿಹೋಗುವುದು, ದ್ರವ್ಯಗಳ ಕೊರತೆ, ನಿಗದಿತ ದ್ರವ್ಯವನ್ನು ಬಿಟ್ಟು ಇನ್ನಾವುದೇ ದ್ರವ್ಯದ ಬಳಕೆ – ಇವುಗಳಿಂದ ಯಜ್ಞ ನಿಷ್ಫಲವೆನಿಸುತ್ತದೆ.

ಯಾವಾಗಲೂ ಒಬ್ಬನೇ ಕುಳಿತು ಊಟಮಾಡಬಾರದು. ಟಿವಿ ನೋಡುತ್ತಾ ಮೊಬೈಲ್‌ನಲ್ಲಿ ಆಡುತ್ತಾ, ಹರಟುತ್ತಾ ಊಟ ಮಾಡಿದರೆ ವ್ಯರ್ಥ. ಮನೆಮಂದಿ, ಬಂದ ಅತಿಥಿಗಳು ಒಟ್ಟಾಗಿ ಕುಳಿತು ಊಟ ಮಾಡಬೇಕು. ಈ ರೀತಿ ಸಾಮೂಹಿಕ ಊಟ ಮಾಡುವುದು ಅಂತರಾತ್ಮನಿಗೆ ನೀಡುವ ಆಹುತಿ ಎಂಬುದನ್ನು ಮರೆಯಬಾರದು. ಇವೆಲ್ಲವನ್ನು ಬಿಟ್ಟು ಯಾವ ಕ್ರಮವಿಲ್ಲದೆ ಒಬ್ಬನೇ ಊಟ ಮಾಡುವುದು ಒಳ್ಳೆಯದಲ್ಲ, ಇಂತಹ ಊಟ ವ್ಯರ್ಥ. ಮನೆಯ ಮಗಳು (ಕನ್ಯೆ) ಮೂರನೆಯವರ ಆಶ್ರಯದಲ್ಲಿರಬಾರದು, ಬೆಳೆಯಬಾರದು. ಮತ್ತೊಬ್ಬರ ಆಶ್ರಯದಲ್ಲಿ ಬೆಳೆದರೆ ಅವರ ಗುಣಧರ್ಮಗಳೇ ಮೈದಾಳುತ್ತವೆಯೇ ವಿನಾ ಹೆತ್ತವರ ಯಾ ಹೆತ್ತ ಮನೆಯ ಸಂಸ್ಕಾರ, ಸಂಪ್ರದಾಯಗಳು ಬರುವುದಿಲ್ಲ. ಪರರ ಮನೆಯಲ್ಲಿ ಬೆಳೆದರೆ ಸಾಕಷ್ಟು ಬೇಡದ ವಿಚಾರಗಳು ಗಂಟಿಬಿಡುತ್ತವೆ. ಇದರಿಂದ ಹೆತ್ತವರಿಗೂ, ಅವಳಿಗೂ ಮುಜುಗರ ತಪ್ಪಿದ್ದಲ್ಲ. ಅಡುಗೆ ಮಾಡುವಾಗ ತನಗಾಗಿ ಮಾಡದೆ ತಮಗಾಗಿ ಮಾಡಬೇಕು. ಮನೆಗೆ ಯಾರಾದರೂ ಬಂದಾರು, ಅವರಿಗಾಗಿ ಸ್ವಲ್ಪ ಇರಲಿ ಎಂದೆನಿಸಿ ಸ್ವಲ್ಪ ಹೆಚ್ಚು ಅಡುಗೆ ಮಾಡಬೇಕು. ಮನೆಗೆ ಯಾರಾದರೂ ಬಂದರೆ ಅವರು 'ಅತಿಥಿ ದೇವೋಭವ' ಎಂದು ಭಾವಿಸಿ ಇಕ್ಕುವುದರಿಂದ ಪುಣ್ಯ ಬರುತ್ತದೆ. ಅತಿಥಿಗಳಿಗೆ ನೀಡಿ ಉಣ್ಣಬೇಕು ಎಂಬುದು ಸನಾತನ ಚಿಂತನೆ. ತನಗಾಗಿ ಮಾತ್ರ ಮಾಡಿಕೊಂಡರೆ ಅದು ಹಾಳು, ವಿಷ. ಬೇರೆಯವರಿಗಾಗಿಯೂ ಮಾಡಿದರೆ ಅದು ಒಳಿತು ಮಾಡುತ್ತದೆ, ಅಮೃತವೆನಿಸುತ್ತದೆ. ಈ ಅಂಶಗಳನ್ನು ಗಮನಿಸಿ ಬದುಕಿನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದರೆ ಒಳಿತಾಗುತ್ತದೆ.

ವರ್ಣಭೇದದ ಗೋಡೆಯಾಚೆ, ಗುರಿಯತ್ತ ಕಪ್ಪು ಹೆಜ್ಜೆ

ಉಫೇ ವೀರಭೂಮಿಗೆ
ಸಂತೋಷ್ ತಮ್ಮಯ್ಯ
santoshthammaiah@gmail.com



1982ರ ಜೂನ್ 25. ಇಂದಿನಂತೆ ಅದು ಕೂಡ ಫಿಫಾ ವಿಶ್ವಕಪ್ ಕಪ್ ಫುಟ್‌ಬಾಲ್ ರಣರಂಗವಾಗಿದ್ದ ಹೊತ್ತು. ಲೀಗ್ ಪಂದ್ಯಗಳೆಲ್ಲವೂ ಮುಗಿದು ನಾಕೌಟ್ ಸುತ್ತುಗಳು ಆರಂಭವಾಗಿದ್ದವು. ಸ್ಪೇನಿನ ಗಿಜೋನ್ ನಗರದಲ್ಲಿ ಪಶ್ಚಿಮ ಜರ್ಮನಿ ಮತ್ತು ಆಸ್ಟ್ರೀಯ ತಂಡಗಳ ನಡುವೆ ಪಂದ್ಯ ನಡೆಯುತ್ತಿತ್ತು. ಹಾಗೆ ನೋಡಿದರೆ ಆವೆರಡು ತಂಡಗಳಿಗೆ ಅದೇನೂ ಮಹತ್ತ್ವದ ಪಂದ್ಯವಲ್ಲ. ಎರಡೂ ತಂಡಗಳೂ ತಮ್ಮ ಅಂಕಗಳಿಂದ ಮುಂದಿನ ಹಂತಕ್ಕೆ ಪ್ರವೇಶವನ್ನು ಪಡೆದಿದ್ದವು. ಕುತೂಹಲವೆಂದರೆ ಜರ್ಮನಿ ಮತ್ತು ಆಸ್ಟ್ರೀಯ ನಡುವಿನ ಪಂದ್ಯದಲ್ಲಿ ದಾಖಲಾಗುವ ಗೋಲಿನ ಆಧಾರದಲ್ಲಿ ಅಲ್ಜೀರಿಯಾ ತಂಡದ ಭವಿಷ್ಯ ನಿರ್ಧಾರವಾಗಿತ್ತು. ಈ ಪಂದ್ಯದಲ್ಲಿ ಪಶ್ಚಿಮ ಜರ್ಮನಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಗೋಲುಗಳನ್ನು ಗಳಿಸಿದ್ದರೆ ಅಲ್ಜೀರಿಯಾ ಮುಂದಿನ ಸುತ್ತಿಗೆ ಸುಲಭವಾಗಿ ಹೋಗುತ್ತಿತ್ತು. ಪಂದ್ಯಾವಳಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದ ಅಲ್ಜೀರಿಯಾ ಪಂದ್ಯದ ಫಲಿತಾಂಶವನ್ನು ಕಾಯುತ್ತಾ ಕುಳಿತಿತ್ತು. ಆದರೆ ಪಂದ್ಯ ಆರಂಭವಾದ ಹತ್ತನೆ ನಿಮಿಷದಲ್ಲಿ ಪ.ಜರ್ಮನಿಯ ಹೋಸ್ಟ್ ಹ್ರೂಬೆಶ್ ಗೋಲು ದಾಖಲಿಸಿದರು. ಕಳೆದಿದ್ದು ಕೇವಲ ಹತ್ತೇ ನಿಮಿಷ, ಮೈದಾನದ ಹೊರಗೆ ಅಲ್ಜೀರಿಯಾ ಆಟಗಾರರು, ಜರ್ಮನಿ ಇನ್ನೊಂದಾದರೂ ಗೋಲು ಬಾರಿಸದಿದ್ದೀತೇ ಎಂದು ಕಾಯತೊಡಗಿದರು. ಆದರೆ ಮೈದಾನದಲ್ಲಿ ಆಗಿದ್ದೇ ಬೇರೆ. ಎರಡೂ ತಂಡಗಳ ಆಟಗಾರರು ನಾಚಿಕೆ, ಮರ್ಯಾದೆಗಳನ್ನು ಬಿಟ್ಟು ಕಾಲಹರಣ ಮಾಡತೊಡಗಿದರು. ಪರಸ್ಪರ ಪಾಸ್‌ಗಳನ್ನು ನೀಡುತ್ತಾ ಮಕ್ಕಳಾಟ ಆಡತೊಡಗಿದರು. ಕೊನೆಯ ಸೆಕೆಂಡ್ ವರೆಗೂ ಚೆಂಡು ಯಾರ ಗೋಲುಪೆಟ್ಟಿಗೆಯ ಸಮೀಪಕ್ಕೂ ಸುಳಿಯಲಿಲ್ಲ. ಅಂಕಪಟ್ಟಿಯತ್ತ ದಿಟ್ಟಿಸುತ್ತಿದ್ದ ಅಲ್ಜೀರಿಯನ್ ಆಟಗಾರರಿಗೆ ಅಷ್ಟರಲ್ಲಿ ಎಲ್ಲವೂ ತಿಳಿದುಹೋಗಿತ್ತು. ಅಂತಿಮ ಸಮಯ ಮುಗಿದಾಗ ಪ.ಜರ್ಮನಿ-1, ಆಸ್ಟ್ರಿಯಾ-0 ಎಂದು ಫಲಿತಾಂಶವನ್ನು ಘೋಷಿಸಲಾಯಿತು. ಈ ಪಂದ್ಯ ಜಗತ್ತಿನ ಫುಟ್‌ಬಾಲ್ ಪ್ರೀಯರನ್ನು ಎಷ್ಟು ಘಾಸಿಗೊಳಿಸಿತ್ತೆಂದರೆ ವಿಶ್ವಾದ್ಯಂತ ಟೀಕೆಗಳು ವ್ಯಕ್ತವಾದವು. ಸ್ವತಃ ಅಲ್ಜೀರಿಯಾ ಫಿಫಾಕ್ಕೆ ದೂರನ್ನು ನೀಡಿತು. ಕ್ರೀಡೆಯನ್ನು ತನ್ನ ನಾಗರಿಕತೆಯ ಅಸ್ಮಿತೆ ಎಂದು ಭಾವಿಸುವ ಆತಿಥೇಯ ಸ್ಪೇನ್ ಸ್ಥಳದಲ್ಲೇ ಪ್ರತಿಭಟನೆಯನ್ನು ಸಲ್ಲಿಸಿತು. ಆದರೆ ಏನೆಂದರೆ ಏನೂ ಆಗಲಿಲ್ಲ. ಫಿಫಾದ ಮೂಗಿನಡಿಯಲ್ಲೇ ಅದರ ಧ್ಯೇಯೋದ್ದೇಶಗಳು ಮಣ್ಣಾದವು. ಈ ಘಟನೆಯನ್ನು ಇಂದಿಗೂ ಜಗತ್ತು Disgrace of Gijón, ವಿಶ್ವಕಪ್ ಫುಟ್‌ಬಾಲಿನ ಕಪ್ಪುಚುಕ್ಕೆ, ಕಳಂಕ ಎಂದು ಕರೆಯುತ್ತದೆ. ಈ ಘಟನೆಯ ನಂತರ ಫಿಫಾ ಅನೇಕ ವಿಶ್ವಕಪ್‌ಗಳನ್ನು ಆಯೋಜಿಸಿದೆ. ಪ್ರತೀ ವಿಶ್ವಕಪ್ ವೇಳೆಯಲ್ಲೂ ಅದು ಇಂಥದ್ದೊಂದು ಪಂದ್ಯ ಮತ್ತೆ ನಡೆಯಬಾರದೆಂದು ಎಚ್ಚರ ವಹಿಸುತ್ತದೆ.

ಫಿಫಾದ ಆಶಯದಂತೆ ಅಂಥದ್ದೊಂದು ಘಟನೆ ಮತ್ತೆ ನಡೆದಿಲ್ಲ. ಫಿಫಾ ಅದನ್ನೇ ತನ್ನ ಸಾಧನೆ ಎಂದುಕೊಳ್ಳುತ್ತದೆ. ಆದರೆ ಜಗತ್ತಿನ ಪ್ರಜ್ಞಾವಂತರು ಆ ಘಟನೆಯನ್ನು ಅಷ್ಟಕ್ಕೇ ಬಿಡಲಿಲ್ಲ. ಪ.ಜರ್ಮನಿ ಮತ್ತು ಆಸ್ಟ್ರೀಯಗಳು ಅಲ್ಜೀರಿಯಾವನ್ನು ಮುಂದಿನ ಸುತ್ತಿಗೆ ಹೋಗದಂತೆ ತಡೆದ ಮಾನಸಿಕತೆ ಯಾವುದು ಎಂದು ವಿಶ್ವ ಫುಟ್‌ಬಾಲ್ ಪ್ರೇಮಿಗಳು ಕಾರಣ ಹುಡುಕಿದರು. ಅದಕ್ಕೆ ಆಟಗಾರರ ಆಫ್ರಿಕಾ ಮೂಲ, ಕಪ್ಪು ವರ್ಣೀಯರೆಂಬ ತಾತ್ಸಾರ ಮತ್ತು ಬಿಳಿಯ ಐರೋಪ್ಯರ ಅಹಂಕಾರವೇ ಕಾರಣ ಎಂದು ಹೋರಾಟ ನಡೆಸಿದರು. ಅದು ನಿಜ ಕೂಡ ಆಗಿತ್ತು. ಏಕೆಂದರೆ ಪಶ್ಚಿಮ ಜರ್ಮನಿಗಾಗಲಿ, ಆಸ್ಟ್ರೀಯಕ್ಕಾಗಲಿ ಅಲ್ಜೀರಿಯವನ್ನು ಪಂದ್ಯಾವಳಿಯಿಂದ ಹೊರಗಿಡಲು ವರ್ಣದ ಹೊರತಾದ ಬೇರಾವ ಕಾರಣಗಳೂ ಇರಲಿಲ್ಲ. ಆದರೆ ಫಿಫಾ ಅದನ್ನು ಎರಡು ತಂಡಗಳ ರಣತಂತ್ರ ಎಂದು ಭಾವಿಸಿ ಕೈತೊಳೆದುಕೊಳ್ಳಲು ಹವಣಿಸಿತು. ಫುಟ್‌ಬಾಲಿನಲ್ಲಿ ವರ್ಣೀಯ ತಾರತಮ್ಯದ ಪ್ರಕರಣ ಅದು ಮೊದಲೇನೂ ಆಗಿರಲಿಲ್ಲ. 1910ರಿಂದ 1991ರವರೆಗೆ ದಕ್ಷಿಣ ಆಫ್ರಿಕಾ ಫುಟ್ಬಾಲ್‌ನಲ್ಲಿ ಕಪ್ಪು ಮತ್ತು ಬಿಳಿ ಜನಾಂಗಗಳಿಗೆ ಪ್ರತ್ಯೇಕ ಲೀಗ್‌ಗಳಿದ್ದವು. ಅಲ್ಲಿ ಕಪ್ಪು ಜನಾಂಗದವರಿಗೆ ಫುಟ್ಬಾಲ್ ಅಸೋಸಿಯೇಶನ್ ಆಫ್ ಸೌತ್ ಆಫ್ರಿಕಾ (FASA)ದಲ್ಲಿ ಆಡಲು ಅವಕಾಶ ನೀಡಲಾಗುತ್ತಿರಲಿಲ್ಲ. FASAದ ವಿರುದ್ಧ ವಿಶ್ವಾದ್ಯಂತ ಪ್ರತಿಭಟನೆಗಳಾದನಂತರ 1961ರಲ್ಲಿ ಅದನ್ನು ನಿಷೇಧಿಸಲಾಯಿತು. ನಿಷೇಧದ ಸುದೀರ್ಘ ಅವಧಿಯಲ್ಲಿ ದಕ್ಷಿಣ ಆಫ್ರಿಕಾದ ಅದೆಷ್ಟೋ ಫುಟ್‌ಬಾಲ್ ಪ್ರತಿಭೆಗಳು ಕಮರಿಹೋದವು. ಜೊತೆಗೆ ನಮೀಬಿಯಾ, ಜಿಂಬಾಬ್ವೆ, ಬೋಟ್ಸ್ವಾನಾ, ಲೆಸೋಥೊ, ಸ್ವಾಜಿಲ್ಯಾಂಡ್ ಮುಂತಾದ ದೇಶಗಳು ವಸಾಹತುಶಾಹಿ ಮತ್ತು ವರ್ಣಭೇದದ ಪ್ರಭಾವದಿಂದ ಅವಕಾಶಗಳನ್ನು ಕಳೆದುಕೊಂಡವು. ಈ ಎಲ್ಲಾ ಉದಾಹರಣೆಗಳು ಕಣ್ಣಮುಂದಿದ್ದರೂ ಫಿಫಾ ಅಂದು ಪ.ಜರ್ಮನಿ ಮತ್ತು ಆಸ್ಟ್ರೀಯವನ್ನು ನಿಷೇಧಗೊಳಿಸಿರಲಿಲ್ಲ! Disgrace of Gijón ಪ್ರಕರಣವನ್ನು ಜಗತ್ತೇ ಚರ್ಚಿಸಿದರೂ ಮುಂದಕ್ಕೂ ಫುಟ್‌ಬಾಲ್ ಅಂಕಣದಲ್ಲಿ ವರ್ಣಭೇದದ ಘಟನೆಗಳು ಕಡಿಮೆಯಾಗಲಿಲ್ಲ. ಹೇಳಬೇಕೆಂದರೆ ಹೆಚ್ಚೇ ನಡೆಯತೊಡಗಿದವು. 1984ರಲ್ಲಿ ನಡೆದ ಡರ್ಬಿ ಡೆಲ್ಲಾ ಮೋಲೆ ಎಂಬ ಪಂದ್ಯಾಳಿಯಲ್ಲಿ ಟೊರಿನೋ ತಂಡದ ಪರ ಆಡುತ್ತಿದ್ದ ಬ್ರೆಜಿಲಿಯನ್ ಮಿಡ್‌ಫೀಲ್ಡರ್ ಲೀಯೋ ಜೂನಿಯರ್ ವಿರುದ್ಧ ಯುವೆಂಟಸ್ ತಂಡದ ಬೆಂಬಲಿಗರು ಜನಾಂಗೀಯ ನಿಂದನೆಯ ಬ್ಯಾನರ್‌ಗಳನ್ನು ಪ್ರದರ್ಶಿಸಿದರು. ಆಟಗಾರನ ತಾಯಿಯ ಮೇಲೆ ಉಗುಳಿ ಇಟಲಿಯನ್ನರು ದುಷ್ಕೃತ್ಯ ಮೆರೆದರು. ಫುಟ್‌ಬಾಲ್ ಇತಿಹಾಸದಲ್ಲಿ ಅದು ಲೀಯೋ ಜೂನಿಯರ್ ಪ್ರಕರಣ ಎಂದೇ ಕುಖ್ಯಾತವಾಯಿತು! 1989ರಲ್ಲಿ ಇಟಲಿಯ ಉಡಿನೀಸ್ ಕ್ಲಬ್ ಇಸ್ರೇಲ್‌ನ ಸ್ಟ್ರೈಕರ್ ರೊನ್ನಿ ರೊಸೆಂತಾಲ್ ಅವರನ್ನು ದೊಡ್ಡ ಮೊತ್ತಕ್ಕೆ ಖರೀದಿಸಲು ಮುಂದಾದಾಗ ಇಟಲಿಯನ್ನರು ಕ್ಲಬ್ ಅಧ್ಯಕ್ಷರಿಗೆ ಸ್ವಸ್ತಿಕ ಚಿಹ್ನೆಯುಳ್ಳ ಬೆದರಿಕೆ ಪತ್ರ ಕಳುಹಿಸಿ, ಯಹೂದಿ ಆಟಗಾರನನ್ನು ಸೇರಿಸಿಕೊಳ್ಳದಂತೆ ಒತ್ತಡ ಹೇರಿದರು. ಬೆದರಿಕೆಗೆ ಹೆದರಿ ಕ್ಲಬ್ ಇಸ್ರೇಲಿ ಆಟಗಾರನನ್ನು ಕೈಬಿಟ್ಟಿತು. 1992-93ರಲ್ಲಿ ಸೀರಿಸ್ ಎ ಲೀಗ್‌ನಲ್ಲಿ ಆಡುತ್ತಿದ್ದ ಡಚ್ ಕಪ್ಪು ಆಟಗಾರರಾದ ರೂಡ್ ಗುಲ್ಲಿಟ್ ಮತ್ತು ಆರನ್ ವಿಂಟರ್ ಜನಾಂಗೀಯ ನಿಂದನೆಗಳನ್ನು ಅನುಭವಿಸಬೇಕಾಯಿತು. 1996ರಲ್ಲಿ ಡಚ್ ಕ್ಲಬ್ ಆಟಗಾರ ಮೈಕೆಲ್ ಫೇರಿಯರ್ ಅವರನ್ನು ತಂಡಕ್ಕೆ ಸೇರಿಸಿಕೊಂಡಾಗ, ಆ ಕ್ಲಬ್‌ನ ಉಗ್ರ ಅಭಿಮಾನಿಗಳು ಕಪ್ಪು ಬೊಂಬೆಯೊಂದನ್ನು ಕ್ರೀಡಾಂಗಣದಲ್ಲಿ ನೇಣುಹಾಕಿ, 'ಇವನಿಗೆ ಕ್ರೀಡಾಂಗಣ ಸ್ವಚ್ಛಗೊಳಿಸುವ ಕೆಲಸ ಕೊಡಿ!' ಎಂಬ ಬ್ಯಾನರ್ ಪ್ರದರ್ಶಿಸಿದ್ದರು. 1995-1997ರಲ್ಲಿ ಇಂಟರ್ ಮಿಲನ್ ಪರ ಆಡುತ್ತಿದ್ದ ಇಂಗ್ಲೆಂಡ್‌ನ ಪಾಲ್ ಇನ್ಸ್ ತಮಗೆ ಇಟಲಿಯಲ್ಲಿ ಎದುರಾದ ಬಹಿರಂಗ ಜನಾಂಗೀಯ ನಿಂದನೆಗಳ ಬಗ್ಗೆ ಫಿಫಾಕ್ಕೆ ದೂರಿತ್ತರು. 2005ರಲ್ಲಿ ಇಂಟರ್ ಮಿಲನ್ ಅಭಿಮಾನಿಗಳ ಜನಾಂಗೀಯ ನಿಂದನೆಯಿಂದ ಬೇಸತ್ತ ಮೆಸ್ಸಿನಾ ತಂಡದ ಮಾರ್ಕೊ ಜೊರೊ ಪಂದ್ಯದ ಮಧ್ಯದಲ್ಲೇ ಹೊರನಡೆದರು. 2009-2015ರಲ್ಲಿ ಘಾನಾ ಮೂಲದ ಇಟಲಿ ಆಟಗಾರ ಮಾರಿಯೋ ಬಾಲೊಟೆಲ್ಲಿ ಯುವೆಂಟಸ್ ಅಭಿಮಾನಿಗಳಿಂದ ಜನಾಂಗೀಯ ನಿಂದನೆಗೆ ಒಳಗಾದರು. 2014ರಲ್ಲಿ ಅಟ್ಲಾಂಟಾ ವಿರುದ್ಧದ ಪಂದ್ಯದಲ್ಲಿ ಎಸಿ ಮಿಲನ್‌ನ ಕಪ್ಪು ಆಟಗಾರರಾದ ಕೆವಿನ್ ಕಾನ್ಸ್ಟಂಟ್ ಮತ್ತು ನೈಜೆಲ್ ಡಿ ಜೊಂಗ್ ಅವರ ಮೇಲೆ ಅಭಿಮಾನಿಗಳು ಬಾಳೆಹಣ್ಣುಗಳನ್ನು ಎಸೆದರು. ಹೀಗೆ ಪ್ರತೀ ವರ್ಷ ಯೂರೋಪಿನಲ್ಲಿ ನಡೆಯುವ ಕ್ಲಬ್ ಪಂದ್ಯಗಳಲ್ಲಿ ಜನಾಂಗೀಯ ನಿಂದನೆಯ ಅಸಂಖ್ಯಾತ ಪ್ರಕರಣಗಳು ನಡೆಯುತ್ತಿರುತ್ತವೆ. ಎಲ್ಲಾ ಪ್ರಕರಣಗಳನ್ನು ಫಿಫಾ ತನಿಖೆಗೆ ಆದೇಶಿಸುತ್ತದೆ. ಆದರೆ ಮತ್ತೆಮತ್ತೆ ಪ್ರಕರಣಗಳು ನಡೆಯುತ್ತಲೇ ಇರುತ್ತವೆ.

2022ರ ಕತಾರ್ ವಿಶ್ವಕಪ್ ಫೈನಲ್‌ನಲ್ಲಿ ಫ್ರಾನ್ಸ್ ತಂಡವು ಅರ್ಜೆಂಟೀನಾ ವಿರುದ್ಧ ಸೋತಾಗ, ಫ್ರಾನ್ಸ್‌ನ ಕೀಲಿಯನ್ ಎಂಬಾಪೆ, ಕಿಂಗ್ಸ್ಲೆ ಕೋಮನ್ ಮತ್ತು ಔರೆಲಿಯನ್ ಚೌಮೇನಿಯಂತಹ ಆಫ್ರಿಕನ್ ಮೂಲದ ಕಪ್ಪು ಆಟಗಾರರನ್ನು ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರವಾಗಿ ನಿಂದಿಸಲಾಯಿತು. ಅವರ ಫೋಟೋಗಳ ಕೆಳಗೆ ಮಂಗ ಮತ್ತು ಬಾಳೆಹಣ್ಣಿನ ಎಮೋಜಿಗಳನ್ನು ಹಾಕಿ ಜನಾಂಗೀಯ ದ್ವೇಷ ಕಾರಲಾಯಿತು. ಯುರೋಪ್ ಮತ್ತು ದಕ್ಷಿಣ ಅಮೆರಿಕಾದಲ್ಲಿ ನಡೆದ ಹಲವು ವಿಶ್ವಕಪ್ ಅರ್ಹತಾ ಪಂದ್ಯಗಳಲ್ಲಿ ಮತ್ತು ಮುಖ್ಯ ಪಂದ್ಯಾವಳಿಗಳಲ್ಲಿ ಆಫ್ರಿಕನ್ ಆಟಗಾರರು ಮೈದಾನಕ್ಕಿಳಿದಾಗ ಪ್ರೇಕ್ಷಕರು ಮಂಗನಂತೆ ಸದ್ದು ಮಾಡುವುದು ಮತ್ತು ಅವರ ಮೇಲೆ ಬಾಳೆಹಣ್ಣು ಎಸೆಯುವಂತಹ ವಿಕೃತ ಘಟನೆಗಳು ಇಂದಿಗೂ ನಡೆಯುತ್ತವೆ. ಈ ಎಲ್ಲಾ ನಿಂದನೆಗಳು ಅಭಿಮಾನಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಬಿಳಿಯರ ಅಹಂಕಾರದ ಧೋರಣೆ ಅದೆಷ್ಟು ಆಳದಲ್ಲಿವೆ ಎಂದರೆ ಇಂದಿಗೂ ಪಾಶ್ಚಾತ್ಯ ಪತ್ರಿಕೆಗಳಲ್ಲಿ ಆಫ್ರಿಕನ್ ತಂಡಗಳು ಗೆದ್ದಾಗ 'ವೇಗ, ದೈಹಿಕ ಶಕ್ತಿ ಮತ್ತು ನೈಸರ್ಗಿಕ ಸಾಮರ್ಥ್ಯ' ಎಂದು ಬಿಂಬಿಸುವ ವಿಮರ್ಶೆಗಳು, ಐರೋಪ್ಯರ ವಿಜಯವನ್ನು 'ತಂತ್ರಜ್ಞಾನ, ಶಿಸ್ತು, ಬುದ್ಧಿವಂತಿಕೆ ಮತ್ತು ರಣತಂತ್ರ' ಎಂದು ಬಣ್ಣಿಸುತ್ತವೆ. ಇವೆಲ್ಲ ಹಳೆಯ ಘಟನೆಗಳಾಗಿರಬಹುದು. ಕಳೆದ ಸೋಮವಾರ ನಡೆದ ಪಂದ್ಯದಲ್ಲಿ ನೆದರ್ಲ್ಯಾಂಡ್ಸ್‌ನ ಮೂವರು ಕಪ್ಪು ವರ್ಣೀಯ ಆಟಗಾರರು ಮೊರಾಕ್ಕೊ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ ವಿಫಲವಾದರು. ಆಗ ಕೂಡ ಆ ಮೂವರು ಜನಾಂಗೀಯ ನಿಂದನೆಗಳಿಗೆ ಒಳಗಾಗಿದ್ದರು ಎಂದರೆ ಇಷ್ಟು ವರ್ಷ ಫಿಫಾ ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳೇನು? ಫಿಫಾ ಕೂಡ ಬಿಳಿಯರ ಪಾರಮ್ಯ ಪ್ರದರ್ಶನಕ್ಕಿರುವ ಒಂದು ಸಾಧನವೇ ಎಂಬ ಸಂದೇಹ ಬರದಿರದು.

ವ್ಯಕ್ತಿ ಅಥವಾ ಜನಾಂಗವನ್ನು ಅವಕಾಶಗಳಿಂದ ವಂಚಿತನನ್ನಾಗಿ ಮಾಡಬಹುದು, ಆದರೆ ಸಾಮರ್ಥ್ಯವನ್ನಾಗದು. ಇಂದು ಯೂರೋಪಿನ ಬಹುತೇಕ ತಂಡಗಳಲ್ಲಿ ಕಪ್ಪು ವರ್ಣೀಯ ಆಟಗಾರರೇ ನಿರ್ಣಾಯಕರು. ನೆದರ್ಲ್ಯಾಂಡ್ ತಂಡದಲ್ಲಿ ಶೇ.60, ಸ್ಪೇನ್‌ನಲ್ಲಿ ಶೇ. 25, ಇಂಗ್ಲೆಂಡ್‌ನಲ್ಲಿ ಶೇ.30, ಫ್ರಾನ್ಸ್‌ನಲ್ಲಿ ಶೇ.60, ಜರ್ಮನಿಯಲ್ಲಿ ಶೇ.10 ಮತ್ತು ಬೆಲ್ಜಿಯಂ ತಂಡದಲ್ಲಿ ಶೇ. 10ರಷ್ಟು ಆಟಗಾರರು ಕಪ್ಪು ವರ್ಣೀಯರು. ದಶಕಗಳ ಹಿಂದೆ ಆಫ್ರಿಕಾ ದೇಶಗಳನ್ನು ವಂಚಿಸಿದ ಪರಿಣಾಮವಾಗಿ ಅಲ್ಲಿನ ಪ್ರತಿಭೆಗಳು ಯೂರೋಪಿಗೆ ವಲಸೆ ಹೋದವು ಅಥವಾ ಅವಕಾಶ ವಂಚಿತರನ್ನಾಗಿಸಿ ಅವರನ್ನು ಯೂರೋಪಿಗೆ ಕರೆಸಿಕೊಳ್ಳಲಾಗಿತ್ತು. ಅನಂತರ ಫಿಫಾ ಐರೋಪ್ಯ ದೇಶಗಳಿಗೆ ಆದ್ಯತೆಯನ್ನು ನೀಡುತ್ತಾ ಬಂತು. ಆದರೆ ರೋಜರ್ ಮಿಲ್ಲಾ ಮತ್ತು ಸ್ಯಾಮ್ಯುಯೆಲ್ ಎಟೂ ಮೊದಲಾದ ಆಫ್ರಿಕನ್ ದೈತ್ಯ ಪ್ರತಿಭೆಗಳ ವರ್ಣಭೇದದ ವಿರುದ್ಧ ಗಟ್ಟಿಯಾಗಿ ನಿಂತ ಪರಿಣಾಮ ಇಂದು ಫಿಫಾ ಆಫ್ರಿಕಾ ಖಂಡದ ದೇಶಗಳಿಗೆ ಪ್ರಾದಾನ್ಯ ನೀಡುತ್ತಿದೆ. ಒಂದು ಕಾಲದ ವಿಶ್ವಶ್ರೇಷ್ಠ ಸ್ಟ್ರೈಕರ್‌ಗಳಲ್ಲೊಬ್ಬರಾದ ಸ್ಯಾಮ್ಯುಯೆಲ್ ಎಟೂ ಕಪ್ಪು ವರ್ಣೀಯರಿಗೆ, "ನೀವು ಚೆಂಡಿನ ಜೊತೆಗೆ ಅವಮಾನವನ್ನು, ನೋವನ್ನು ಮತ್ತು ಹತಾಶೆಯನ್ನು ಒದೆಯುತ್ತಿದ್ದೀರಿ. ನೀವದನ್ನು ಒದ್ದು ಮಾತ್ರ ತೊಲಗಿಸಬಲ್ಲಿರಿ" ಎಂದು ಕೊಟ್ಟ ಕರೆ ಇಂದು ಕಪ್ಪು ವರ್ಣೀಯ ಆಟಗಾರರಲ್ಲಿ ಹೋರಾಟವನ್ನು ಹುಟ್ಟಿಸಿದೆ. ಈ ಬಾರಿಯ ವಿಶ್ವಕಪ್‌ಗೆ ಮೊದಲ ಬಾರಿಗೆ 10 ಕಪ್ಪು ವರ್ಣೀಯ ದೇಶಗಳು ಆಯ್ಕೆಯಾಗಿವೆ. ಅದರಲ್ಲಿ 9 ದೇಶಗಳು ನಾಕೌಟ್ ಹಂತವನ್ನು ತಲುಪಿವೆ. ಈ 9 ಕೇವಲ ಗೆಲುವಿನ ಸಂಖ್ಯೆಯಲ್ಲ, ಅದು ಅಮಾನವೀಯತೆ ಮತ್ತು ವಸಾಹತುಶಾಹಿಯನ್ನು ಒದ್ದ ಐತಿಹಾಸಿಕ ಸಾಧನೆ. ಮೊಟ್ಟಮೊದಲ ಬಾರಿಗೆ ಫಿಫಾದ ಧ್ಯೇಯ For the Game. For the World ಎಂಬುದು ಸಾಕಾರವಾದ ಘಳಿಗೆ. ಹಿಂದೆಲ್ಲಾ ಘೋಷವಾಕ್ಯದ ಹಿಂದೆ ಅವಿತಿಟ್ಟುಕೊಂಡಿದ್ದ ಫಿಫಾಕ್ಕೆ ಇದು ಪಾಪವನ್ನು ಕಳೆದುಕೊಂಡ ಹೊತ್ತು. ಜಾಗತಿಕ ಇತಿಹಾಸದಲ್ಲಿ 'ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ'ಗಳು ಮಧ್ಯಯುಗದ ಯೂರೋಪಿನ ಘಟನಾವಳಿಗಳು ಮತ್ತು ಫ್ರೆಂಚ್ ಕ್ರಾಂತಿಯಿಂದ ಹುಟ್ಟಿದೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದವರಿಗೆ ಇಂದು ತೃತೀಯ ಜಗತ್ತು ಫುಟ್‌ಬಾಲ್ ಮೈದಾನದಲ್ಲಿ, ತನ್ನ ತಾಕತ್ತಿನ ಮೂಲಕ ಕೊಟ್ಟ ಉತ್ತರ.

ಪಾಶ್ಚಿಮಾತ್ಯ ದೇಶಗಳ ಅಪಾಯಕಾರಿ ದ್ವಂದ್ವ ನಿಲುವು

ಅರವಿಂದ ಶೆಣೈ

ಕೆಲ ದಿನಗಳ ಹಿಂದೆ ವಿದೇಶಾಂಗ ಸಚಿವ ಜೈಶಂಕರ್‌ರವರು ಫಿನ್‌ಲ್ಯಾಂಡ್‌ನಲ್ಲಿ ಸಂವಾದ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ಪಾಶ್ಚಿಮಾತ್ಯ ದೇಶಗಳ ವಿದೇಶಾಂಗ ನೀತಿಯಲ್ಲಿರುವ ದ್ವಂದ್ವದತ್ತ ವಿಶ್ವದ ಗಮನ ಸೆಳೆದರು. ಭಾರತದ ಶಸ್ತ್ರಾಸ್ತ್ರಗಳನ್ನು ಯುರೋಪಿನ ವಿರುದ್ಧ ಎಂದೂ ಪ್ರಯೋಗಿಸಲಾಗಿಲ್ಲ, ಆದರೆ ಯುರೋಪಿನ ಶಸ್ತ್ರಾಸ್ತ್ರಗಳನ್ನು ಭಾರತದ ವಿರುದ್ಧ ಬಹಳಷ್ಟು ಬಾರಿ ಪ್ರಯೋಗಿಸಲಾಗಿದೆ ಎಂದು ಅವರು ನುಡಿದರು. ''ಭಾರತೀಯ ಶಸ್ತ್ರಾಸ್ತ್ರಗಳನ್ನು ಬಳಸಿ ಯಾವುದೇ ಐರೋಪ್ಯ ರಾಷ್ಟ್ರದ ಮೇಲೆ ದಾಳಿ ನಡೆದಿಲ್ಲ. ಆದರೆ ಭಾರತಕ್ಕೆ ಸಂಬಂಧಿಸಿ ಐರೋಪ್ಯ ಶಸ್ತ್ರಾಸ್ತ್ರಗಳ ಬಗ್ಗೆ ಇದೇ ಮಾತನ್ನು ಹೇಳಲಾಗುವುದಿಲ್ಲ' ಎಂದು ಅವರು ನುಡಿದರು.

ಅವರ ಈ ಮಾತುಗಳು ಅಂತಾರಾಷ್ಟ್ರೀಯ ರಾಜಕೀಯದ ಅತೀ ಮುಖ್ಯವಾದ ವಿಚಾರವೊಂದನ್ನು ಬಯಲಿಗೆಳೆದಿದೆ. ಪ್ರಜಾಪ್ರಭುತ್ವದ ರಕ್ಷಕರೆಂದು ಕೊಚ್ಚಿಕೊಳ್ಳುವ ಪಾಶ್ಚಿಮಾತ್ಯ ರಾಷ್ಟ್ರಗಳು ಜಗತ್ತಿನ ಪ್ರಜಾತಾಂತ್ರಿಕ ರಾಷ್ಟ್ರಗಳನ್ನೇ ಹೆಚ್ಚು ಹೆಚ್ಚು ಪರಾಮರ್ಶೆಗೆ ಒಳಪಡಿಸಲಾಗುತ್ತವೆಯೆ ಹೊರತು ನಿರಂಕುಶ ಅಧಿಕಾರಗಳನ್ನಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ. ಇನ್ನೂ ದೊಡ್ಡ ದುರಂತವೆಂದರೆ ಪಾಶ್ಚಿಮಾತ್ಯ ಪ್ರಜಾತಾಂತ್ರಿಕ ರಾಷ್ಟ್ರಗಳು ಪೌರ್ವಾತ್ಯ ಪ್ರಜಾತಾಂತ್ರಿಕ ರಾಷ್ಟ್ರಗಳನ್ನೇ ಹೆಚ್ಚು ಟೀಕಿಸುತ್ತಿರುವುದು, ಖಂಡಿಸುತ್ತಿರುವುದು ಕಂಡುಬರುತ್ತಿದೆ. ಆದರೆ ಪೌರ್ವಾತ್ಯ ಸರ್ವಾಧಿಕಾರಿ ಅಥವಾ ನಿರಂಕುಶ ಆಡಳಿತಗಳ ವಿರುದ್ಧ ಅವಗಳಿಂದ ಟೀಕೆಗಳು ಕೇಳಿಬರುವುದಿಲ್ಲ. ಅಂತಹ ನಿರಂಕುಶ ಅಧಿಕಾರಿಗಳನ್ನು ಪ್ರೋತ್ಸಾಹಿಸುವುದೂ ಕಾಣಬರುತ್ತದೆ.

ಇಂಥವೈರುಧ್ಯವು ಹೊಸದೇನೂ ಅಲ್ಲ, ಆಕಸ್ಮಿಕವೂ ಅಲ್ಲ. ಇತಿಹಾಸದುದ್ದಕ್ಕೂ ಪಾಶ್ಚಿಮಾತ್ಯ ದೇಶಗಳು ಇಂತಹುದೇ ದ್ವಂದ್ವ ನಿಲುವು ಪ್ರದರ್ಶಿಸುತ್ತಾ ಬಂದಿವೆ. ಇತಿಹಾಸಕಾರ ಫ್ರಾಂಕ್ ಡಿಕೋಟರ್ ಚೀನಾದ ಕುರಿತಾದ ತಮ್ಮ ಇತ್ತೀಚಿನ ಪುಸ್ತಕವೊಂದರಲ್ಲಿ ಇದನ್ನು ಹೆಚ್ಚು ವಿಶದಪಡಿಸುತ್ತಾರೆ. ಪಾಶ್ಚಿಮಾತ್ಯ ದೇಶಗಳ ಬೆಂಬಲವಿಲ್ಲದಿರುತ್ತಿದ್ದರೆ ಮಾವೋ ಜೆಡಾಂಗ್ ಅವರ ಕಮ್ಯುನಿಸ್ಟ್ ಚೀನಾ ಅಸ್ತಿತ್ವಕ್ಕೇ ಬರುತ್ತಿರಲಿಲ್ಲ ಎಂದು ಅವರು ಬರೆಯುತ್ತಾರೆ. ಅಮೆರಿಕ ಹಾಗೂ ಪಾಶ್ಚಿಮಾತ್ಯ ದೇಶಗಳ ಬೆಂಬಲದಿಂದಾಗಿಯೇ ಕಮ್ಯುನಿಸ್ಟ್ ಚೀನಾ ಬೆಳೆಯುವಂತಾಯಿತು ಎನ್ನುತ್ತಾರವರು.

1920ರಿಂದ30ರವರೆಗೆಮಾವೋರಾಜಕೀಯವಾಗಿಅಪ್ರಸ್ತುತವಾಗಿದ್ದರು. ಚೀನಾದ ಕಮ್ಯುನಿಸ್ಟ್ ಪಕ್ಷ ಅತ್ಯಂತ ಪುಟ್ಟದಾಗಿತ್ತು. ಚೀನಾದಲ್ಲಿ ಅದಕ್ಕೆ ಅಸ್ತಿತ್ವವೂ ಇರಲಿಲ್ಲ. ಜನರೂ ಅದನ್ನು ಹೆಚ್ಚು ಪರಿಗಣಿಸುತ್ತಿರಲಿಲ್ಲ. ಕಾರ್ಮಿಕರನ್ನು ಕೂಡಾ ಅದು ಸೆಳೆದಿರಲಿಲ್ಲ. ಶಾಂಘೈಯ ಕೈಗಾರಿಕಾ ಪ್ರದೇಶವೊಂದರಲ್ಲಿ ಒಂದು ಲಕ್ಷ ಕಾರ್ಮಿಕರಿದ್ದರೂ 1929ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದವರು ಕೇವಲ 25 ಮಂದಿ. ಆ ಸಮಯದಲ್ಲಿ ಕಮ್ಯುನಿಸಂ ಸಿದ್ಧಾಂತವು ಚೀನಾಕ್ಕಿಂತ ಹೆಚ್ಚು ಯುರೋಪಿನಲ್ಲೇ ಹೆಚ್ಚು ಪ್ರಚಾರ ಪಡೆದಿತ್ತು ಎಂದು ಫ್ರಾಂಕ್ ಹೇಳುತ್ತಾರೆ.

ಜರ್ಮನಿ ಹೊರತುಪಡಿಸಿ ಪ್ರತಿಯೊಂದು ಐರೋಪ್ಯ ದೇಶವೂ ತನ್ನಲ್ಲಿ ಹೆಚ್ಚು ಮಂದಿ ಕಮ್ಯುನಿಸ್ಟರು ಇದ್ದಾರೆ ಎಂದು ಜಂಭ ಕೊಚ್ಚಿಕೊಳ್ಳುತ್ತಿತ್ತು. ಸಲಾಜಾರ್‌ನ ನಿರಂಕುಶ ಆಡಳಿತದಲ್ಲಿ ನಲುಗಿನ ಪೋರ್ಚುಗಲ್‌ನಲ್ಲಿ ಕೂಡಾ 1934ರಲ್ಲಿ 25000 ಕಮ್ಯೂನಿಸ್ಟ್ ಸದಸ್ಯರಿದ್ದರು. ಆದರೆ 1940ರಲ್ಲಿ ಚೀನಾದಲ್ಲಿದ್ದುದು ಕೇವಲ 1700 ಕಮ್ಯುನಿಸ್ಟರು.

ಆದರೂ ಎರಡು ದಶಕಗಳೊಳಗೆ ಚಿತ್ರಣವೇ ಬದಲಾಯಿತು. ಚೀನಾವು ಕಮ್ಯುನಿಸ್ಟರ ಬಲಿಷ್ಠ ಕೋಟೆಯಾಗಿ ಬದಲಾಯಿತು. ಕೇವಲ ಎರಡು ದಶಕಗಳಲ್ಲಿ ಮಾವೋ ಚೀನಾವನ್ನು ಆಳುವಂತಾದುದು ಹೇಗೆ?

ಇದಕ್ಕೆ ಒಂದು ಕಾರಣ ಚಿಯಾಂಗ್ ಕೈ-ಶೇಕ್‌ನ ದುರಾಡಳಿತವೆಂಬುದು ನಿಸ್ಸಂದೇಹ. ಭ್ರಷ್ಟಾಚಾರ, ಅದಕ್ಷತೆ ಮತ್ತು ಆರ್ಥಿಕ ಅವ್ಯವಸ್ಥೆಯಿಂದಾಗಿ ಕೈ-ಶೇಕ್ ಸರಕಾರವು ದುರ್ಬಲಗೊಂಡಿತು. ಇದರ ಜತೆಗೇ ಅನೇಕ ಬಾಹ್ಯ ವಿಚಾರಗಳೂ ಮಾವೋ ಏಳಿಗೆಗೆ ಕೊಡುಗೆ ನೀಡಿದವು. ಜಪಾನ್ ಚೀನಾದ ಮೇಲೆ ದಾಳಿ ಮಾಡಿದಾಗ ಚೀನಾ ಸೇನೆಯು ದುರ್ಬಲಗೊಂಡಿತು. ಆದರೆ ಕಮ್ಯುನಿಸ್ಟ್ ನೆಲೆಗಳು ಯಾವುದೇ ಹಾನಿ ಅನುಭವಿಸದೆ ಉಳಿದವು. ಇದು ಕಮ್ಯುನಿಸಂ ಬೆಳೆಯಲು ವಿಪುಲ ಅವಕಾಶ ಒದಗಿಸಿತು. ಇದರ ಜತೆಗೇ ರಷ್ಯಾದ ಮುಖಂಡ ಸ್ಟಾಲಿನ್ ಕೂಡಾ ಪದೇಪದೇ ಮಾವೋ ರಕ್ಷಣೆಗೆ ಧಾವಿಸುವ ಮೂಲಕ ಅವರ ಸ್ಥಾನ ಗಟ್ಟಿಗೊಳ್ಳಲು ನೆರವಾದರು.

ಆದರೆ ಇವೆಲ್ಲಕ್ಕಿಂತಲೂ ಹೆಚ್ಚಾಗಿ ಪಾಶ್ಚಿಮಾತ್ಯ ದೇಶಗಳು ಮಾವೋಗೆ ಪರೋಕ್ಷವಾಗಿ ನೀಡಿದ ಬೆಂಬಲವು ಕಮ್ಯುನಿಸ್ಟ್ ಚೀನಾದ ಪ್ರಗತಿಗೆ ಕಾರಣವಾಯಿತೆನ್ನುವುದು ನಿರ್ವಿವಾದ. ಪಾಶ್ಚಿಮಾತ್ಯ ಲಿಬರಲ್‌ಗಳು ಮಾವೋನನ್ನು 'ರೈತ ಮುಖಂಡ', 'ಕ್ರಾಂತಿಕಾರಿ' ಮತ್ತು 'ವಿಮೋಚಕ' ಎಂದೆಲ್ಲಾ ಬಣ್ಣಿಸತೊಡಗಿದರು. ಅಮೆರಿಕದ ಬುದ್ಧಿಜೀವಿ ಪತ್ರಕರ್ತ ಎಡ್ಗರ್ ಸ್ನೋ ಕೂಡಾ ಜಾಗತಿಕವಾಗಿ ಮಾವೋನ ವರ್ಚಸ್ಸನ್ನು ಹೆಚ್ಚಿಸಲು ನೆರವಾದ. ಆತ ಮಾವೋನನ್ನು ಇನ್ನಿಲ್ಲದಂತೆ ಹೊಗಳಿ ಆತನನ್ನು ಅಟ್ಟಕ್ಕೇರಿಸಿದ.

ಇವೆಲ್ಲದರ ಕಾರಣದಿಂದ ಯುರೋಪ್ ಮತ್ತು ಅಮೆರಿಕದ ಜನರು ಮಾವೋನನ್ನು ಒಬ್ಬ 'ಸುಧಾರಣವಾದಿ' ಎಂದು ಪರಿಗಣಿಸಲಾರಂಭಿಸಿದರು. ಅಮೆರಿಕದ ಅಧ್ಯಕ್ಷ ಟ್ರೂಮನ್ ಆಡಳಿತದಲ್ಲಿದ್ದ ಕೆಲವರು ಕೂಡಾ ಕಮ್ಯುನಿಸ್ಟ್ ಚೀನಾದೊಂದಿಗೆ ಸಹಕಾರಕ್ಕೆ ಕರೆ ನೀಡಿದರು. ಅಮೆರಿಕದ ಜನರಲ್ ಜಾರ್ಜ್ ಮಾರ್ಷಲ್ ಕೂಡಾ ಕೈ-ಶೇಕ್ ಮತ್ತು ಮಾವೋ ಮಧ್ಯೆ ಅಧಿಕಾರ ಹಂಚಿಕೆಯ ಸೂತ್ರ ಮಂಡಿಸಿದ. ಇದು ಮಾವೋನ ಅಧಿಕಾರವನ್ನು, ಪ್ರಭಾವವನ್ನು ಹೆಚ್ಚಿಸಲು ಸಹಕಾರಿಯಾಯಿತು. ಅಮೆರಿಕದ ನೆರವನ್ನು ಬಹುವಾಗಿ ಅವಲಂಬಿಸಿದ್ದ ಕೈ-ಶೇಕ್ ಈ ಪ್ರಸ್ತಾಪವನ್ನು ತಿರಸ್ಕರಿಸುವ ಪರಿಸ್ಥಿತಿಯಲ್ಲಿರಲಿಲ್ಲ. ಇದರಿಂದಾಗಿ ಮಾವೋ ತನ್ನ ಅಧಿಕಾರ ಮತ್ತು ಬಲವನ್ನು ಹೆಚ್ಚಿಸತೊಡಗಿದ.

ಹಾಗಾಗಿ 20ನೇ ಶತಮಾನದ ಚೀನಾದ ಪ್ರಗತಿಯ ಕತೆಯು ಕಮ್ಯುನಿಸ್ಟರ ಪ್ರಾಬಲ್ಯವನ್ನು ವಿವರಿಸುವ ಜತೆಗೇ ಪಾಶ್ಚಿಮಾತ್ಯ ರಾಷ್ಟ್ರಗಳ ಆತ್ಮವಂಚನೆಯನ್ನೂ ವಿವರಿಸುತ್ತದೆ. ಚೀನಾದಲ್ಲಿ ಕಮ್ಯುನಿಸಂ ಬೇರೂರಲು, ಬೆಳೆಯಲು ಸಹಕಾರ ನೀಡಿದ್ದೇ ಪಾಶ್ಚಿಮಾತ್ಯ ಆಡಳಿತಗಳು.

ಪಾಶ್ಚಿಮಾತ್ಯರ ಈ ಧೋರಣೆ ಈಗಲೂ ಕಂಡುಬರುತ್ತಿದೆ. ಪಾಶ್ಚಿಮಾತ್ಯ ಶಿಕ್ಷಣವೇತ್ತರರು, ಮಾಧ್ಯಮಗಳು ಮತ್ತು ನೀತಿನಿರೂಪಕರು ಚೀನಾದ ಕಮ್ಯುನಿಸ್ಟ್ ಆಡಳಿತವನ್ನು ಟೀಕಿಸುವುದಿಲ್ಲ. ಆದರೆ ಭಾರತದ ಪ್ರಜಾಪ್ರಭುತ್ವವನ್ನು ಟೀಕಿಸುತ್ತಾರೆ. ಭಾರತದಲ್ಲಿ ಪ್ರಜಾಪ್ರಭುತ್ವ ಕುಸಿಯುತ್ತಿದೆ, ಬಹುಸಂಖ್ಯಾತವಾದ ಆಳುತ್ತಿದೆ ಹಾಗೂ ಧಾರ್ಮಿಕ ಧ್ರುವೀಕರಣ ನಡೆದಿದೆ ಎಂಬುದಾಗಿಯೆಲ್ಲ ಅವರು ಬಣ್ಣಿಸುತ್ತಾರೆ. ಸ್ವೀಡನ್ನಿನ ವಿ-ಡೆಮ್ ಸಂಸ್ಥೆಯು ಭಾರತದ್ದು 'ಚುನಾಯಿತ ಸರ್ವಾಧಿಕಾರ' ಎಂಬುದಾಗಿ ಇತ್ತೀಚೆಗೆ ಬಣ್ಣಿಸಿತ್ತು. ಅಮೆರಿಕದ ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಆಯೋಗವು 'ಭಾರತದ ಪರಿಸ್ಥಿತಿ ಕಳವಳಕಾರಿಯಾಗಿದೆ' ಎಂದು ಹೇಳಿತ್ತು. ಚೀನಾದಲ್ಲಿ, ಪಾಕಿಸ್ತಾನದಲ್ಲಿ ಜನರು ಪ್ರಜಾತಾಂತ್ರಿಕ ಹಕ್ಕುಗಳಿಂದ ವಂಚಿತರಾಗಿ ದೌರ್ಜನ್ಯ ಅನುಭವಿಸುತ್ತಿರುವುದರ ಕುರಿತಂತೆ ಇವರಾರೂ ಮಾತನಾಡುವುದಿಲ್ಲ.

ಇವರೆಲ್ಲರೂ ಪ್ರಜಾತಾಂತ್ರಿಕವಾಗಿ ಚುನಾಯಿತವಾದ ಸರಕಾರಗಳನ್ನು ಟೀಕಿಸುತ್ತಾರೆಯೆ ಹೊರತು ಪಾಕಿಸ್ತಾನ, ಚೀನಾದಂತಹ ಸರ್ವಾಧಿಕಾರಿ, ನಿರಂಕುಶ ಸರಕಾರಗಳನ್ನಲ್ಲ. ಪ್ರಜಾತಾಂತ್ರಿಕ ರಾಷ್ಟ್ರಗಳು ಅವರಿಂದ ಪರಾಮರ್ಶೆಗೆ ಒಳಪಡುತ್ತವೆಯೇ ಹೊರತು ನಿರಂಕುಶ ಆಡಳಿತಗಳಲ್ಲ.

ಇದು ಅವರು ಮಾಡುತ್ತಿರುವ ಅತಿದೊಡ್ಡ ಪ್ರಮಾದ. ಇದರಿಂದಾಗುವ ಪರಿಣಾಮಗಳು ಹೆಚ್ಚು ವಿನಾಶಕಾರಿ. ಮಾವೋಗೆ ಸಂಬಂಧಿಸಿ ಕೂಡಾ ಪಾಶ್ಚಿಮಾತ್ಯ ವೀಕ್ಷಕರು, ಸರಕಾರಗಳು ಮಾಡಿದ್ದು ಇದೇ ತಪ್ಪನ್ನು. ಅಮೆರಿಕವು ಇತ್ತೀಚೆಗೆ ಪಾಕಿಸ್ತಾನದ ಸರ್ವಾಧಿಕಾರಿ ಸೇನಾ ಮುಖಂಡನನ್ನು ಸ್ತುತಿಸುವ, ಆತನಿಗೆ ರಾಜಮರ್ಯಾದೆ ನೀಡುವ ಕೆಲಸ ಮಾಡುತ್ತಿರುವುದು ಕೂಡಾ ಇದೇ ರೀತಿ ವಿನಾಶಕಾರಿಯೆ. ಟ್ರಂಪ್ ಚೀನಾದ ಅಧ್ಯಕ್ಷ ಜಿನ್‌ಪಿಂಗ್‌ರನ್ನು ಕೂಡಾ ಈಗ ಓಲೈಸುವ ಕಾರ್ಯ ಮಾಡುತ್ತಿರುವುದೂ ಭವಿಷ್ಯದಲ್ಲಿ ಅಪಾಯಕಾರಿಯೆ.

ವಿಪರ್ಯಾಸವೆಂದರೆ ತಾವು ಪ್ರಜಾತಾಂತ್ರಿಕವಾಗಿ ವರ್ತಿಸುವ ರೀತಿಯಿದು ಎಂದು ಪಾಶ್ಚಿಮಾತ್ಯ ದೇಶಗಳು ತಮ್ಮ ದ್ವಂದ್ವ ನೀತಿಯನ್ನು ಸಮರ್ಥಿಸಿಕೊಳ್ಳುತ್ತವೆ. ಐನ್‌ಸ್ಟೈನ್ ಹೇಳಿದ್ದ ''ಒಂದೇ ಕೆಲಸವನ್ನು ಪದೇಪದೇ ಮಾಡುವುದು ಹಾಗೂ ಪ್ರತಿಬಾರಿ ಭಿನ್ನ ಫಲಿತಾಂಶವನ್ನು ನಿರೀಕ್ಷಿಸುವುದು ಮೂರ್ಖತನ'' ಎಂಬುದಾಗಿ. ಮಾವೋ ಸಿಂಡ್ರೋಮ್‌ನಿಂದ ಪೀಡಿತವಾಗಿರುವ ಪಾಶ್ಚಿಮಾತ್ಯ ದೇಶಗಳು ಈಗ ಅದೇ ರೀತಿಯಲ್ಲಿ ವರ್ತಿಸುತ್ತಿವೆ.


ಗಾಝಾ ಕುರಿತು ಸೋನಿಯಾ ಕಾಳಜಿಯ ಮರ್ಮ

ಆರ್.ಪಿ. ಸಿಂಗ್, ಬಿಜೆಪಿ ರಾಷ್ಟ್ರೀಯ ವಕ್ತಾರ

ಗಾಝಾ ಕುರಿತಂತೆ ಸೋನಿಯಾ ಗಾಂಧಿಯವರು ಪತ್ರಿಕೆಯಲ್ಲಿ ಲೇಖನವೊಂದನ್ನು ಬರೆದಿರುವುದು ದೊಡ್ಡ ಸುದ್ದಿ ಮಾಡಿದೆ. ಭಾರತವು ಗಾಝಾ ಕುರಿತಂತೆ ಮೌನತಾಳಿರುವುದು ನೈತಿಕವಾಗಿ ದೊಡ್ಡ ತಪ್ಪು ಎಂದು ಅವರು ಬರೆದಿದ್ದಾರೆ. ನಿಜವಾಗಿ ಸೋನಿಯಾ ಅವರದು ನೈತಿಕತೆ ಬೋಧನೆಯ ಲೇಖನ ಎನ್ನುವುದಕ್ಕಿಂತ ಆಯ್ದ ಕೆಲ ವಿಷಯಗಳ ಬಗ್ಗೆಯಷ್ಟೇ ಆಕ್ರೋಶ ಸೂಚಿಸಿ ಮತಬ್ಯಾಂಕ್ ಭದ್ರಗೊಳಿಸುವ ಪ್ರಯತ್ನ ಎಂದು ಕಂಡುಬರುತ್ತದೆ. ಭಾರತಕ್ಕೆ ಮಾನವ ಹಕ್ಕುಗಳ ಕುರಿತಂತೆ ಪಾಠ ಹೇಳುವ ಮೊದಲು ಕಾಂಗ್ರೆಸ್ ನಾಯಕತ್ವವು ಸ್ವತಂತ್ರ ಭಾರತದ ಅತ್ಯಂತ ಕರಾಳ ಅಧ್ಯಾಯವೊಂದರ ಕುರಿತಾದ ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಅದೆಂದರೆ 1984ರ ಸಿಕ್ಖ್ ವಿರೋಧಿ ನರಮೇಧ ಮತ್ತು ಆ ನಂತರ ಪಂಜಾಬಿನ ಜನರು ಅನುಭವಿಸಿದ ಕಿರುಕುಳಗಳು.

1984ರ ನವೆಂಬರ್‌ನಲ್ಲಿ ಸಾವಿರಾರು ಸಿಕ್ಖರನ್ನು ಹತ್ಯೆಗೈಯ್ಯಲಾಯಿತು. ಪುರುಷರನ್ನು ಮನೆಯಿಂದ ಹೊರಗೆಳೆದು ಥಳಿಸಿ ಅವರ ಮೇಲೆ ಸೀಮೆಎಣ್ಣೆ ಸುರಿದು ಜೀವಂತ ಸುಡಲಾಯಿತು. ಇಡೀ ಕುಟುಂಬಗಳನ್ನೇ ನಾಶಪಡಿಸಲಾಯಿತು. ಗುರುದ್ವಾರಗಳನ್ನು ವಿರೂಪಗೊಳಿಸಲಾಯಿತು. ಮನೆ ಮತ್ತು ಅಂಗಡಿಗಳನ್ನು ಲೂಟಿ ಮಾಡಲಾಯಿತು. ತಮ್ಮ ಮಕ್ಕಳು ಹತ್ಯೆಗೀಡಾಗುವುದನ್ನು ತಾಯಂದಿರು ಕಣ್ಣಾರೆ ಕಾಣುವಂತಾಯಿತು. ತಮ್ಮ ಹೆತ್ತವರು ಥಳಿಸಲ್ಪಡುವುದನ್ನು ಪುಟ್ಟ ಮಕ್ಕಳು ನೋಡುವಂತಾಯಿತು. ಒಂದೇ ರಾತ್ರಿಯಲ್ಲಿ ಸಾವಿರಾರು ಮಹಿಳೆಯರು ವಿಧವೆಯರಾದರು.

ಗಾಝಾದ ಕುರಿತಂತೆ ಸೋನಿಯಾ ಗಾಂಧಿ ಕಣ್ಣೀರು ಸುರಿಸುವ ಮೊದಲು ತಾವೊಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕು: ಆಕೆ ಸತ್ನಾಮಿ ಬಾಯಿಯ ಕಣ್ಣೀರು ಒರೆಸುವ ಮನಸ್ಸು ಮಾಡಿದ್ದರೆ? 1984ರ ಸಿಕ್ಖ್ ವಿರೋಧಿ ದಂಗೆಯ ಅತ್ಯಂತ ಕರುಣಾಜನಕ ಪ್ರಸಂಗವನ್ನು ಸತ್ನಾಮಿ ಬಾಯಿ ದಾಖಲಿಸಿದ್ದಳು. ಆಟೋಚಾಲಕರಾದ ಆಕೆಯ ಪತಿ ಮೋಹನ್ ಸಿಂಗ್ ಎಂಬವರನ್ನು ಕಾಂಗ್ರೆಸ್ ಕಾರ್ಯಕರ್ತರು ಕಬ್ಬಿಣದ ಸಲಾಕೆಯಿಂದ ಹೊಡೆದು ಬಳಿಕ ಜೀವಂತ ಸುಟ್ಟುದ್ದಕ್ಕೆ ಆಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದಳು. ತಮ್ಮ ಹಸುಕಂದನನ್ನು ಕೈಯಲ್ಲಿ ಹಿಡಿದುಕೊಂಡೇ ಆಕೆ ಈ ದುರಂತವನ್ನು ವೀಕ್ಷಿಸುವಂತಾಗಿತ್ತು. ಇದೇ ರೀತಿ ಹಲವಾರು ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೂ ಈಡಾಗಿದ್ದರು. ಅವರ ಬದುಕು ಶಾಶ್ವತವಾಗಿ ನಾಶಗೊಂಡಿತ್ತು. ಈ ಸತ್ನಾಮಿ ಬಾಯಿ ಬಗ್ಗೆ ಸೋನಿಯಾ ಗಾಂಧಿ ಒಮ್ಮೆಯಾದರೂ ಬಹಿರಂಗವಾಗಿ ಉಲ್ಲೇಖಿಸಿದ್ದಿದೆಯೆ? ಆಕೆಯನ್ನು ಭೇಟಿಯಾಗಿ ಆಲಂಗಿಸಿಕೊಂಡು ಆಕೆಯ ನೋವನ್ನು ಒರೆಸಿ ಸಾಂತ್ವನ ನೀಡುವ ಪ್ರಯತ್ನ ನಡೆಸಿದ್ದಿದೆಯೇ? ಅಂದಿನ ದುರಂತದಲ್ಲಿ ಬದುಕುಳಿದ ಮಂದಿಗೆ ಸಂಪೂರ್ಣ ನ್ಯಾಯ ಸಿಗಬೇಕೆಂದು ಆಕೆ ಎಂದಾದರೂ ಒತ್ತಾಯಿಸಿದ್ದಿದ್ದೆಯೇ?



ಈ ಭೀಕರ ಘಟನೆ ಕೇವಲ ದಿಲ್ಲಿಗೆ ಸೀಮಿತವಾಗಿರಲಿಲ್ಲ, ಅಲ್ಲಿಂದ ಬಳಿಕ ಪಂಜಾಬ್ ಹಲವು ವರ್ಷಗಳ ಕಾಲ ರಕ್ತಪಾತಕ್ಕೆ ಸಾಕ್ಷಿಯಾಯಿತು. ಒಂದು ಇಡೀ ಜನಾಂಗವೇ ಉಗ್ರಗಾಮಿಗಳು ಮತ್ತು ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಯ ಮಧ್ಯೆ ಅಡಕತ್ತರಿಯಲ್ಲಿ ಸಿಲುಕಿಕೊಂಡಂತಾದರು. ಸಾವಿರಾರು ಕುಟುಂಬಗಳು ಹಿಂತಿರುಗಿ ಬಾರದ ತಮ್ಮ ಮಕ್ಕಳಿಗಾಗಿ ಹುಡುಕಾಡುವಂತಾಯಿತು. ಕೆಲವರನ್ನು ಮನೆಯಿಂದ ಎತ್ತಿಕೊಂಡು ಹೋಗಿ ನಾಪತ್ತೆ ಮಾಡಲಾಯಿತು. ಕೆಲವರು ಪೊಲೀಸ್ ಲಾಕಪ್ಪಿನಲ್ಲಿ ಚಿತ್ರಹಿಂಸೆ ಅನುಭವಿಸಿ ಸಾವಿಗೀಡಾದರು. ಜಾತೆದಾರ್ ಗುರುದೇವ್ ಸಿಂಗ್ ಪೊಲೀಸ್ ಕಸ್ಟಡಿಯಲ್ಲಿ ಸಾವನ್ನಪ್ಪಿದ ಘಟನೆ ಯಾರೂ ಮರೆಯಲಾರರು. ದೇಶದ ಅತ್ಯಂತ ರಾಷ್ಟ್ರಭಕ್ತ ಸಮುದಾಯವಾದ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಧೀರ ಪಾತ್ರ ವಹಿಸಿದ ಸಿಕ್ಖರನ್ನು ಅನುಮಾನದ ಕಣ್ಣಿನಿಂದ ನೋಡಲಾಯಿತು.

ಸಿಕ್ಖ್ ನರಮೇಧದ ಬಳಿಕ ರಾಜೀವ್ ಗಾಂಧಿ ನುಡಿದ ಮಾತುಗಳನ್ನು ಕೂಡಾ ಸೋನಿಯಾ ಗಾಂಧಿ ನೆನಪಿಸಿಕೊಳ್ಳಬೇಕು. ''ದೊಡ್ಡ ಮರವೊಂದು ಬಿದ್ದಾಗ ಭೂಮಿ ಕಂಪಿಸುವುದು ಸಹಜ'' ಎಂದು ಹೇಳುವ ಮೂಲಕ ರಾಜೀವ್ ಗಾಂಧಿ ಸಿಕ್ಖ್ ನರಮೇಧವನ್ನು ಸಮರ್ಥಿಸಿಕೊಂಡಿದ್ದರು. ಸಿಕ್ಖರ ನರಮೇಧವು ಒಂದು ಸಾಮಾನ್ಯ ಸಹಜ ಘಟನೆ ಎಂದು ಬಣ್ಣಿಸಲೆತ್ನಿಸಿದ ಅವರ ಈ ಮಾತಿಗೆ ಸಾಕಷ್ಟು ಟೀಕೆಗಳು ಕೇಳಿಬಂದಿದ್ದವು. ಬಳಿಕವೂ ಕಾಂಗ್ರೆಸ್ ಪಕ್ಷವು ಸಂತ್ರಸ್ತರ ನೆರವಿಗೆ ಧಾವಿಸಲೇ ಇಲ್ಲ, ಅವರ ಕಣ್ಣೀರು ಒರೆಸಲು ಮುಂದಾಗಲೇ ಇಲ್ಲ. ಈಗ ಸೋನಿಯಾ ಗಾಂಧಿಯವರು ಗಾಝಾ ಕುರಿತಂತೆ ನೈತಿಕತೆಯ ಪ್ರಶ್ನೆಯೆತ್ತುತ್ತಿದ್ದಾರೆ. ಗಾಝಾ ದಾಳಿಯನ್ನು ಭಾರತವು ಖಂಡಿಸದಿರುವುದು ತಪ್ಪು ಎನ್ನುತ್ತಿದ್ದಾರೆ. ಭಾರತಕ್ಕೆ ನೈತಿಕತೆಯ ಪಾಠ ಹೇಳುತ್ತಿದ್ದಾರೆ.

ಪ್ರತಿಯೊಬ್ಬ ನಾಗರಿಕನ ಜೀವವೂ ಅಮೂಲ್ಯವಾದುದೇ. ಅದು ಪ್ಯಾಲೆಸ್ತೀನಿಯನ್ ಆಗಿರಲಿ, ಇಸ್ರೇಲಿಯಾಗಿರಲಿ, ಭಾರತೀಯನೇ ಆಗಿರಲಿ ಅಥವಾ ಯಾರೇ ಆಗಿರಲಿ ಎಲ್ಲರ ಜೀವವೂ ಅಮೂಲ್ಯವೆ. ಭಾರತವು ಅಗತ್ಯವಿದ್ದಲ್ಲೆಲ್ಲಾ ಮಾನವೀಯ ನೆಲೆಯಲ್ಲಿ ನೆರವು ಒದಗಿಸಿದೆ. ನಾಗರಿಕರಿಗೆ ರಕ್ಷಣೆ ನೀಡಿದೆ. ಸಂಧಾನದ ಮೂಲಕ ಸೌಹಾರ್ದಯುತ ಒಪ್ಪಂದಕ್ಕೆ ಒತ್ತು ನೀಡಿದೆ. ಆದರೆ ನೈತಿಕ ಪ್ರಶ್ನೆಯೆತ್ತುವಾಗ ನಿರಂತರತೆಯ ಪ್ರಶ್ನೆಯೂ ಬರುತ್ತದೆ. ಭಾರತಕ್ಕೆ ಮಾನವೀಯತೆಯ ಬಗ್ಗೆ ಉಪದೇಶಿಸುವ ಮೊದಲು ಸೋನಿಯಾ ಗಾಂಧಿಯವರು ಸಿಖ್ಖ್ ವಿಧವೆಯರ ಕುರಿತಂತೆ, ಅನಾಥರಾದ ಮಕ್ಕಳ ಕುರಿತಂತೆ ಇದೇ ಬಗೆಯ ಮಾನವೀಯ ಸ್ಪರ್ಶ ನೀಡಲಿಲ್ಲವೇಕೆ ಎಂದು ತಮ್ಮನ್ನು ಪ್ರಶ್ನಿಸಿಕೊಳ್ಳಬೇಕು. ಸೋನಿಯಾ ಅವರ ಲೇಖನವು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ವಿಷಯಕ್ಕಿಂತಲೂ ಆಂತರಿಕ ತುಷ್ಟೀಕರಣ ನೀತಿಗೆ ಸಂಬಂಧಿಸಿದ್ದು ಎಂಬುದು ನಿಸ್ಸಂಶಯ. ಮುಸ್ಲಿಮರ ಒಂದು ಗುಂಪನ್ನು ಓಲೈಸುವ ಸಲುವಾಗಿಯೇ ಅವರು ಇದನ್ನು ಬರೆದಿದ್ದಾರೆ ಎನ್ನುವುದು ಸ್ಪಷ್ಟ. ಆದರೆ ಕಾಂಗ್ರೆಸ್ ಪಕ್ಷದ ಅನೈತಿಕ ನಡೆಗಳನ್ನು ಅವರು ಕಡೆಗಣಿಸಿದ್ದಾರೆ.

ಇತಿಹಾಸವು ಯಾವತ್ತೂ ಆಯ್ದ ಕತೆಯಾಗಬಾರದು.

ಮಾನವ ಹಕ್ಕುಗಳು ಕೂಡಾ ಕೆಲವರಿಗಷ್ಟೇ ಅನ್ವಯವಾಗುವಂತಿರಬಾರದು. ಸಾಂತ್ವನ ನೀಡುವಾಗ ಕೂಡಾ ಕೆಲವರನ್ನಷ್ಟೆ ಆಯ್ಕೆ ಮಾಡಬಾರದು.

ಮೆಡಿಕಲ್, ಎಂಜಿನಿಯರಿಂಗ್ ಪ್ರವೇಶಕ್ಕೆ ಬೋರ್ಡ್ ಅಂಕ

ಪ್ರವೇಶ ಪರೀಕ್ಷೆಗಳಲ್ಲಿ ಸುಧಾರಣೆಗೆ ಚಿಂತನೆ

ಹೊಸದಿಲ್ಲಿ: ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಸೇರಿದಂತೆ ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಗಳಾದ ನೀಟ್ ಮತ್ತು ಜೆಇಇ ಪ್ರವೇಶ ಪ್ರಕ್ರಿಯೆಯಲ್ಲಿ 12ನೇ ತರಗತಿ ಬೋರ್ಡ್ ಪರೀಕ್ಷೆಯ ಅಂಕಗಳಿಗೆ ಶೇ.50ರವರೆಗೆ ಪರಿಗಣನೆ ಮಾಡುವ ಮಹತ್ವದ ಪ್ರಸ್ತಾವನೆ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.



ರಾಷ್ಟ್ರೀಯ ಶಿಕ್ಷಣ ನೀತಿ(ಎನ್ಇಪಿ) ಶಿಫಾರಸುಗಳ ಆಧಾರದ ಮೇಲೆ ಪರೀಕ್ಷಾ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆ ತರಲು ಶಿಕ್ಷಣ ಸಚಿವಾಲಯ ರೂಪಿಸಿರುವ ಯೋಜನೆಗೆ ಪ್ರಧಾನಮಂತ್ರಿ ಕಚೇರಿ (ಪಿಎಂಒ) ನೇರ ಮೇಲ್ವಿಚಾರಣೆ ವಹಿಸಿದೆ ಎಂದು ವರದಿಯಾಗಿದೆ. ಪ್ರಸ್ತಾವನೆಯಂತೆ, ಪ್ರವೇಶ ಪರೀಕ್ಷೆಯ ಅಂಕಗಳ ಜತೆಗೆ ಬೋರ್ಡ್ ಪರೀಕ್ಷೆಯ ಸಾಧನೆಯನ್ನೂ ಸಮಾನವಾಗಿ ಪರಿಗಣಿಸುವ ವ್ಯವಸ್ಥೆ ಜಾರಿಯಾಗಬಹುದು. ಇದರಿಂದ ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಸಿಗಲಿದ್ದು, ಕೋಚಿಂಗ್ ಕೇಂದ್ರಗಳ ಮೇಲಿನ ಅವಲಂಬನೆ ಕಡಿಮೆಯಾಗುವ ನಿರೀಕ್ಷೆ ಇದೆ.

ಸುಧಾರಣೆಯ ಭಾಗವಾಗಿ ನೀಟ್ ಮತ್ತು ಜೆಇಇ ಪಠ್ಯಕ್ರಮವನ್ನು ಎನ್‌ಸಿಇಆರ್‌ಟಿ ಪಠ್ಯಕ್ರಮಕ್ಕೆ ಇನ್ನಷ್ಟು ಹೊಂದಾಣಿಕೆ ಮಾಡುವುದು, ವಿದ್ಯಾರ್ಥಿಗಳಿಗೆ ವರ್ಷದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಪರೀಕ್ಷೆ ಬರೆಯುವ ಅವಕಾಶ ಕಲ್ಪಿಸುವುದು ಹಾಗೂ ಮುಂದಿನ ಹಂತದಲ್ಲಿ ಅಡಾಪ್ಟಿವ್ ಮತ್ತು ಬೇಡಿಕೆಯ ಆಧಾರದ ಕಂಪ್ಯೂಟರ್ ಪರೀಕ್ಷಾ ವ್ಯವಸ್ಥೆ ಜಾರಿಗೊಳಿಸುವ ಕುರಿತೂ ಚಿಂತನೆ ನಡೆದಿದೆ. ಈ ಪ್ರಕ್ರಿಯೆಯಲ್ಲಿ ಎನ್‌ಸಿಇಆರ್‌ಟಿಯನ್ನು ಪಠ್ಯಕ್ರಮ ಸಮನ್ವಯದ ನೋಡಲ್ ಸಂಸ್ಥೆಯನ್ನಾಗಿ ಮಾಡುವ ಪ್ರಸ್ತಾವನೆಯೂ ಇದೆ.

ಕಳೆದ ವರ್ಷದ ನೀಟ್ ಪರೀಕ್ಷೆಗೆ ಸಂಬಂಧಿಸಿದ ಅಕ್ರಮ ಮತ್ತು ಪಾರದರ್ಶಕತೆ ಕುರಿತ ವಿವಾದಗಳ ಬಳಿಕ ದೇಶದ ಪರೀಕ್ಷಾ ವ್ಯವಸ್ಥೆಯನ್ನು ಮತ್ತಷ್ಟು ವಿಶ್ವಾಸಾರ್ಹ ಹಾಗೂ ವಿದ್ಯಾರ್ಥಿ ಸ್ನೇಹಿಯಾಗಿ ರೂಪಿಸಲು ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ವರದಿ ತಿಳಿಸಿದೆ.

ಮುಖ್ಯಾಂಶ

- ಪ್ರವೇಶದಲ್ಲಿ ಬೋರ್ಡ್ ಅಂಕಗಳಿಗೆ ಶೇ.50ರವರೆಗೆ ಪರಿಗಣನೆ ಪ್ರಸ್ತಾವನೆ
- ನೀಟ್-ಜೆಇಇ ಪಠ್ಯಕ್ರಮವನ್ನು ಎನ್‌ಸಿಇಆರ್‌ಟಿ ಪಠ್ಯಕ್ರಮಕ್ಕೆ ಹೊಂದಾಣಿಕೆ ಮಾಡುವ ಚಿಂತನೆ
- ಒಂದಕ್ಕಿಂತ ಹೆಚ್ಚು ಬಾರಿ ಪ್ರವೇಶ ಪರೀಕ್ಷೆ ಬರೆಯುವ ಅವಕಾಶ
- ಅಡಾಪ್ಟಿವ್, ಆನ್-ಡಿಮ್ಯಾಂಡ್ ಕಂಪ್ಯೂಟರ್ ಆಧಾರಿತ ಪರೀಕ್ಷೆ ಜಾರಿಗೆ ಸಿದ್ಧತೆ
- ಪರೀಕ್ಷಾ ಸುಧಾರಣೆಗೆ ಪಿಎಂಒ ನೇರ ಮೇಲ್ವಿಚಾರಣೆ

ವಿಶ್ವಪಾರಂಪರಿಕ ಪಟ್ಟಿಯಿಂದ ಕೈಬಿಡುವ ಭೀತಿ

ತಕ್ಷಶಿಲೆ ವಿರೂಪಕ್ಕೆ ಪಾಕಿಸ್ತಾನ ಸಂಚು

ಇಸ್ಲಾಮಾಬಾದ್: ವೇದಕಾಲದ, ರಾಮಾಯಣ, ಮಹಾಭಾರತ ಕಾಲದಿಂದಲೂ ಪ್ರಸಿದ್ಧವಾಗಿರುವ ತಕ್ಷಶಿಲೆಯ ಪುರಾತನ ತಾಣಗಳನ್ನು ವಿರೂಪಗೊಳಿಸಲು ಪಾಕಿಸ್ತಾನ ಮುಂದಾಗಿದ್ದು, ಯುನೆಸ್ಕೋ ಆಕ್ರೋಶ ವ್ಯಕ್ತಪಡಿಸಿದೆ.

ಈ ಕೂಡಲೇ ಅನಗತ್ಯ ಮರುನಿರ್ಮಾಣ ಕಾಮಗಾರಿಗಳನ್ನು ಕೂಡಲೇ ಹಿಂದಕ್ಕೆ ಪಡೆಯುವಂತೆ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ ಪಾಕಿಸ್ತಾನಕ್ಕೆ ಸೂಚಿಸಿದೆ.

ಮೋಹ್ರಾ ಮೊರಾಡು ಮತ್ತು ಸಿರ್ಕಾಪ್ ಪುರಾತತ್ವ ತಾಣಗಳಲ್ಲಿ ನಡೆದಿರುವ ಹೊಸ ನಿರ್ಮಾಣಗಳು ಸ್ಮಾರಕಗಳ ಮೂಲ ಸ್ವರೂಪ ಮತ್ತು ಐತಿಹಾಸಿಕ ಸಮಗ್ರತೆಗೆ ಧಕ್ಕೆ ತಂದಿವೆ. ಈ ಕಾಮಗಾರಿಗಳನ್ನು ಸರಿಪಡಿಸದಿದ್ದರೆ ತಕ್ಷಶಿಲೆಯನ್ನು ಅಪಾಯದಲ್ಲಿರುವ ವಿಶ್ವಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸುವುದಲ್ಲದೆ, ವಿಶ್ವಪಾರಂಪರಿಕ ಸ್ಥಾನಮಾನವನ್ನೇ ರದ್ದುಗೊಳಿಸುವ ಸಾಧ್ಯತೆ ಇದೆ ಎಂದು ಸಂಸ್ಥೆ ಎಚ್ಚರಿಸಿದೆ. ಇತ್ತೀಚೆಗೆ ಪಾಕಿಸ್ತಾನದ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಈ ವಿಷಯವನ್ನು ಗಂಭೀರವಾಗಿ ಪ್ರಸ್ತಾಪಿಸಲಾಗಿದೆ. ಜರ್ಮನಿಯ ವಿಶ್ವಪಾರಂಪರಿಕ ತಾಣವೊಂದನ್ನು ನಿಯಮ ಉಲ್ಲಂಘನೆಯ ಕಾರಣಕ್ಕೆ ಪಟ್ಟಿಯಿಂದ ಕೈಬಿಟ್ಟಿರುವ ಉದಾಹರಣೆಯನ್ನೂ ಅಧಿಕಾರಿಗಳಿಗೆ ನೆನಪಿಸಲಾಗಿದೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ತಕ್ಷಶಿಲೆಯ ಐತಿಹಾಸಿಕ ಮಹತ್ವ: ಪಾಕಿಸ್ತಾನದ ಪಂಜಾಬ್ ಪ್ರಾಂತದ ರಾವಲ್ಪಿಂಡಿ ಜಿಲ್ಲೆಯಲ್ಲಿ ತಕ್ಷಶಿಲೆ ನೆಲೆಗೊಂಡಿದೆ. ಮಧ್ಯಶಿಲಾಯುಗದ ಗುಹೆ, ನಾಲ್ಕು ಪ್ರಾಚೀನ ವಸತಿ ಪ್ರದೇಶಗಳ ಅವಶೇಷಗಳು, ಬೌದ್ಧ ವಿಹಾರಗಳು, ಮಸೀದಿ ಮತ್ತು ಮದರಸಾಗಳನ್ನು ಒಳಗೊಂಡ ವಿಶಾಲ ಪುರಾತತ್ವ ತಾಣ ಇದಾಗಿದೆ. ತಕ್ಷಶಿಲೆಯ ನಾಲ್ಕು ವಸತಿ ಪ್ರದೇಶಗಳ ಅವಶೇಷಗಳು ಭಾರತೀಯ ಉಪಖಂಡದಲ್ಲಿ ಐದು ಶತಮಾನಗಳಿಗೂ ಹೆಚ್ಚಿನ ಅವಧಿಯಲ್ಲಿ ನಗರ ವ್ಯವಸ್ಥೆ ಹೇಗೆ ವಿಕಸನಗೊಂಡಿತು ಎಂಬುದನ್ನು ಪರಿಚಯಿಸುತ್ತವೆ. ಈ ಐತಿಹಾಸಿಕ ಮಹತ್ವದ ಕಾರಣದಿಂದ ತಕ್ಷಶಿಲೆಗೆ ವಿಶ್ವಪಾರಂಪರಿಕ ತಾಣದ ಮಾನ್ಯತೆ ಲಭಿಸಿದೆ.

ವಿಮಾನಯಾನದಲ್ಲಿ ಗಗನ್ ಕ್ರಾಂತಿ



ಸಾಂದರ್ಭಿಕ ಚಿತ್ರ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ) ಹಾಗೂ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ) ಜಂಟಿಯಾಗಿ ಅಭಿವೃದ್ಧಿಪಡಿಸಿದ ಸ್ವದೇಶಿ ಉಪಗ್ರಹ ಸಂಚಲನಾ ವ್ಯವಸ್ಥೆಯಾದ ಗಗನ್, ಜಿಪಿಎಸ್ ನಿಖರತೆಯನ್ನು ಹೆಚ್ಚಿಸುವ ಮತ್ತು ವಿಮಾನಗಳ ಉಪಗ್ರಹ ಆಧಾರಿತ ಸುರಕ್ಷಿತ ಸಂಚಲನಕ್ಕಾಗಿ ಸಮಗ್ರ ಮಾಹಿತಿ ಒದಗಿಸುವ ಸಾಮರ್ಥ್ಯ ಹೊಂದಿದೆ. ಸ್ವದೇಶಿ ವ್ಯವಸ್ಥೆಯಿಂದ ತಾಂತ್ರಿಕ ಸ್ವಾವಲಂಬನೆ ಮತ್ತು ಉಪಗ್ರಹ ಸಂಚಲನೆಯಲ್ಲಿ ಜಾಗತಿಕ ನಾಯಕತ್ವ ವಹಿಸಬೇಕೆಂಬ ಭಾರತದ ದೃಷ್ಟಿಕೋನ ಬಲಪಡಿಸುತ್ತದೆ. ಇತ್ತೀಚೆಗೆ ಗಗನ್ ಸಹಾಯದಿಂದ ಮೊದಲ ಉಪಗ್ರಹ ಆಧಾರಿತ ವಾಣಿಜ್ಯ ವಿಮಾನ ಲ್ಯಾಂಡಿಂಗ್ ನಡೆಸುವ ಮೂಲಕ ಮೈಲಿಗಲ್ಲು ಬರೆದಿದೆ. ಗಗನ್ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ರಾಷ್ಟ್ರೀಯ ಕಾರ್ಯತಂತ್ರದ ಆಸ್ತಿ

ಗಗನ್ ಯೋಜನೆ 2015ರಿಂದ ಕಾರ್ಯಾಚರಣೆಯಲ್ಲಿದೆ. ಅಭಿವೃದ್ಧಿಪಡಿಸಿದ ದಶಕಗಳ ಬಳಿಕ ರಾಷ್ಟ್ರೀಯ ಕಾರ್ಯತಂತ್ರದ ಆಸ್ತಿಯನ್ನಾಗಿ ಪರಿಗಣಿಸಲಾಗಿದೆ. ವಿಮಾನಯಾನ ಸಂಚಲನೆಗೆ ಬೆನ್ನೆಲುಬಾಗಿ ಇರುವುದಲ್ಲದೆ, ಸಮುದ್ರ ಸಾರಿಗೆ, ರೈಲ್ವೆ, ರಸ್ತೆ ಸಾರಿಗೆ, ವಿಪತ್ತು ನಿರ್ವಹಣೆ, ದೂರಸಂಪರ್ಕ, ರಕ್ಷಣಾ ಮತ್ತು ಭೂ-ಪ್ರಾದೇಶಿಕ ನಕ್ಷೆ ಇತ್ಯಾದಿ ಕ್ಷೇತ್ರಗಳಲ್ಲೂ ಬಳಕೆಯಾಗುತ್ತಿದೆ. ಆದರೆ, ವಿಮಾನಯಾನ ಸುರಕ್ಷತೆಯೇ ಗಗನ್ ಯೋಜನೆಯ ಪ್ರಾಥಮಿಕ ಉದ್ದೇಶ. ನಿಖರ ಲ್ಯಾಂಡಿಂಗ್ ಮತ್ತು ಅಪ್ರೋಚ್ ಪ್ರಕ್ರಿಯೆ, ಮಾರ್ಗ ಸಂಚಲನೆ, ಟರ್ಮಿನಲ್ ಸಂಚಲನೆ, ಏರ್ ಟ್ರಾಫಿಕ್ ನಿರ್ವಹಣೆ, ಇಂಧನ ಮಿತವ್ಯಯ, ವಿಮಾನ ಹಾರಾಟ ದಕ್ಷತೆ ಇತ್ಯಾದಿ ವಿಷಯಗಳನ್ನು ಗಗನ್ ಬೆಂಬಲಿಸುತ್ತದೆ.

2026ರ ಜೂನ್‌ನಲ್ಲಿ ಮೈಲಿಗಲ್ಲು

ಕಳೆದ ತಿಂಗಳು ಗಗನ್ ತಂತ್ರಜ್ಞಾನವನ್ನು ಬಳಸಿಕೊಂಡು ನಾಗರಿಕ ವಿಮಾನಯಾನ ನಿರ್ದೇಶನಾಲಯವು(ಡಿಜಿಸಿಎ), ಇದೇ ಮೊದಲ ಬಾರಿಗೆ ವಾಣಿಜ್ಯ ವಿಮಾನದ ಉಪಗ್ರಹ ಆಧಾರಿತ ಲ್ಯಾಂಡಿಂಗ್ ಮತ್ತು ಅಪ್ರೋಚ್ ನಡೆಸುವ ಮೂಲಕ ದೇಶದ ವಿಮಾನಯಾನ ಇತಿಹಾಸದಲ್ಲಿ ಮೈಲಿಗಲ್ಲು ಬರೆದಿತ್ತು. ರಾಜಸ್ಥಾನದ ಉದಯ್‌ಪುರ್ ವಿಮಾನ ನಿಲ್ದಾಣದಲ್ಲಿ ಜೂ.27ರಂದು ಇಂಡಿಗೋ ಏರ್‌ಬಸ್ ಎ320 ವಿಮಾನವು ಗಗನ್ ನೆರವಿನಿಂದ ಉಪಗ್ರಹ ಆಧಾರಿತ ಲ್ಯಾಂಡಿಂಗ್ ನಡೆಸಿತ್ತು. ಇದು ಭಾರತದ ಉಪಗ್ರಹ ಆಧಾರಿತ ಸಂಚಲನಾ ವ್ಯವಸ್ಥೆಯ ಪ್ರಬುದ್ಧತೆ ಹಾಗೂ ಕಾರ್ಯಾಚರಣಾ ಸನ್ನದ್ಧತೆಯನ್ನು ತೋರಿಸುತ್ತದೆ.

ಸ್ವದೇಶಿ ಸಂಚಲನಾ ಯೋಜನೆ

ಜಿಪಿಎಸ್ ಬೆಂಬಲಿತ ಭೂಸ್ಥಿರ ಉಪಗ್ರಹ ವರ್ಧಿತ ಸಂಚಲನಾ ವ್ಯವಸ್ಥೆ(ಗಗನ್), ಇದು ನಿಖರತೆ, ಲಭ್ಯತೆ, ಸ್ಥಾನ ನಿರ್ಣಯ, ಸಂಚಲನೆ ಹಾಗೂ ನೈಜ ಸಮಯದ ಮಾಹಿತಿಯನ್ನು ಒದಗಿಸುವ ಭಾರತದ ಉಪಗ್ರಹ ಆಧಾರಿತ ವರ್ಧನೆ ವ್ಯವಸ್ಥೆ (ಎಸ್‌ಬಿಎಎಸ್) ಆಗಿದೆ. ಇದನ್ನು ಉಪಗ್ರಹ ಸಂಚಲನಾ ಸಿಗ್ನಲ್‌ಗಳ ನಿಖರತೆ, ವಿಶ್ವಾಸಾರ್ಹತೆ ಹಾಗೂ ಸಮಗ್ರತೆಯನ್ನು ಹೆಚ್ಚಿಸುವ ಉದ್ದೇಶದಿಂದ ಇಸ್ರೋ ಮತ್ತು ವಿಮಾನಯಾನ ಪ್ರಾಧಿಕಾರ ಅಭಿವೃದ್ಧಿಪಡಿಸಿದ ಸ್ವದೇಶಿ ವ್ಯವಸ್ಥೆಯಾಗಿದೆ.

ಗಗನ್ ಅಭಿವೃದ್ಧಿಗೆ ಕಾರಣ?

ವಿಮಾನಗಳ ಸ್ಥಾನ ನಿರ್ಣಯಕ್ಕಾಗಿ ಜಾಗತಿಕ ಸ್ಥಾನ ನಿರ್ಣಯ ವ್ಯವಸ್ಥೆ (ಜಿಪಿಎಸ್) ಬಳಸುವುದಿದ್ದರೂ, ವಾತಾವರಣದ ಸ್ಥಿತಿಗತಿಗಳು ಅಥವಾ ಇತರ ಯಾವುದೇ ಸಣ್ಣ ಪುಟ್ಟ ದೋಷಗಳೂ ವಿಮಾನದ ಸುರಕ್ಷತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಈ ಕಾರಣದಿಂದಾಗಿ ವಿಮಾನಯಾನ ಕ್ಷೇತ್ರದಲ್ಲಿ ಸಂಚಲನಾ ವ್ಯವಸ್ಥೆಯ ಅಗತ್ಯವಿರುತ್ತದೆ. ಭಾರತವು ಒಂದು ಪ್ರಮುಖ ವಿಮಾನಯಾನ ಮಾರುಕಟ್ಟೆಯಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ನಿಖರ ಮತ್ತು ವಿಶ್ವಾಸಾರ್ಹ ಸಂಚಲನಾ ವ್ಯವಸ್ಥೆಯು ರಾಷ್ಟ್ರೀಯ ಅಗತ್ಯತೆಯಾಗಿದೆ. ಜಿಪಿಎಸ್ ಸ್ಟೇಷನ್‌ಗಳು ಹಾಗೂ ಉಪಗ್ರಹಗಳ ಸಂಪರ್ಕಜಾಲದ ಸಹಾಯದಿಂದ ಗಗನ್ ನಿರಂತರ ಜಿಪಿಎಸ್ ಸಿಗ್ನಲ್‌ಗಳ ಮೇಲ್ವಿಚಾರಿಸುತ್ತದೆ. ಇದು ನೈಜ ಸಮಯದ ಮಾಹಿತಿಯನ್ನು ಲೆಕ್ಕಾಚಾರ ಹಾಕಿ, ವಿಮಾನದ ಪೈಲಟ್ ಮತ್ತು ಏರ್ ಟ್ರಾಫಿಕ್ ನಿಯಂತ್ರಕರಿಗೆ ನಿಖರ ಸಂಚಲನಾ ಮಾಹಿತಿಯನ್ನು ನೀಡುತ್ತದೆ. ಈ ಆಧಾರದಲ್ಲಿ ಪೈಲಟ್ ಮತ್ತು ಏರ್ ಟ್ರಾಫಿಕ್ ನಿಯಂತ್ರಕರು ವಿಮಾನದ ನಿಖರ ಸ್ಥಾನವನ್ನು ನಿರ್ಧರಿಸುತ್ತಾರೆ. ಹೀಗಾಗಿ ವಿಮಾನಯಾನ ಕ್ಷೇತ್ರದಲ್ಲಿ ಇದೊಂದು ತಾಂತ್ರಿಕ ಕ್ರಾಂತಿ ಎಂದೇ ಹೇಳಲಾಗುತ್ತಿದೆ.

ಎಲೈಟ್ ಕ್ಲಬ್ ಸೇರಿದ ಭಾರತ

ಗಗನ್ ನಿಯೋಜನೆ ಯಶಸ್ವಿಯಾದ ಬಳಿಕ ಭಾರತವು, ಅತ್ಯಾಧುನಿಕ ಉಪಗ್ರಹ ಆಧಾರಿತ ಸಂಚಲನಾ ವ್ಯವಸ್ಥೆಯನ್ನು ಕಾರ್ಯಗತಗೊಳಿಸಿದ ಎಲೈಟ್ ರಾಷ್ಟ್ರಗಳ ಸಾಲಿಗೆ ಸೇರಿಕೊಂಡಿದೆ. ಜಾಗತಿಕ ಮಟ್ಟದಲ್ಲಿ ಕೆಲವೇ ಕೆಲವು ಎಸ್‌ಬಿಎಎಸ್ ಸಂಪರ್ಕಜಾಲಗಳು ಕಾರ್ಯಾಚರಣೆಯಲ್ಲಿವೆ.

- ದಿ ವೈಡ್ ಏರಿಯಾ ಆಗ್ಮೆಂಟೇಷನ್ ಸಿಸ್ಟಮ್, ಅಮೆರಿಕ
- ದಿ ಯುರೋಪಿಯನ್ ಜಿಯೋಸ್ಟೇಷನರಿ ನ್ಯಾವಿಗೇಷನ್ ಓವರ್‌ಲೇ ಸರ್ವಿಸ್, ಯುರೋಪ್
- ಮಲ್ಟಿ ಫಂಕ್ಷನಲ್ ಸ್ಯಾಟಲೈಟ್ ಆಗ್ಮೆಂಟೇಷನ್ ಸಿಸ್ಟಮ್, ಜಪಾನ್
- ಜಿಪಿಎಸ್ ಏಡೆಡ್ ಜಿಯೊ ಆಗ್ಮೆಂಟೆಡ್ ನ್ಯಾವಿಗೇಷನ್ (ಗಗನ್) ಸಿಸ್ಟಮ್, ಭಾರತ

ಹೇಗೆ ಕಾರ್ಯಾಚರಿಸುತ್ತದೆ?

ಅತ್ಯಾಧುನಿಕ ಸಂಪರ್ಕಜಾಲವಾದ ಗಗನ್, ಜಿಪಿಎಸ್ ಸಿಗ್ನಲ್‌ಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತದೆ ಮತ್ತು ಜಿಪಿಎಸ್ ಸಿಗ್ನಲ್‌ಗಳ ನಿಖರತೆಯನ್ನು ಹೆಚ್ಚಿಸುವ ಕೆಲಸ ಮಾಡುತ್ತದೆ. ಗಗನ್ ಸಂಚಲನಾ ವ್ಯವಸ್ಥೆಯನ್ನಯು 15 ಭಾರತೀಯ ರೆಫರೆನ್ಸ್ ಸ್ಟೇಷನ್, 2 ಮಾಸ್ಟರ್ ಕಂಟ್ರೋಲ್ ಸೆಂಟರ್, 3 ಲ್ಯಾಂಡ್ ಅಪ್ ಲಿಂಕ್ ಸ್ಟೇಷನ್, 4 ಕಮ್ಯುನಿಕೇಶನ್ ನೆಟ್‌ವರ್ಕ್ ಹಾಗೂ ಗಗನ್ ಹೊತ್ತೊಯ್ಯುವ 3 ಜಿಯೋಸ್ಟೇಷನರಿ ಸ್ಯಾಟಲೈಟ್ಸ್ ಒಳಗೊಂಡಿವೆ. ಜಿಸ್ಯಾಟ್-8, ಜಿಸ್ಯಾಟ್-10 ಮತ್ತು ಜಿಸ್ಯಾಟ್-15 ಈ ಉಪಗ್ರಹಗಳಾಗಿವೆ.

ಇನ್ನೆಲ್ಲಿ ಗಗನ್ ಬಳಕೆ?

ನೌಕಾ ಸಂಚಾರ: ಕರಾವಳಿ ಪ್ರದೇಶಗಳಲ್ಲಿ ಮತ್ತು ವ್ಯಸ್ತ ನೌಕಾ ಮಾರ್ಗಗಳಲ್ಲಿ ಹಡಗುಗಳ ಸ್ಥಾನ ನಿರ್ಣಯಕ್ಕಾಗಿ.
ಸಾರಿಗೆ ಸಂಚಾರ: ವಾಹನಗಳ ಟ್ರ್ಯಾಕಿಂಗ್, ಲಾಜಿಸ್ಟಿಕ್ ನಿರ್ವಹಣೆ ಹಾಗೂ ಟ್ರಾಫಿಕ್ ಮೇಲ್ವಿಚಾರಣೆಗೆ.
ರೈಲ್ವೆ ಸಂಚಾರ: ರೈಲುಗಳ ಟ್ರ್ಯಾಕಿಂಗ್, ಸಿಗ್ನಲ್ ವ್ಯವಸ್ಥೆ ಮತ್ತು ರೈಲ್ವೆ ಸುರಕ್ಷತೆಗಾಗಿ.
ವಿಪತ್ತು ನಿರ್ವಹಣೆ: ನೆರೆ, ಚಂಡಮಾರುತ, ಭೂಕಂಪ ಇತ್ಯಾದಿ ನೈಸರ್ಗಿಕ ವಿಪತ್ತು ಸಂದರ್ಭ ನಿಖರ ಮಾಹಿತಿಗಾಗಿ.
ದೂರಸಂಪರ್ಕ: ದೂರಸಂಪರ್ಕ ಮೂಲಸೌಕರ್ಯ ಮತ್ತು ಸಂಪರ್ಕಜಾಲ ಸಮನ್ವಯ ಉದ್ದೇಶಕ್ಕಾಗಿ.

ಕಿರುಸುದ್ದಿ

ಬಿಗಿ ಭದ್ರತೆಯಲ್ಲಿ ಅಮರನಾಥ ಯಾತ್ರೆ ಆರಂಭ

ಶ್ರೀನಗರ: ವಾರ್ಷಿಕ ಅಮರನಾಥ ಯಾತ್ರೆ ಬಿಗಿ ಭದ್ರತೆಯೊಂದಿಗೆ ಗುರುವಾರ ಆರಂಭಗೊಂಡಿದ್ದು, ಜಮ್ಮುವಿನಿಂದ ನೂರಾರು ವಾಹನಗಳಲ್ಲಿ ಹೊರಟ ಭಕ್ತಾದಿಗಳ ಮೊದಲ ತಂಡವು ಯಾತ್ರಾ ಆರಂಭ ಸ್ಥಳ ಬಾಲ್ಟಾಲ್‌ಗೆ ತಲುಪಿದೆ. ಭಕ್ತರ ಮೊದಲ ತಂಡವನ್ನು ಗುರುವಾರ ಕಾಶ್ಮೀರ ಕಣಿವೆಯ ಅನಂತನಾಗ್ ಜಿಲ್ಲೆಯ ಕಾಜಿಗುಂಡ್ ತಲುಪುತ್ತಿದ್ದಂತೆ ಸ್ಥಳೀಯರು ಹೂವಿನ ಮಳೆಗರೆದು ಹೃದಯಪೂರ್ವಕ ಸ್ವಾಗತ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸುಮಾರು 4,822 ಭಕ್ತಾದಿಗಳ ಮೊದಲ ತಂಡವನ್ನು ಜಮ್ಮುವಿನ ಭಗವತಿ ನಗರ ಯಾತ್ರಿ ನಿವಾಸದಿಂದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಕಳುಹಿಸಿಕೊಟ್ಟಿದ್ದರು.

ಟಿವಿಕೆಗೆ ಎಐಎಡಿಎಂಕೆಯ ಮೂವರು ಮಾಜಿ ಸಚಿವರು

ಮಾಮಲ್ಲಪುರಂ: ಪ್ರಮುಖ ರಾಜಕೀಯ ಬೆಳವಣಿಗೆಯೊಂದರಲ್ಲಿ, ಎಐಎಡಿಎಂಕೆಯ ಮೂವರು ಮಾಜಿ ಸಚಿವರು ನೂರಾರು ಬೆಂಬಲಿಗರೊಂದಿಗೆ ಗುರುವಾರ ಆಡಳಿತಾರೂಢ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವನ್ನು ಅಧಿಕೃತವಾಗಿ ಸೇರಿದ್ದಾರೆ ಎಂದು ಪಕ್ಷದ ಮೂಲಗಳು ಖಚಿತಪಡಿಸಿವೆ. ಮಾಜಿ ಸಚಿವರಾದ ಡಾ. ಸಿ. ವಿಜಯಭಾಸ್ಕರ್, ಎಂ. ಆರ್. ವಿಜಯಭಾಸ್ಕರ್ ಮತ್ತು ಎಂ.ಎಸ್.ಎಂ.ಆನಂದನ್ ಅವರು ಪ್ರಧಾನ ಕಾರ್ಯದರ್ಶಿ ಬುಸ್ಸಿ ಎನ್. ಆನಂದ್ ಸಮ್ಮುಖದಲ್ಲಿ ಟಿವಿಕೆ ಸೇರಿದರು. ಪ್ರಸ್ತುತ ಎಐಎಡಿಎಂಕೆ ನಾಯಕತ್ವದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಉಭಯ ವಿಜಯಭಾಸ್ಕರ್‌ಗಳು ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

ಐದು ಉತ್ಪನ್ನಗಳ ವಿರುದ್ಧ ಡಂಪಿಂಗ್ ತನಿಖೆ ಆದೇಶ

ಹೊಸದಿಲ್ಲಿ: ವಾಣಿಜ್ಯ ಖಾತೆಯ ಡೈರೆಕ್ಟರೇಟ್ ಜನರಲ್ ಆಫ್ ಟ್ರೇಡ್ ರೆಮೆಡೀಸ್ (ಡಿಜಿಟಿಆರ್)ಗೆ ದೇಶೀ ಉತ್ಪಾದಕರು ಸಲ್ಲಿಸಿರುವ ಪ್ರತ್ಯೇಕ ದೂರುಗಳ ಮೇರೆಗೆ, ಚೀನಾ ಮತ್ತಿತರ ರಾಷ್ಟ್ರಗಳಿಂದ ಆಮದಾಗುವ 5 ಉತ್ಪನ್ನಗಳವಿರುದ್ಧ ಡಂಪಿಂಗ್ ತನಿಖೆಗೆ ಭಾರತ ಸರಕಾರ ಕ್ರಮ ಕೈಗೊಂಡಿದೆ. ಸೋಡಾ ಲೈಮ್ ಗ್ಲಾಸ್ ಬಾಟಲಿಗಳು, 6X4, 4X2 ಆ್ಯಕ್ಸೆಲ್ ಜೋಡಣೆಯ ಇಲೆಕ್ಟ್ರಿಕ್ ಟ್ರಾಕ್ಟರ್‌ಗಳು, ಸೈನೂರಿಕ್ ಕ್ಲೋರೈಡ್, 100 ಮೈಕ್ರಾನ್‌ಗಳಿಂದಲೂ ದಪ್ಪಗಿನ ಪಾಲಿಥಿಲೀನ್ ಟೆರೆಫ್ಥಾಲೇಟ್ ಫಿಲ್ಮ್ ಹಾಗೂ ಆ್ಯಂಥ್ರಾಸೈಟ್ ಕಲ್ಲಿದ್ದಲಿಂದ ತಯಾರಿಸುವ ಕಾರ್ಬನ್ ರೈಸರುಗಳು ಡಂಪಿಂಗ್ ತನಿಖೆಗೆ ಒಳಗಾಗಲಿರುವ ಆಮದು ಉತ್ಪನ್ನಗಳಾಗಿವೆ. ಔಷಧಾಲಯಗಳು ಆ್ಯಂಟಿಬಯಾಟಿಕ್ಸ್, ವ್ಯಾಕ್ಸಿನ್‌ಗಳು ಹಾಗೂ ಇಂಜೆಕ್ಟ್ ಮಾಡುವ ಔಷಧಿಗಳನ್ನು ಶೇಖರಿಸಿಡಲು ಬಳಸುವ ಮೌಲ್ಡೆಡ್ ಸೋಡಾ ಲೈಮ್ ಗ್ಲಾಸ್ ಬಾಟಲಿಗಳ ಆಮದು ವಿರುದ್ಧ ಡಂಪಿಂಗ್ ತನಿಖೆ ನಡೆಸಬೇಕೆಂದು, ಪಿಜಿಪಿ ಗ್ಲಾಸ್ ಲಿಮಿಟೆಡ್ ಡಿಜಿಟಿಆರ್‌ಗೆ ದೂರು ಸಲ್ಲಿಸಿತ್ತು.

ಪಾಕ್‌ನಲ್ಲಿ 125 ವರ್ಷ ಹಳೆ ಗುರುದ್ವಾರ ಧ್ವಂಸ, ಖಂಡನೆ

ಇಸ್ಲಾಮಾಬಾದ್: ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಸ್ಥಳೀಯ ಉದ್ಯಮಿಯೊಬ್ಬರು 125 ವರ್ಷ ಹಳೆಯ ಐತಿಹಾಸಿಕ ಸಿಖ್ ಧಾರ್ಮಿಕ ಕೇಂದ್ರವನ್ನು ಧ್ವಂಸಗೊಳಿಸಿದ್ದು, ಇದು ಅಲ್ಪಸಂಖ್ಯಾತ ಸಮುದಾಯದ ತೀವ್ರ ಪ್ರತಿಭಟನೆಗೆ ಕಾರಣವಾಗಿದೆ. ಭಾರತವೂ ಈ ನಡೆಯನ್ನು ತೀವ್ರವಾಗಿ ಖಂಡಿಸುತ್ತದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಲಾಹೋರ್‌ನಿಂದ ಸುಮಾರು 70 ಕಿಲೋಮೀಟರ್ ದೂರದಲ್ಲಿರುವ ಫಾರೂಕಾಬಾದ್‌ನ ಗುರುದ್ವಾರ ಶ್ರೀ ಗುರು ಸಿಂಗ್ ಸಭಾ ಸಾಹಿಬ್ ಅನ್ನು ಜೂ.24ರಂದು ಯಾವುದೇ ನಿರಾಕ್ಷೇಪಣಾ ಪತ್ರವಿಲ್ಲದೆ ಕೆಡವಲಾಗಿದೆ. ಭಾರತ ಈ ಕೃತ್ಯವನ್ನು ಉದ್ದೇಶಪೂರ್ವಕ ವಿಧ್ವಂಸಕ ಕೃತ್ಯ ಎಂದು ಕರೆದಿದ್ದು, ಸ್ಥಳೀಯ ಅಧಿಕಾರಿಗಳು ಮತ್ತು ಇವಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್ ಆರಂಭದಲ್ಲಿ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ.

ಸರ್ಕಾರದ ಪ್ರತಿಕ್ರಿಯೆ: ಸಿಖ್ಖರ ಪ್ರತಿಭಟನೆಯ ನಂತರ, ಪಂಜಾಬ್ ಮುಖ್ಯಮಂತ್ರಿ ಮರ್ಯಮ್ ನವಾಜ್ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ರಮೇಶ್ ಸಿಂಗ್ ಆರೋರಾ ತಕ್ಷಣವೇ ಗುರುಧ್ವಾರದ ಪುನರ್‌ನಿರ್ಮಾಣ ಘೋಷಿಸಿದ್ದಾರೆ. ಈ ಸ್ಥಳ 80 ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಪಟ್ಟಿತ್ತು. ಈಗ ಪುನರ್ನಿರ್ಮಾಣದಿಂದ ಅಲ್ಲಿ ನೆಲೆಸಿರುವ ಕುಟುಂಬಗಳು ಹಾಗೂ ಅಂಗಡಿಗಳು ಸ್ಥಳಾಂತರಗೊಳ್ಳಬೇಕಾಗಬಹುದು ಎಂದು ಸ್ಥಳೀಯ ವರ್ತಕರು ತಿಳಿಸಿದ್ದಾರೆ. ಗುರುದ್ವಾರವನ್ನು ಮರುಸ್ಥಾಪಿಸಲು ಮತ್ತು ಅಲ್ಪಸಂಖ್ಯಾತರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಭಾರತ ಪಾಕಿಸ್ತಾನವನ್ನು ಒತ್ತಾಯಿಸಿದೆ.

ಐಎಸ್‌ಐ ಜಾಲ ಭೇದಿಸಿದ ಪೊಲೀಸ್, ನಾಲ್ವರ ಸೆರೆ


ಹೊಸದಿಲ್ಲಿ: ಐಎಸ್‌ಐ ಪ್ರಾಯೋಜಿತ ಅಂತಾರಾಜ್ಯ ಭಯೋತ್ಪಾದನೆ ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆ ಜಾಲವನ್ನು ದಿಲ್ಲಿ ಪೊಲೀಸರ ವಿಶೇಷ ಘಟಕವು ಭೇದಿಸಿದ್ದು, ಪಾಕಿಸ್ತಾನ ಮೂಲದ ನಿರ್ವಾಹಕನ ನಿರ್ದೇಶನದ ಮೇರೆಗೆ ರಾಷ್ಟ್ರ ರಾಜಧಾನಿಯಲ್ಲಿ ಭಯೋತ್ಪಾದಕ ದಾಳಿಗೆ ಸಂಚು ರೂಪಿಸಿದ ನಾಲ್ವರು ಆರೋಪಿಗಳನ್ನು ಬಂಧಿಸಿದೆ.

ಪೊಲೀಸರ ಪ್ರಕಾರ, ಮೂವರು ಆರೋಪಿಗಳನ್ನು ಪಂಜಾಬಿನಿಂದ ಬಂಧಿಸಲಾಗಿದ್ದು, ನಾಲ್ಕನೇ ಆರೋಪಿಯನ್ನು ಅನೇಕ ರಾಜ್ಯಗಳಲ್ಲಿ ತಾಂತ್ರಿಕ ಕಣ್ಗಾವಲು ಮತ್ತು ಸಂಘಟಿತ ದಾಳಿಗಳ ನಂತರ ದಿಲ್ಲಿಯಲ್ಲಿ ಬಂಧಿಸಲಾಗಿದೆ. ತನಿಖಾಧಿಕಾರಿಗಳು ಪಾಕಿಸ್ತಾನ ಮೂಲದ ನಿರ್ವಾಹಕನನ್ನು ಮಾಡ್ಯೂಲ್ ಅನ್ನು ನಿರ್ದೇಶಿಸುತ್ತಿದ್ದ ಶಹಜಾದ್ ಭಟ್ಟಿ ಎಂದು ಗುರುತಿಸಿದ್ದಾರೆ. ಬಂಧಿತ ಆರೋಪಿಗಳನ್ನು ಪಂಜಾಬ್‌ನ ತರಣ್ ತರಣ್ ನಿವಾಸಿ ಶುಭದೀಪ್ ಸಿಂಗ್ ಅಲಿಯಾಸ್ ವಿಶಾಲ್, ಅಮೃತಸರ ನಿವಾಸಿ ಗುರ್ಜಂತ್ ಸಿಂಗ್ ಅಲಿಯಾಸ್ ರಿಷಿ, ಸಜನ್ ಸಿಂಗ್ ಅಲಿಯಾಸ್ ಹನಿ, ಫತೇಘರ್ ಸಾಹಿಬ್ ನಿವಾಸಿ ಗಗನ್ ಪ್ರೀತ್ ಎಂದು ಗುರುತಿಸಲಾಗಿದೆ. ಬಂಧಿತರೆಲ್ಲೂ ಖಲಿಸ್ತಾನ ಸಿದ್ಧಾಂತಗಳನ್ನು ಪಾಲಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆ ವೇಳೆ, ಪೊಲೀಸರು ಆರೋಪಿಗಳಿಂದ ಎರಡು ವಿದೇಶಿ ನಿರ್ಮಿತ ಪಿಸ್ತೂಲುಗಳಾದ ಜಿಗಾನಾ ಮತ್ತು 30 ಬೋರ್ ಪಿಸ್ತೂಲ್ ಜತೆಗೆ ಒಂಬತ್ತು ಕಾರ್ಟ್ರಿಜ್‌ಗಳು ಮತ್ತು ಐದು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಭಾರತೀಯ ಭದ್ರತಾ ಸಂಸ್ಥೆಗಳ ಕಣ್ಗಾವಲನ್ನು ತಪ್ಪಿಸಲು ಶಂಕಿತರು ವಿದೇಶಿ ಮೊಬೈಲ್ ಸಂಖ್ಯೆಗಳ ಮೂಲಕ ಪಾಕಿಸ್ತಾನಿ ನಿರ್ವಾಹಕರೊಂದಿಗೆ ಸಂಪರ್ಕದಲ್ಲಿದ್ದರು ಎಂದು ಆರೋಪಿಸಲಾಗಿದೆ.

ಉಗ್ರವಾದ ಬೇರುಸಹಿತ ಕಿತ್ತೊಗೆಯಲು ಕರೆ

ವಿಶ್ವಸಂಸ್ಥೆ: ಭಯೋತ್ಪಾದಕನೆಂದರೆ ಭಯೋತ್ಪಾದಕನೇ, ಅದರಲ್ಲಿ ಒಳ್ಳೆಯವನು-ಕೆಟ್ಟವನೆಂಬ ಭೇದವಿಲ್ಲ. ಅದರ ಮಾರಣಾಂತಿಕ ಸಿದ್ಧಾಂತವನ್ನು ಬೇರುಸಹಿತ ಕಿತ್ತುಹಾಕಲು ಒಟ್ಟಾಗಿ ಕೆಲಸ ಮಾಡುವಂತೆ ಅಂತಾರಾಷ್ಟ್ರೀಯ ಸಮುದಾಯಕ್ಕೆ ಕರೆ ಭಾರತ ನೀಡಿದೆ. ಭಾರತವು ದಶಕಗಳಿಂದ ಗಡಿಯಾಚೆಗಿನ ಭಯೋತ್ಪಾದನೆಯ ಬಲಿಪಶುವಾಗಿದೆ.



ನಮ್ಮ ನಾಗರಿಕರು ಭಯೋತ್ಪಾದನೆಯ ಬೆಲೆ ತೆತ್ತು ಪ್ರಾಣ ಕಳೆದುಕೊಂಡಿದ್ದಾರೆ. ಕುಟುಂಬಗಳು ಹಾನಿಗೊಳಗಾಗಿದ್ದು, ಸಮಾಜಗಳು ಛಿದ್ರವಾಗಿವೆ.

ಯಾವುದೇ ಸಮರ್ಥನೆ, ರಾಜಕೀಯ ಕಾರಣ ಅಥವಾ ಕಾರ್ಯತಂತ್ರದ ಲೆಕ್ಕಾಚಾರದ ಹೊರತಾಗಿಯೂ, ಭಯೋತ್ಪಾದನೆಯನ್ನು ಅದರ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳಲ್ಲಿ ನಿಸ್ಸಂದಿಗ್ಧವಾಗಿ ಖಂಡಿಸಬೇಕು ಎಂದು ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ರಾಯಭಾರಿ ಹರೀಶ್ ಪರ್ವತನೇನಿ ಹೇಳಿದ್ದಾರೆ. ವಿಶ್ವಸಂಸ್ಥೆಯ ಜಾಗತಿಕ ಭಯೋತ್ಪಾದನಾ ನಿಗ್ರಹ ಕಾರ್ಯತಂತ್ರದ (ಜಿಸಿಟಿಎಸ್) ಒಂಬತ್ತನೇ ವಿಮರ್ಶೆಯನ್ನು ಅಂಗೀಕರಿಸುವ ಕುರಿತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಬುಧವಾರ ಮೌಲ್ಯಮಾಪನ ಮಾಡಿದ ಪಾರ್ವತನೇನಿ, ಭಯೋತ್ಪಾದನೆ ನಿಗ್ರಹದಲ್ಲಿ ಅಂತಾರಾಷ್ಟ್ರೀಯ ಸಮುದಾಯವು ದ್ವಂದ್ವ ಮಾನದಂಡಗಳನ್ನು ತಿರಸ್ಕರಿಸಬೇಕು ಎಂದರು.

ಭಯೋತ್ಪಾದನೆಯ ಅಪರಾಧಿಗಳು, ಸಂಘಟಕರು, ಹಣಕಾಸು ಪೂರೈಕೆದಾರರು ಮತ್ತು ಪ್ರಾಯೋಜಕರನ್ನು ಹೊಣೆಗಾರರನ್ನಾಗಿ ಮಾಡುವ ಮತ್ತು ಅವರನ್ನು ನ್ಯಾಯಕ್ಕೆ ಒಳಪಡಿಸುವ ಬಾಧ್ಯತೆ ಇದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಸದಸ್ಯ ರಾಷ್ಟ್ರಗಳು ಸಂಪೂರ್ಣ ಸಹಕಾರವನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಕೀವ್ ಮೇಲೆ ರಷ್ಯಾ ದಾಳಿ: 20 ಸಾವು

ಕೀವ್: ಉಕ್ರೇನ್ ರಾಜಧಾನಿಯ ಮೇಲೆ ರಷ್ಯಾ ನಡೆಸಿದ ಸತತ 11 ಗಂಟೆಗಳ ಭೀಕರ ಡ್ರೋನ್ ಮತ್ತು ಕ್ಷಿಪಣಿ ದಾಳಿಯಲ್ಲಿ ಕನಿಷ್ಠ 20 ನಾಗರಿಕರು ಮೃತಪಟ್ಟಿದ್ದು, 90ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಅಲ್ಲಿನ ಸ್ಥಳೀಯ ಆಡಳಿತ ಮತ್ತು ಮಿಲಿಟರಿ ಅಧಿಕಾರಿಗಳು ತಿಳಿಸಿದ್ದಾರೆ. ರಷ್ಯಾದ ಪ್ರಮುಖ ತೈಲ ಸಂಸ್ಕರಣಾಗಾರಗಳ ಮೇಲೆ ಉಕ್ರೇನ್ ನಡೆಸುತ್ತಿರುವ 40 ದಿನಗಳ ಸುದೀರ್ಘ ಕ್ಷಿಪಣಿ ದಾಳಿಗೆ ಪ್ರತಿಯಾಗಿ ಈ ದಾಳಿ ನಡೆಸಲಾಗಿದೆ ಎಂದು ಮಾಸ್ಕೋ ಸ್ಪಷ್ಟಪಡಿಸಿದೆ. ರಷ್ಯಾದ ರಕ್ಷಣಾ ಸಚಿವಾಲಯ ಈ ಬೃಹತ್ ವೈಮಾನಿಕ ದಾಳಿ ಮಿಲಿಟರಿ ಸಂಬಂಧಿತ ಸೌಲಭ್ಯಗಳು, ಇಂಧನ ಸಂಕೀರ್ಣಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಹೇಳಿದೆ. ಕೀವ್ ಸಿಟಿ ಮಿಲಿಟರಿ ಆಡಳಿತದ ಮುಖ್ಯಸ್ಥ ತೈಮೂರ್ ಟ್ಕಾಚೆಂಕೊ, ವಸತಿ ಸಮುಚ್ಚಯಗಳು ಸೇರಿದಂತೆ 30 ಕ್ಕೂ ಹೆಚ್ಚು ಸ್ಥಳಗಳಲ್ಲಿ ವ್ಯಾಪಕ ಹಾನಿಯಾಗಿದೆ ಎಂದಿದ್ದಾರೆ. ಕುಸಿದ ಬಹುಮಹಡಿ ಕಟ್ಟಡಗಳ ಅಡಿಯಲ್ಲಿ ನಿವಾಸಿಗಳು ಸಿಲುಕಿಕೊಂಡರು ಎನ್ನಲಾಗಿದೆ. ಸಾವಿರಾರು ಜನರು ಸುರಂಗಮಾರ್ಗಗಳಲ್ಲಿ ಆಶ್ರಯ ಪಡೆದಿದ್ದಾರೆ.

ವಿಭಜನೆ ವೇಳೆ ಆತ್ಮಸಾಕ್ಷಿಗೆ ಬದ್ಧರಾಗಿದ್ದರು: ಮೋಹನ್ ಭಾಗ್ವತ್

ಭಾರತಕ್ಕೆ ಅಂದು ಬಂದವರು ನಿರಾಶ್ರಿತರಲ್ಲ

ನಾಗ್ಪುರ: 1947ರಲ್ಲಿ ಅಖಂಡ ಭಾರತ ವಿಭಜನೆ ಸಂದರ್ಭ ತಮ್ಮ ಆಸ್ತಿಪಾಸ್ತಿ ಮನೆಗಳನ್ನು ಕಳಕೊಂಡರೂ, ನಾನಾ ರೀತಿಯ ಹಿಂಸೆಗಳ ಅನುಭವಿಸಿದ ಹೊರತೂ, ಆತ್ಮಸಾಕ್ಷಿಗೆ ಬದ್ಧರಾಗಿ ಭಾರತ ಮತ್ತು ಧರ್ಮವನ್ನೇ ನೆಚ್ಚಿಕೊಂಡು ಭಾರತಕ್ಕೆ ಬಂದವರು ವಲಸಿಗರಲ್ಲ, ಬದಲಾಗಿ ರಾಷ್ಟ್ರಭಕ್ತ ಹೋರಾಟಗಾರರು. ದೇಶ ವಿಭಜನೆ ಸಂದರ್ಭ ಇವರು ಸಹಿಸಲಸಾಧ್ಯ ನೋವು-ಬವಣೆಗಳೆಲ್ಲವ ಸಹಿಸಿಕೊಳ್ಳಲು ತಾಯ್ನಾಡು ಮತ್ತು ಧರ್ಮದ ಮೇಲೆ ಇವರಿಗಿದ್ದ ಪ್ರೀತಿ-ಶ್ರದ್ಧೆ ಕಾರಣವೆಂದು ಆರೆಸ್ಸೆಸ್ ಸರಸಂಘಚಾಲಕ್ ಮೋಹನ್ ಭಾಗ್ವತ್ ಹೇಳಿದ್ದಾರೆ.



ಹೊಸತಾಗಿ ರಚನೆಗೊಂಡ ಪಾಕಿಸ್ತಾನದಲ್ಲಿದ್ದ, ತಲತಲಾಂತರಗಳ ಪರಿಶ್ರಮದಿಂದ ಸಂಪಾದಿಸಿದಂತಹ ತಮ್ಮ ಸಂಪತ್ತು, ಭೂಮಿ, ವ್ಯಾಪಾರವಹಿವಾಟುಗಳೆಲ್ಲವನ್ನು ತೊರೆದು ಭಾರತಕ್ಕೆ ಬರಲು ಹಾತೊರೆದ ಇವರು ನೈಜ ಹೋರಾಟಗಾರರು ಎಂದು ಭಾಗ್ವತ್ ಬಣ್ಣಿಸಿದ್ದಾರೆ. ಭಾರತದಲ್ಲಿ ನಿರ್ಭೀತಿಯಿಂದ ಜೀವಿಸಲು ಮತ್ತು ತಮ್ಮ ಧರ್ಮಾಚರಣೆ ಮಾಡಲು ಈ ಮಂದಿ ಬಯಸಿದ್ದರು. ಹಾಗಾಗೇ ದೇಶದ ವಿಭಜನೆ ನಂತರದಲ್ಲಿ ಈ ಜನರು ಭಾರತಕ್ಕೆ ಓಡೋಡಿ ಬಂದರು ಎಂದು ಭಾಗ್ವತ್ ನಾಗ್ಪುರದ ಸಿಂಧು ಎಜುಕೇಶನ್ ಸೊಸೈಟಿಯ 75ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ನೆರೆದ ಜನರನ್ನು ಉದ್ದೇಶಿಸಿದ ತಮ್ಮ ಭಾಷಣದಲ್ಲಿ ವಿವರಿಸಿದರು.

ದೇಶ ವಿಭಜನೆ ಸಂದರ್ಭ ಸಂತ್ರಸ್ತರಾದವರು ಖಂಡಿತವಾಗಿ ವಲಸಿಗರಲ್ಲ. ವಲಸಿಗರೆಂಬ ಶಬ್ದವನ್ನ ಆ ಸನ್ನಿವೇಶದಲ್ಲಿ ತಪ್ಪಾಗಿ ಬಳಸಲಾಗಿದೆ. ಅವರು ಸಂಘರ್ಷಾರ್ಥ್ ಯೋಧರು ಅಥವಾ ನಿಜವಾದ ಹೋರಾಟಗಾರರು. ಅವರು ತಾಯ್ನಾಡಿನ ಮೇಲಿದ್ದ ಭಕ್ತಿ ಪ್ರೀತಿ, ಧರ್ಮದ ಮೇಲಿದ್ದ ಪ್ರೀತಿಯಿಂದ ಹೋರಾಡಿದ್ದರು. ಹೋರಾಟದಲ್ಲಿ ಸೋತರೂ ಅದಕ್ಕೆ ಅವರ ತಪ್ಪೊಂದೇ ಕಾರಣವಲ್ಲ.

ಅಖಂಡ ಭಾರತವನ್ನು ಕಾಪಾಡುವ ಹೋರಾಟದಲ್ಲಿ ನಾವೆಲ್ಲರು ಸೋತೆವು. ಆದರೂ ಅವರೇನನ್ನ ಆಯ್ಕೆ ಮಾಡಿದರು? ಅವರು ಭವಿಷ್ಯವನ್ನು ಆಯ್ಕೆ ಮಾಡಲಿಲ್ಲ, ಸಂಪತ್ತು ಅವರ ಆಯ್ಕೆಯಾಗಲಿಲ್ಲ. ಅವರು ತಾಯ್ನಾಡನ್ನು ಆರಿಸಿದರು, ತಮ್ಮ ಧರ್ಮವನ್ನು ಆಯ್ಕೆ ಮಾಡಿದರು ಎಂದು ಭಾಗ್ವತ್ ಗಮನ ಸೆಳೆದರು.

ಕಠಿಣ ಸನ್ನಿವೇಶಗಳಿಗೆ ಎದೆಗುಂದಕೂಡದು: ಸಂಕಷ್ಟದ ಸಮಯದಲ್ಲೂ ಪರಿಶ್ರಮ ಮುಖ್ಯ. ಉದ್ಯೋಗಕ್ಕಿಂತಲೂ ಶಿಕ್ಷಣ ಪ್ರಧಾನ. ಶಿಕ್ಷಣವು ಮೌಲ್ಯಗಳು, ಸಾಮಾಜಿಕ ಜಾಗೃತಿಗೆ ಪ್ರೇರಣಾದಾಯಿಯೆಂದು ಭಾಗ್ವತ್ ಹೇಳಿದರು.


ಕಾಕಿನಾಡ ಅಧಿವೇಶನದಲ್ಲಿ ಬ್ರಿಟಿಷ್ ಸರ್ಕಾರದ ಕ್ರಮಕ್ಕೆ ಖಂಡನೆ

ಸಾವರ್ಕರ್ ಬಿಡುಗಡೆಗೆ 1923ರಲ್ಲೇ ಕೈ ನಿರ್ಣಯ

ಪುಣೆ: ಸ್ವಾತಂತ್ರ್ಯ ಹೋರಾಟಗಾರ ವೀರ ವಿನಾಯಕ ದಾಮೋದರ ಸಾವರ್ಕರ್ ಅವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 1923ರ ಕಾಕಿನಾಡ ಅಧಿವೇಶನದಲ್ಲೇ ನಿರ್ಣಯ ಅಂಗೀಕರಿಸಿತ್ತು ಎಂದು ಸಾವರ್ಕರ್ ಅವರ ಮರಿ ಮೊಮ್ಮಗ ಸತ್ಯಕಿ ಸಾವರ್ಕರ್ ಪುಣೆಯ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಮಾನನಷ್ಟ ಪ್ರಕರಣದ ವಿಚಾರಣೆ ವೇಳೆ ಬುಧವಾರ ಪಾಟೀಸವಾಲಿಗೆ ಉತ್ತರಿಸಿದ ಸತ್ಯಕಿ, ಸಾವರ್ಕರ್ ಅವರ ಜನಪ್ರಿಯತೆ ದಿನೇ ದಿನೇ ಹೆಚ್ಚುತ್ತಿದ್ದ ಕಾರಣ ಹಾಗೂ ಅವರ ಬಿಡುಗಡೆಗೆ ಸಾರ್ವಜನಿಕ ಒತ್ತಡ ನಿರ್ಮಾಣವಾಗಿದ್ದರಿಂದ ಕಾಂಗ್ರೆಸ್ ನಿರ್ಣಯ ಕೈಗೊಂಡಿತ್ತು ಎಂದು ಪ್ರತಿಪಾದಿಸಿದರು.

ಮುಂದಿನ ವಿಚಾರಣೆಯ ವೇಳೆ ಕಾಂಗ್ರೆಸ್ ನಿರ್ಣಯದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಾಗಿ ಸತ್ಯಕಿ ತಿಳಿಸಿದ್ದಾರೆ. ಸಾವರ್ಕರ್ ಅವರು ಬಿಡುಗಡೆಗೆ ಅರ್ಹರಾಗಿದ್ದರೂ ಬ್ರಿಟಿಷ್ ಸರ್ಕಾರ ಅವರನ್ನು ಪ್ರತೀಕಾರದ ಮನೋಭಾವದಿಂದ ಜೈಲಿನಲ್ಲಿರಿಸಿದೆ ಎಂದು ಆ ನಿರ್ಣಯದಲ್ಲಿ ಹೇಳಲಾಗಿದೆ ಎನ್ನಲಾಗಿದೆ. ವೀರ ಸಾವರ್ಕರ್ 1911ರಿಂದ 1921ರವರೆಗೆ ಅಂಡಮಾನ್‌ನ ಸೆಲ್ಯುಲರ್ ಜೈಲಿನಲ್ಲಿದ್ದರು. ಬಳಿಕ ಅವರನ್ನು ಮುಖ್ಯಭೂಮಿಯ ರತ್ನಗಿರಿ ಜೈಲಿಗೆ ವರ್ಗಾಯಿಸಲಾಗಿತ್ತು. 1924ರಲ್ಲಿ ಷರತ್ತುಬದ್ಧವಾಗಿ ಬಿಡುಗಡೆ ಮಾಡಲಾಗಿದ್ದು, 1937ರವರೆಗೆ ರತ್ನಗಿರಿ ಜಿಲ್ಲೆಯಲ್ಲಿಯೇ ವಾಸಿಸುವ ನಿರ್ಬಂಧ ವಿಧಿಸಲಾಗಿತ್ತು.



Sjt. Vinayak Damodar Savarkar.

Lastly, the President moved:

This Congress condemns the continued incarceration of Vinayak Damodar Savarkar, and expresses its sympathy with Dr. N. D. Savarkar and other members of his family.

Mr. Savarkar, as you know, received a life sentence from this Bureaucracy. His brother also received, I believe, the same sentence. And, I may add, as a prisoner myself, I occupied the room in the Bijapur jail where the brother of Sj. Vinayak Damodar Savarkar, Sj. Ganesh Savarkar was living. Mr. Ganesh Savarkar has been released. But Mr. Vinayak Damodar Savarkar has not been released and this is the reason why we are seeking an exception in condemning the action of the Government with regard to one single prisoner. The reason is that this poor man is being most vindictively kept in jail when he is entitled to be released. And yet, this Government calls itself a Christian Government and says, "Revenge is God's Law." Friends, the time is past when we will have to protest against these things. But by passing this resolution, we only show to the whole world how the Government is dealing in this matter in a most vindictive and mean spirit. I hope you all accept this resolution.

The resolution was carried unanimously.

Sjt. Vinayak Damodar Savarkar.
The President.

ಕ್ಷಮಾದಾನ ಅರ್ಜಿಯಿಂದ ಬಿಡುಗಡೆಯಾಗಿಲ್ಲ

ಸಾವರ್ಕರ್ ಸಲ್ಲಿಸಿದ್ದ ಅರ್ಜಿಗಳ ಭಾಷೆ ಬ್ರಿಟಿಷರಿಗೆ ಶರಣಾಗುವ ಅಥವಾ ನಿಷ್ಠೆ ವ್ಯಕ್ತಪಡಿಸುವ ರೀತಿಯಲ್ಲಿತ್ತು ಎಂಬ ವಾದವನ್ನೂ ಸತ್ಯಕಿ ತಳ್ಳಿಹಾಕಿದರು. ಕ್ಷಮಾದಾನ ಅರ್ಜಿಗಳ ಕಾರಣದಿಂದ ಸಾವರ್ಕರ್ ಬಿಡುಗಡೆಯಾಗಿರಲಿಲ್ಲ ಎಂದು ಅವರು ನ್ಯಾಯಾಲಯದಲ್ಲಿ ಹೇಳಿದರು.

ವೈದ್ಯರ ನಿರ್ಲಕ್ಷ್ಯಕ್ಕೆ ಮಹಿಳೆ ಸಾವು: ಆರೋಪ

ಗದಗ: ನಗರದ ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆ(ಜಿಮ್ಸ್) ಆಸ್ಪತ್ರೆ ಹೊರಗೆ ಮಹಿಳೆಯೊಬ್ಬರು ಮೃತಪಟ್ಟಿದ್ದು, ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಮುಂಡರಗಿ ತಾಲೂಕಿನ ಶೀರನಹಳ್ಳಿಯ ರತ್ನವ್ವ (45) ಮೃತರು. ಹೊಟ್ಟೆನೋವಿನಿಂದ ಬಳಲುತ್ತಿದ್ದ ಮಹಿಳೆಯನ್ನು ಬುಧವಾರ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರು ಸಕಾಲಕ್ಕೆ ಚಿಕಿತ್ಸೆ ನೀಡದೆ, ಅಲೆದಾಡಿಸಿದರು. ಗುರುವಾರ ಬೇರೆ ಆಸ್ಪತ್ರೆಗೆ ಕರೆದೊಯ್ಯಲು ಹೊರಗೆ ಕರೆತಂದಾಗ ಕುಸಿದು ಬಿದ್ದು ಮೃತಪಟ್ಟರು ಎಂದು ಮೃತರ ಪುತ್ರ ನಾಗರಾಜ ತಿಳಿಸಿದರು. ಈ ಕುರಿತು ಪ್ರತಿಕ್ರಿಯಿಸಿದ ಜಿಮ್ಸ್ ನಿರ್ದೇಶಕ ಡಾ.ಬಸವರಾಜ ಬೊಮ್ಮನಹಳ್ಳಿ, 'ಮಹಿಳೆಗೆ ದೇಹದ ತುಂಬ ಚರ್ಮದ ಸಮಸ್ಯೆ ಇತ್ತು. ಈ ಮೊದಲು ಸ್ಟಿರಾಯಿಡ್ಸ್ ಪಡೆದಿದ್ದಾಗಿ ತಿಳಿಸಿದ್ದರು. ಚರ್ಮರೋಗ ಹೊರ ರೋಗಿಗಳ ವಿಭಾಗದಲ್ಲಿ ದಾಖಲಿಸಿಕೊಂಡು, ತಜ್ಞವೈದ್ಯರು ಅಗತ್ಯ ಚಿಕಿತ್ಸೆ, ಮಾತ್ರೆ ನೀಡಿದ್ದರು. ಗುರುವಾರ ಸ್ಕ್ಯಾನಿಂಗ್ ಮಾಡಿಸಲು ತಿಳಿಸಿದ್ದೆವು. ಮಹಿಳೆಗೆ ಚಿಕಿತ್ಸೆ ಅಗತ್ಯವಿದೆ ಎಂದು ತಿಳಿಸಿದರೂ, ಬೇರೆಡೆ ಹೋಗುವುದಾಗಿ ಹೇಳಿದರು. ಮಹಿಳೆ ಸ್ಥೂಲಕಾಯ ಇದ್ದಿದ್ದರಿಂದ ಹೃದಯಾಘಾತ ಆಗಿರಬಹುದು ಎಂದು ಸ್ಪಷ್ಟನೆ ನೀಡಿದರು.

ರೂ.9 ಲಕ್ಷ ಮೌಲ್ಯದ ಹೆರಾಯಿನ್ ಜಪ್ತಿ: ಡ್ರಗ್ಸ್ ಪೆಡ್ಲರ್ ಬಂಧನ

ಬೆಳಗಾವಿ: ನಗರದಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಟದ ವಿರುದ್ಧ ಸಿಸಿಬಿ (ಅಪರಾಧ ವಿಭಾಗ) ಪೊಲೀಸರು ನಡೆಸುತ್ತಿರುವ ಕಾರ್ಯಾಚರಣೆಗೆ ಮತ್ತೊಂದು ಮಹತ್ವದ ಯಶಸ್ಸು ಲಭಿಸಿದೆ.

ಕೆಎಸ್‌ಆರ್‌ಟಿಸಿ ಹಳೆ ಬಸ್ ನಿಲ್ದಾಣದ ಸಮೀಪದ ಸಾರ್ವಜನಿಕ ಸ್ಥಳದಲ್ಲಿ ಹೆರಾಯಿನ್ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು, ಸುಮಾರು ರೂ.9 ಲಕ್ಷ ಮೌಲ್ಯದ ಹೆರಾಯಿನ್ ಸೇರಿದಂತೆ ಮೊಬೈಲ್ ಫೋನ್ ಹಾಗೂ ನಗದು ವಶಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿಯನ್ನು ನಗರದ ಗಂಗಾಧರ ನಗರದ ನಿವಾಸಿ ರಾಘವೇಂದ್ರ ಗೋಪಾಲ ಮುರ್ಕಟನಾಳ (36) ಎಂದು ಗುರುತಿಸಲಾಗಿದೆ. ಪೊಲೀಸರಿಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಸಿಸಿಬಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ ನಾಯಕ ಅವರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು. ನಗರದ ಕೆಎಸ್‌ಆರ್‌ಟಿಸಿ ಹಳೆ ಪಾರ್ಕಿಂಗ್ ಪ್ರದೇಶದ ಇಂದಿರಾ ಕ್ಯಾಂಟೀನ್ ಪಕ್ಕದ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯು ಗ್ರಾಹಕರಿಗಾಗಿ ಕಾಯುತ್ತಿದ್ದು, ಯುವಕರಿಗೆ ನಿಷೇಧಿತ ಮಾದಕ ವಸ್ತು ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ಪೊಲೀಸರು ದಾಳಿ ನಡೆಸಿ ಆತನನ್ನು ಬಂಧಿಸಿದರು. ತಪಾಸಣೆ ವೇಳೆ ಆರೋಪಿಯ ಬಳಿ 45.18 ಗ್ರಾಂ ಹೆರಾಯಿನ್ ಪತ್ತೆಯಾಗಿದ್ದು, ಇದರ ಅಂದಾಜು ಮೌಲ್ಯ ರೂ.9 ಲಕ್ಷ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿರುವ ಪೊಲೀಸರು, ಹೆರಾಯಿನ್ ಎಲ್ಲಿಂದ ಪೂರೈಕೆಯಾಗಿತ್ತು. ಇದರ ಹಿಂದೆ ಕಾರ್ಯನಿರ್ವಹಿಸುತ್ತಿರುವ ಜಾಲ ಯಾವುದು, ನಗರದಲ್ಲಿ ಯಾರಿಗೆ ಈ ಮಾದಕ ವಸ್ತು ಪೂರೈಕೆ ಮಾಡಲು ಸಂಚು ರೂಪಿಸಲಾಗಿತ್ತು ಎಂಬ ಕುರಿತು ತನಿಖೆಯನ್ನು ತೀವ್ರಗೊಳಿಸಿದ್ದಾರೆ.

ಈ ಸಂಬಂಧ ಬೆಳಗಾವಿಯ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಜು.5ಕ್ಕೆ ಗಾಯನ-ವಾದನಗಳ ನಿನಾದ

ಧಾರವಾಡ: ಹಿಂದುಸ್ತಾನಿ ಗಾಯಕಿ ಗಂಗೂಬಾಯಿ ಹಾನಗಲ್ ಸಂಸ್ಮರಣಾರ್ಥ ಗಾಯನ-ವಾದನಗಳ ನಿನಾದ ಸಂಗೀತೋತ್ಸವ ಜು.5ರಂದು ಸಂಜೆ 5.30ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಆಯೋಜಿಸಿದ್ದಾಗಿ ಕಲಾಪೋಷಕಿ ಡಾ.ಸೌಭಾಗ್ಯ ಕುಲಕರ್ಣಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರಿನ ಯುವ ಕಲಾವಿದ ಸರ್ಫರಾಜ್ ಖಾನ್ ಅವರ ಸಾರಂಗಿ ವಾದನದ ಮೂಲಕ ಸಂಗೀತೋತ್ಸವಕ್ಕೆ ಚಾಲನೆ ದೊರೆಯಲಿದೆ. ಪುಣೆಯ ಮಂಜೂಷಾ ಪಾಟೀಲ ಕುಲಕರ್ಣಿ ಅವರ ಗಾಯನ ಪ್ರಸ್ತುತಪಡಿಸುವುದಾಗಿ ಮಾಹಿತಿ



ನೀಡಿದರು.

ಅಲ್ಲದೇ, ಕೇಶವ ಜೋಶಿ, ಹೇಮಂತ ಜೋಶಿ ತಬಲಾ, ಬಸವರಾಜ ಹಿರೇಮಠ ಅವರು ಸಂವಾದಿನಿ ಸಾಥ್ ನೀಡಲಿದ್ದು, ಭಾರತೀಯ ಸಂಗೀತ ವಿದ್ಯಾಲಯ, ಗಂಗೂಬಾಯಿ ಹಾನಗಲ್ ಸಂಗೀತ ವಿದ್ಯಾಲಯ ಆಶ್ರಯದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗಾಯಕ ಶಫೀಕ್ ಖಾನ್, ದೀಪಕ್ ಪಾಟೀಲ ಇದ್ದರು.

ಎಸ್‌ಐಆರ್‌ಗೆ ಎಲ್ಲರೂ ಸಹಕರಿಸಿ: ಕಾಗೇರಿ

ಚನ್ನಮ್ಮನ ಕಿತ್ತೂರು: ಕಾಂಗ್ರೆಸ್‌ನವರು ದೇಶದಲ್ಲಿ ಸೋಲುತ್ತಿದ್ದಾರೆ. ಅದನ್ನು ಮುಚ್ಚಿಕೊಳ್ಳಲು ಚುನಾವಣಾ ಆಯೋಗ, ಇವಿಎಂ, ಮತ್ತು



ಅಧಿಕಾರಿಗಳ ಮೇಲೆ ಗೂಬೆ ಕೂರಿಸುತ್ತಿದ್ದಾರೆ. ಈಗ ನಡೆಯುತ್ತಿರುವ ಎಸ್‌ಐಆರ್ ಬಗ್ಗೆ ಕಾಂಗ್ರೆಸ್‌ನವರು ಎದುರಿಗೆ ವಿರೋಧ ವ್ಯಕ್ತಪಡಿಸಿದರೂ ಅವರು ಸಹಕರಿಸುತ್ತಿದ್ದಾರೆಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಸಮೀಪದ ಬೈಲೂರ ಗ್ರಾಮದಲ್ಲಿ ನಡೆದ ಕಾರ್ಯಕ್ರಮಕ್ಕೆ ಆಗಮಿಸಿದ ವೇಳೆ ಪತ್ರಕರ್ತ ಪ್ರಶ್ನೆಗೆ ಉತ್ತರಿಸಿದ ಅವರು, ಇದಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದರು. ಕಿತ್ತೂರಿಗೆ ಸಂಸದರ ಅನುದಾನದ ಪ್ರಶ್ನೆಗೆ ಉತ್ತರಿಸಿದ ಅವರು, ಅನುದಾನವನ್ನು ಕೊಟ್ಟಿದ್ದು ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಪ್ರತಿಯೊಬ್ಬರನ್ನು ತಲುಪುತ್ತಿವೆ. ಕಿತ್ತೂರು ತಾಲೂಕಾಗಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ಮುಂತಾದವುಗಳು ನಮ್ಮ ಸರ್ಕಾರವಿದ್ದಾಗ ಪ್ರಾರಂಭಿಸಲಾಗಿದ್ದು, ಅಭಿವೃದ್ಧಿ ಪ್ರಾಧಿಕಾರಕ್ಕೆ ಅಂದಿನ ಶಾಸಕ ಮಹಾಂತೇಶ ದೊಡ್ಡಗೌಡರ ಅವರ ಅವಧಿಯಲ್ಲಿ ಹೆಚ್ಚಿನ ಅನುದಾನ ತಂದಿದ್ದರಿಂದಲೇ ಅಭಿವೃದ್ಧಿ ಕಾರ್ಯಗಳಾಗಿವೆ. ಕಿತ್ತೂರು ಅಭಿವೃದ್ಧಿ ಹೊಂದಬೇಕಾದರೆ ಬಿಜೆಪಿ ಸರ್ಕಾರದಿಂದ ಮಾತ್ರ ಸಾಧ್ಯವೆಂದರು.

ಧಾರವಾಡ-ಬೆಳಗಾವಿ ರೈಲ್ವೆ ಯೋಜನೆಯ ಬೆಳಗಾವಿ ಜಿಲ್ಲೆಯ ಭೂಸ್ವಾಧೀನ ಪ್ರಕ್ರಿಯೇ ಮುಗಿದಿದ್ದು, ಕಾಮಗಾರಿ ವಿಳಂಬವಾಗಲು ಹುಬ್ಬಳ್ಳಿ, ಧಾರವಾಡ ಭಾಗದ ಭೂಸ್ವಾದಿನ ಪ್ರಕ್ರಿಯೇ ಕಾರಣ ಆದಕ್ಕಾಗಿ ಮುಖ್ಯಮಂತ್ರಿಗಳು, ಉಸ್ತುವಾರಿ ಸಚಿವರು ಭೂಸ್ವಾಧೀನ ಕಾರ್ಯ ಸರಳೀಕರಣಗೊಳಿಸಬೇಕೆಂದರು.

ನದಿಯಲ್ಲಿ ಬಿದ್ದ ಟಿಪ್ಪರ್ ತೆಗೆಯಲು ಹರಸಾಹಸ

ಕೊಲ್ಹಾರ: ವಿಜಯಪುರ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಬುಧವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಟಿಪ್ಪರ್ ಕೊಲ್ಹಾರ ಸೇತುವೆಯಿಂದ ಕೃಷ್ಣಾ ನದಿಗೆ ಉರುಳಿದ ಘಟನೆ ಸಂಬಂಧಿಸಿದಂತೆ ಬುಧವಾರ ನಿಂತ ರಕ್ಷಣಾ ಕಾರ್ಯಾಚರಣೆ ಗುರುವಾರ ಎರಡು ಕ್ರೇನ್‌ಗಳ ಮೂಲಕ ಅಗ್ನಿಶಾಮಕದಳಹಾಗೂಪೊಲೀಸರಿಂದ ಸುಮಾರು 2 ಗಂಟೆವರೆಗೆ ನಡೆದ ರಕ್ಷಣಾ ಕಾರ್ಯಾಚರಣೆ ನಡೆಸಿದರು.

ಅತಿಯಾದ ಗಾಳಿ ಬಿಸುತ್ತಿರುವ



ಕಾರಣ ಟಿಪ್ಪರ್‌ನ ಹಿಂಭಾಗ ಸೇತುವೆಗೆ ತಾಗುತ್ತಿದ್ದು ಕಾರ್ಯಾಚರಣೆ ವಿಳಂಬವಾಗುತ್ತಿರುವುದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ಸುಮಾರು ಹತ್ತು ಕಿಲೋಮೀಟರವರೆಗೆ ವಾಹನಗಳನ್ನು ತಡೆದು ನಿಲ್ಲಿಸಿದ್ದರಿಂದ ಟ್ರಾಫಿಕ್ ಜಾಮ್ ಆಗುತ್ತಿರುವುದರಿಂದ ಕಾರ್ಯಾಚರಣೆ ಶುಕ್ರವಾರಕ್ಕೆ ಮುಂದೂಡಲಾಯಿತು. ಟ್ರಾಫಿಕ್ ಜಾಮ್‌ನಿಂದ ವಿದ್ಯಾರ್ಥಿಗಳಿಗೆ, ಕೂಲಿಕಾರ್ಮಿಕರಿಗೆ ಹಾಗೂ ಸಾರ್ವಜನಿಕರು ಬಹಳ ತೊಂದರೆ ಅನುಭವಿಸಿದರು. ಟಿಪ್ಪರ್ ಚಾಲಕ ಬಾಗಲಕೋಟೆ ಜಿಲ್ಲೆ ಬೆಣ್ಣೂರ ಗ್ರಾಮದ ಸಂತೋಷ ಕೋಟಿ ವಾಹನದೊಳಗೆ ಸಿಲುಕಿದ್ದು ಇನ್ನು ಪತ್ತೆಯಾಗಿಲ್ಲ.

ಕೊಲೆ ಬೆದರಿಕೆ: ಪ್ರಕರಣ ದಾಖಲು

ಕಾರವಾರ: ಕೈಗಾ ಅಣುವಿದ್ಯುತ್ ಸ್ಥಾವರದ ಘಟಕವೊಂದರ ನಿರ್ಮಾಣ ಕಾಮಗಾರಿ ಮಾಡುತ್ತಿರುವ ಮೇಘಾ ಕಂಪನಿಯ ಡೆಪ್ಯುಟಿ ಮ್ಯಾನೇಜರ್‌ಗೆ ಸ್ಥಳೀಯ ವ್ಯಕ್ತಿಯೋರ್ವ ಕೊಲೆ ಬೆದರಿಕೆ ಹಾಕಿದ ಘಟನೆಯು ನಡೆದಿದ್ದು, ಈ ಕುರಿತು ಮಲ್ಲಾಪುರ ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲೆಯಾಗಿದೆ. ಮೇಘಾ ಕಂಪನಿಯ ಮೆಕಾನಿಕಲ್ ಡೆಪ್ಯುಟಿ ಮ್ಯಾನೇಜರ ವೆಂಕಟ ನಾಯ್ಡು ಕೈಗಾ ಅಣುವಿದ್ಯುತ್ ನಿರ್ಮಾಣ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಮೂಲತಃ ಆಂಧ್ರಪ್ರದೇಶದ ಮಂಡಲ ಪುಟ್ಲೂರು ತಾಲೂಕಿನವರಾಗಿದ್ದಾರೆ. ಮಲ್ಲಾಪುರ ಮೂಲದ ಅಂಬರೀಷ ಬಾಂದೇಕರ ಎಂಬಾತ ವೆಂಕಟ ನಾಯ್ಡು ಕಚೇರಿಗೆ ಬಂದು ನೀವು ಹೊರ ರಾಜ್ಯದಿಂದ ಬಂದವರು, ನಾನು ಹೇಳಿದ ವ್ಯಕ್ತಿಗೆ ಮಾತ್ರ ಕೆಲಸ ನೀಡಬೇಕು. ಕಂಪನಿಯಲ್ಲಿ ತಾನು ಹೇಳೀದ ವ್ಯಕ್ತಿಗೆ ಒಳ್ಳೆಯ ಗಾಡಿ ನೀಡಬೇಕು. ಹೊರ ರಾಜ್ಯದಿಂದ ಬಂದ ಡ್ರೈವರಿಗೆ ಹಳೆಯ ಗಾಡಿ ನೀಡಬೇಕು. ನಾನು ಹೇಳಿದ ಹಾಗೆ ಕೆಲಸದ ಸಮಯವನ್ನು ನಿಗದಿ ಪಡಿಸಬೇಕು. ನನ್ನ ಮಾತನನ್ನು ಕೇಳದೇ ಇದ್ದರೆ ಮಲ್ಲಾಪುರಕ್ಕೆ ಬಂದಾಗ ನಿಮ್ಮನ್ನು ಬಿಡುವುದಿಲ್ಲ ಎಂದು ಅವಾಚ್ಯವಾಗಿ ಬೈಯ್ದು ಕೊಲೆ ಬೆದರಿಕೆ ಹಾಕಿದ್ದಾಗಿ ಡೆಪ್ಯುಟಿ ಮ್ಯಾನೇಜರ್ ವೆಂಕಟ ನಾಯ್ಡು ಮಲ್ಲಾಪುರ ಠಾಣೆಗೆ ಪ್ರಕರಣ ದಾಖಲಿಸಿದ್ದಾರೆ. ಈ ಕುರಿಡು ಮಲ್ಲಾಪುರ ಠಾಣೆಯಲ್ಲಿ ಅಂಬರೀಷ ಬಾಂದೇಕರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿಪ್ ಉಲ್ಲಂಘಿಸಿಲ್ಲ: ಹಲಗೇಕರ

ಖಾನಾಪುರ: ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿಲ್ಲ ಎಂದು ಹಲಗೇಕರ ಹೇಳಿದರು. ಗುರುವಾರ ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಪಕ್ಷ ಸೂಚಿಸಿದ ಅಭ್ಯರ್ಥಿಗೆ ಮತದಾನ ಮಾಡಿದ್ದು, 2023ರ ಚುನಾವಣೆಯಲ್ಲಿ ಬಹುಮತದಿಂದ ಸೋಲು ಅನುಭವಿಸಿದ್ದ ಕ್ಷೇತ್ರದ ಮಾಜಿ ಶಾಸಕರು ಹತಾಶ ಭಾವನೆಯಿಂದ ತಮ್ಮ ಮೇಲೆ ಈ ರೀತಿ ತಲೆಬುಡ ಇಲ್ಲದ ಆರೋಪ ಮಾಡಿದ್ದಾರೆ. ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ, ತಾವು ಯಾವ ತಪ್ಪನ್ನೂ ಮಾಡಿಲ್ಲ ಮತ್ತು ಈ ವಿಚಾರವಾಗಿ ಯಾವುದೇ ತನಿಖೆಗೂ ತಾವು ಸಿದ್ಧ ಎಂದು ಎಂದು ಶಾಸಕ ವಿಠ್ಠಲ ಹಲಗೇಕರ ಸ್ಪಷ್ಟಪಡಿಸಿದರು.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಕಡಲೆಕಾಳು	2089	5986
ಉದ್ದಿನಕಾಳು	3010	6871
ಅವರೇಕಾಯಿ	2236	2236
ನೆಲಗಡಲೆ (ಶೇಂಗಾ)	5900	6500
ಜೋಳ	2395	4645
ಮಡಿಕೆ (ಮಟಕಿ)	15136	15136
ಈರುಳ್ಳಿ	500	2200
ಆಲೂಗಡ್ಡೆ	1200	1900
ಕುಸುಬೆ	4949	5109
ಸೋಯಾಬಿನ್	5270	6676
ಗೋಧಿ	2459	2459

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕಾಧಿಕಾರಿಗಳು ಕಾರ್ಯಾಲಯ
ಶ್ರೀಉತ್ಸವಾಂಬ ದೇವಸ್ಥಾನ ಉಜ್ಜಿನಿದುರ್ಗ

ಹರಪನಹಳ್ಳಿ ತಾಲ್ಲೂಕು ವಿಜಯನಗರ ಜಿಲ್ಲೆ. ಮೊ:9164205516,
E.mail:utsavambhatemple@gmail.com

ಸಂ/ಉ.ದೇ.ಉ/ಸಿಆರ್/ 09/2026-27   ದಿನಾಂಕ:01-07-2026

ಪ್ರಕಟಣೆ

ವಿಷಯ:-ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಉಜ್ಜಿನಿ ದುರ್ಗಗ್ರಾಮದ ಶ್ರೀಉತ್ಸವಾಂಬ ದೇವಸ್ಥಾನದ ಅನುವಂಶಿಯ ಅಕ್ಕಿಯನ್ನು ಬಹಿರಂಗ ಹರಾಜು ಮೂಲಕ ಉತ್ತಮ ಬಿಡ್ಡುದಾರರಿಗೆ ನೀಡುವ ಬಗ್ಗೆ.

ಉಲ್ಲೇಖ:- ಮಾನ್ಯ ಸಹಾಯಕ ಆಯುಕ್ತರು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ ವಿಜಯನಗರ ಜಿಲ್ಲೆ ಬಳ್ಳಾರಿ ಇವರ ಪತ್ರ ಸಂಖ್ಯೆ ಕಂ.ಆರ್‌ಆರ್‌ಸಿ: 10/2026-27 ದಿ:22-06-2026.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಉಜ್ಜಿನಿ ದುರ್ಗ ಗ್ರಾಮದ ಶ್ರೀಉತ್ಸವಾಂಬ ದೇವಾಲಯಕ್ಕೆ ಆಗಮಿಸುವ ಭಕ್ತಾದಿಗಳು ದೇವಿಗೆ ನೀಡುವ ಅಕ್ಕಿ ಸಮರ್ಪಣೆಯಾಗುವ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಪ್ರತಿ ನಿತ್ಯ ಅನ್ನ ದಾಸೋಹದ ವ್ಯವಸ್ಥೆ ಕಲ್ಪಿಸಿಕೊಡಲಾಗಿರುತ್ತದೆ. ಆದ್ದಾಗ್ಯೂ ದಾಸೋಹಕ್ಕೆ ಉಪಯೋಗಿಸಿ ಮಿಕ್ಕಿರುವ ಅನುವಂಶಿಯ ಅಕ್ಕಿಯನ್ನು ದಿನಾಂಕ: 10-07-2026 ರಂದು ಪೂರ್ವಾಹ್ನ 12:00 ಕ್ಕೆ ಗಂಟೆಗೆ ದೇವಾಲಯದ ಆವರಣದಲ್ಲಿ ಮಾನ್ಯ ಸಹಾಯಕಆಯುಕ್ತರು ಹಿಂದೂ ಧಾರ್ಮಿಕ ದತ್ತಿ ಇಲಾಖೆ ಬಳ್ಳಾರಿ/ವಿಜಯನಗರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಮತ್ತು ಗ್ರಾಮಸ್ಥರು, ಭಕ್ತಾದಿಗಳ ಸಮಕ್ಷಮದಲ್ಲಿ ಹರಾಜು ಮಾಡಲಾಗುವುದು. ಆಸಕ್ತರು ಬಹಿರಂಗ ಹರಾಜಿನಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಭಾಗವಹಿಸಲು ಕೋರಲಾಗಿದೆ.

ಹರಾಜಿನಲ್ಲಿ ಭಾಗವಹಿಸುವವರು ಈ ಕೆಳಗಿನ ಅಂಶಗಳಿಗೆ ಬದ್ಧರಾಗಿರುವುದು:

1.ಹರಾಜಿನಲ್ಲಿ ಭಾಗವಹಿಸುವವರು ರೂ.50,000/- ಗಳ ಮುಂಗಡ ಹಣವನ್ನು ಹರಾಜು ಪ್ರಾರಂಭವಾಗುವದಕ್ಕಿಂತ ಮುಂಚಿತವಾಗಿ ದೇವಾಲಯದ ಕಛೇರಿಯಲ್ಲಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬೇಕು. ಮುಂಗಡ ಹಣವನ್ನು ಸಂದಾಯ ಮಾಡದಿದ್ದಲ್ಲಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
2.ಸರ್ಕಾರಿ ದರಕ್ಕಿಂತ ಕಡಿಮೆ ನೀಡಲು ಅವಕಾಶ ಇರುವುದಿಲ್ಲ.
3.ಉತ್ತಮ ಬಿಡ್ಡುದಾರರು ಹರಾಜಿನ ಪೂರ್ಣ ಹಣವನ್ನು ಸ್ಥಳದಲ್ಲಿಯೇ ಪಾವತಿಸುವುದು ಹಾಗೂ ಸ್ವಂತ ಖರ್ಚಿನಲ್ಲಿ ಅಕ್ಕಿಗಳನ್ನು ಗುಡ್ಡದ ಕೆಳಗಡೆ ತೆಗೆದುಕೊಂಡು ಹೋಗತಕ್ಕದ್ದು.
4.ಹೆಚ್ಚಿಗೆ ಬಿಡ್ಡು ಆದ ಬಿಡ್ಡು ದಾರರು ಹರಾಜಿನ ಮುಂಗಡ ಹಣವನ್ನು ಹೊರತುಪಡಿಸಿ ಉಳಿದವರ ಮುಂಗಡ ಹಣವನ್ನು ಹಿಂದಿರುಗಿಸಲಾಗುವುದು.
5.ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಹರಾಜಿನಲ್ಲಿ ಪಡೆದ ಅನುವಂಶಿಯ ಅಕ್ಕಿಯ ಪೂರ್ಣ ಹಣವನ್ನು ಒಂದು ವಾರದೊಳಗೆ ಪಾವತಿಸತಕ್ಕದ್ದು ಮತ್ತು ಅನುವಂಶಿಯ ಅಕ್ಕಿಯನ್ನು ಹರಾಜು ನಡೆದ 7 ದಿನಗಳೊಳಗಾಗಿ ತೆಗೆದುಕೊಂಡು ಹೋಗತಕ್ಕದ್ದು.
6.ಹರಾಜು ಮುಗಿದ ನಿಗದಿತ ಅವಧಿಯೊಳಗೆ ಹಣ ಪಾವತಿಸದಿದ್ದಲ್ಲಿ ಅಕ್ಕಿಯನ್ನು ತೆಗೆದುಕೊಂಡು ಹೋಗಲು ವಿಫಲರಾದಲ್ಲಿ ಮುಂಗಡ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7.ಹರಾಜನ್ನು ಅಂಗೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರ ಮಾನ್ಯ ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ, ವಿಜಯನಗರ /ಬಳ್ಳಾರಿ ಜಿಲ್ಲೆ ಬಳ್ಳಾರಿ ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸಹಿ/-ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀಉತ್ಸವಾಂಬ ದೇವಸ್ಥಾನ ಶ್ರೀಕ್ಷೇತ್ರ ಉಜ್ಜಿನಿದುರ್ಗ ಹರಪನಹಳ್ಳಿ ತಾಲ್ಲೂಕು ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/165

ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರಸಂ:ಕಾಲೋಇ:ತುಮ:ಟಿ-3: ಟೆಂಡರ್ 20:2026-27,   ದಿನಾಂಕ:25-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 20/2026-27 ದಿನಾಂಕ 25-06-2026

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 20/2026-27 ದಿನಾಂಕ 25-06-2026 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054-04-337-0-01-154 ಜಿಲ್ಲಾ ರಸ್ತೆಗಳು ಸುಧಾರಣೆ 5054-04-337-0-01-132 ಜಿಲ್ಲಾ ರಸ್ತೆಗಳು ಇತರೆ ಬಂಡವಾಳ ವೆಚ್ಚಗಳು ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಗರಿಷ್ಠ ಟೆಂಡರಿಗಿಟ್ಟ ಮೊತ್ತ ರೂ. 158.04 ಲಕ್ಷಗಳು ಕನಿಷ್ಠ ಟೆಂಡರಿಗಿಟ್ಟ ಮೊತ್ತ ರೂ. 156.97, ಗರಿಷ್ಠ ಇ.ಎಂ.ಡಿ ಮೊತ್ತ ರೂ. 2,37,066/- ಕನಿಷ್ಠ ಇ.ಎಂ.ಡಿ ಮೊತ್ತ ರೂ. 2,35,461/-, ಅರ್ಹ ಗುತ್ತಿಗೆದಾರರು 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 03-07-2026 ರ 17-00 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 25-06-2026 ರಿಂದ 04-07-2026 ರ 16-00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 04-07-2026 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 06-07-2026 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 07-07-2026 ರ 17-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-63/26-27/Oysters

ಕ್ರಿಮಿ ನಂ: 62/2026

ಮಾನ್ಯ 1ನೇ ಜೆ ಎಮ್ ಎಫ್ ಸಿ ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರ : ಮೃತ್ಯುಂಜಯ ತಂದೆ ಶಿವಲಿಂಗಪ್ಪ ಪಟ್ಟಣಶೆಟ್ಟಿ, ವಯಾ: 55 ವರ್ಷ, ಉದ್ಯೋಗ: ಖಾಸಗಿ ಕೆಲಸ, ಪ್ಲಾಟ್ ನಂ. 33 ಸಂಸ್ಕಾರ ರೆಸಿಡೆನ್ಸಿ ಅಪಾರ್ಟಮೆಂಟ್, ಸಾಯಿ ಗಾರ್ಡನ್, ಭವಾನಿ ನಗರ, ಕೇಶ್ವಾಪೂರ ಹುಬ್ಬಳ್ಳಿ ತಾ: ಹುಬ್ಬಳ್ಳಿ ಜಿ:ಧಾರವಾಡ,

ವಿರುದ್ಧ

ಎದುರುಗಾರರು : ಸಹಾಯಕ ಆಯುಕ್ತರು, ಹು-ಧಾ ಮಹಾನಗರ ಪಾಲಿಕೆ, ಜನನ ಮರಣ ನೊಂದಣಿ ವಿಭಾಗ, ವಲಯ ನಂ.08, ಟೌನ್ ಹಾಲ್ ಜೆ.ಸಿ ನಗರ, ಹುಬ್ಬಳ್ಳಿ

ಜನನ ವ ಮರಣ ನೋಂದಣಿ ಕಾಯ್ದೆಯ ಕಲಂ 13(3)ರ ಕೆಳಗೆ ಸಲ್ಲಿಸಿದ ಪ್ರಕರಣದಲ್ಲಿ.

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರನ ತಾಯಿಯಾದ ನಿರ್ಮಲಾ ಕೋಂ. ಶಿವಲಿಂಗಪ್ಪ ಪಟ್ಟಣಶೆಟ್ಟಿ ಇವರು ದಿನಾಂಕ: 30-04-2018 ರಂದು ಮುತಗಿ ಕಾಂಪ್ಲೆಕ್ಸ್ ರಾಘವೇಂದ್ರ ಮಠದ ಹತ್ತಿರ, ತೊರವಿಗಲ್ಲಿ ಸಿಬಿಟಿ, ಹುಬ್ಬಳ್ಳಿಯ ಮನೆಯಲ್ಲಿ ಮೃತಳಾಗಿದ್ದು ಇರುತ್ತದೆ. ಸದರೀಯವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರನು ಈ ಅರ್ಜಿಯನ್ನು ದಾಖಲಿಸಿರುತ್ತಾನೆ. ಆದ್ದರಿಂದ, ಸದರೀ ಅರ್ಜಿದಾರನ ತಾಯಿಯ ಮರಣದ ಬಗ್ಗೆ ಜನನ-ವ ಮರಣ ನೋಂದಣಾಧಿಕಾರಿಗಳ ರಜಿಸ್ಟರದಲ್ಲಿ ದಾಖಲಿಸುವ ಕುರಿತು ಯಾರದಾದರೂ ಯಾವುದೇ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಅಂತವರ ಹಾಜರಾತಿಗಾಗಿ ಮಾನ್ಯ ನ್ಯಾಯಾಲಯದವರು ದಿನಾಂಕ: 28-07-2026 ರಂದು ಬೆಳಿಗ್ಗೆ 11.00 ಘಂಟೆಗೆ ಮುದ್ದತ್ತು ನೇಮಿಸಿದ್ದು ಇರುತ್ತದೆ.

ಆದ್ದರಿಂದ ಸದರೀ ಹಿತಾಸಕ್ತಿ ವ ತಕರಾರು ಇರುವವರು ತಾವಾಗಲಿ ಅಥವಾ ತಮ್ಮ ವಕೀಲರ ಮೂಲಕವಾಗಲಿ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರು ಹಾಜರಾತಿಯಲ್ಲಿ ನಿರ್ಣಯಿಸಲಾಗುವುದು.

ನನ್ನ ಸಹಿಯೊಂದಿಗೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿ:02-07-2026 ರಂದು ನೀಡಲಾಯಿತು.

ಹುಬ್ಬಳ್ಳಿ, 02-07-2026

(ಕೋರ್ಟ ಮೊಹರು)

ಎಲ್.ಪಿ.ಮೊರಬ
ಅರ್ಜಿದಾರರ ಪರ ವಕೀಲರು

ಸಹಿ/- ಶಿರಸ್ತೇದಾರರೊಂದಿಗೆ
ಮಾನ್ಯ 1ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

ಸಾರ್ವಜನಿಕ ನೋಟಿಸು

ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ,


ನಮ್ಮ ಪಕ್ಷಗಾರರು ಗದಗ ಜಿಲ್ಲಾ ನರಗುಂದ ತಾಲೂಕ ಕಣಕೀಕೊಪ್ಪ ಗ್ರಾಮದ ಹದ್ದಿಯಲ್ಲಿರುವ ಜಮೀನು ಇದರ (1) ಸರ್ವೆ ನಂ. 90, ಒಟ್ಟು ಕ್ಷೇತ್ರ 15 ಎಕರೆ 24 ಗುಂಟೆ ಆಕಾರ ರೂ.24-34 ಪೈಸೆ ಇದ್ದು ಇದರ ಮಾಲಕರಾದ 1) ಶಿವರಾಯನಗೌಡ ತಂದೆ ತೀರ್ಥಗೌಡ ಪಾಟೀಲ 2) ವಸಂತಗೌಡ ತಂದೆ ತೀರ್ಥಗೌಡ ಪಾಟೀಲ 3) ಪ್ರಕಾಶ ತಂದೆ ತೀರ್ಥಗೌಡ ಪಾಟೀಲ ಸಾ; ಕಣಕಿಕೊಪ್ಪ ತಾ: ನರಗುಂದ ಜಿ ಗದಗ. ಹಾಗೂ (2) ಸರ್ವೆ ನಂ. 19/3, ಪಿ.ಕೆ. 24 ಗುಂಟೆ ಒಟ್ಟು ಕ್ಷೇತ್ರ 5ಎಕರೆ *ಅ 31ಗುಂಟೆ ಆಕಾರ ರೂ.09-02 ಪೈಸೆ ಇದ್ದು ಸದರಿ ಜಮೀನಿನ ಮಾಲಕರಾದ ಶಿವರಾಯನಗೌಡ ತಂದೆ ತೀರ್ಥಗೌಡ ಪಾಟೀಲ, ಸಾ॥ ಕಣಕಿಕೊಪ್ಪ ತಾ: ನರಗುಂದ ಜಿ ಗದಗ ಇವರಿಂದ ಸರ್ವೆ ನಂ. 90, ಒಟ್ಟು ಕ್ಷೇತ್ರ 15 ಎಕರೆ 24 ಗುಂಟೆ ಇದರ ಖರೀದಿ ಸಂಚಗಾರ ಪತ್ರವನ್ನು, ಮಾನ್ಯ ಉಪನೋಂದಣಾಧಿಕಾರಿಗಳು, ನರಗುಂದ ಇವರ ಕಾರ್ಯಾಲಯದಲ್ಲಿ ನೋಂದಾಯಿಸಿದ್ದು ನೋಂದಣಿ ಸಂಖ್ಯೆ NRG-1-02669-2023-24, ದಿ: 07-11-2023 ಅಂತ ಇರುತ್ತದೆ ಹಾಗೂ . ಸರ್ವೆ ನಂ. 19/3, ಪಿ.ಕೆ. 24 ಗುಂಟೆ ಒಟ್ಟು ಕ್ಷೇತ್ರ 5ಎಕರೆ -31ಗುಂಟೆ ನೇದ್ದರ ಖರೀದಿ ಸಂಚಗಾರಪತ್ರವನ್ನು ಮಾನ್ಯ ಉಪನೋಂದಣಾಧಿಕಾರಿಗಳು, ನರಗುಂದ ಇವರ ಕಾರ್ಯಾಲಯದಲ್ಲಿ ನೋಂದಾಯಿಸಿದ್ದು ಅದರ ಸಂಖ್ಯೆ NRG-1-00581-2024-25 ದಿ: 20-05-2024 ಅಂತ ಇರುತ್ತದೆ.

ಹೀಗೆ ಮೇಲ್ಕಾಣಿಸಿದ ಜಮೀನುಗಳನ್ನು ನಮ್ಮ ಪಕ್ಷಗಾರರು ಖರೀದಿ ವ್ಯವಹಾರ ಮಾಡಿಕೊಂಡಿದ್ದು ಸದರಿ ಜಮೀನುಗಳ ಮಾಲೀಕರು ಇಲ್ಲಿವರೆಗೆ ನಮ್ಮ ಪಕ್ಷಗಾರರಿಗೆ ಖರೀದಿ ನೊಂದ ಮಾಡಿಕೊಟ್ಟಿರುವದಿಲ್ಲವಾದ್ದರಿಂದ ನಮ್ಮ ಪಕ್ಷಗಾರರು

ಸದರಿ ಖರೀದಿ ಪತ್ರವನ್ನು ನೊಂದಾಯಿಸಿಕೊಡುವಂತೆ ತಮ್ಮ ವಕೀಲರ ಮುಖಾಂತರ ದಿ:05-05-2026 ರಂದು ಕಾನೂನುಬದ್ಧ ನೋಟೀಸು ಕೊಟ್ಟಿರುತ್ತಾರೆ.

ಆದ್ದರಿಂದ ಸಾರ್ವಜನಿಕರಲ್ಲಿ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಜಮೀನುಗಳ ಬಗ್ಗೆ ಯಾರು ಯಾವುದೇ ತರಹದ ಖರೀದಿ ವ್ಯವಹಾರ, ಕಬ್ಜಾವತ್ತಿ ಕರಾರು ಪತ್ರ, ಸಂಚಗಾರ ಪತ್ರ, ಇನ್ನಿತರೆ ಯಾವುದೇ ಪತ್ರಗಳನ್ನು ಮಾಡಬಾರದು ಒಂದು ವೇಳೆ ಮಾಡಿದಲ್ಲಿ ಅದರಿಂದಾಗುವ ಲುಕ್ಸಾನಕ್ಕೆ ಪಾತ್ರರಾಗುತ್ತೀರಿ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಬಸವರಾಜ ವಿಸ್.ಅಸುಂಡಿ, ವಕೀಲರು,
ಹುಬ್ಬಳ್ಳಿ, 02-07-2026   ಆರ್.ಎಮ್.ಲೋಹಿಯಾನಗರ, ಗೋಕುಲ ರಸ್ತೆ, ಹುಬ್ಬಳ್ಳಿ, ಮೊ : 9945254259



ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

Public Notice

CIVIL M.A.61/2026 EXHIBIT NO.7 IN THE COURT OF 5th Jt. C.J.S.D AT, BARAMATI, Dist. PUNE, (Maharashtra) HON'BLE Shri N.B. JADHAV

1.Sanjeev Shivalingayya @ Shivaling Hiremath Age: 68 Yrs, Occ: Nil R.at-Flat No.5 Shatavari Apartment Wagholikar Park, Near desai Estate Baramati, Tal-Baramati, Dist: Pune Mob- 9623177711
2.Shivyogi Shivalingayya @ Shivaling Hiremath Age: 72 Yrs, Occ: Nil R.at-Rajmudra Flat No.8, House No.424/A, Ashoknagar Near Ganpati Temple, Baramati, Tal-Baramati, Dist:Pune Mob-9011040230
3. Shailaja Jaydeva Hiremath Age: 75Yrs, Occ: Household R.at-No.307, 9th Cross ATH Layout Shantinagar, Bangalore, Mob-9448483729
4. Seema Prabhudev@ Prabhu Hiremath Age: 63 Yrs, Occ: Household C/o-Sachin Gopal Saha R.at-I Building Flat No.22 Near Aundh Telephone Exchange Aundh, Pune, Dist: Pune-7 Mob-9860769545
..Applicant

V/s

Nobody ...   ..Defendant

Notice is hereby given that the applicants have filed an application before this Hon'ble Court under Chapter 2 of the Bombay Regulation Act, 1827, seeking the issuance of a Legal Heirship Certificate. whereas, Late Shivling/Shivalingayya sangayya @ Sangamnath Hiremath expired on 03 July 2009 at Baramati, District Pune.   .. ..Defendant

Notice is hereby given that the applicants have filed an application before this Hon'ble Court under Chapter 2 of the Bombay Regulation Act, 1827, seeking the issuance of a Legal Heirship Certificate. whereas, Late Shivling/Shivalingayya sangayya @ Sangamnath Hiremath expired on 03 July 2009 at Baramati, District Pune.

Applicants Nos. 1 to 4 require the Legal Heirship Certificate for ancestral property on name of deceased Shivling at village Ingalagi (Hobli Lokapur), Tal-Mudhool, Dist-Bagalkote in Survery No.72 area 3 acres and 10 gunthas and was expired in Baramati so the revenue officers from village Ingalagi, Tal. Mudhool had asked to bring heirship certificate to applicant No.3 from Baramati Court as her father expired in Baramati. Therefore, they have filed the present application before this Hon'ble Court for the grant of the legal Heirship Certificate.

Accordingly, all persons are hereby informed that if anyone has any objection to the grant of the said legal Heirship Certificate, they should appear personally or through a duly authorized advocate before this Court on 30 July 2026 at 11.00 A.M. and file their objections.

If no objections are received and no person appears on the said date, the Court shall proceed to hear and decide the application ex parte in accordance with Law. Any person failing to appear or submit objections on or before the said date shall not be entitled to raise any objection thereafter, and the matter shall be decided on the basis of the available record.

Given under my hand and the seal of this Hon'ble Court on this 19th day of June, 2026

By order of the Court
Sd/- Superintendent
Civil Court Senior Division, Baramati, Dist-Pune (Maharashtra)

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910/877 ಇ-ಮೇಲ್: purchase@kmf.coop

ಕಹಾಮ/ಖರೀದಿ/ಟೆಂಡರ್-939/2026-27   ದಿನಾಂಕ: 02.07.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕಹಾಮದ ನಂದಿನಿ ಹಾಲು ಉತ್ಪನ್ನ ಘಟಕ ಬೆಂಗಳೂರು ಘಟಕದ ಉಪಯೋಗಕ್ಕೆ ಅಗತ್ಯವಿರುವ ಈ ಕೆಳಕಂಡ ಸಾಮಗ್ರಿಗಳನ್ನು ಖರೀದಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Tender Nos	Particulars	Approx. Qty. & EMD Details
1	KMF/PUR/Tender-939/2026-27 (KMF/2026-27/ IND2349)	Supply of Packing Materials to KMF Nandini Milk Products Plant, Bangalore for a Period of one year	Please refer the tender document

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 16.07.2026 ರಂದು 05.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ, ಪರಿಮಾಣ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಆರ್. ಎ. ನಂ. 5079/2023

ಮಾನ್ಯ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹುಬ್ಬಳ್ಳಿ ಇವರ ನ್ಯಾಯಾಲಯಕ್ಕೆ

ಮೇಲ್ಮನವಿದಾರಳು : ಮಂಜುಳಾ ಉರ್ಫ ರೇಣುಕಾ ಕೋಂ ಸುರೇಶ ಕಂಚಗಾರ ಸಾ॥ ರಾಜೇಂದ್ರನಗರ ಹಾವೇರಿ

ವಿರುದ್ಧ

ಎದುರುಗಾರರು : ಸಾವಕ್ಕ ಕೋಂ ದ್ಯಾಮಪ್ಪ ದೊಡ್ಡಣ್ಣನವರ ಉರ್ಫ ನೂಲ್ವಿ ಸಾ॥ ಕೇಶ್ವಾಪುರ ತಳವಾರ ಓಣಿ ಹುಬ್ಬಳ್ಳಿ, ತಾ॥ ಕಲಘಟಗಿ, ಜಿ॥ ಧಾರವಾಡ, ಹಾಗೂ ಇತರರು

ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮ 20 (1) (ಎ) ನೇದ್ದರ ಅಡಿಯಲ್ಲಿ ನೋಟಿಸ್/ಸಮನ್ಸ

ಈ ಮೇಲ್ಮನವಿಯಲ್ಲಿನ 3ನೇ ಎದುರುಗಾರಳಾದ ಮಹದೇವಿ ಕೋಂ ನಾಗೇಶಪ್ಪ ರೊಟ್ಟಿಗವಾಡ, ವಯಾ: 62 ವರ್ಷಗಳು, ಉದ್ಯೋಗ: ಮನೆಕೆಲಸ, ಸಾ॥ ಮಧುರಾ ಕಾಲೋನಿ, ರಮೇಶ ಭವನ ಹುಬ್ಬಳ್ಳಿ, ತಾ॥ ಹುಬ್ಬಳ್ಳಿ, ಜಿ॥ ಧಾರವಾಡ ಇವರ ಹಾಜರಾತಿಗಾಗಿ ಈ ಮಾನ್ಯ ನ್ಯಾಯಾಲಯದವರು ದಿನಾಂಕ: 03-08-2026 ರಂದು ಈ ಮೇಲ್ಮನವಿಯಲ್ಲಿ ಮುದ್ದತ್ತು ನೇಮಿಸಿರುತ್ತಾರೆ. ಕಾರಣ ಸದರಿ ದಿನಾಂಕದಂದು ನೀವಾಗಲಿ ನಿಮ್ಮ ಪರ ವಕೀಲರ ಮೂಲಕವಾಗಲಿ ಮಾನ್ಯ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹುಬ್ಬಳ್ಳಿ ಇವರ ನ್ಯಾಯಾಲಕ್ಕೆ ಹಾಜರಾಗಿ ನಿಮ್ಮ ಪರ ತಕರಾರು ವಗೈರೆ ಇದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಬೇಕು. ತಪ್ಪಿದ್ದಲ್ಲಿ ನೀವು ಗೈರು ಹಾಜರು ಅಂತಾ ಪರಿಗಣಿಸಿ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶ ಮಾಡಲಾಗುವುದು ಮತ್ತು ಸದರಿ ಮೇಲ್ಮನವಿಯನ್ನು ನಿಮ್ಮ ಗೈರು ಹಾಜರಾತಿಯಲ್ಲಿ ವಿಚಾರಣೆ ಮಾಡಲಾಗುವುದು ಅಂತಾ ಈ ನೋಟಿಸ್/ಸಮನ್ಸ ಮೂಲಕ ತಿಳಿಸಲಾಗಿದೆ.

ಈ ದಿವಸ ದಿನಾಂಕ : 30-06-2026 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಮೇಲ್ಮನವಿದಾರಳ ಪರ ವಕೀಲರು
ಸಹಿ/- ಎಸ್. ಪಿ. ಚರಂತಿಮಠ
ವಕೀಲರು ಹಾವೇರಿ

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಮುಖ್ಯ ಆಡಳಿತ ಅಧಿಕಾರಿ
ಮಾನ್ಯ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹುಬ್ಬಳ್ಳಿ

No of Correction two only
Sd/- Sheristedar

O.S. No. 7/2025

IN THE COURT OF THE SR CIVIL JUDGE, KUNDAGOL.

Plaintiffs : 1) Smt. Renavva W/o Basappa Bullammanavar & another

V/s.

Defendants :1) Yallappa S/o Siddappa Holi & others

To, Defedant No. 6 : Basavaraj S/o Gulappa Kanavi, Age: 4 years, Occ: Agriculture, R/o: Hirebendigeri, Tq: Shiggaon Dist. Haveri,

Defendant No. 8 : Swetha D/o Gulappa Holi, Age: 28years, Occ: Household, R/o: Shankargoudar Chal, Shiggaon, Tq: Shiggaon Dist: Haveri.

SUMMONS UNDER ORDER 5 RULE 20 OF C.P.C.

WHEREAS, Plaintiffs have instituted suit for partition & declaration against you, and you are hereby summoned to appear in this court in person or by pleader duly instructed & able to answer all material questions relating to the suit on the 14th day of July 2026 at 11.00 O'clock in the forenoon to answer the claim, and as the day fixed for your appearance is appointed for the final disposal of the suit, you must be prepared to produce on that day all the witness upon whose evidence & all the documents upon on which you intend to rely in support of your defense.

Take summons that, in default of your appearance on the day before mentioned the suit will be heard & determined in your absence.

Given under my hand & the seal of the court this 25th day of June 2026.

(COURT SEAL)

Kundgol
25-06-2026
R. B. Tambur
Advocate for Plaintiff, Hubball.

By order of the Court
Sd/- Sheristedar,
Senior Civil Judge Court, Kundgol

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಗ್ರಾ.ಕು.ನೀ. ಮತ್ತು ನೈರ್ಮಲ್ಯ ಇಲಾಖೆ, ನ್ಯಾಯಾಲಯದ ರಸ್ತೆ, ಚಾಮರಾಜನಗರ ವಿಭಾಗ, ಚಾಮರಾಜನಗರ-571 313.
PhoneNo:08226-226054,E-Mail:eerdwsd.chn2014@gmail.com

ಟೆಂಡರ್ ಪ್ರಕಟಣೆ

ಸಂಖ್ಯೆ 02/2026-27   ದಿನಾಂಕ : 24.06.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ರವರಿಂದ ಚಾಮರಾಜನಗರ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆಗಾಗಿ ಜಿಲ್ಲಾ ಮತ್ತು ತಾಲ್ಲೂಕು ಪ್ರಯೋಗಾಲಯಗಳಿಗೆ 2026-27ನೇ ಸಾಲಿಗೆ ಚಾಮರಾಜನಗರ ಜಿಲ್ಲಾ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ ವಿಭಾಗ ಹಾಗೂ ಉಪ-ವಿಭಾಗಗಳಲ್ಲಿ ಕಿರಿಯ ಸಮಾಲೋಚಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಲುವಾಗಿ ಮಾನವ ಸಂಪನ್ಮೂಲ ಸೇವಾ ಸಂಸ್ಥೆಯನ್ನ ಆಯ್ಕೆ ಮಾಡಲು ಅರ್ಹ ಸ್ವಯಂ ಸೇವಾ ಸಂಸ್ಥೆಯವರಿಂದ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ ಇ-Procurement ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಲಾಗಿದೆ. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ ಮತ್ತು ಸಮಯ: 25.06.2026 @ 11.00 hrs. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 04.07.2026 @ 11.00 hrs, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 06.07.2026 ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಪರಿಶೀಲನೆಯ ನಂತರ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಗ್ರಾ.ಕು.ನೀ & ನೈರ್ಮಲ್ಯ ಇಲಾಖೆ,
ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ : ವಾಸಾಸಂಇ:ಚಾನಗರ:204:2026-27

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ವಿಭಾಗ ಬೆಳಗಾವಿ.

ಸಂ: ವಾಕರಸಾ/ಕಾನಿಅ/ಬೆವಿ/ನಕ್ಷೆ/263/2026-27   ದಿನಾಂಕ: 01/07/2026

ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂ: 10/2026-27
(Through Gok Karnataka Public Procurement Portal www.kppp.karnataka.gov.in)

ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ/ಕೇಂದ್ರ ಲೋಕೋಪಯೋಗಿ ಇಲಾಖೆ, ಎಂ.ಇ.ಎಸ್ ಗಳಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ Gok Karnataka Public Procurement Portal ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಕ್ರ. ಸಂ.1 ಟೆಂಡರ್ ಪ್ರಕಟಣೆ ಸಂಖ್ಯೆ :10 ಕಾಮಗಾರಿಯ ಹೆಸರು : ಬೆಳಗಾವಿ ಬಸ್ ಘಟಕ-2 ರ ಆವರಣದಲ್ಲಿ PM-eBus Sewa ಯೋಜನೆಯಡಿಯಲ್ಲಿ ವಿದ್ಯುತ್ ಬಸ್ ಘಟಕದ ನಿರ್ಮಾಣಕ್ಕಾಗಿ ಸಿವಿಲ್ ಕಾಮಗಾರಿ ಕೈಗೊಳ್ಳುವುದು. ಟೆಂಡರ್ ಆಧಾರ : ದ್ವಿ ಲಕೋಟೆ ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : 1024=38 ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ) : 15,00,000=00 ಗುತ್ತಿಗೆದಾರರ ದರ್ಜೆ : ದರ್ಜೆ-1, ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : 30/07/2026

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. 0831-2451475 ಗೆ ಸಂಪರ್ಕಿಸ ಬಹುದಾಗಿದೆ ಹಾಗೂ ಸಹಾಯವಾಣಿ (help desk) : +91-8046010000 and +91-8068948777 ಸಂಪರ್ಕಿಸಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ದಿನಾಂಕಗಳಲ್ಲಿನ ಮುಂದೂಡಿಕೆಗಳಿದ್ದಲ್ಲಿ Gok Karnataka Public Procurement Portal ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾ ಸಂಸ್ಥೆ, ಕಾಮಗಾರಿ ವಿಭಾಗ, ಬೆಳಗಾವಿ.

DIPR/BGM/RO-NO-523/KSMCA/2026-27

IN THE COURT OF THE 4th ADDITIONAL CIVIL JUDGE & JMFC AT BALLARI

Crl. M.C. No. 226/2026

Between:-1) HULIGEMMA W/O MAREPPA D/O LATE.SANNA MAREPPA, aged about 44 years, R/o, Korlangundi village, Ballari taluk and district.
2)JAYAMMA W/O MALLAYYA, .D/O LATE.SANNA MAREPPA, aged about 54 years, R/o, House No.139, ward No.2, Basarakodu Mareppana Oni, Hagaluru Hosahalli village, Siruguppa taluk Ballari district
..Petitioners

And

RESPONDENT: The Registrar of Birth & Death's, Thasildhar, Taluk office, Ballari.   ...Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's mother by name ANJINAMMA W/O LATE SANNA MAREPPA was died on 10-09-2010 at Korlagundi village, Ballari taluk and District in the above mentioned address.

Therefore, If any persons are interested you are hereby directed to appear in this court in person or by a pleader duly instructed on 13-8-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 2nd day of July 2026

By Order of the court.
Sherestedar, Chief Ministerial Officer 4th Addl Civil Judge and JMFC at Ballari
V.Galeppa, Advocates, for the petitioners

IN THE COURT OF THE 4th ADDITIONAL CIVIL JUDGE & JMFC AT BALLARI

Crl. M.C. No. 225/2026

Between:- 1) HULIGEMMA W/O MAREPPA D/O LATE.SANNA MAREPPA, aged about 44 years, R/o, Korlangundi village, Ballari taluk and district.2)JAYAMMA W/O MALLAYYA, .D/O LATE.SANNA MAREPPA, aged about 54 years, R/o, House No.139, ward No.2, Basarakodu Mareppana Oni, Hagaluru Hosahalli village, Siruguppa taluk Ballari district
.....Petitioners

And

RESPONDENT: The Registrar of Birth & Death's, Thasildhar, Taluk office, Ballari.   ...Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's father by name SANNA MAREPÑÁ S/O LATE.HONNURAPPA was died on 01-05-2002 at Korlagundi village, Ballari taluk and District in the above mentioned address..

Therefore, If any persons are interested you are hereby directed to appear in this court in person or by a pleader duly instructed on 13-8-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 2nd day of July 2026

By Order of the court.
Sherestedar, Chief Ministerial Officer 4th Addl Civil Judge and JMFC at Ballari
V.Galeppa, Advocates, for the petitioners

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ

ನಂ: ಗ್ರಾ.ಕು.ನೀ&ನೈ.ವಿ/ಗದಗ/ ಸ.ಇಂ/ಟೆಂಡರ್/2026-27/ 494
ದಿನಾಂಕ:02.07.2026

ಟೆಂಡರ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅಥವಾ ಪಂಚಾಯತ ರಾಜ್ ಇಂಜನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಸೇವಾ "ಇ ಪ್ರೊಕ್ಯುರಮೆಂಟ್-2" ಮುಖಾಂತರ ಟೆಂಡರ್ ಕರೆಯಲಾಗಿದೆ. RWSSD/2026-27/SE0901/Call-2 ಟೆಂಡರಿಗಿಟ್ಟ ಮೊತ್ತ ಕ್ರಮವಾಗಿ ರೂ. 77.05 ಲಕ್ಷ ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೋಕ್ಯೂರಮೆಂಟ್" ವೆಬ್‌ಸೈಟ್ https://kppp.karnataka.gov.in ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ: 03.07.2026 ಪ್ರಶ್ನೋತ್ತರದ ಕೊನೆಯ ದಿನಾಂಕ: 08.07.2026 ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 10.07.2026 ತಾಂತ್ರಿಕ ತೆರೆಯುವ ದಿನಾಂಕ: 13.07.2026 & ಆರ್ಥಿಕ ಬಿಡ್ ತೆರೆಯುವ ದಿನಾಂಕ: 15.07.2026

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ

ವಾಸಾಸಂಇ/ಗದಗ/146/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

(ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ)

ಕಾರ್ಯನಿರ್ವಹಕಾಧಿಕಾರಿಗಳ ಕಾರ್ಯಾಲಯ, ಶ್ರೀ ಗುರುಬಸವೇಶ್ವರಸ್ವಾಮಿ ದೇವಾಲಯ ಕೊಟ್ಟೂರು,

ಕೊಟ್ಟೂರು ತಾಲ್ಲೂಕು ವಿಜಯನಗರ ಜಿಲ್ಲೆ.

ಸಂ.ಶ್ರೀಕೊಗುಬದೇ/ಸಿಆರ್/09/20219-20   ದಿ:-30/06/2026

-: ಟೆಂಡರ್ ಪ್ರಕಟಣೆ:-

ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕು ಕೊಟ್ಟೂರು ಪಟ್ಟಣದ ವ್ಯಾಪ್ತಿಯಲ್ಲಿರುವ ಶ್ರೀ ಗುರುಬಸವೇಶ್ವರಸ್ವಾಮಿ ದೇವಾಲಯದ ಮುಖ್ಯ ಬಾಗಿಲಿಗೆ ಬೆಳ್ಳಿ ಕವಚವನ್ನು ನಿರ್ಮಾಣ ಮಾಡಲು ಅವಶ್ಯವಿರುವ ಶುದ್ಧ ಬೆಳ್ಳಿಯನ್ನು ಸರಬುರಾಜು ಮಾಡುವದಕ್ಕೆ ಸಂಬಂಧಿಸಿದಂತೆ ನೋಂದಾಯಿತ ಅರ್ಹ ಬೆಳ್ಳಿ ಮಾರಾಟಗಾರರು/ಏಜನ್ಸಿಯವರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಕೆಜಿ-2 ಸ್ಟಾಂಡರ್ಡ್ ಟೆಂಡರ್ ದಸ್ತಾವೇಜುಗಳನ್ವಯ ಈ ಕೆಳಕಾಣಿಸಿದಂತೆ Public Procurement Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ವಿವರ: "SUPPLYING OF BARSILVER FOR KOTTURU SRI GURUBASAVESHWARASWAMY TEMPLE MAIN DOOR COVERING WORK" (INDENT NO:- HRICE/2026-27/IND1089). ಟೆಂಡರ್ ಗಿಟ್ಟ ಮೊತ್ತ (ಎಲ್ಲಾ ತೆರಿಗೆಗಳು ರೂ. ಲಕ್ಷಗಳಲ್ಲಿ): 125.00. ಇ.ಎಂ.ಡಿ (ರೂ.ಗಳಲ್ಲಿ): 2,50,000.00

Last date & time for tender queries / clarifications: 08-07-2026 12:00:00. Last date and time for receipt of tender technical bids: 15-07-2026 16:00:00. Date & time for opening of Technical bids: 16-07-2026 17:30:00. Date & time for opening of Financial bids: 17-07-2026 17:00:00. Auto extension of tender schedule: 05 days

ಮೇಲ್ಕಂಡ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಟೆಂಡರ್ ದಾಖಲಾತಿ ಮತ್ತು ಷರತ್ತುಗಳಿಗಾಗಿ https://kppp.karnataka.gov.in ವೆಬ್ ಸೈಟ್ ನಲ್ಲಿ ಲಾಗಿನ್ ಆಗಿ ಪರಿಶೀಲಿಸಿ , ಟೆಂಡರ್ ಭರ್ತಿ ಮಾಡುವುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಾರ್ಯನಿರ್ವಹಕ ಅಧಿಕಾರಿಗಳು ಶ್ರೀ ಗುರುಬಸವೇಶ್ವರಸ್ವಾಮಿ ದೇವಾಲಯ ಕೊಟ್ಟೂರು (ಮೋ.ನಂ. 9902520253) ಇವರನ್ನು ಕಛೇರಿಯ ಸಮಯದಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಗುರುಬಸವೇಶ್ವರಸ್ವಾಮಿ ದೇವಾಲಯ ಕೊಟ್ಟೂರು.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/166

ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು

ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು-563 130, ಕೋಲಾರ ಜಿಲ್ಲೆ,
ಕಛೇರಿ ದೂರವಾಣಿ ಸಂಖ್ಯೆ: 08151-299920, Web Site:www.malur.tpa.gov.in, Email:ms.malur.planning.authority@gmail.com

ಸಂಖ್ಯೆ: ಮಾಯೋಪ್ರಾ/ಭೂ.ಬ/2026-27/645   ದಿನಾಂಕ: 29.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ/ಗು	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪ ಯೋಗ	ಷರಾ
1.	ಶ್ರೀಮತಿ ಶಿಲ್ಪ.ಬಿ ಕೋಂ ಲಿಂಗೇಶ್.ಕೆ.ಸಿ	ಮಾಲೂರು	ಕಸಬಾ	ನಲ್ಲಪ್ಪನಹಳ್ಳಿ	44/3	0-30ಗು	ಕೃಷಿ	ವಸತಿ	-
2.		ಮಾಲೂರು	ಕಸಬಾ	ನಲ್ಲಪ್ಪನಹಳ್ಳಿ	44/4	1ಎ-00	ಕೃಷಿ	ವಸತಿ	-

ಷರಾ: ಈ ಜಮೀನುಗಳಲ್ಲಿ ವಿನ್ಯಾಸದ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:144/ಕೆಎಸ್‌ಎಂಸಿಎ/2026-27   ಸಹಿ/- ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ಕರ್ನಾಟಕ ಸರ್ಕಾರ

ತೋಟಗಾರಿಕೆ ಇಲಾಖೆ
ತೋಟಗಾರಿಕೆ ಉಪ ನಿರ್ದೇಶಕರು (ರಾ.ವ) ರವರ ಕಾರ್ಯಾಲಯ ಕಲಬುರಗಿ

ದೂರವಾಣಿ ಸಂಖ್ಯೆ:08472-229479, E-Mail Id: sadhsskalaburagi@gmail.com

ಸಂಖ್ಯೆ:ತೋಉನಿ:ರಾವ:ಕ:ತಾಸ: 2026-27   ದಿನಾಂಕ:01-07-2026

:: ಇ-ಟೆಂಡರ್ ::

2026-27 ನೇ ಸಾಲಿಗೆ ಕಲಬುರಗಿ ಜಿಲ್ಲೆಯ ತೋಟಗಾರಿಕೆ ಉದ್ಯಾನವನ ಮತ್ತು ತೋಟಗಳು ಯೋಜನೆ ಅಡಿ ಕಲಬುರಗಿ ಹೈಕೋರ್ಟ್ ಆವರಣದಲ್ಲಿನ ಉದ್ಯಾನವನ ನಿರ್ವಹಣೆಗೆ ವಿವಿಧ ಸಂಸ್ಥೆಗಳಿಂದ ಅಲ್ಪಾವಧಿ ಇ-ಟೆಂಡರ ಪ್ರಕ್ರಿಯೆ ಮೂಲಕ ಅರ್ಹ ಏಜೆನ್ಸಿಗೆ ವಹಿಸಲು ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 01-07-2026 ರಂದು ಇ-ಟೆಂಡರ್ ಹೊರಡಿಸಲಾಗಿದೆ. ಇ-ಟೆಂಡರ್ ಸಂಖ್ಯೆ: KSHD/2026-27/SE0591 ಪೋರ್ಟಲನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-07-2026 ಸಂಜೆ 5.00 ಗಂಟೆ ವರೆಗೆ.

1) **ತೋಟಗಾರಿಕೆ ಇಲಾಖೆಯ ಇಲಾಖಾ ದರಗಳನ್ವಯ ಕಲಬುರಗಿಯ ಹೈಕೋರ್ಟ್ ಉದ್ಯಾನವನ ಆವರಣದಲ್ಲಿ ಕೈಗೊಳ್ಳಬೇಕಾದ ಕೆಲಸಗಳು:** ಸಸ್ಯಗಳು ಮತ್ತು ಹುಲ್ಲು ಹಾಸುಗಳಿಗೆ ನೀರು ಹಾಕುವುದು, ಹೈಕೋರ್ಟ ಉದ್ಯಾನ ಪ್ರದೇಶದಲ್ಲಿ ಸಸ್ಯಗಳ ಸಂಪೂರ್ಣ ಕಳೆ ತೆಗೆಯುವುದು ನಿಯಮಿತವಾಗಿ ಮಾಡಬೇಕು. ಹೈಕೋರ್ಟ ಉದ್ಯಾನ ಪ್ರದೇಶವನ್ನು ಗುಡಿಸುವುದು, ಪೊದೆಗಳ ಅಂಚುಗಳ ನಿರ್ವಹಣೆ, ಸವರುವಿಕೆ ಮತ್ತು ಅಗೆಯುವಿಕೆ, ಹುಲ್ಲು ಹಾಸನ್ನು ಲಾನ್ ಮೂವರನಿಂದ ನಿಯಮಿತವಾಗಿ ನಿರ್ವಹಣೆ ಮಾಡುವುದು. ಸಸ್ಯಗಳ ಸುತ್ತಲೂ ಮಣ್ಣನ್ನು ಅಗೆಯುವುದು, ಹೆಡ್ಜಗಳು, ಮರಗಳು, ಪೊದೆಗಳು, ನೆಲದ ಹೊದಿಕೆ ಸಸ್ಯಗಳು ಮುಂತಾದ ತೋಟದಲ್ಲಿನ ಸಸ್ಯಗಳ ಸವರುವಿಕೆ, ಪ್ಲಾಸ್ಟಿಕ್ ಮತ್ತು ಇತರ ವಸ್ತುಗಳನ್ನು ಆಯ್ದು ಕ್ರೂಡಿಕರಿಸುವುದು. ರಸಗೊಬ್ಬರಗಳು, ಗೊಬ್ಬರಗಳು, ಕೀಟನಾಶಕಗಳು, ಶಿಲೀಂಧ್ರನಾಶಕಗಳು ಮತ್ತು ಸಕ್ಷಮ ಪ್ರಾಧಿಕಾರದಿಂದ ನಿಯೋಜಿಸಲಾದ ಯಾವುದೇ ಇತರ ತೋಟಗಾರಿಕೆ ಸಂಬಂಧಿತ ಕೆಲಸಗಳನ್ನು ಕೈಗೊಳ್ಳುವುದು. ತೋಟಗಾರರು/ಕಾರ್ಮಿಕರ ವಸತಿ ಸೌಕರ್ಯವನ್ನು ಒದಗಿಸುವುದು ಗುತ್ತಿಗೆದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ ಹಾಗೂ ಟೆಂಡರನಲ್ಲಿನ ಷರತ್ತು & ನಿಬಂಧನೆಗಳನ್ವಯ ಇತರ ಕೆಲಸಗಳನ್ನು ನಿರ್ವಹಿಸುವುದು.

2) 12 ತಿಂಗಳ ನಿರ್ವಹಣೆ ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): **19.44**, 3) ಇಎಂಡಿ ಮೊತ್ತ (ರೂ.ಲಕ್ಷಗಳಲ್ಲಿ): **0.48**

ಹೆಚ್ಚಿನ ಮಾಹಿತಿಗಾಗಿ: e-procurement portal https://kppp.karnataka.gov.in ಗೆ ಸಂಪರ್ಕಿಸಬಹುದಾಗಿದೆ.

ಸಹಿ/- ತೋಟಗಾರಿಕೆ ಉಪನಿರ್ದೇಶಕರು
(ರಾಜ್ಯವಲಯ) ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/290/ಕೆ.ಎಸ್.ಎಂ.ಸಿ.&ಎ/2026-27

ಕ್ರಿಮಿ.ನಂ: 204/2026

ಮಾ॥ 1ನೇ ಹೆಚ್ಚುವರಿ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ವ ಜೆಎಮ್‌ಎಫ್‌ಸಿ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ

1) ಸೌಂದರ್ಯ ತಂ.ಸಂತೋಷ ಸೊನ್ನದ
.......ಅರ್ಜಿದಾರಳು

ವಿರುದ್ಧ

1) ತಹಶೀಲ್ದಾರರು.ಜನನ ಮರಣನೋಂದಣಾಧಿಕಾರಿ ಗಳುಬಸವನ ಬಾಗೇವಾಡಿ
-----ಎದುರುದಾರ

ಪತ್ರಿಕಾ ಪ್ರಕಟಣೆ

ಸದರ ಮೇಲ್ಕಾಣಿಸಿದ ಅರ್ಜಿಯಲ್ಲಿಯ ಅರ್ಜಿದಾರಳ ತಾಯಿಯಾದ ಸುನೀತಾ ಗಂ.ಸಂತೋಷ ಸೊನ್ನದ ಇವಳು ದಿನಾಂಕ: 13-01-2008 ರಂದು ಬಸವನ ಬಾಗೇವಾಡಿ ತಾಲೂಕಿನ ಉಕ್ಕಲಿ ಗ್ರಾಮದಲ್ಲಿ ಮೃತಳಾಗಿದ್ದು, ಸದರಿಯವರ ಮರಣಪ್ರಮಾಣ ಪತ್ರ ಪಡೆಯಲು ಅರ್ಜಿದಾರಳು ಈ ಅರ್ಜಿಯನ್ನು ದಾಖಲಿಸಿರುತ್ತಾಳೆ. ಆದ್ದರಿಂದ ಸದರಿ ಅರ್ಜಿದಾರಳ ತಾಯಿಯ ಮರಣದ ಬಗ್ಗೆ ಮರಣ ನೋಂದಣಾಧಿಕಾರಿಗಳ ರಜಿಸ್ಟರ್‌ದಲ್ಲಿ ದಾಖಲಿಸುವ ಕುರಿತು. ಯಾರಾದರೂ ಯಾವುದೇ ರೀತಿಯ ತಂಟೆ, ವ ತಕರಾರು ಇದ್ದಲ್ಲಿ ಅಂತವರು ಹಾಜರಾಗಲು ಮಾನ್ಯ ನ್ಯಾಯಾಲಯದವರು ದಿನಾಂಕ:07-08 2026 ರಂದು ಬೆಳಿಗ್ಗೆ 11 ಘಂಟೆಗೆ ಮುದ್ದತ್ ನೇಮಿಸಿದ್ದು ಇರುತ್ತದೆ. ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರ ಹಾಜರಾತಿಯಲ್ಲಿ ನಿರ್ಣಯಿಸಲಾಗುವದು. ಈ ಹೊತ್ತು ದಿನಾಂಕ : 18-03-2026 ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.

ಬಸವನಬಾಗೇವಾಡಿ
ದಿನಾಂಕ: 01-07-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು,(ಆಡಳಿತ)
ಮಾ॥ 1ನೇ ಹೆಚ್ಚುವರಿ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಮ್. ಎಫ್.ಸಿ ನ್ಯಾಯಾಲಯ ಬಸವನಬಾಗೇವಾಡಿ
ಸಹಿ/- ಶ್ರೀ.ಎ.ಜೆ.ನದಾಫ ಅರ್ಜಿದಾರಳ ಪರ ವಕೀಲರು

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶುಕ್ರವಾರ, 3 ಜುಲೈ 2026
ಹುಬ್ಬಳ್ಳಿ

ಶುಕ್ರವಾರದ ಪಂದ್ಯ

ಪೋರ್ಚುಗಲ್-ಕ್ರೊಯೇಷ್ಯಾ (ಬೆಳಗ್ಗೆ 4:30)

ಸ್ವಿಟ್ಜರ್ಲೆಂಡ್-ಅಲ್ಜೇರಿಯಾ (ಬೆಳಗ್ಗೆ 8:30)

ಆಸ್ಟ್ರೇಲಿಯಾ-ಈಜಿಪ್ಟ್ (ರಾತ್ರಿ 11:30)

ಒಂದೇ ದಿನ ಎರಡು ರೋಚಕ ಪಂದ್ಯ
ಬೆಲ್ಜಿಯಂ, ಇಂಗ್ಲೆಂಡ್ ತಂಡಗಳಿಗೆ ಗೆಲುವು
ಕಾಂಗೊ ಹೋರಾಟ, ಸೆನೆಗಲ್ ಶತಪ್ರಯತ್ನ

ಹ್ಯಾರಿ ಕೇನ್ ಕಿಕ್, ಕಾಂಗೋಗೆ ಶಾಕ್



• ಅಟ್ಲಾಂಟಾ: ಒಂದೇ ದಿನ ಎರಡು ರೋಚಕ ಪಂದ್ಯ. ನಾಕೌಟ್‌ನ ಉದ್ವೇಗದ ಜತೆಗೆ ನೆಚ್ಚಿನ ಆಟಗಾರನ ಅಬ್ಬರದಾಟ ರೋಮಾಂಚನ. ಫುಟ್‌ಬಾಲ್ ಪ್ರಿಯರಿಗೆ ಬುಧವಾರ ಸಂಭ್ರಮದ ದಿನ. ತಡರಾತ್ರಿ ನಡೆದ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಕೇನ್ ಅವರ ಕರಾರುವಾಕ್ ದಾಳಿಯೊಂದಿಗೆ ಡಿಆರ್ ಕಾಂಗೋ ತಂಡವನ್ನು ಸೋಲಿಸಿ ಮುನ್ನಡೆಯಿತು. ಅತ್ತ ಮತ್ತೊಂದು ಪಂದ್ಯದಲ್ಲಿ ಬೆಲ್ಜಿಯಂ ಕೊನೆಕ್ಷಣದ ಥ್ರಿಲ್ ಗೆದ್ದು ಮಿಂಚಿತು.

ಹಿನ್ನಡೆಯಿಂದ ಚೇತರಿಸಿಕೊಂಡ ಇಂಗ್ಲೆಂಡ್



• **ಅಟ್ಲಾಂಟಾ:** ನಾಯಕ ಹ್ಯಾರಿ ಕೇನ್ ಅವರ ದ್ವಿಗೋಲುಗಳ ನೆರವಿನಿಂದ ಇಂಗ್ಲೆಂಡ್ ತಂಡ ರೌಂಡ್ ಆಫ್ 32 ಪಂದ್ಯದಲ್ಲಿ ಕಾಂಗೋ ವಿರುದ್ಧ 2-1 ಗೋಲುಗಳ ರೋಚಕ ಜಯ ಸಾಧಿಸಿ ಪ್ರಿ-ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದೆ. ಪಂದ್ಯದ ಕೇವಲ 7ನೇ ನಿಮಿಷದಲ್ಲೇ ಬ್ರಿಯಾನ್ ಸಿಪೆಂಗಾ ಗೋಲು ದಾಖಲಿಸಿ ಕಾಂಗೋಗೆ ಅಚ್ಚರಿಯ ಮುನ್ನಡೆ ತಂದುಕೊಟ್ಟರು. ಮೊದಲಾರ್ಧದಲ್ಲಿ ಇಂಗ್ಲೆಂಡ್ ಹಲವು ಅವಕಾಶಗಳನ್ನು ಸೃಷ್ಟಿಸಿದರೂ, ಕಾಂಗೊ ಗೋಲ್‌ಕೀಪರ್ ಲಿಯೋನೆಲ್ ಎಂಪಾಸಿ ಅದ್ಭುತ ಸೇವ್‌ಗಳ ಮೂಲಕ ತಂಡವನ್ನು ಮುನ್ನಡೆಯಲ್ಲೇ ಉಳಿಸಿದರು. ದ್ವಿತೀಯಾರ್ಧದಲ್ಲಿ ಆಕ್ರಮಣ ತೀವ್ರಗೊಳಿಸಿದ ಇಂಗ್ಲೆಂಡ್‌ಗೆ 75ನೇ ನಿಮಿಷದಲ್ಲಿ ಬದಲಿ ಆಟಗಾರ ಆಂಥನಿ ಗಾರ್ಡನ್ ನೀಡಿದ ಕ್ರಾಸ್ ಅನ್ನು ಹೆಡರ್ ಮೂಲಕ ಗೋಲಾಗಿ ಪರಿವರ್ತಿಸಿದ ಹ್ಯಾರಿ ಕೇನ್ ಪಂದ್ಯಕ್ಕೆ ಜೀವ ತುಂಬಿ ತಂಡಕ್ಕೆ ಆಸರೆಯಾದರು. ಪಂದ್ಯ ಹೆಚ್ಚುವರಿ ಸಮಯದತ್ತ ಸಾಗುತ್ತಿದ್ದ ವೇಳೆ 86ನೇ ನಿಮಿಷದಲ್ಲಿ ಕೇನ್ ಮತ್ತೊಮ್ಮೆ ಮಿಂಚಿ ಬಾಕ್ಸ್‌ನೊಳಗಿನಿಂದ ಬಾರಿಸಿದ ಅದ್ಭುತ ಶಾಟ್ ಅನ್ನು ಗೋಲಾಗಿ ಪರಿವರ್ತಿಸಿ ಇಂಗ್ಲೆಂಡ್‌ಗೆ ಅಮೂಲ್ಯ ಗೆಲುವು ತಂದುಕೊಟ್ಟರು.

ಈ ಎರಡು ಗೋಲುಗಳೊಂದಿಗೆ ಕೇನ್ ಈ ವಿಶ್ವಕಪ್‌ನಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು ಐದಕ್ಕೇರಿಸಿದ್ದು, ವಿಶ್ವಕಪ್ ಇತಿಹಾಸದಲ್ಲಿ ಇಂಗ್ಲೆಂಡ್ ಪರ ಅತಿ ಹೆಚ್ಚು 13 ಗೋಲುಗಳನ್ನು ದಾಖಲಿಸಿದ ಆಟಗಾರ ಎಂಬ ದಾಖಲೆಯನ್ನು ಮತ್ತಷ್ಟು ಭದ್ರಪಡಿಸಿಕೊಂಡರು. ಈ ಜಯದೊಂದಿಗೆ ಇಂಗ್ಲೆಂಡ್ ತಂಡ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸಹ ಆತಿಥೇಯ ರಾಷ್ಟ್ರವಾದ ಮೆಕ್ಸಿಕೊ ವಿರುದ್ಧ ಸೆಣಸಲಿದ್ದು, ಜಯಶಾಲಿ ತಂಡ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಲಿದೆ.

ಗೋಲಿನ ವಿವರ:

- ಇಂಗ್ಲೆಂಡ್ 2-1 ಕಾಂಗೋ
- ಕಾಂಗೋ ಪರ ಬ್ರಿಯಾನ್ ಸಿಪೆಂಗಾ (7ನೇ ನಿಮಿಷ)
- ಹ್ಯಾರಿ ಕೇನ್ ಎರಡು ಗೋಲು (75, 86ನೇ ನಿಮಿಷ)
- ವಿಶ್ವಕಪ್‌ನಲ್ಲಿ ಕೇನ್‌ಗೆ 13ನೇ ಗೋಲು
- ಮುಂದಿನ ಪಂದ್ಯದಲ್ಲಿ ಮೆಕ್ಸಿಕೊ ವಿರುದ್ಧ ಸೆಣಸಾಟ

ಅಮೆರಿಕಗೆ ಗೆಲುವಿನ ಸಂಭ್ರಮ

• **ಸಾಂಟಾ ಕ್ಲಾರಾ (ಅಮೆರಿಕ):** ಫ್ಲೋಲರಿನ್ ಬಲಾಗನ್ ಅವರ ಗೋಲು ಹಾಗೂ ನಂತರದ ಕೆಂಪು ಕಾರ್ಡ್ ಪಂದ್ಯದಲ್ಲಿ ಪ್ರಮುಖ ಚರ್ಚೆಯ ವಿಷಯವಾಗಿದ್ದರೂ, ಅಮೆರಿಕ ತಂಡ ಫಿಫಾ ವಿಶ್ವಕಪ್ 2026ರ ರೌಂಡ್ ಆಫ್ 32 ಪಂದ್ಯದಲ್ಲಿ ಬೋಸ್ನಿಯಾ-ಹರ್ಜೆಗೋವಿನಾವನ್ನು 2-0 ಗೋಲುಗಳಿಂದ ಮಣಿಸಿ ಪ್ರೀಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿತು. ಪಂದ್ಯದ 31ನೇ ನಿಮಿಷದಲ್ಲಿ ಬಲಾಗನ್ ಗಳಿಸಿದ್ದ ಗೋಲು ಆಫ್‌ಸೈಡ್ ಕಾರಣದಿಂದ ರದ್ದಾಗಿತ್ತು. ಆದರೆ ಮೊದಲಾರ್ಧದ ಹೆಚ್ಚುವರಿ ವೇಳೆಯಲ್ಲಿ (45) ಅವರು ಮತ್ತೊಮ್ಮೆ ಗೋಲು ದಾಖಲಿಸಿ ಅಮೆರಿಕಕ್ಕೆ ಮುನ್ನಡೆ ತಂದುಕೊಟ್ಟರು. ಇದು ಈ ವಿಶ್ವಕಪ್‌ನಲ್ಲಿ ಅವರ ಮೂರನೇ ಗೋಲಾಗಿತ್ತು. ಬಳಿಕ ಮಲೀಕ್ ಟಿಲ್‌ಮ್ಯಾನ್ 64ನೇ ನಿಮಿಷದಲ್ಲಿ ಗೋಲು ಗಳಿಸಿ ಗೆಲುವಿನಲ್ಲಿ ಮಿಂಚಿದರು.

ಕೆಂಪು ಕಾರ್ಡ್: ದ್ವಿತೀಯಾರ್ಧದ ಆರಂಭದಲ್ಲೇ ಬಲಾಗನ್ ಎದುರಾಳಿ ಆಟಗಾರ ತಾರಿಕ್ ಮುಹರೆಮೊವಿಚ್ ಅವರ ಕಾಲಿನ ಮೇಲೆ ಹೆಜ್ಜೆ ಇಟ್ಟ ಘಟನೆಗೆ ವೀಡಿಯೊ ಸಹಾಯಕ ತೀರ್ಪುಗಾರ ಪರಿಶೀಲನೆಯ ಬಳಿಕ ರೆಫರಿ ನೇರ ಕೆಂಪು ಕಾರ್ಡ್ ತೋರಿಸಿದರು. ಇದರ ಪರಿಣಾಮವಾಗಿ ಅವರು ಬೆಲ್ಜಿಯಂ ವಿರುದ್ಧ ನಡೆಯಲಿರುವ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಿಂದ ಅಮಾನತುಗೊಂಡಿದ್ದಾರೆ. ಇದೇ ವೇಳೆ, ಬಲಾಗನ್ ವಿಶ್ವಕಪ್ ನಾಕೌಟ್ ಹಂತದಲ್ಲಿ ಗೋಲು ಗಳಿಸಿ ನಂತರ ಕೆಂಪು ಕಾರ್ಡ್ ಪಡೆದ ಮೂರನೇ ಆಟಗಾರ ಎಂಬ ಅಪರೂಪದ ದಾಖಲೆಗೆ ಪಾತ್ರರಾದರು. ಈ ಜಯದೊಂದಿಗೆ ಅಮೆರಿಕ ತಂಡ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಬೆಲ್ಜಿಯಂ ವಿರುದ್ಧ ಸೆಣಸಲಿದೆ.

- ಅಮೆರಿಕ 2-0 ಬೋಸ್ನಿಯಾ-ಹರ್ಜೆಗೋವಿನಾ
- ಫ್ಲೋಲರಿನ್ ಬಲಾಗನ್ (45ನೇ ನಿಮಿಷ)
- ಬಲಾಗನ್‌ಗೆ ದ್ವಿತೀಯಾರ್ಧದ ಆರಂಭದಲ್ಲಿ ಕೆಂಪು ಕಾರ್ಡ್
- ಬೆಲ್ಜಿಯಂ ವಿರುದ್ಧದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯಕ್ಕೆ ಅಮಾನತು

ಬೆಲ್ಜಿಯಂ ಮ್ಯಾಜಿಕ್ 16ರ ಸುತ್ತಿಗೆ ಲಗ್ಗೆ

ಎರಡು ಗೋಲುಗಳ ಹಿನ್ನಡೆಯಿಂದ ಪುಟಿದೆದ್ದ ಬೆಲ್ಜಿಯಂ; ಸೆನೆಗಲ್ ವಿರುದ್ಧ ಹೆಚ್ಚುವರಿ ವೇಳೆಯಲ್ಲಿ ಮಿಂಚಿನಾಟ

• **ಸಿಯಾಟಲ್:** ಎರಡು ಗೋಲುಗಳ ಹಿನ್ನಡೆಯಿಂದ ಅದ್ಭುತವಾಗಿ ಚೇತರಿಸಿಕೊಂಡ ಬೆಲ್ಜಿಯಂ ಸೆನೆಗಲ್ ವಿರುದ್ಧ ಹೆಚ್ಚುವರಿ ಸಮಯದಲ್ಲಿ 3-2 ಗೋಲುಗಳ ರೋಚಕ ಜಯ ಸಾಧಿಸಿ ಪ್ರಿ-ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿತು. ಮೊದಲಾರ್ಧದಲ್ಲಿ ಹಬೀಬ್ ಡಿಯಾರಾ ಹಾಗೂ ಇಸ್ಮೈಲಾ ಸರ್ ತಲಾ ಒಂದು ಗೋಲು ಗಳಿಸಿ ಸೆನೆಗಲ್‌ಗೆ 2-0 ಮುನ್ನಡೆ ತಂದುಕೊಟ್ಟರು. ಸೋಲಿನ ಅಂಚಿನಲ್ಲಿದ್ದ ಬೆಲ್ಜಿಯಂ ಪರ 86ನೇ ನಿಮಿಷದಲ್ಲಿ ಬದಲಿ ಆಟಗಾರ ರೊಮೆಲು ಲುಕಾಕು ಗೋಲು ದಾಖಲಿಸಿ ಅಂತರವನ್ನು ಕಡಿಮೆ ಮಾಡಿದರು. ಇದಾದ ಕೇವಲ ಮೂರು ನಿಮಿಷಗಳ ಬಳಿಕ ಯೂರಿ ಟಿಲೆಮನ್ಸ್ ಸಮಬಲದ ಗೋಲು ಗಳಿಸಿ ಪಂದ್ಯವನ್ನು ಹೆಚ್ಚುವರಿ ಸಮಯಕ್ಕೆ ಕೊಂಡೊಯ್ದರು.

ಪೆನಾಲ್ಟಿ ಕಿಕ್: ಹೆಚ್ಚುವರಿ ಸಮಯದ ಇಂಜುರಿ ವೇಳೆಯಲ್ಲಿ ಟಿಲೆಮನ್ಸ್ ಅವರನ್ನು ಪೆನಾಲ್ಟಿ ಬಾಕ್ಸ್‌ನಲ್ಲಿ ಫೌಲ್ ಮಾಡಲಾಯಿತು. ವೀಡಿಯೊ ಪರಿಶೀಲನೆ ಬಳಿಕ ರೆಫರಿ ಪೆನಾಲ್ಟಿ ನೀಡಿದರು. ಅದನ್ನು ಸ್ವತಃ ಟಿಲೆಮನ್ಸ್ ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿ ಬೆಲ್ಜಿಯಂಗೆ 3-2ರ ಅಮೋಘ ಗೆಲುವು ತಂದುಕೊಟ್ಟರು.



ಬೆಲ್ಜಿಯಂ 3-2 ಸೆನೆಗಲ್

- ಸೆನೆಗಲ್ ಪರ ಹಬೀಬ್ ಡಿಯೊರಾ, ಇಸ್ಮೈಲಾ ಸರ್ ಗೋಲು
- ಬೆಲ್ಜಿಯಂ ಪರ ರೊಮೆಲು ಲುಕಾಕು (86ನೇ ನಿಮಿಷ)
- ಯೂರಿ ಟಿಲೆಮನ್ಸ್ (89, 120+ನೇ ನಿಮಿಷ)
- ಹೆಚ್ಚುವರಿ ಸಮಯದ ಇಂಜುರಿ ವೇಳೆಯ ಪೆನಾಲ್ಟಿಯಿಂದ ಗೆಲುವು

ಕಿರುಸುದ್ದಿ

ಬ್ಯಾಡ್ಮಿಂಟನ್: ಹೊಸ ಸ್ಕೋರಿಂಗ್ ವ್ಯವಸ್ಥೆ ಜಾರಿ

• **ಹೊಸದಿಲ್ಲಿ:** ಭಾರತ ಬ್ಯಾಡ್ಮಿಂಟನ್ ಸಂಘ ದೇಶೀಯ ಸರ್ಕ್ಯೂಟ್‌ನಾದ್ಯಂತ ಹೊಸ ಬ್ಯಾಡ್ಮಿಂಟನ್ ವಿಶ್ವ ಒಕ್ಕೂಟ 3X15 ಸ್ಕೋರಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲಿದೆ.

ಈ ವ್ಯವಸ್ಥೆಯನ್ನು ಮೊದಲು ಜುಲೈ 7 ರಿಂದ 14 ರವರೆಗೆ ಎರ್ನಾಕುಲಂನ ಪ್ರಾದೇಶಿಕ ಕ್ರೀಡಾ ಕೇಂದ್ರದಲ್ಲಿ ನಡೆಯಲಿರುವ ಅಖಿಲ ಭಾರತ ಹಿರಿಯ ಶ್ರೇಯಾಂಕ ಪಂದ್ಯಾವಳಿಯಲ್ಲಿ ಜಾರಿಗೆ ತರಲಾಗುವುದು. ಈ ಬದಲಾವಣೆಯು ವಲಯ ಚಾಂಪಿಯನ್‌ಶಿಪ್‌ಗಳು, 13 ವರ್ಷದೊಳಗಿನವರು, 15 ವರ್ಷದೊಳಗಿನವರು, 17 ವರ್ಷದೊಳಗಿನವರು, 19 ವರ್ಷದೊಳಗಿನವರು, ಸೀನಿಯರ್ ಮತ್ತು ಮಾಸ್ಟರ್ಸ್ (ವೆಟರನ್ಸ್) ವಿಭಾಗಗಳಲ್ಲಿನ ಶ್ರೇಯಾಂಕ ಪಂದ್ಯಾವಳಿಗಳು ಮತ್ತು ರಾಷ್ಟ್ರೀಯ ಚಾಂಪಿಯನ್‌ಶಿಪ್‌ನ ಪ್ರತಿಯೊಂದು ಹಂತದಲ್ಲೂ ಅನ್ವಯಿಸುತ್ತದೆ.

ಟೆಸ್ಟ್‌ಗೆ ಕೊಲಂಬೋ, ಗಾಲೆ ಆತಿಥ್ಯ

• **ಕೊಲಂಬೋ:** ಭಾರತ ಹಾಗೂ ಶ್ರೀಲಂಕಾ ನಡುವೆ ನಡೆಯಲಿರುವ ಎರಡು ಟೆಸ್ಟ್ ಪಂದ್ಯಗಳಿಗೆ ಗಾಲೆ ಮತ್ತು ಕೊಲಂಬೋ ಆತಿಥ್ಯ ನೀಡಲಿವೆ. ಸದ್ಯ ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತ ತಂಡವು ಆಗಸ್ಟ್‌ನಲ್ಲಿ ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನಾಡಲಿದೆ. ಮೊದಲ ಪಂದ್ಯ ಆ.15ರಿಂದ ನಡೆಯಲಿದ್ದರೆ, ಎರಡನೇ ಪಂದ್ಯ 24ರಿಂದ ನಡೆಯಲಿದೆ. ಇತ್ತೀಚೆಗಷ್ಟೇ ಫ್ಲಡ್ ಲೈಟ್‌ಗಳನ್ನು ಕಂಡ ಸಿನ್ಹಲಾಸೆ ಸ್ಪೋರ್ಟ್ಸ್ ಕ್ಲಬ್ ಟೆಸ್ಟ್ ಪಂದ್ಯವನ್ನು ಆಯೋಜಿಸಲು ಸಿದ್ಧವಾಗಿದೆ. ಟೆಸ್ಟ್ ಪಂದ್ಯಗಳು ದಿನ-ರಾತ್ರಿ ಮಾದರಿಯಲ್ಲಿ ನಡೆಯುವುದಿಲ್ಲ, ಬದಲಾಗಿ 10ಗಂಟೆಗೆ ಆರಂಭಗೊಳ್ಳಲಿವೆ ಎಂದು ಆಯೋಜಕರು ತಿಳಿಸಿದ್ದಾರೆ. 2017ರಲ್ಲಿ ಕೊನೆಯ ಬಾರಿಗೆ ಟೆಸ್ಟ್ ಸರಣಿಗಾಗಿ ಭಾರತ ಶ್ರೀಲಂಕಾಗೆ ಪ್ರವಾಸ ಬೆಳೆಸಿತ್ತು. ಇದಾದ ಬಳಿಕ ದ್ವೀಪಕ್ಕೆ ಪ್ರಯಾಣಿಸುತ್ತಿರುವುದು ಇದೇ ಮೊದಲು.

ಉತ್ತಮ ಮೊತ್ತದತ್ತ ಲಂಕಾ

• **ಗಾಲೆ:** ನಾಯಕ ಸಹನ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಮಿಂಚಿರುವ ಶ್ರೀಲಂಕಾ ಎ ತಂಡವು, ಭಾರತ ಎ ವಿರುದ್ಧದ ಪಂದ್ಯದಲ್ಲಿ 288 ರನ್ ಗಳಿಸಿದೆ. 5 ವಿಕೆಟ್ ಇನ್ನೂ ಕೈಯಲ್ಲಿದ್ದು ಎರಡನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದೆ. ಅನಧಿಕೃತ ಟೆಸ್ಟ್ ಸರಣಿಯಲ್ಲಿ ಭಾರತ ಎ ಹಾಗೂ ಶ್ರೀಲಂಕಾ ಎ ತಂಡಗಳು ಮುಖಾ ಮುಖಿಯಾಗಿವೆ. ಗಾಲೆಯಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಮೊದಲು ಬ್ಯಾಟಿಂಗ್ ಮಾಡುತ್ತಿದೆ. ಪವಂಥಾ 39, ಫರ್ನಾಂಡೊ 44, ಬಂದಾರ 34 ಅವರ ಕೊಡುಗೆಯಿಂದ ಉತ್ತಮ ಮೊತ್ತದತ್ತ ಸಾಗುತ್ತಿದ್ದ ಶ್ರೀಲಂಕಾ ಬಳಿಕ ನಾಯಕ ಸಹನ್ 83★ ರನ್ ಆಸರೆ ಪಡೆದಿದೆ. ಅವರಿಗೆ ಅಂಜಲ 42 ರನ್ ಗಳೊಂದಿಗೆ ಸಾಥ್ ಕೊಟ್ಟ ನಂತರ ಶ್ರೀಲಂಕಾ 288 ರನ್ ಗಳಿಸಿದೆ. ಭಾರತ ಪರ ಸರಂಶ, ಯಶ್ ತಲಾ 2 ವಿಕೆಟ್ ಕಿತ್ತರೆ, ಗುರ್ನೂರ್ ಬ್ರಾರ್ 1 ವಿಕೆಟ್ ಪಡೆದಿದ್ದಾರೆ.

ಸ್ಕ್ವಾಷ್: ತನ್ವಿ ಫೈನಲ್‌ಗೆ

• **ಹೊಸದಿಲ್ಲಿ:** ಗುರುವಾರ ಜುಹು ವಿಲೇ ಪಾರ್ಲೆ ಜಿಮ್ಖಾನಾ ಕ್ಲಬ್‌ನಲ್ಲಿ ನಡೆದ ಎಚ್‌ಸಿಎಲ್ ಸ್ಕ್ವಾಷ್ ಪಿಎಸ್‌ಎ ಚಾಲೆಂಜರ್ ಟೂರ್-ಮುಂಬೈನ ಮಹಿಳಾ ಫೈನಲ್‌ಗೆ ಮುನ್ನಡೆಯುವ ಮೂಲಕ ಮೂರನೇ ಶ್ರೇಯಾಂಕಿತ ತನ್ವಿ ಖನ್ನಾ ಭಾರತದ ಭರವಸೆಯನ್ನು ಜೀವಂತವಾಗಿರಿಸಿಕೊಂಡರು.

44 ನಿಮಿಷಗಳ ಕಠಿಣ ಸೆಮಿಫೈನಲ್‌ನಲ್ಲಿ ಜಪಾನ್‌ನ ಅಕಾರಿ ಮಿಡೋರಿಕಾವಾ ಅವರನ್ನು ಸೋಲಿಸಿ ಪ್ರಶಸ್ತಿ ಸ್ಪರ್ಧೆಯಲ್ಲಿ ಉಳಿದಿರುವ ಏಕೈಕ ಭಾರತೀಯ ಆಟಗಾರ್ತಿಯಾಗಿ ಖನ್ನಾ ಹೊರಹೊಮ್ಮಿದರು. ಖನ್ನಾ ಈಗ ಎರಡನೇ ಶ್ರೇಯಾಂಕಿತ ಈಜಿಪ್ಟ್‌ನ ಫರೀದಾ ವಾಲಿದ್ ಅವರನ್ನು ಎದುರಿಸಲಿದ್ದಾರೆ. ಪುರುಷರ ಡ್ರಾದಲ್ಲಿ, ಅಗ್ರ ಶ್ರೇಯಾಂಕಿತ ವೆಲವನ್ ಸೆಂಥಿಲ್‌ಕುಮಾರ್ ಎರಡನೇ ಶ್ರೇಯಾಂಕಿತ ಈಜಿಪ್ಟ್‌ನ ಯಾಸಿನ್ ಶೋಡಿ ವಿರುದ್ಧ ನಿರಾಶಾದಾಯಕ ಸೆಮಿಫೈನಲ್ ಸೋಲಿನ ನಂತರ ಹೊರನಡೆದರು.

ಇಂಗ್ಲೆಂಡ್-ಭಾರತ ಪಂದ್ಯ ಮಳೆಯಿಂದ ರದ್ದು

• **ಚೆಸ್ಟರ್-ಲೆ-ಸ್ಟ್ರೀಟ್:** ಎರಡನೇ ಇನ್ನಿಂಗ್ಸ್ ವೇಳೆ ಸುರಿದ ಬಿಟ್ಟು ಬಿಡದ ಮಳೆಯಿಂದಾಗಿ ಭಾರತ ಹಾಗೂ ಇಂಗ್ಲೆಂಡ್ ನಡುವಿನ ಮೊದಲ ಟಿ20 ಪಂದ್ಯ ರದ್ದಾಯಿತು.

ಐರ್ಲೆಂಡ್‌ನೊಂದಿಗೆ ಸೋತು ಕಂಗೆಟ್ಟ ಭಾರತ ತಂಡವು ಇನ್ನೂ ಮೊದಲ ಗೆಲುವಿಗಾಗಿ ಹೋರಾಡುತ್ತಿದೆ. ಹೊಸ ತಂಡದೊಂದಿಗೆ ಐರ್ಲೆಂಡ್ ಸರಣಿ ಮುಗಿಸಿಕೊಂಡಿರುವ ಭಾರತ ತಂಡವು ಬುಧವಾರದಿಂದ ಇಂಗ್ಲೆಂಡ್‌ನೊಂದಿಗೆ ಸರಣಿ ಶುರು ಮಾಡಬೇಕಿತ್ತು. ಮೊದಲ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ಶ್ರೇಯಸ್ ಅಯ್ಯರ್ 68, ಅಭಿಷೇಕ್ ಶರ್ಮ 59 ಹಾಗೂ ಶಿವಂ ದುಬೆ 42★ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 189 ರನ್ ಗಳಿಸಿತು. ಸಂಜು ಸ್ಯಾಮ್ಸನ್, ಇಶಾನ್ ಕಿಶನ್ ಬೇಗನೇ ವಿಕೆಟ್ ಕಳೆದುಕೊಂಡರೂ ಅಭಿಷೇಕ್ ಶರ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಬಳಿಕ ಮಧ್ಯಮ ಓವರ್‌ಗಳಲ್ಲಿ ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದ ಶ್ರೇಯಸ್ ಅಯ್ಯರ್ ತಂಡಕ್ಕೆ ಆಸರೆಯಾದರು. ಡೆತ್ ಓವರ್‌ನಲ್ಲಿ ಶಿವಂ ದುಬೆ ಬಿರುಸಿನ ಬ್ಯಾಟಿಂಗ್ ಮೂಲಕ ಸ್ಕೋರ್ ಹಿಗ್ಗಿಸಿದರು. ಮೊದಲನೇ ಇನ್ನಿಂಗ್ಸ್ ವೇಳೆಯೇ ಮಳೆ ಆವರಿಸುತ್ತಿತ್ತು. ತುಂತುರು ಮಳೆಯಲ್ಲೇ ಅರ್ಧ ಪಂದ್ಯ ನಡೆಯಿತು. ಎರಡನೇ ಇನ್ನಿಂಗ್ಸ್ ವೇಳೆ ಮಳೆ ಹೆಚ್ಚಾದ ಕಾರಣ ರದ್ದು ಎಂದು ಘೋಷಿಸಿದ ನಿರ್ಣಾಯಕರು ಅಂಕಗಳನ್ನು ಹಂಚಿದರು.

ಮುಳುಗಿದ ಹುಬ್ಬಳ್ಳಿ-ಮೈಸೂರು ಪಂದ್ಯ

• **ಹುಬ್ಬಳ್ಳಿ:** ಹುಬ್ಬಳ್ಳಿ ಟೈಗರ್ಸ್ ಹಾಗೂ ಮೈಸೂರು ವಾರಿಯರ್ಸ್ ನಡುವೆ ನಡೆಯಬೇಕಿದ್ದ ಮಹಾರಾಜ ಟ್ರೋಫಿ ಪಂದ್ಯವು ಮಳೆಯಿಂದ ರದ್ದಾಗಿದೆ. ಇದರೊಂದಿಗೆ ಎರಡು ತಂಡಗಳಿಗೆ ತಲಾ 1 ಅಂಕ ದೊರೆಯಿತು. ಇದರಿಂದ ಎರಡು ತಂಡಗಳ ಪ್ಲೇ ಆಫ್ ಹಾದಿ ಕಠಿಣವಾಗಿತು. ಮಧ್ಯಾಹ್ನ ಟಾಸ್ ಗೆದ್ದು ಮೈಸೂರು ತಂಡವು ಫೀಲ್ಡಿಂಗ್ ಆಯ್ದುಕೊಂಡಿತ್ತು. ಹುಬ್ಬಳ್ಳಿ ಟೈಗರ್ಸ್ ತಂಡ ಬ್ಯಾಟಿಂಗ್ ಆರಂಭಿಸಿ ಐದು ಓವರ್‌ಗೆ 27 ರನ್ ಗಳಿಸಿ ತನ್ನ 2 ವಿಕೆಟ್ ಕಳೆದುಕೊಂಡಾಗ ಮಳೆ ಸುರಿಯಿತು. ಇದರಿಂದ 2.30 ಗಂಟೆ ಪಂದ್ಯ ಸ್ಥಗಿತವಾಗಿತು. ಕ್ಷಣಾರ್ಧದಲ್ಲಿ ಮೈದಾನದಲ್ಲಿ ನೀರು ತುಂಬಿತು. ಸಂಜೆ 5ಕ್ಕೆ ಹುಬ್ಬಳ್ಳಿ ಟೈಗರ್ಸ್ ತಂಡ ಮತ್ತೆ ಬ್ಯಾಟಿಂಗ್ ಆರಂಭಿಸಿತು. ವಿಜೆಡಿ ನಿಯಮ ಪ್ರಕಾರ ಪಂದ್ಯವನ್ನು 8 ಓವರ್‌ಗಳಿಗೆ ಇಳಿಸಲಾಗಿತ್ತು. ಬ್ಯಾಟಿಂಗ್ ಆಗಮಿಸಿದ ಹುಬ್ಬಳ್ಳಿ ತಂಡ ಅನುಭವಿ ಅಭಿನವ ಮನೋಹರ್ ಅಬ್ಬರ ಬ್ಯಾಟಿಂಗ್ ಆಡಿದರು. ಕೇವಲ 12 ಎಸೆತಕ್ಕೆ 46 ರನ್ ಗಳಿಸಿದರು. 6 ಸಿಕ್ಸ್ ಹಾಗೂ 2 ಬೌಂಡರಿ ಮೂಡಿ ಬಂದಿದ್ದು, ವೇಗ ಅರ್ಧ ಶತಕ ಪೂರೈಸಲು 4 ರನ್ ಅವಶ್ಯಕತೆ ಇದ್ದಾಗ ವೈಶಾಖ್ ವಿಜಯಕುಮಾರ ಹಾಕಿದ 8ನೇ ಓವರ್ ಕೊನೆಯ ಬಾಲ್‌ಗೆ ವಿಕೆಟ್ ಒಪ್ಪಿಸಿದರು. ಈ ಮೂಲಕ ತಂಡ ಮೊತ್ತ 91/6 ಗಳಿಸಿತು. ರಿತೇಶ ಶೆಟ್ಟಿ ಎರಡು ವಿಕೆಟ್ ಪಡೆದರು. ವೈಶಾಖ್ 2 ಓವರ್‌ಗೆ(1 ವಿ, 46 ರ) ತುಟ್ಟಿಯಾದರು. ಈ ವೇಳೆ ಮತ್ತೆ ಮಳೆ ಸುರಿದಿದ್ದರಿಂದ ಪಂದ್ಯ ಸ್ಥಗಿತ ಗೊಳಿಸಲಾಯಿತು.

ಕೆನಡಾ ಓಪನ್: ಆಕರ್ಷಿ ಕಶ್ಯಪ್, ತಾನ್ಯಾಗೆ ಗೆಲುವು

• **ಮಾರ್ಖಂ(ಕೆನಡಾ):** ಫಿಟ್ನೆಸ್ ಸಮಸ್ಯೆಯಿಂದ ಕದಂಬಿ ಶ್ರೀಕಾಂತ್ ಹೊರಬಿದ್ದಿದ್ದು, ಪ್ರತಿಷ್ಠಿತ ಕೆನಡಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತ ಶಟ್ಲರ್‌ಗಳು ಕೊಂಚ ಹಿನ್ನಡೆ ಅನುಭವಿಸಿದ್ದಾರೆ. ಆದಾಗ್ಯೂ ಭಾರತದ ಆಕರ್ಷಿ ಕಶ್ಯಪ್, ತಾನ್ಯಾ ಮಾತ್ರವಷ್ಟೇ ಪಂದ್ಯಾವಳಿಯ ಮುಂದಿನ ಸುತ್ತಿಗೆ ನಡೆದರು. ಮೂರು-ನಾಲ್ಕು ದಿನಗಳ ಹಿಂದಷ್ಟೇ ಪ್ರತಿಷ್ಠಿತ ಯುಎಸ್ ಓಪನ್ ಪಂದ್ಯಾವಳಿಯಲ್ಲಿ ರನ್ನರ್-ಅಪ್ ಸ್ಥಾನ ಪಡೆದು ಮಿಂಚಿದ್ದ ಭಾರತದ ಹಿರಿಯ ಶಟ್ಲರ್ ಪಂದ್ಯದ ವೇಳೆ ತೀವ್ರ ಫಿಟ್ನೆಸ್ ಸಮಸ್ಯೆ ಎದುರಿಸಿದರು. ಮಲೇಷ್ಯಾದ ಲೀ ಝಿ ಝಿಯಾ ಅವರನ್ನು ಎದುರಿಸಿದ್ದ ಅವರು ಮೊದಲನೇ ಸೆಟ್‌ನಲ್ಲಿ 10-11ರಿಂದ ಫೈಟ್ ಮಾಡುತ್ತಿದ್ದರು.

ಫಿಟ್ನೆಸ್ ಸಮಸ್ಯೆಯಿಂದಾಗಿ ಕದಂಬಿ ಶ್ರೀಕಾಂತ್ ನಿವೃತ್ತಿ

ಮಹಿಳೆಯರ ವಿಭಾಗದಲ್ಲಿ ಆಕರ್ಷಿ ಕಶ್ಯಪ್, ಅನ್ನಾ ಟಾಟ್ರಾನೋವಾ ಅವರನ್ನು ಎದುರಿಸಿದ್ದರು. ಮೊದಲಿನಿಂದಲೂ ಉತ್ತಮ ಪ್ರದರ್ಶನ ನೀಡಿದ ಅವರು, ನೇರ ಸೆಟ್‌ಗಳಿಂದ ಗೆಲುವು ದಾಖಲಿಸಿದರು. 21-14ರಿಂದ ಮೊದಲನೇ ಸೆಟ್ ಬಾಚಿದ ಆಕರ್ಷಾ ಎರಡನೇ ಸೆಟ್ ಅನ್ನು 21-12ರಿಂದ ಗೆಲುವು ಸಾಧಿಸಿದರು. ಮುಂದಿನ ಸುತ್ತಿನ ಪಂದ್ಯದಲ್ಲಿ ಅವರು ಬೀವಾಂಗ್ ಝಾಂಗ್ ಅವರನ್ನು ಎದುರಿಸಲಿದ್ದಾರೆ. ಭಾರತದ ಮತ್ತೋರ್ವ ಆಟಗಾರ್ತಿ ತಾನ್ಯಾ ಅಮೆರಿಕದ ದಿಶಾ ಗುಪ್ತಾ ಅವರೊಂದಿಗೆ 16-21, 18-21ರಿಂದ ಗೆದ್ದರು. ಮೊದಲಿನಿಂದಲೂ ಪಂದ್ಯದಲ್ಲಿ ಹಿಡಿತ ಸಾಧಿಸಿದ ತಾನ್ಯಾ ಆರಂಭಿಕ ಸೆಟ್‌ನಲ್ಲೇ ವಿಶ್ವಾಸ ಗಿಟ್ಟಿಸಿಕೊಂಡರು. ಎರಡನೇ ಸೆಟ್‌ನಲ್ಲೂ ತಮ್ಮ ಕರಾರುವಾಕ್ ದಾಳಿಯೊಂದಿಗೆ ಪಂದ್ಯವನ್ನು ಗೆದ್ದು ಮಿಂಚಿದರು.



ಏಪ್ರಿಲ್‌ನಲ್ಲಿ ನಡೆದಿದ್ದ ಟಿಸಿಎಸ್ 10ಕೆ ಬೆಂಗಳೂರು ಅಂತಾರಾಷ್ಟ್ರೀಯ ಮ್ಯಾರಥಾನ್ ವೇಳೆ ಆಕರ್ಷಕ ಫೋಟೊ ಕ್ಲಿಕ್ಕಿಸಿದ್ದ ಹೊಸದಿಗಂತ ಛಾಯಾಗ್ರಾಹಕ ಮೋಹನ್ ಕುಮಾರ್ ಬಿ.ಎನ್. ಅವರು ಅತ್ಯುತ್ತಮ ಪ್ರಕಟಿತ ಛಾಯಾಚಿತ್ರ ಪ್ರಶಸ್ತಿಗೆ ಭಾಜನರಾದರು

ಜೊಕೊವಿಚ್‌ಗೆ ಜಯ

• **ವಿಂಬಲ್ಡನ್:** ಅನುಭವಿ ನೋವಾಕ್ ಜೊಕೊವಿಚ್ ವಿಂಬಲ್ಡನ್ ಪಂದ್ಯಾವಳಿಯ ಮೂರನೇ ಸುತ್ತಿಗೆ ಲಗ್ಗೆ ಹಾಕಿದ್ದಾರೆ. ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು ಸ್ಟೆಫಾನೋಸ್ ಅವರನ್ನು ಮೂರು ಸೆಟ್‌ಗಳ ಪಂದ್ಯದಲ್ಲಿ ಸೋಲಿಸಿದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಜೊಕೊವಿಚ್ ಮೊದಲನೇ ಸೆಟ್ 6-3, ಎರಡನೇ ಸೆಟ್ ಅನ್ನು 6-4 ಹಾಗೂ ಮೂರನೇ ಸೆಟ್ ಅನ್ನು 6-2 ರಿಂದ ಗೆದ್ದರು. ಅನುಭವಿ ಟಯ್ಲರ್ ಫ್ರಿಟ್ಜ್ ಪ್ಯಾಟ್ರಿಕ್ ಅವರೊಂದಿಗೆ 6-2, 6-2, 7-5ರಿಂದ ಗೆಲುವು ಸಾಧಿಸಿದರು. ಕೇರೊಲಿನಾ ಅವರನ್ನು ಎದುರಿಸಿದ್ದ ಈಗಾ ಸ್ವಿಯಾಟೆಕ್ ಮಹಿಳೆಯರ ವಿಭಾಗದ ಮೂರನೇ ಸುತ್ತಿಗೇರಿದರು. ಪಂದ್ಯದಲ್ಲಿ ಹಿಡಿತ ಸಾಧಿಸಿದ ಅವರು, 6-1, 6-3ರಿಂದ ಜಯ ಗಳಿಸಿದರು. ಡಬಲ್ಸ್ ವಿಭಾಗದಲ್ಲಿ ಭಾಗವಹಿಸಿದ್ದ ಭಾರತೀಯರ ಸವಾಲು ಅಂತ್ಯಗೊಂಡಿದೆ. ತಾಕೇರು ಯುಝುಕಿ ಅವರ ಪಾಲುದಾರಿಕೆಯೊಂದಿಗೆ ಆಡಿದ ಅವರು, ಇಗಾನಿಕೊ-ಮರಕೊ ಅವರೊಂದಿಗೆ 4-6, 7-6, 6-7ರಿಂದ ಸೋತು ಹೊರಬಿದ್ದಿತು. ಮತ್ತೊಬ್ಬ ಭಾರತೀಯ ಬಾಲಾಜಿ ಹಾಗೂ ಅವರ ಜತೆಗಾರ ಮಾರ್ಸೆಲ್ಲೊ, ಸ್ಯಾಂಡರ್-ಸೆಮ್ ವರ್ಬೀಕ್ ಅವರೊಂದಿಗೆ ಸೋತು ಹೊರನಡೆದರು.


ಪ್ರಜ್ಞಾನಂದ ಶುಭಾರಂಭ

• **ಝಾಗ್ರೇಬ್:** ಚಾಣಾಕ್ಷ ಪ್ರದರ್ಶನ ನೀಡಿದ ಭಾರತೀಯ ಭರವಸೆಯ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಅಗ್ರ ಶ್ರೇಯಾಂಕಿತ ವಿಸೆಂಟ್ ಕೀಮರ್ ಅವರೊಂದಿಗೆ ಗೆಲುವು ಸಾಧಿಸಿದ್ದು, ಗ್ರ್ಯಾಂಡ್ ಚೆಸ್ ಟೂರ್‌ನ ಜಾಗ್ರೆಬ್ ಲೆಗ್‌ನಲ್ಲಿ ಶುಭಾರಂಭ ಮಾಡಿದರು. ನಾರ್ವೆ ಚೆಸ್ ಪಂದ್ಯಾವಳಿಯನ್ನು ಗೆದ್ದಿರುವ ಪ್ರಜ್ಞಾನಂದ ವಿಶ್ವಾಸದೊಂದಿಗೆ ಪಂದ್ಯಾವಳಿಗೆ ಮರಳಿದ್ದರು. ನಾರ್ವೆ ಅಂಥ ದೊಡ್ಡ ಕೂಟದ ಫೈನಲ್‌ನಲ್ಲಿ ಗೆದ್ದು ಬಿಟ್ಟ ಪ್ರದರ್ಶನವನ್ನೇ ಮುಂದುವರಿಸಿದ ಅವರು 26 ನಡೆಗಳಲ್ಲೇ ಎದುರಾಳಿಯನ್ನು ಸೋಲಿಸಿದರು. ತಮ್ಮ ಎರಡನೇ ಸುತ್ತಿನ ಪಂದ್ಯದಲ್ಲಿ ಫ್ರಾನ್ಸ್‌ನ ವಾಚೀರ್ ಲಾಗ್ರಾವೆ ಅವರೊಂದಿಗೆ ಡ್ರಾ ಮಾಡಿಕೊಂಡರು. ವಾಚೀರ್ ತಮ್ಮ ಮೊದಲನೇ ಸುತ್ತಿನ ಪಂದ್ಯದಲ್ಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರನ್ನು ಸೋಲಿಸಿದರು. ಕಳೆದ ಕೆಲವು ಪಂದ್ಯಾವಳಿಗಳಲ್ಲಿ ಹಿನ್ನಡೆ ಅನುಭವಿಸುತ್ತಿರುವ ವಿಶ್ವಚಾಂಪಿಯನ್ ಡಿ. ಗುಕೇಶ್ ಗ್ರ್ಯಾಂಡ್ ಟೂರ್ ಚೆಸ್‌ನಲ್ಲೂ ಸೋಲಿನ ಆಘಾತ ಎದುರಿಸಿದರು. ಫ್ರಾನ್ಸ್‌ನ ಅಲಿರೋಝಾ ಫಿರೋಝಾ ಪಂದ್ಯಾವಳಿಯ ಅಗ್ರಸ್ಥಾನದಲ್ಲಿದ್ದಾರೆ. ದಿನದ ಎರಡು ಸುತ್ತಿನ ಪಂದ್ಯಗಳಲ್ಲೂ ಗೆಲುವು ಸಾಧಿಸಿದ ಅಲಿರೋಝಾ 4 ಅಂಕಗಳೊಂದಿಗೆ ಪ್ರಜ್ಞಾನಂದ ಮತ್ತು ಅನೀಶ್ ಗಿರಿ ಅವರ ಮೇಲಿದ್ದಾರೆ.

ವಿಶ್ವಕಪ್, ಏಷ್ಯನ್ ಗೇಮ್ಸ್‌ಗೆ ಸಿದ್ಧ

• **ಬೆಂಗಳೂರು:** ಮುಂಬರಲಿರುವ ಏಷ್ಯನ್ ಗೇಮ್ಸ್ ಹಾಗೂ ವಿಶ್ವಕಪ್‌ಗೆ ಮಹಿಳೆಯರ ಹಾಗೂ ಪುರುಷರ ತಂಡಗಳು ಅಚ್ಚುಕಟ್ಟಾದ ತಯಾರಿ ನಡೆಸುತ್ತಿವೆ. ಉಭಯ ಟೂರ್ನಿ ಗೆಲ್ಲುವುದಕ್ಕೆ ನಾವು ಸಿದ್ಧ ಎಂದು ಭಾರತೀಯ ಮಹಿಳಾ ಹಾಕಿ ತಂಡದ ಪ್ರಧಾನ ಕೋಚ್ ಶೊರ್ಡ್ ಮರ್ರಿನ್ನೆ ಹಾಗೂ ಒಲಿಂಪಿಯನ್ ಎಮ್. ಎಮ್. ಸೋಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ವಿಶ್ವಕ್ರೀಡಾಪತ್ರಕರ್ತರ ದಿನದ ಅಂಗವಾಗಿ ಸ್ಪೋರ್ಟ್ಸ್ ರೈಟರ್ಸ್ ಅಸೋಸಿಯೇಷನ್ ಆಫ್ ಬೆಂಗಳೂರು ಹಾಗೂ ಆಕ್ಸಿಡೆಂಟ್ ರಿಲೀಫ್ ಕೇರ್ ಸಹಯೋಗದಲ್ಲಿ, ಭಾರತೀಯ ಹಾಕಿ: ದೊಡ್ಡ ವರ್ಷ, ಇನ್ನೂ ದೊಡ್ಡ ಕನಸುಗಳು ಸಂವಾದ ಕಾರ್ಯಕ್ರಮ ಆಯೋಜಿಸಿತ್ತು. ಈ ವೇಳೆ ಮಾತನಾಡಿದ ಮಹಿಳಾ ತಂಡದ ಪ್ರಧಾನ ಕೋಚ್ ಮರ್ರಿನ್ನೆ, ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆಯಲು ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವುದು ಅತ್ಯಗತ್ಯ. ಅದಕ್ಕೂ ಮುನ್ನ ನಡೆಯಲಿರುವ ವಿಶ್ವಕಪ್ ಉತ್ತಮ ಸಿದ್ಧತೆಗೆ ನೆರವಾಗಲಿದೆ ಎಂದರು. ವಿಶ್ವಕಪ್ ಮತ್ತು ಏಷ್ಯನ್ ಗೇಮ್ಸ್ ನಡುವೆ ಕೇವಲ 20 ದಿನಗಳ ಅಂತರ ಇರುವುದರಿಂದ ಆಟಗಾರರ ಮೇಲೆ ದೈಹಿಕ ಒತ್ತಡ ಉಂಟಾಗಬಹುದು ಎಂಬ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿದ ಮರ್ರಿನ್ನೆ, ವಿಶ್ವಕಪ್ ಪಂದ್ಯಾವಳಿಯು ಏಷ್ಯನ್ ಗೇಮ್ಸ್ ತಯಾರಿಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಹಾಕಿ ಅಂತಹ ಕ್ರೀಡೆಗಳಲ್ಲಿ ಫಿಟ್ನೆಸ್ ಮತ್ತು ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳುವುದು ಮುಖ್ಯ ಎಂದರು.



ಒಲಿಂಪಿಯನ್ ಸೋಮಯ್ಯ, ಕೋಚ್ ಮರ್ರಿನ್ನೆ ವಿಶ್ವಾಸ

ಸಮರ್ಥ ತಂಡ ಕಣಕ್ಕೆ: ಸೋಮಯ್ಯ: ಭಾರತದ ಹಾಕಿ ದಿಗ್ಗಜ, ಬಂಗಾರ ಪದಕ ವಿಜೇತ ಎಮ್. ಎಮ್. ಸೋಮಯ್ಯ ಮಾತನಾಡಿ, ನಾವು ವಿಶ್ವಕಪ್‌ಗೆ ಪೂರ್ಣ ಸಾಮರ್ಥ್ಯದ ತಂಡವನ್ನು ಕಣಕ್ಕಿಳಿಸುತ್ತಿದ್ದೇವೆ. ಇದರಿಂದಲೇ ಟೂರ್ನಿಗೆ ನಾವು ಎಷ್ಟು ಮಹತ್ವ ನೀಡಿದ್ದೇವೆ ಎಂಬುದು ಗೊತ್ತಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕ್ರೀಡಾ ಪತ್ರಕರ್ತರೊಂದಿಗೆ ತಮ್ಮ ದೀರ್ಘಕಾಲದ ಒಡನಾಟವನ್ನು ಇಬ್ಬರೂ ಸ್ಮರಿಸಿದರು. ಆಟಗಾರನಾಗಿ ನಿವೃತ್ತಿಯಾದ ಬಳಿಕ 1989ರ ಚಾಂಪಿಯನ್ಸ್ ಟ್ರೋಫಿಯಿಂದ ಕ್ರೀಡಾ ಪತ್ರಿಕೋದ್ಯಮಕ್ಕೂ ಕಾಲಿಟ್ಟಿದ್ದ ಸೋಮಯ್ಯ, ಪತ್ರಕರ್ತರೊಂದಿಗೆ ನಮ್ಮ ಸಂಬಂಧ ಸದಾ ಉತ್ತಮವಾಗಿತ್ತು. ನೀವು ನಮ್ಮ ತಪ್ಪುಗಳನ್ನು ಜವಾಬ್ದಾರಿಯುತವಾಗಿ ತೋರಿಸಿ ಆತ್ಮಾವಲೋಕನಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

> **ವಿಶ್ವಕಪ್ ಮತ್ತು ಏಷ್ಯನ್ ಗೇಮ್ಸ್ ಪಂದ್ಯಾವಳಲ್ಲಿ ಆಡಲಿರುವ ಪ್ರತಿಯೊಬ್ಬ ಆಟಗಾರ, ಆಟಗಾರ್ತಿಯೂ ಗೆಲ್ಲುವ ಮೈಂಡ್‌ಸೆಟ್‌ನೊಂದಿಗೆ ಆಡಬೇಕು. ಸಕಾರಾತ್ಮಕ ಪ್ರದರ್ಶನ ನೀಡಬೇಕು.**
> ■ ಎಮ್.ಎಮ್ ಸೋಮಯ್ಯ, ಒಲಿಂಪಿಯನ್

> **ದಿನಗಳು ಮತ್ತು ಪಂದ್ಯಗಳು ಜಾಸ್ತಿ ಇರುವುದು ನಮಗೆ ಲಾಭ ತರಲಿದೆ. ಹೆಚ್ಚಿನ ಪಂದ್ಯಗಳಿಂದ ಆಟಗಾರ್ತಿಯರ ತಂತ್ರ ಬಲವಾಗುತ್ತದೆ. ಹೆಚ್ಚಿನವರಿಗೆ ಅವಕಾಶಗಳೂ ಲಭಿಸುತ್ತವೆ.**
> ■ ಶೂರ್ಡ್ ಮರ್ರಿನ್ನೆ, ಮಹಿಳಾ ತಂಡದ ಪ್ರಧಾನ ಕೋಚ್

ಪದಬಂಧ

ರಾಜಾ ಸಂಗಮೇಶ ಹಿರೇಮಠ



6033

ಎಡದಿಂದ ಬಲಕ್ಕೆ
1.ಹುಮ್ಮಸ್ಸು ತರುವ ಉಲ್ಲಾಸ (3)
3.ಡಾ.ರಾಜ್-ಪುನೀತ್‌ರಾಜಕುಮಾರ್ ಅಭಿನಯದ ಚಿತ್ರ (5)
5.ಅಹಮದಾಬಾದ್ ವಾಣಿಜ್ಯ ರಾಜಧಾನಿಯಾಗುಳ್ಳ ರಾಜ್ಯ (4)
8.ಕೆಲಸದಿಂದ ತಪ್ಪಿಸಿಕೊಳ್ಳಲು ಹೇಳುವ ಕಾರಣ (2)
9.ಸಂಬಂಧಿಕರನ್ನೊಳಗೊಂಡ ಸಾಮೂಹಿಕ ಘಟಕ (4)
10.ನಂಬಲು ಸಾಧ್ಯವಾಗದಿದ್ದಾಗ ಉಂಟಾಗುವ ಭಾವನೆ (4)
11.ಕನ್ನಡದ ಪ್ರತಿಷ್ಠಿತ ಸಾಹಿತ್ಯ ಪ್ರಶಸ್ತಿ (2)
13.ದೈಹಿಕ ವ್ಯಾಯಾಮದ ಸಮಾನಪದ (4)
16.ಪರಿಶೀಲಿಸು ಎಂಬರ್ಥದ ನುಡಿಗಟ್ಟು (5)
17.ಬಳಲಿಕೆಯ ಸಮಾನಪದ (3)

ಮೇಲಿನಿಂದ ಕೆಳಕ್ಕೆ
1.ಹೊಸ ಉತ್ಪನ್ನ ಹೊರ ತರು (4)
2.ನೀರಿನ ಮೇಲೆ ಚಲಿಸುವ ದೊಡ್ಡ ವಾಹನ (3)
3.ಸಂಸ್ಕೃತದ ಕತ್ತೆ ತಲೆಕೆಳಗಾಗಿದೆ (3)
4.ಕಾದವರ ಕಡೆಗೆ ಹರಿಸಿದ ಗಮನ (4)
6.ವಿಶ್ವದಲ್ಲಿ ಹಗುರ, ಹೇರಳವಾಗಿ ಸಿಗುವ ರಾಸಾಯನಿಕ ಮೂಲಧಾತು (5)
7.ಉರಿ-ಶಾಖವನ್ನು ನೀಡುವವನು (5)
10.ಹೆಸರಿಲ್ಲ ಎಂಬರ್ಥದ ಉಂಗುರ ಬೆರಳು (4)
12.ತಮಾಷೆಯ ರೂಪದ ಟೀಕೆ (4)
14.ತಾಳ್ಮೆ ವಹಿಸುವುದರ ಮೊದಲು ರುಜುವಿದೆ (3)
15.ಗಂಡಾಂತರವಿಲ್ಲಿ ತಲೆಕೆಳಗಾಗಿದೆ (3)

6032 ಉತ್ತರ

ಎಡದಿಂದ ಬಲಕ್ಕೆ:
1.ಸಂಗಮ 5.ಕಾಯಕ
6.ಚಿಲುಕ 7.ಕಿರಾತ 9.ರಜಕ
11.ದಶಕ 14.ಗಂಗಳ
15.ಕಮಲ 16.ಹಾವುಗೆ
17.ತದಕು

ಎಡದಿಂದ ಬಲಕ್ಕೆ :
1.ಸಂಕಲಿತ 2.ಮಧುಕರ
3.ಪೈಶಾಚಿಕ
4.ಗಂಡಾಂತರ
8.ರಾಜೇಶ 10.ಜನಾಂಗ
11.ದತ್ತುಪುತ್ರ
12.ಕಕಮಕ 13.ಜಲಪಾತ
14.ಗಂಟುಹಾಕು

ಕಿರುಸುದ್ದಿ

ಎಸ್‌ಐಆರ್ ಪ್ರಕ್ರಿಯೆಗೆ ಮತದಾರರು ಸಹಕರಿಸಲಿ: ಮಿಥುನ

ಗಜೇಂದ್ರಗಡ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯುತ್ತಿರುವ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಯಶಸ್ವಿಗೊಳಿಸಲು ತಾಲೂಕಿನ ಎಲ್ಲ ಮತದಾರರು ಕಡ್ಡಾಯವಾಗಿ ಸಹಕರಿಸಬೇಕು ಎಂದು ರೋಣ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮಿಥುನ ಜಿ. ಪಾಟೀಲ ಮನವಿ ಮಾಡಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಜೂನ್ 30, 2026ರಿಂದ ಬಿಎಲ್‌ಒ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಖಾಲಿ ಅರ್ಜಿಗಳನ್ನು ವಿತರಿಸುತ್ತಿದ್ದಾರೆ. ಪ್ರತಿಯೊಬ್ಬ ಮತದಾರರು ಅರ್ಜಿಯನ್ನು ಸರಿಯಾಗಿ ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಲಗತ್ತಿಸಿ ನಿಗದಿತ ಅವಧಿಯೊಳಗೆ ಬಿಎಲ್‌ಒ ಅವರಿಗೆ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ. ಪ್ರಜಾಪ್ರಭುತ್ವದ ಬಲಿಷ್ಠ ವ್ಯವಸ್ಥೆಗೆ ಮತದಾರರ ಪಟ್ಟಿ ಅತ್ಯಂತ ಮಹತ್ವದ್ದಾಗಿದ್ದು, ಪ್ರತಿಯೊಬ್ಬ ಅರ್ಹ ನಾಗರಿಕರ ಹೆಸರು ಮತದಾರರ ಪಟ್ಟಿಯಲ್ಲಿ ಇರಬೇಕು. ಆದ್ದರಿಂದ ಯಾರೂ ನಿರ್ಲಕ್ಷ್ಯ ವಹಿಸದೆ ಎಲ್ಲರೂ ಈ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಚುನಾವಣಾ ಆಯೋಗದ ಕಾರ್ಯಕ್ಕೆ ಸಹಕರಿಸುವಂತೆ ರೋಣ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮಿಥುನ ಜಿ. ಪಾಟೀಲ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ವಿರಾಟ್-2026 ಸಮಾರಂಭ ಇಂದು

ಗಜೇಂದ್ರಗಡ: ಪಟ್ಟಣದ ಪುರ್ತಗೇರಿ ಕ್ರಾಸ್ ಬಳಿ ಇರುವ ಶ್ರೀ ಅನ್ನದಾನೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ವಿರಾಟ್-2026 ಜುಲೈ 3ರಂದು ಶುಕ್ರವಾರ ಬೆಳಗ್ಗೆ 10.30ಕ್ಕೆ ಕಾಲೇಜ್ ಆವರಣದಲ್ಲಿ ಆಯೋಜಿಸಲಾಗಿದೆ. ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ ಅಧ್ಯಕ್ಷ ಮುಷ್ಟಿಗೇರಿ ಬಸವರಾಜ ಶ್ರೀಗಳು ಸಾನಿಧ್ಯ ವಹಿಸಲಿದ್ದಾರೆ. ಕಾಲೇಜಿನ ಚೇರಮನ್ ವೀರಯ್ಯ ವಿ. ವಸ್ತ್ರದ ಅಧ್ಯಕ್ಷತೆ ವಹಿಸುವರು. ನರೇಗಲ್‌ನ ಅನ್ನದಾನೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯ ಎಸ್.ಜಿ.ಕೇಲಣ್ಣವರ ಉದ್ಘಾಟಿಸುವರು. ಗಜೇಂದ್ರಗಡದ ಸರ್ಕಾರಿ ಪದವಿ ಕಾಲೇಜ್ ಪ್ರಾಚಾರ್ಯ ಬಸವರಾಜಪ್ಪ ಹೊಸಳ್ಳಿ ಉಪನ್ಯಾಸ ನೀಡಲಿದ್ದಾರೆ. ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಆಡಳಿತಾಧಿಕಾರಿ ಡಾ.ಜಿ.ಕೆ.ಕಾಳೆ, ಶೈಕ್ಷಣಿಕ ಸಲಹೆಗಾರ ಬಿ.ಎಸ್. ಗೌಡರ, ಪಿಯು ಕಾಲೇಜ್ ಆಡಳಿತ ಮಂಡಳಿ ಸದಸ್ಯ ಮುದಕಪ್ಪ ತೊಂಡಿಹಾಳ, ಶೈಕ್ಷಣಿಕ ಮೇಲ್ವಿಚಾರಕ ಶಿವಾನಂದ ಮಠದ, ಗಜೇಂದ್ರಗಡದ ಕುಮಾರೇಶ್ವರ ವಾಣಿಜ್ಯ ಪದವಿ ಕಾಲೇಜಿನ ಆಡಳಿತ ಮಂಡಳಿ ಸದಸ್ಯ ಎಂ.ಪಿ.ಪಾಟೀಲ, ನರೇಗಲ್‌ನ ಅನ್ನದಾನೇಶ್ವರ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಚೇರ್ಮನ್ ಶರಣಪ್ಪ ರೇವಡಿ, ನರೇಗಲ್ ಅನ್ನದಾನೇಶ್ವರ ಪಿಯು ಕಾಲೇಜಿನ ಚೇರ್ಮನ್ ಎಂ. ಜಿ. ಸೋಮನಕಟ್ಟಿ, ಗಜೇಂದ್ರಗಡದ ಅನ್ನದಾನೇಶ್ವರ ಆಂಗ್ಲ ಮಾಧ್ಯಮ ಶಾಲೆ ಚೇರ್ಮನ್ ಪಿ.ಎಸ್.ಚವಡಿ, ನರೇಗಲ್‌ನ ಅನ್ನದಾನೇಶ್ವರ ಐಟಿಐ ಕಾಲೇಜಿನ ಚೇರ್ಮನ್ ಎಸ್.ಸಿ.ಚಕ್ಕಡಿಮಠ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಗಜೇಂದ್ರಗಡ ಅನ್ನದಾನೇಶ್ವರ ಪಿಯು ಕಾಲೇಜಿನ ಪ್ರಾಚಾರ್ಯ ವಸಂತರಾವ ಗಾರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	6809-7369
ಕಡಲೆ	4465-6065
ಹೆಸರುಕಾಳು	2865-5169
ಜೋಳ	1009-5157
ಕುಸುಬಿ	4179-5100
ಗೋಧಿ	2379-5250
ಹುರಳಿ	4475-5250
ನವಣಕ್ಕಿ	5400-5660
ಶೇಂಗಾ	10024-10024
ವಟಾಣಿ	4737-4737



ಮುಂಡರಗಿ: ಜಗದ್ಗುರು ಅನ್ನದಾನೀಶ್ವರ ರುದ್ರಭೂಮಿಯಲ್ಲಿ ಅರಣ್ಯ ಇಲಾಖೆ ಸಹಯೋಗದೊಂದಿಗೆ ಬಿಜೆಪಿ ಗದಗ ಜಿಲ್ಲಾ ಉಪಾಧ್ಯಕ್ಷ ಆನಂದಗೌಡ ಪಾಟೀಲ ನೇತೃತ್ವದಲ್ಲಿ ಬದಾಮ, ರೇನಿಟ್ರೀ, ಹೊಂಗೆ, ಮಹಾಗನಿ ಸೇರಿ 50ಕ್ಕೂ ಸಸಿಗಳನ್ನು ನೆಟ್ಟು ನೀರುಣಿಸಲಾಯಿತು. ಬಸವರಾಜ ದೇಸಾಯಿ, ವೀರಣ್ಣ ತುಪ್ಪದ, ಡೆಪ್ಯೂಟಿ ಆರ್‌ಎಫ್‌ಒ ಗುರುಶಾಂತ, ಸಿ.ಕೆ.ಗಣಪ್ಪನವರ, ಶರಣು ಸೊಲಗಿ, ಗುರುರಾಜ ಜೋಶಿ, ಸಿ.ಎಸ್.ಅರಸನಾಳ ಮುಂತಾದವರಿದ್ದರು.

ನಿವೃತ್ತಿ ಜೀವನ ಸುಖಕರವಾಗಿರಲಿ: ಹನಮಂತಗೌಡ

ನರಗುಂದ: ಸ್ಥಳೀಯ ಸರಕಾರಿ ಪದವಿಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕ ಪ್ರೊ.ಬಿ.ಎಂ.ಲೆಂಕನ್ನವರ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಅವರಿಗೆ ಬೀಳ್ಕೊಡಿಗೆ ಸಮಾರಂಭದಲ್ಲಿ ಕಸಾಪ ತಾಲೂಕ ಅಧ್ಯಕ್ಷ ಕನ್ನಡ ಉಪನ್ಯಾಸಕ ಪ್ರೊ.ಬಿ.ಸಿ.ಹನಮಂತಗೌಡ್ರ ಸನ್ಮಾನಿಸಿದರು. ನಂತರ ಮಾತನಾಡಿದ ಅವರು, ಸರ್ಕಾರ ನೌಕರಿಗೆ ವರ್ಗಾವಣೆ ಹಾಗೂ ನಿವೃತ್ತಿ ಎರಡೂ ಕಟ್ಟಿಟ್ಟ ಬುತ್ತಿ ಇವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅಂತೆಯೇ ಇಂದು ಬಿ.ಎಂ.ಲೆಂಕನ್ನವರ ಸಾರ್ಥಕ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಅವರು ವಿದ್ಯಾರ್ಥಿಗಳ ನೆಚ್ಚಿನ ಉಪನ್ಯಾಸಕರು, ಸಾವಿರಾರು ಜನ ವಿದ್ಯಾರ್ಥಿಗಳಿಗೆ ಒಳ್ಳೆಯ ಮಾರ್ಗದರ್ಶನ ಮಾಡಿದ್ದಾರೆ. ಅವರೊಬ್ಬ ನಿಷ್ಠಾವಂತ ಉಪನ್ಯಾಸಕರು ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವಲ್ಲಿ ಲೆಂಕನ್ನವರ ಸಿದ್ದಹಸ್ತರು ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಆಶಿಸುತ್ತೇನೆ ಎಂದರು. ಗುರುಗಳನ್ನು ಸನ್ಮಾನಿಸಿ ಕಾಲಿಗೆ ಬಿದ್ದಾಗ ಗುರುಗಳು ಶಿಷ್ಯನನ್ನು ಮೇಲೆತ್ತಿ ಅಪ್ಪಿಕೊಂಡ ದೃಶ್ಯ ತುಂಬಾ ಭಾವನಾತ್ಮಕವಾಗಿತ್ತು. ಈ ವೇಳೆ ಕಾಲೇಜ ಅಭಿವೃದ್ಧಿ ಮಂಡಳಿ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ಪ್ರಾಚಾರ್ಯ ಪ್ರೊ.ಸಿ.ಎಸ್.ಸಾಳ್ವದ, ಹಿರಿಯ ಉಪನ್ಯಾಸಕ ಡಾ.ಎಂ.ಪಿ.ಕುಲಕರ್ಣಿ, ಎಸ್.ಬಿ.ಭಜಂತ್ರಿ, ಸುಜಾತಾ ಮೆಳವಂಕಿ, ಸುಧೀರ ಸಜ್ಜನ, ಎಸ್.ವಿ.ದಂಡನಾಯ್ಕರ, ಆನಂದ ಹವಾಲ್ದಾರ, ಶರಣು ಪೂಜಾರ, ಆರ್.ಕೆ.ಐನಾಪೂರ, ಸಂಗಮೇಶ ಮಡಿವಾಳರ, ಚನ್ನು ನೀಲಗುಂದ, ನಾಗೇಶ ಮುಗಳಿ ಮುಂತಾದವರಿದ್ದರು.



ನರಗುಂದ: ಸ್ಥಳೀಯ ಸರಕಾರಿ ಪದವಿಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕ ಪ್ರೊ.ಬಿ.ಎಂ.ಲೆಂಕನ್ನವರ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಅವರಿಗೆ ಬೀಳ್ಕೊಡಿಗೆ ಸಮಾರಂಭದಲ್ಲಿ ಕಸಾಪ ತಾಲೂಕ ಅಧ್ಯಕ್ಷ ಕನ್ನಡ ಉಪನ್ಯಾಸಕ ಪ್ರೊ.ಬಿ.ಸಿ.ಹನಮಂತಗೌಡ್ರ ಸನ್ಮಾನಿಸಿದರು.

ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ | ಸಂಕನೂರು ಅಭಿಮತ

ಹಳಕಟ್ಟಿಯವರ ಆದರ್ಶ ಅಳವಡಿಸಿಕೊಳ್ಳಿ

ಗದಗ: ವಚನ ಸಾಹಿತ್ಯದ ಸಂರಕ್ಷಣೆಗಾಗಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟಿದ್ದ ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನದ ಅಂಗವಾಗಿ ಆಚರಿಸಲಾಗುವ 'ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ' ಪ್ರತಿಯೊಬ್ಬರಿಗೂ ವಚನಗಳ ಮಹತ್ವವನ್ನು ನೆನಪಿಸುವ ಪವಿತ್ರ ದಿನವಾಗಿದೆ. ಹಳಕಟ್ಟಿ ಅವರ ಆದರ್ಶಗಳು ಮತ್ತು ವಚನಗಳ ಸಂದೇಶ ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರು ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಗುರುವಾರ ಜರುಗಿದ ಡಾ.ಫ.ಗು. ಹಳಕಟ್ಟಿಯವರ ಜನ್ಮದಿನದ ನಿಮಿತ್ತ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಶರಣರು ತಾಳೆಗರಿ, ಓಲೆಗರಿಗಳಲ್ಲಿ ಬರೆದಿಟ್ಟಿದ್ದ ವಚನಗಳನ್ನು ಕಡುಬಡತನ ಮತ್ತು ಕಷ್ಟದ ಕಾಲದಲ್ಲೂ ಊರೂರು ಅಲೆದು ಸಂಗ್ರಹಿಸಿದ ಕೀರ್ತಿ ಫ.ಗು. ಹಳಕಟ್ಟಿ ಅವರಿಗೆ ಸಲ್ಲುತ್ತದೆ. ಇದೇ ಕಾರಣಕ್ಕಾಗಿ ಅವರನ್ನು 'ವಚನ ಪಿತಾಮಹ' ಎಂದು ಗೌರವಿಸಲಾಗುತ್ತದೆ. ವಕೀಲಿ ವೃತ್ತಿ ಬದಿಗಿಟ್ಟು, ಸೈಕಲ್ ಮೇಲೆ ಹಳ್ಳಿಹಳ್ಳಿಗಳಿಗೆ ಭೇಟಿ ನೀಡಿ ಸಾವಿರಾರು ವಚನಗಳನ್ನು ಅವರು ಸಂರಕ್ಷಿಸಿದರು. ವಚನಗಳ ಮುದ್ರಣಕ್ಕಾಗಿ ಸ್ವಂತ ಪ್ರಿಂಟಿಂಗ್ ಪ್ರೆಸ್ ಸ್ಥಾಪಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಶರಣ ತತ್ವ ಚಿಂತಕ ಅಶೋಕ ಬರಗುಂಡಿ ಮಾತನಾಡಿ, ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿಯವರು ತಮ್ಮ ಸ್ವಂತ ಬದುಕನ್ನು ಲೆಕ್ಕಿಸದೆ ವಚನ ಸಾಹಿತ್ಯದ ಉಳಿವಿಗಾಗಿ ನಡೆಸಿದ ಹೋರಾಟ ಮತ್ತು ಸಮರ್ಪಣಾ ಮನೋಭಾವ ಅನನ್ಯವಾದ್ದು. ವಚನಗಳು ಕೇವಲ ಓದುವ ಗ್ರಂಥಗಳಲ್ಲ, ಅವು ನಮ್ಮ ದೈನಂದಿನ ಬದುಕಿನ ದಾರಿಯಾಗಬೇಕು ಎಂದರು.

ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ, ಶರಣ ಸಾಹಿತ್ಯ ಚಿಂತಕ ಬಳಿಗಾರ, ಕರ್ನಾಟಕ ಜನಪದ ಅಕಾಡೆಮಿ ಸದಸ್ಯ ಶಂಕರಣ್ಣ ಸಂಕಣ್ಣನವರ, ಎಸ್.ಎನ್. ಬಳ್ಳಾರಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಮೃತ್ಯುಂಜಯ ಹಿರೇಮಠ ಹಾಗೂ ತಂಡದವರಿಂದ ನಾಡಗೀತೆ ಪ್ರಸ್ತುತ ಪಡಿಸಿದರು. ಆರ್.ಬಿ.ಚಿನ್ನವಾಲರ್ ನಿರೂಪಿಸಿದರು.



> ಇಂದಿನ ಯುವ ಪೀಳಿಗೆ ಮತ್ತು ವಿದ್ಯಾರ್ಥಿಗಳು ವಚನ ಸಾಹಿತ್ಯವನ್ನು ಕೇವಲ ಓದುವುದಕ್ಕೇ ಅಲ್ಲದೆ, ಜೀವನದಲ್ಲಿ ಪಾಲಿಸಬೇಕು. ಶರಣರು ಹೇಳಿದ 'ಕಳಬೇಡ, ಕೊಲಬೇಡ, ಮುನಿಯಬೇಡ ಎಂಬ ಒಂದು ವಚನವನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ನಾವು ಉತ್ತಮ ನಾಗರಿಕರಾಗಲು ಮತ್ತು ಸುಂದರ ಸಮಾಜವನ್ನು ನಿರ್ಮಿಸಲು ಸಾಧ್ಯವಾಗುತ್ತದೆ''.
>
> ■ ಎಸ್.ವಿ.ಸಂಕನೂರು, ವಿಧಾನ ಪರಿಷತ್ ಶಾಸಕ

ವಿದ್ಯಾರ್ಥಿಗಳಿಗೆ ಸನ್ಮಾನ

ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನದ ನಿಮಿತ್ತ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ 2026 ಕುರಿತು ಪ್ರೌಢಶಾಲಾ ಮತ್ತು ಕಾಲೇಜುಗಳಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸಿದ್ದು ಸ್ಪರ್ಧೆ ವಿಜೇತರಾದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಎಲ್ಲ ಸಮುದಾಯಕ್ಕೂ ಸಮಾನ ಸೇವೆ

ಗದಗ: ವಿಶ್ವದ ಮೊದಲ ಹಾಗೂ ಅತೀದೊಡ್ಡ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿರುವ ರೋಟರಿ ಸಮಾಜದ ಎಲ್ಲ ವರ್ಗಗಳ ಅಭಿವೃದ್ಧಿಗೆ ತನ್ನ ಸೇವೆ, ಕೊಡುಗೆಯನ್ನು ನೀಡುತ್ತಿದೆ. ರೋಟರಿ ಸದಸ್ಯತ್ವವು ಅರ್ಜಿ ಸಲ್ಲಿಸಿ ಪಡೆಯುವ ಗೌರವವಲ್ಲ, ಸಮಾಜ ಸೇವೆಯಲ್ಲಿನ ಬದ್ಧತೆ, ನಿಷ್ಠೆ ಮತ್ತು ಕಾರ್ಯಕ್ಷಮತೆಯನ್ನು ಗುರುತಿಸಿ ನೀಡುವ ಆಹ್ವಾನ ಎಂದು ರಾಜ್ಯ ಐಎಂಎ ನಿಕಟಪೂರ್ವ ಅಧ್ಯಕ್ಷ ಹಿರಿಯ ರೋಟೇರಿಯನ್ ಡಾ.ರಾಜಶೇಖರ ಬಳ್ಳಾರಿ ಹೇಳಿದರು.

ನಗರದ ಉಷಾದೇವಿ ಕುಷ್ಟಗಿ ರೋಟರಿ ಕಮ್ಯೂನಿಟಿ ಕೇರ್ ಸೆಂಟರ್‌ನಲ್ಲಿ ನಡೆದ ಗದಗ-ಬೆಟಗೇರಿ ರೋಟರಿ ಕ್ಲಬ್‌ನ ನೂತನ ಪದಾಧಿಕಾರಿಗಳಿಗೆ ಪದಗ್ರಹಣ ನೆರವೇರಿಸಿ ಮಾತನಾಡಿ, ರೋಟರಿ ಸಂಸ್ಥೆಯ ಸೇವಾ ಪರಂಪರೆ ಮತ್ತು ಸದಸ್ಯತ್ವದ ವಿಶಿಷ್ಟತೆ ವಿವರಿಸಿದರು.

ಪತ್ರಕರ್ತ ಶಿವಕುಮಾರ ಕುಷ್ಟಗಿ, ಲೆಕ್ಕ ಪರಿಶೋಧಕ ಆರ್.ಆರ್.ಜೋಶಿ, ಡಾ.ಶ್ರೀಕಾಂತ ಕಾಟೇವಾಲ್ ಅವರನ್ನು ಪತ್ರಿಕಾ, ವೈದ್ಯರ ಹಾಗೂ ಲೆಕ್ಕಪರಿಶೋಧಕರ ದಿನಾಚರಣೆ ಅಂಗವಾಗಿ ಸನ್ಮಾನಿಸಿ ಗೌರವಿಸಲಾಯಿತು.

ನಿಕಟಪೂರ್ವ ಅಧ್ಯಕ್ಷ ಡಾ.ಆರ್ .ಜಿ.ಗಚ್ಚಿನಮಠ ಸ್ವಾಗತಿಸಿದರು. ಕಾರ್ಯದರ್ಶಿ ಎಸ್‌ವಿ.ಕುಂಬಾರ ವರದಿ ವಾಚಿಸಿದರು. ಡಾ.ಶೇಖರ ಸಜ್ಜನರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂತೋಷ ಅಕ್ಕಿ ಹಾಗೂ ಕಮಲಾಕ್ಷಿ ಅಂಗಡಿ ಪರಿಚಯಿಸಿದರು. ರೋಟರಿ ವೆಲ್‌ಫೇರ ಸೊಸೈಟಿಯ ಅಧ್ಯಕ್ಷ ಶ್ರೀಧರ ಸುಲ್ತಾನಪೂರ ಹಾಗೂ ಬಾಲಕೃಷ್ಣ ಕಾಮತ ನಿರೂಪಿಸಿದರು. ಕಾರ್ಯದರ್ಶಿ ಅಕ್ಷಯಶೆಟ್ಟಿ ವಂದಿಸಿದರು.

ನೂತನ ಪದಾಧಿಕಾರಿಗಳ ಪ್ರಮಾಣವಚನ ಸ್ವೀಕಾರ

ಅಧ್ಯಕ್ಷರಾಗಿ ಡಾ.ಪ್ರದೀಪ ಉಗಲಾಟ, ಉಪಾಧ್ಯಕ್ಷರಾಗಿ ಸುರೇಶ ಕುಂಬಾರ, ಕಾರ್ಯದರ್ಶಿಯಾಗಿ ಅಕ್ಷಯ್ ಶೆಟ್ಟಿ, ಖಜಾಂಚಿಯಾಗಿ ಮಹೇಶ ಹಿಂಡಿ ಇತರ ಪದಾಧಿಕಾರಿಗಳಾಗಿ ಸಂತೋಷ ಅಕ್ಕಿ, ಶ್ರೀಧರ ಸುಲ್ತಾನಪೂರ, ನವೀನ ಕುಷ್ಟಗಿ, ನಾಗೇಶ ಹಂಜಗಿ, ಬಿ.ಪಿ.ಕಾಮತ, ವಿನಯ ಟಿಕಾರೆ, ಡಾ.ಧನೇಶ ದೇಸಾಯಿ, ನರೇಶ ಜೈನ್, ಕಮಲಾಕ್ಷಿ ಅಂಗಡಿ, ಪ್ರೀತಿ ಶಿವಪ್ಪಯ್ಯನಮಠ ಡಾ.ಜಿ.ಬಿ.ಪಾಟೀಲ, ಡಾ.ಸಿ.ಆರ್. ಬಳ್ಳಾರಿ, ಹೆಚ್.ಎಸ್.ಪಾಟೀಲ, ಚಂದ್ರಮೌಳಿ ಜಾಲಿ, ಡಾ.ಶೇಖರ ಸಜ್ಜನರ, ಎಸ್.ಎ.ಧರ್ಮಾಯತ, ಎ.ಎಸ್.ಬ್ಯಾಳಿ, ಸಿ.ಪಿ.ಹುಣಸಿಕಟ್ಟಿ, ಮಾಧವ ಕುಲಕರ್ಣಿ, ಡಾ.ಎ.ಸಿ.ಕಲ್ಮಠ, ರಮೇಶ ಇಟಗಿ, ಶೈಲೇಂದ್ರ ಬಿರಾದಾರ ಪ್ರಮಾಣವಚನ ಸ್ವೀಕರಿಸಿದರು.



ವೈದ್ಯರ ಸೇವೆ ಸಮಾಜಕ್ಕೆ ಅಮೂಲ್ಯ


ಗದಗ: ಕೋವಿಡ್‌ನಂತಹ ಸಂಕಷ್ಟದ ಸಂದರ್ಭಗಳಲ್ಲಿ ತಮ್ಮ ಜೀವವನ್ನೇ ಪಣಕ್ಕಿಟ್ಟು ಜನರ ಆರೋಗ್ಯ ರಕ್ಷಣೆಗೆ ಶ್ರಮಿಸಿದ ವೈದ್ಯರ ಸೇವೆ ಸಮಾಜಕ್ಕೆ ಅಮೂಲ್ಯ ಕೊಡುಗೆಯಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಹೇಳಿದರು.

ನಗರದ ಕೆಎಚ್‌ಪಿಐಎಂಎಸ್ ಉಪನ್ಯಾಸ ಸಭಾಂಗಣದಲ್ಲಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಗದಗ ಶಾಖೆ ಆಯೋಜಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ವೈದ್ಯಕೀಯ ವೃತ್ತಿ ಕೇವಲ ಉದ್ಯೋಗವಲ್ಲ, ಅದು ಮಾನವೀಯ ಸೇವೆಯ ಪ್ರತೀಕವಾಗಿದೆ. ಜಿಲ್ಲೆಯ ಆರೋಗ್ಯ ಕ್ಷೇತ್ರದಲ್ಲಿ ಐಎಂಎ ಗದಗ ಶಾಖೆ ಕೈಗೊಂಡಿರುವ ಸಾಮಾಜಿಕ ಹಾಗೂ ವೈದ್ಯಕೀಯ ಸೇವಾ ಕಾರ್ಯಗಳು ಶ್ಲಾಘನೀಯವಾಗಿವೆ ಎಂದರು.

ಐಎಂಎ ಶಾಖೆ ಅಧ್ಯಕ್ಷ ಡಾ.ಶ್ರೀಧರ ಕುರಡಗಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವೈದ್ಯಕೀಯ ವೃತ್ತಿಯಲ್ಲಿ ನೈತಿಕ ಮೌಲ್ಯಗಳನ್ನು ಕಾಪಾಡುವ ಜೊತೆಗೆ ಅನಧಿಕೃತ ವೈದ್ಯಕೀಯ (ಕ್ವಾಕ್ ಪ್ರಾಕ್ಟೀಸ್) ವಿರುದ್ಧ ವೈದ್ಯರು ಸಂಘಟಿತವಾಗಿ ಹೋರಾಡಬೇಕಾದ ಅಗತ್ಯವಿದೆ ಎಂದರು.

ಕೆಎಚ್‌ಪಿಐಎಂಎಸ್ ನಿರ್ದೇಶಕ ಡಾ.ಬಸವರಾಜ ಬೊಮ್ಮನಳ್ಳಿ ಮಾತನಾಡಿ, ರಾಷ್ಟ್ರೀಯ ವೈದ್ಯರ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಭಾರತದ ಖ್ಯಾತ ವೈದ್ಯ ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಡಾ.ಬಿ.ಸಿ.ರಾಯ್ ಅವರ ಆದರ್ಶ ಸೇವೆಯನ್ನು ಸ್ಮರಿಸಿದ ಅವರು, ಪ್ರತಿಯೊಬ್ಬ ವೈದ್ಯರೂ ಅವರ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಿವಪ್ರಕಾಶ್ ನೀಲಗುಂದ ಮಾತನಾಡಿ, ಖಾಸಗಿ ವೈದ್ಯಕೀಯ ಸಂಸ್ಥೆಗಳು ಕೆಪಿಎಂಇ ಕಾಯ್ದೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಸುರಕ್ಷಿತ ಹಾಗೂ ಗುಣಮಟ್ಟದ ಆರೋಗ್ಯ ಸೇವೆಗೆ ಅತ್ಯಗತ್ಯ ಎಂದರು. ಐಎಂಎ ಲೇಡೀಸ್ ವಿಂಗ್ ಅಧ್ಯಕ್ಷೆ ಡಾ.ಸುನಿತಾ ಕುರಡಗಿ ಸ್ವಾಗತಿಸಿದರು. ಡಾ.ಸಪನಾ ಜೋಶಿ ವಂದಿಸಿದರು. ಡಾ.ಎಸ್.ಆರ್. ನಾಗನೂರ, ಕಾರ್ಯದರ್ಶಿ ಡಾ.ರಾಹುಲ್ ಶಿರೋಳ, ಖಜಾಂಚಿ ಡಾ.ಜಯರಾಜ ಪಾಟೀಲ, ಐಎಂಎ ಲೇಡೀಸ್ ವಿಂಗ್ ಖಜಾಂಚಿ ಡಾ.ಜ್ಯೋತಿ ಪಾಟೀಲ ಇದ್ದರು.



ಗ್ಯಾರಂಟಿ ಯೋಜನೆಗಳು ಸಮಸಮಾಜ ನಿರ್ಮಾಣಕ್ಕೆ ಪೂರಕ

ನರಗುಂದ: ಸರ್ಕಾರವು ಪಂಚ ಗ್ಯಾರಂಟಿ ಯೋಜನೆ ಜಾರಿಗೆ ತಂದು ನಾಡಿನ ಜನರ ಆದಾಯವನ್ನು ಹೆಚ್ಚಿಸಿದೆಯಲ್ಲದೇ ಗೃಹಲಕ್ಷ್ಮೀ, ಗೃಹಜ್ಯೋತಿ, ಯುವನಿಧಿ, ಶಕ್ತಿಯೋಜನೆ ಹಾಗೂ ಅನ್ನಭಾಗ್ಯ ಯೋಜನೆಗಳಲ್ಲಿ ತಾಲೂಕಿನ ಪ್ರಗತಿ ಸರಾಸರಿ 99%ಕ್ಕಿಂತ ಉತ್ತಮವಾಗಿದೆ. ಈ ಯೋಜನೆಗಳು ಜನರ ಮನೆ-ಮನ ತಲುಪಿ ಸಾಮಾಜಿಕ ಆರ್ಥಿಕವಾಗಿ ಸಮಸಮಾಜದ ನಿರ್ಮಾಣಕ್ಕೆ ಪೂರಕವಾದ ವಾತಾವರಣ ನಿರ್ಮಾಣಮಾಡಿದೆ ಎಂದು ಪ್ರಗತಿ ಪರಿಶೀಲನಾ ಸಭೆ ಮತ್ತು ಸಮಿತಿ ಅಧ್ಯಕ್ಷ ವಿವೇಕ ಯಾವಗಲ್ಲ ಹೇಳಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೆಂಕಪ್ಪ ಗಿರಿತಿಮ್ಮಣ್ಣವರ ಮಾತನಾಡಿ, ಗೃಹಲಕ್ಷ್ಮೀ ಯೋಜನೆಯಡಿ 23,589 ಫಲಾನುಭವಿಗಳಿಗೆ ಪೆಬ್ರವರಿ-2026 ರವರೆಗೆ 30 ಕಂತುಗಳ ಧನ ಸಹಾಯ ಮಾಡಲಾಗಿದೆ. ಇನ್ನೂ 825 ಯಜಮಾನಿಯರಿಗೆ ಯೋಜನೆ ಸೌಲಭ್ಯ ನೀಡುವುದು ಬಾಕಿಯಿದೆ ಎಂದರು.

ತಾಲೂಕಿನ ಆಹಾರ ನಿರೀಕ್ಷ ಅನೀಲ ಪವಾರ ಅನ್ನಭಾಗ್ಯ ಯೋಜನೆ ಬಗ್ಗೆ ಮಾಹಿತಿ ನೀಡಿದರು. ಗೃಹಜ್ಯೋತಿ ಯೋಜನೆಯ ವಿವರಗಳನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಸ್.ಎಂ.ಖುದಾವಂದ ವಿವರಿಸಿದರು. ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ರಮೇಶ ಅವರು ಯುವನಿಧಿಯ ವಿವರ ನೀಡಿದರು. ಕೆಎಸ್‌ಆರ್‌ಟಿಸಿ ಘಟಕದ ಸಹಾಯಕ ನಾಗರಾಜ ಅವರು ಶಕ್ತಿ ಯೋಜನೆ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಗ್ಯಾರಂಟಿ ಸಮಿತಿ ಟಿ.ಬಿ ಶಿರಿಯಪ್ಪಗೌಡ್ರ, ವಿರೇಶ ಚುಳಕಿ, ವಿನಾಯಕ ಹಡಗಲಿ, ಉಮಾ ದ್ಯಾವನೂರ, ವೀರಯ್ಯ ಹುಚ್ಚಪ್ಪಯ್ಯನಮಠ, ಚಂದ್ರಶೇಖರ ಪಾಟೀಲ, ಶೇಖರಗೌಡ ಮುದ್ನೂರ, ಬಸವರಾಜ ಹೊಂಗಲ, ದೇವರಾಜ ನಾಗನೂರ, ರಮಜಾನಸಾಬ ನದಾಫ್, ಹನುಮಂತ ರಾಮಣ್ಣವರ, ಮೌಲಾಸಾಬ ಅರಬಜಮಾದಾರ, ಗ್ರಾಮಸ್ಥರಾದ ಗದಿಗೆಪ್ಪ ಮಂತ್ರಿ, ಗೀತಾ ಭಲವಾದಿ, ಬಸಪ್ಪ ಬದ್ನಿಕಾಯಿ, ಪಿಡಿಓ ನಾಗವೇಣಿ ಸೂಲಕಟ್ಟಿ ಉಪಸ್ಥಿತರಿದ್ದರು ಪ್ರದೀಪ ಕದಮ್ ನಿರೂಪಿಸಿ, ವಂದಿಸಿದರು.



ಸಹಕಾರದ ಮನೋಭಾವ ಬೆಳೆಸಿಕೊಳ್ಳಿ

ಗಜೇಂದ್ರಗಡ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ನಿ.ಬೆಂಗಳೂರು, ಗದಗ ಜಿಲ್ಲಾ ಸಹಕಾರ ಯೂನಿಯನ್, ಗದಗ, ಸಹಕಾರ ಇಲಾಖೆ ಹಾಗೂ ಜಗದಂಬಾ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ, ತಾಲೂಕಿನ ಎಲ್ಲ ಸಹಕಾರ ಸಂಘಗಳ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಸಹಕಾರ ವರ್ಷ-2026 ಅಂಗವಾಗಿ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮ ಜಗದಂಬಾ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಸಭಾಂಗಣದಲ್ಲಿ ಜರುಗಿತು.

ವೈದ್ಯ ಡಾ.ಆರ್.ಎಸ್.ಜೇರೆ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳ ಜೀವನದಲ್ಲಿ ಸಹಕಾರದ ಅವಶ್ಯಕತೆವಿದ್ದು, ವ್ಯಕ್ತಿತ್ವ ನಿರ್ಮಾಣದ ಅತ್ಯಂತ ಮಹತ್ವದ ಹಂತ ಹೊಂದಲು ಸಹಕಾರಿಯಾಗಿದೆ. ಈ ಹಂತದಲ್ಲಿ ಸಹಕಾರದ ಮನೋಭಾವ ಬೆಳೆಸಿಕೊಳ್ಳುವುದು ಅತ್ಯಗತ್ಯವಾಗಿದೆ ಎಂದರು.

ಸೊಸೈಟಿ ಅಧ್ಯಕ್ಷ ವಿಶ್ವನಾಥಸಾ ಮೇಘರಾಜ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರೋಣ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಪ್ರಶಾಂತ ಮುಧೋಳ ಮಾತನಾಡಿದರು. ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ವೆಂಕಟ ಪಂಡಿತ ಉಪನ್ಯಾಸ ನೀಡಿದರು. ತಾಲೂಕಿನ ವಿವಿಧ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಸ್ಪರ್ಧೆಯಲ್ಲಿ ಭಾಗವಹಿಸಿದರು. ನಂತರ ಜೆ.ಟಿ. ಪಿಯು ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ, ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ, ಎಸ್.ಎ.ಕಾಲೇಜ್ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ನಗದು ಬಹುಮಾನ ವಿತರಿಸಿದರು. ಬ್ಯಾಂಕಿನ ಸಿಇಒ ಬಾಸ್ಕರಸಾ ಶಿಂಗ್ರೀ, ಮಲ್ಲಿಕಾರ್ಜುನ ಸುಂಕದ, ಚಂದ್ರಶೇಖರ ಕರಿಯಪ್ಪನವರ, ರುಕ್ಮಿಣಿಬಾಯಿ ಬಾಂಡಗೆ, ವಿದ್ಯಾ ರಾಯಬಾಗಿ, ಗಣಪತಸಾ ಪವಾರ, ಸಂತೋಷ ಐಲಿ, ರಾಘು ಹೋಳಿಗಿ ಸೇರಿದಂತೆ ಅನೇಕರು ಇದ್ದರು.



ಗೃಹ ಜ್ಯೋತಿ ಫಲಾನುಭವಿಗಳ ಪರಿಶೀಲನೆ ಆರಂಭ

ಗಜೇಂದ್ರಗಡ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹ ಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ಮಾಹಿತಿ ಪರಿಶೀಲನಾ ಕಾರ್ಯ ಹೆಸ್ಕಾಂ ಇಲಾಖೆ ಬುಧವಾರದಿಂದ ಆರಂಭಿಸಿದೆ.

ಸರ್ಕಾರದ ನಿರ್ದೇಶನದಂತೆ ನಡೆಯುತ್ತಿರುವ ಈ ವಿಶೇಷ ಪರಿಶೀಲನಾ ಅಭಿಯಾನದ ಅಂಗವಾಗಿ ಹೆಸ್ಕಾಂ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ಫಲಾನುಭವಿಗಳ ವಿವರ, ವಿದ್ಯುತ್ ಸಂಪರ್ಕ, ಬಳಕೆಯ ಪ್ರಮಾಣ ಹಾಗೂ ದಾಖಲೆಗಳ ಪರಿಶೀಲನೆ ನಡೆಸಿದರು.

ಪರಿಶೀಲನಾ ಕಾರ್ಯ ನಡೆಯುತ್ತಿರುವ ಸ್ಥಳಗಳಿಗೆ ಹೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ (ಎಇಇ) ವಿರೇಶ ರಾಜೂರ ಭೇಟಿ ನೀಡಿ ಪರಿಶೀಲನೆ ಪ್ರಗತಿ ಅವಲೋಕಿಸಿದರು.

ಬಳಿಕ ಎಇಇ ವಿರೇಶ ರಾಜೂರ ಮಾತನಾಡಿ, ರಾಜ್ಯ ಸರ್ಕಾರದ ನಿರ್ದೇಶನದಂತೆ ಗೃಹ ಜ್ಯೋತಿ ಯೋಜನೆಫಲಾನುಭವಿಗಳಪರಿಶೀಲನೆ ನಡೆಯುತ್ತಿದೆ. ಗ್ರಾಹಕರು ಹೆಸ್ಕಾಂ ಸಿಬ್ಬಂದಿಗೆ ಅಗತ್ಯ ದಾಖಲೆಗಳನ್ನು ಒದಗಿಸಿ ಸಹಕರಿಸಬೇಕು. ಯಾವುದೇ ತಪ್ಪು ಮಾಹಿತಿ ಕಂಡುಬಂದಲ್ಲಿ ಅದನ್ನು ನಿಯಮಾನುಸಾರ ಸರಿಪಡಿಸಲಾಗುವುದು.

ಈ ಹಿನ್ನೆಲೆಯಲ್ಲಿ ಯೋಜನೆ ಪ್ರಯೋಜನ ನಿಜವಾದ ಅರ್ಹರಿಗೆ ತಲುಪುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಹಾಗೂ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸವಿದ್ದರೆ ಅದನ್ನು ಸರಿಪಡಿಸುವ ಉದ್ದೇಶದಿಂದ ಈ ಪರಿಶೀಲನಾ ಕಾರ್ಯ ಕೈಗೊಳ್ಳಲಾಗಿದೆ. ಫಲಾನುಭವಿಗಳ ಹೆಸರು, ವಿಳಾಸ, ಆಧಾರ್ ವಿವರ, ವಿದ್ಯುತ್ ಖಾತೆ ಸಂಖ್ಯೆ ಹಾಗೂ ಬಳಕೆಯ ಮಾಹಿತಿಯನ್ನು ಸಿಬ್ಬಂದಿಗಳು ಸ್ಥಳದಲ್ಲೇ ಪರಿಶೀಲಿಸುತ್ತಾರೆ. ಎಂದು ತಿಳಿಸಿದರು.

ಈ ವೇಳೆ ಸೂಡಿ ಶಾಖಾಧಿಕಾರಿಗಳಾದಬಿ.ಬ.ಭಜೇಂತ್ರಿ, ರವಿ ರಾಠೋಡ, ಪ್ರಶಾಂತ ಸೂಡಿ, ವಿ.ಪಿ.ಸೂಡಿ ,ಬಿ.ಎಂ.ಗಡಾದ, ಎಂ.ವಿ.ಮಾಲಗಿತ್ತಿಮಠ ಸೇರಿದಂತೆ ಅನೇಕರು ಇದ್ದರು.



ಶಿಕ್ಷಣ ಸಚಿವ ಧರ್ಮೇಂದ್ರ ರಾಜೀನಾಮೆ ನೀಡಲಿ: ಪ್ರತಿಭಟನೆ

ನರಗುಂದ: ಪಟ್ಟಣದ ರಾಷ್ಟ್ರೀಯ ಹೆದ್ದಾರಿಯಲ್ಲಿನ ಶಿವಾಜಿ ಮಹಾರಾಜ್ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದ ರಾಜ್ಯ ಮಾಧ್ಯಮ ವಕ್ತಾರ ಡಾ.ಸಂಗಮೇಶ ಕೊಳ್ಳಿಯವರ ಅಭಿಮಾನಿ ಬಳಗವು ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕೇಂದ್ರ ಸರ್ಕಾರದ ವೈಪಲ್ಯವೇ ಪ್ರಮುಖ ಕಾರಣವಾಗಿದೆ.

ಕೇಂದ್ರ ಸರ್ಕಾರದ ಬೇಜವಾಬ್ದಾರಿ ಆಡಳಿತದಿಂದ 12 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆಲ್ಲ ಕಾರಣೀಕರ್ತ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ಅವರು ಕೂಡಲೇ ರಾಜೀನಾಮೆ ನೀಡಬೇಕೆಂದು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಿದರು.

ಈ ವೇಳೆ ಡಾ.ಸಂಗಮೇಶ ಕೊಳ್ಳಿಯವರ, ಶಿವಾನಂದ ಬನಹಟ್ಟಿ, ಪ್ರಸಾದ ಮುತ್ತಿನ, ಬಸುರಡ್ಡಿ ರಾಯರಡ್ಡಿ, ಕಲ್ಲನಗೌಡ ತಿಪ್ಪನಗೌಡ್ರ, ಬಸವರಾಜ ಶೆಲ್ಲಿಕೇರಿ, ವಿನಯ ಪಾಟೀಲ, ದೊಡ್ಡಪ್ಪ ಮಾದರ, ಮಲ್ಲನಗೌಡ ಯಲ್ಲಪ್ಪಗೌಡ್ರ, ಹೆಚ್ ಎನ್ ಹಳಕಟ್ಟಿ, ಸುಭಾಸ ಬಾಟರ, ಶಿವಾನಂದ ಬನಹಟ್ಟಿ, ಪರ್ವತಗೌಡ ಹಿರೇಗೌಡ್ರ, ಗುರುಲಿಂಗಪ್ಪ ಪಡವೀರ, ಆರ್.ಎನ್.ಪಾಟೀಲ, ಶಿವರಡ್ಡಿ ಕೊಪ್ಪದ, ಪಿ.ಎಚ್ .ಹಿರೇಗೌಡ್ರ, ಬಸನಗೌಡ ಕರಿಗೌಡ್ರ, ರಾಜೇಶರಡ್ಡಿ ಹಂಚಿನಾಳ ಇತರರಿದ್ದರು.



ಎಸ್‌ಐಆರ್ ಜಾಗೃತಿ ಕಾರ್ಯಕ್ರಮ

ಲಕ್ಷ್ಮೇಶ್ವರ: ಪಟ್ಟಣದ ಎಸ್‌ಎಂಕೆವಿಜಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಇಲೆಕ್ಟೋರಲ್ ಲಿಟರಸಿ ಕ್ಲಬ್ (ಇಎಲ್‌ಸಿ) ವತಿಯಿಂದ ಮತದಾರರ ಪಟ್ಟಿ ಎಸ್‌ಐಆರ್ ಕುರಿತು ವಿದ್ಯಾರ್ಥಿನಿಯರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮತದಾನದ ಮಹತ್ವ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವ ಅಗತ್ಯ ಹಾಗೂ ಪ್ರತಿಯೊಬ್ಬ ನಾಗರಿಕನ ಮತದಾನದ ಹಕ್ಕು ಮತ್ತು ಕರ್ತವ್ಯದ ಕುರಿತು ವಿದ್ಯಾರ್ಥಿನಿಯರಿಗೆ ಉಪನ್ಯಾಸಕ ಎಸ್.ಎಂ.ವಿರಕ್ತಮಠ ವಿಶೇಷ ಉಪನ್ಯಾಸ ನೀಡಿದರು.

ಕಾಲೇಜ್ ಪ್ರಾಚಾರ್ಯ ಡಾ.ಸರಸ್ವತಿ ಎನ್. ಹುಲ್ಲನ್ನವರ ಮಾತನಾಡಿ, ಯುವ ಮತದಾರರು ಪ್ರಜಾಪ್ರಭುತ್ವದ ಬಲವಾಗಿದ್ದು, ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಜವಾಬ್ದಾರಿಯುತ ಮತದಾರರಾಗಬೇಕು ಎಂದರು.

ಈ ವೇಳೆ ಅರ್ಪಣಾ ರಾಯ್ಕರ್, ನಾಗರಾಜ ಬಾಸಾಪುರ, ಲಿಂಗರಾಜ ಕುಂಬಾರ ಸೇರಿದಂತೆ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು. ಎಸ್.ಬಿ.ಅಣ್ಣಿಗೇರಿ ಸ್ವಾಗತಿಸಿದರು. ಜಗದೀಶ ದ್ಯಾಮಣ್ಣವರ ನಿರೂಪಿಸಿದರು. ಜಗದೀಶ ಶಿರಹಟ್ಟಿ ವಂದಿಸಿದರು.



ಬೃಹತ್ ಬೈಕ್ ರ‍್ಯಾಲಿ ನಾಳೆ

ನರಗುಂದ: ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘ, ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರ ಸಂಘ, ಸರ್ಕಾರಿ ನೌಕರರ ಸಂಘ, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಎನ್‌ಪಿಎಸ್ ನೌಕರರ ಸಂಘದ ಸಹಯೋಗದೊಂದಿಗೆ ಒಪಿಎಸ್ ಮರು ಜಾರಿಗೆ ಆಗ್ರಹಿಸಿ ಜು.4ರಂದು ಮಧ್ಯಾಹ್ನ 1ಕ್ಕೆ ಬೃಹತ್ ಬೈಕ್ ರ‍್ಯಾಲಿಯೊಂದಿಗೆ ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಗುವುದು. ಆದ್ದರಿಂದ ಅನುದಾನಿತ ಸರ್ಕಾರಿ ಪ್ರಾಥಮಿಕ ಪ್ರೌಢಶಾಲೆಗಳ ಶಿಕ್ಷಕರು ಹಾಗೂ ಎಲ್ಲ ಸರ್ಕಾರಿ ಇಲಾಖೆಗಳ ಎನ್‌ಪಿಎಸ್ ನೌಕರರು ತಪ್ಪದೇ ಶನಿವಾರ ಮಧ್ಯಾಹ್ನ 12.30ಕ್ಕೆ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ಉಪಸ್ಥಿತರಿರಬೇಕೆಂದು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಲಾಗಿದೆ.

22 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬರ | ಖಾಸಗಿ ಕೊಳವೆ ಬಾವಿಗಳ ಮೊರೆ

ಮಳೆಗಾಲದಲ್ಲೂ ನೀರಿಗೆ ಹಾಹಾಕಾರ

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಮಳೆಗಾಲದಲ್ಲಿಯೂ ಸಹ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ ಸೃಷ್ಟಿಯಾಗಿದೆ. ಪ್ರತಿ ವರ್ಷವೂ ಬೇಸಿಗೆ ಸಮಯದಲ್ಲಿ ನೀರಿನ ಸಮಸ್ಯೆ ಎದುರಾಗುತ್ತಿತ್ತು. ಆದರೆ, ಈ ಬಾರಿ ಮುಂಗಾರು ಮಳೆ ಸರಿಯಾಗಿ ಆಗದ ಕಾರಣ ಮಳೆಗಾಲದಲ್ಲಿಯೂ ನೀರಿ ಅಭಾವ ಹೆಚ್ಚಾಗಿದೆ.

ಧಾರವಾಡ ಜಿಲ್ಲೆಯಲ್ಲಿ 2 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ನಿರಂತರ ನೀರು ಪೂರೈಸಲು ಜೆಜೆಎಂ ಯೋಜನೆಯಡಿ 388 ಗ್ರಾಮಗಳನ್ನು ಗುರುತಿಸಲಾಗಿತ್ತು. 2021ರಿಂದ ಕಾಮಗಾರಿ ಆರಂಭವಾಗಿದ್ದರೂ ಈವರೆಗೆ 355 ಗ್ರಾಮಗಳಲಷ್ಟೇ ಕಾಮಗಾರಿ ಪೂರ್ಣಗೊಂಡಿದೆ. ಸದ್ಯ 20ರಿಂದ 22 ಗ್ರಾಮಗಳಲ್ಲಿ ಈ ಮಳೆಗಾಲದಲ್ಲಿ ನೀರಿನ ತೊಂದರೆ ಎದುರಾಗಿದೆ. ಜುಲೈನಲ್ಲಿಯೂ ಸರಿಯಾಗಿ ಮಳೆಯಾಗದಿದ್ದರೆ ಒಟ್ಟಾರೆ 395 ಗ್ರಾಮಗಳ ಪೈಕಿ 90 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಸಾಧ್ಯತೆ ಅಂದಾಜಿಸಲಾಗಿದೆ.

24 ಖಾಸಗಿ ಕೊಳವೆ ಬಾವಿಗಳಿಂದ ನೀರು
ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಸನ್ನದ್ಧವಾದ ಜಿಲ್ಲಾಡಳಿತ ಖಾಸಗಿ ಕೊಳವೆ ಬಾವಿಗಳ ಮೊರೆ ಹೋಗಿದೆ. ಧಾರವಾಡ ತಾಲೂಕಿನ ಲೋಕೂರು, ನಿಗದಿ, ಬೊಗೂರು, ವೆಂಕಟಾಪೂರ, ಹೊಸ್ವಾಳ ಮತ್ತು ಹುಬ್ಬಳ್ಳಿ ತಾಲೂಕಿನ ನೂಲ್ವಿ, ಅದರಗುಂಚಿ, ಕುರ್ಡಿಕೆರೆ, ಛಬ್ಬಿ ಹಾಗೂ ಕಲಘಟಗಿ ತಾಲೂಕಿನ ನೆಲ್ಲಹರವಿ ತಾಂಡಾ, ಬಿ.ಹುಲಿಕಟ್ಟಿ, ದ್ಯಾಮನಕೊಂಡ, ಮುಕ್ಕಲ, ಹಿರೇ ಹುನಸಿಕಟ್ಟಿ, ಜುಂಜನಬೈಲ್, ಶಿಂಗನಹಳ್ಳಿ ಸೇರಿ 20 ಗ್ರಾಮಗಳಲ್ಲಿ 24 ಖಾಸಗಿ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಗ್ರಾಮ ಪಂಚಾಯಿತಿಗಳಿಗೆ ಹೊರೆ
ಖಾಸಗಿಯವರಿಂದ ಕೊಳವೆಬಾವಿ ನೀರು ಪಡೆಯಲು ಗ್ರಾಮ ಪಂಚಾಯಿತಿಯಿಂದ ತಿಂಗಳಿಗೆ 8 ಸಾವಿರದಿಂದ 12 ಸಾವಿರದವರೆಗೆ ಶುಲ್ಕ ಭರಿಸಲಾಗುತ್ತದೆ.



ಜೆಜೆಎಂ ಯೋಜನೆ ಪೂರ್ಣಗೊಂಡಿಲ್ಲ
ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಮನೆಗೂ ನಳದ ಮೂಲಕ ನೀರು ಪೂರೈಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಜಲಜೀವನ್ ಮಿಷನ್ (ಜೆಜೆಎಂ) ಐದೂವರೆ ವರ್ಷಗಳ ಬಳಿಕವೂ ಪೂರ್ಣಗೊಂಡಿಲ್ಲ. ಜಿಲ್ಲೆಯಲ್ಲಿ 355 ಗ್ರಾಮಗಳಲ್ಲಿ ಮಾತ್ರ ಯೋಜನೆ ಪೂರ್ಣಗೊಂಡಿದೆ. ಈಗಾಗಲೇ ಮನೆಗಳಿಗೆ ಅಳವಡಿಸಲಾಗಿದ್ದ ನೀರಿನ ನಳಗಳು ಹಾಳಾಗಿವೆ. ಗ್ರಾಮಸ್ಥರು ನಿರಂತರ ನೀರು ಬರುತ್ತದೆ ಎಂದು ಕಾಯುತ್ತಿದ್ದಾರೆ. ಯೋಜನೆ ಪೂರ್ಣಗೊಂಡರೆ ದೂರದ ಕೆರೆ-ಹೊಂಡಗಳಿಂದ ನೀರು ಹೊರುವುದು ತಪ್ಪುತ್ತದೆ ಎನ್ನುತ್ತಾರೆ ಗ್ರಾಮಸ್ಥರು.

ನಿರಂತರ ನೀರು ಪೂರೈಕೆ ಯೋಜನೆಗೆ ಕೋಟ್ಯಂತರ ರೂಪಾಯಿ ವ್ಯಯಿಸಿದ್ದರೂ ಹೀಗೆ ಹಣ ಪಾವತಿ ಆಗುವುದರಿಂದ ಗ್ರಾಮ ಪಂಚಾಯಿತಿಗಳಿಗೆ ಹೊರೆಯಾಗಲಿದೆ.

ಆದ್ದರಿಂದ ಶಾಶ್ವತ ನೀರಿನ ಮೂಲದ ವ್ಯವಸ್ಥೆ ಮಾಡುವ ಕಾರ್ಯ ತ್ವರಿತವಾಗಿ ಆಗಬೇಕಿದೆ ಎಂದು ಗ್ರಾಮಸ್ಥರು ಹೇಳಿದರು.

> ಜಿಲ್ಲೆಯಲ್ಲಿ 20 ಗ್ರಾಮಗಳಲ್ಲಿ ನೀರು ಸಮಸ್ಯೆಯಾಗಿತ್ತು. ಖಾಸಗಿ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಮಳೆಯಾಗದಿದ್ದರೆ 90 ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಆಗುವ ಸಾಧ್ಯತೆ ಇದೆ. ಅದನ್ನು ನಿಭಾಯಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.
> ■ **ಜಗದೀಶ ಪಾಟೀಲ**, ಕಾರ್ಯ ನಿರ್ವಾಹಕ ಎಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ದಿಗಂತ ವಿಶೇಷ

ಜಿಲ್ಲೆಯಲ್ಲಿ ಕೆರೆಗಳು ಖಾಲಿಯಾಗುತ್ತಿವೆ. ಮನುಷ್ಯರ ಜೊತೆ ಪ್ರಾಣಿ- ಪಕ್ಷಿಗಳಿಗೂ ಇದರಿಂದ ಸಮಸ್ಯೆಯಾಗಲಿದೆ. ಬೇಸಿಗೆ ಸಮಯದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯೂ ಜಿಲ್ಲೆಯ ಬಹುತೇಕ ಕೆರೆಗಳನ್ನು ಭರ್ತಿ ಮಾಡಿವೆ. ಇದರಿಂದ ಸದ್ಯ ನೀರಿನ ಸಮಸ್ಯೆ ಸರಿದೂಗಿಸಲಾಗುತ್ತಿದೆ.

ಬಿತ್ತನೆಯಲ್ಲಿ ಸೇಡಂ ಮುಂಚೂಣಿ | ವಾಣಿಜ್ಯ ಬೆಳೆ ತುಸು ಉತ್ತಮ

ನಿರೀಕ್ಷಿತ ವೇಗ ಕಾಣದ ಬಿತ್ತನೆ ಕಾರ್ಯ

▸ ರಾಚಪ್ಪಾ ಜಂಬಗಿ

ಕಲಬುರಗಿ: ಜಿಲ್ಲೆಯಾದ್ಯಂತ ಮುಂಗಾರು ಹಂಗಾಮು ಆರಂಭವಾಗಿ ತಿಂಗಳು ಕಳೆದರೂ ಬಿತ್ತನೆ ಕಾರ್ಯ ಮಾತ್ರ ನಿರೀಕ್ಷಿತ ವೇಗ ಪಡೆದುಕೊಂಡಿಲ್ಲ, ಜಿಲ್ಲೆಯ 8.90 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಯ ಪೈಕಿ ಇದುವರೆಗೆ ಕೇವಲ 1.14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಪೂರ್ಣಗೊಂಡಿದ್ದು, ಒಟ್ಟಾರೆ ಸಾಧನೆ ನೋಡಿದರೆ ಶೇ.12.86ಕ್ಕೆ ಮಾತ್ರ ಸೀಮಿತವಾಗಿದೆ.

ಸಾಮಾನ್ಯವಾಗಿ ಜೂನ್ ತಿಂಗಳ ಅಂತ್ಯದ ವೇಳೆಗೆ ಉತ್ತಮ ಮಳೆಯಾದರೆ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ತೊಗರಿ, ಜೋಳ, ಮೆಕ್ಕೆಜೋಳ ಹಾಗೂ ಇತರೆ ಮುಂಗಾರು ಬೆಳೆಗಳ ಬಿತ್ತನೆ ವೇಗವಾಗಿ ನಡೆಯುತ್ತದೆ. ಆದರೆ, ಈ ಬಾರಿ ಮುಂಗಾರು ಮಳೆ ವಿಳಂಬ ಹಾಗೂ ಹಲವು ಭಾಗಗಳಲ್ಲಿ ಸಮರ್ಪಕ ಮಳೆಯಾಗದಿರುವುದು ಬಿತ್ತನೆ ಪ್ರಗತಿಗೆ ಅಡ್ಡಿಯಾಗಿರುವುದು ಕೃಷಿ ಇಲಾಖೆ ಅಂಕಿ-ಅಂಶಗಳಿಂದಲೇ ಸ್ಪಷ್ಟವಾಗುತ್ತಿದೆ.

ಆಹಾರ ಧಾನ್ಯ: 58,923 ಹೆಕ್ಟೇರ್ ಮಾತ್ರ ಬಿತ್ತನೆ ಜಿಲ್ಲೆಯಾದ್ಯಂತ ಆಹಾರ ಧಾನ್ಯಗಳ ವಿಭಾಗದಲ್ಲಿ 7.20ಲಕ್ಷ ಹೆಕ್ಟೇರ್ ಗುರಿಯ ಪೈಕಿ ಕೇವಲ58,923 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದ್ದು, ಸಾಧನೆ ಶೇ.8.18ಕ್ಕೆ ಸೀಮಿತವಾಗಿದೆ. ಜಿಲ್ಲೆಯಲ್ಲಿ ಪ್ರಮುಖ ಬೆಳೆ ಎನಿಸಿರುವ ತೊಗರಿಯ 6.30 ಲಕ್ಷ ಹೆಕ್ಟೇರ್ ಗುರಿಯ ಪೈಕಿ ಕೇವಲ 31,422 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ಇದು ರೈತರು ಇನ್ನೂ ಉತ್ತಮ ಮಳೆಯ ನಿರೀಕ್ಷೆಯಲ್ಲಿರುವುದನ್ನು ಸೂಚಿಸುತ್ತದೆ. ಇನ್ನೊಂದೆಡೆ, ಹೆಸರು ಬೆಳೆಯಲ್ಲಿ ಶೇ.39.35ರಷ್ಟು ಸಾಧನೆ ದಾಖಲಾಗಿದ್ದು, ಕಡಿಮೆ ಅವಧಿಯಲ್ಲಿ ಬೆಳೆಯುವ ಮತ್ತು ಆರಂಭಿಕ ಮಳೆಯಲ್ಲಿಯೇ ಬಿತ್ತಬಹುದಾದ ಬೆಳೆಯಾದ ಕಾರಣ ರೈತರು ಹೆಚ್ಚು ಆಸಕ್ತಿ ತೋರಿರುವುದು ಕಂಡುಬಂದಿದೆ.

ವಾಣಿಜ್ಯ ಬೆಳೆ: ತುಸು ಉತ್ತಮ
ಜಿಲ್ಲೆಯಾದ್ಯಂತ ವಾಣಿಜ್ಯ ಬೆಳೆಗಳಲ್ಲಿ ಮಾತ್ರ ತುಸು ಉತ್ತಮ ಪ್ರಗತಿ ಕಂಡುಬಂದಿದೆ.1.45 ಲಕ್ಷ ಹೆಕ್ಟೇರ್ ಗುರಿಯ ಪೈಕಿ 52,441 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿ ಶೇ.36.17ರಷ್ಟು ಸಾಧನೆ ದಾಖಲಾಗಿದೆ. ಹತ್ತಿ ಬೆಳೆಯಲ್ಲಿ 26,751 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಡೆದಿದ್ದು, ರೈತರು ಮಳೆಯ ನಿರೀಕ್ಷೆಯಲ್ಲಿಯೇ ಹತ್ತಿ ಬಿತ್ತನೆಗೆ ಆದ್ಯತೆ ನೀಡಿರುವುದು ಕಂಡುಬರುತ್ತಿದೆ.

ಕಬ್ಬು ಬೆಳೆಯಲ್ಲಿ ಅತ್ಯಧಿಕ ಪ್ರಗತಿ ಕಂಡುಬಂದಿದೆ. ಹೊಸ ಕಬ್ಬು ಬೆಳೆಯಲ್ಲಿ ಶೇ.66.33 ಹಾಗೂ ರೂಟಿನ್ ಕಬ್ಬಿನಲ್ಲಿ ಶೇ.53.73ರಷ್ಟು ಸಾಧನೆ ದಾಖಲಾಗಿದೆ.



ಮುಂದಿನ ಎರಡು ವಾರ ನಿರ್ಣಾಯಕ
ಜಿಲ್ಲೆಯಲ್ಲಿ ಇನ್ನೂ ಶೇ.87ಕ್ಕಿಂತ ಹೆಚ್ಚು ಬಿತ್ತನೆ ಕಾರ್ಯ ಬಾಕಿ ಉಳಿದಿದೆ.ಹೀಗಾಗಿ ಜುಲೈ ಮೊದಲ ಹಾಗೂ ಎರಡನೇ ವಾರದಲ್ಲಿ ಉತ್ತಮ ಮಳೆಯಾದರೆ ಬಿತ್ತನೆ ಕಾರ್ಯ ವೇಗ ಪಡೆದು ಗುರಿ ಸಾಧನೆ ಸಾಧ್ಯವಾಗುವ ಸಂಭವವಿದೆ. ಆದರೆ, ಮಳೆ ಮತ್ತಷ್ಟು ವಿಳಂಬವಾದರೆ ಬಿತ್ತನೆಯಲ್ಲಿ ವ್ಯತ್ಯಯ ಉಂಟಾಗಿ ಬೆಳೆ ಉತ್ಪಾದನೆ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಜಿಲ್ಲೆಯ ಝಳಕಿ ಬಿ ತಾಲೂಕಿನ ರೈತ ಬಸವರಾಜ ಪಾಟೀಲ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

> ಜೂನ್‌ನಲ್ಲಿ ವಾಡಿಕೆಯಂತೆ 107 ಮೀ. ಮೀ ಮಳೆಯಾಗಬೇಕಿತ್ತು. 6 9 ಮೀ.ಮೀ ಮಾತ್ರ ಮಳೆಯಾಗಿದೆ. ಕಳೆದ ಬಾರಿ ಮಳೆ ಕೊರತೆಯಾದರೂ ಮೇ ತಿಂಗಳಲ್ಲಿ 155 ಮೀ.ಮೀ ಮಳೆ ಬಂದಿತ್ತು. ಮೇ ತಿಂಗಳಲ್ಲಿ ಮಳೆಯಾಗಿದ್ರೆ ಭೂಮಿ ನೀರು ಹಿಡಿದುಕೊಂಡು ಬಿತ್ತನೆಗೆ ಹೆಚ್ಚು ಅನುಕೂಲ ಆಗ್ತಿತ್ತು. ಮುಂದಿನ ದಿನಗಳಲ್ಲಿ ವ್ಯಾಪಕ ಮಳೆಯಾದರೆ ತೊಗರಿ, ಹತ್ತಿ, ಸೂರ್ಯಕಾಂತಿ ಸೇರಿದಂತೆ ಪ್ರಮುಖ ಮುಂಗಾರು ಬೆಳೆಗಳ ಬಿತ್ತನೆ ಗಣನೀಯವಾಗಿ ಹೆಚ್ಚಳವಾಗುವ ನಿರೀಕ್ಷೆಯಿದೆ.
> ■ **ಸಮದ್ ಪಟೇಲ್**, ಜಂಟಿ ಕೃಷಿ ನಿರ್ದೇಶಕ

ತಾಲೂಕು	ಬಿತ್ತನೆ ಸಾಧನೆ
ಸೇಡಂ	23.95
ಚಿತ್ತಾಪುರ	19.20
ಅಫಜಲಪುರ	18.93
ಜೇವರ್ಗಿ	16.92
ಯಡ್ರಾಮಿ	16.68
ಕಾಳಗಿ	16.67
ಶಹಾಬಾದ್	14.59
ಚಿಂಚೋಳಿ	13.99
ಕಮಲಾಪುರ	2.76
ಆಳಂದ	2.63
ಕಲಬುರಗಿ	1.29
ಜಿಲ್ಲಾ ಸರಾಸರಿ ಬಿತ್ತನೆ ಪ್ರಗತಿ: ಶೇ.12.86	

ರಾಷ್ಟ್ರೀಯ ಹೆದ್ದಾರಿಯಲ್ಲಿ ಮತ್ತೆ ಗುಡ್ಡ ಕುಸಿತ

ವಾಹನಗಳ ಸಂಚಾರಕ್ಕೆ ವ್ಯತ್ಯಯ



ಹೊನ್ನಾವರ: ಪಟ್ಟಣದ ರಾಮತೀರ್ಥ ತಿರುವಿನ ಸಮೀಪ ಹೆದ್ದಾರಿ ಪಕ್ಕದ ಗುಡ್ಡ ಕುಸಿತ ಸಂಭವಿಸಿದೆ. ಕಳೆದ ಎರಡು ದಿನದಿಂದ ತಾಲೂಕಿನಲ್ಲಿ ಸುರಿಯುತ್ತಿರುವ ಮಳೆಯ ಕಾರಣದಿಂದ ಹೆದ್ದಾರಿ ಪಕ್ಕದಲ್ಲಿರುವ ಗುಡ್ಡದ ಮಣ್ಣು ಸಡಿಲಗೊಂಡು ಕುಸಿದಿದೆ.

ಅದೃಷ್ಟವಶಾತ್ ಯಾವುದೇ ವಾಹನಗಳಿಗೆ ಹಾನಿ ಸಂಭವಿಸಿಲ್ಲ, ಕಳೆದ ಕೆಲ ವರ್ಷದ ಹಿಂದೆ ಐಆರ್‌ಬಿ ಕಂಪನಿಯವರು ಹೆದ್ದಾರಿ ಅಗಲೀಕರಣ ಮಾಡುವ ಸಮಯದಲ್ಲಿ ಅವೈಜ್ಞಾನಿಕ ಮಾದರಿಯಲ್ಲಿ ಗುಡ್ಡದ ಮಣ್ಣು ತೆಗೆದಿರುವುದು ಕುಸಿತ ಸಂಭವಿಸಲು ಕಾರಣವಾಗಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ. ಹೆದ್ದಾರಿ ಒಂದು ಭಾಗದ ರಸ್ತೆಯಲ್ಲಿ ಮಣ್ಣು ಬಿದ್ದ ಪರಿಣಾಮ ಕೆಲ ಕಾಲ ವಾಹನ ಸಂಚಾರಕ್ಕೆ ಸಮಸ್ಯೆ ಉಂಟಾಗಿತ್ತು. ಅಧಿಕಾರಿಗಳು ರಸ್ತೆ ಮೇಲೆ ಬಿದ್ದ ಮಣ್ಣು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಗುಡ್ಡ ಕುಸಿತ ಮತ್ತೆ ಸಂಭವಿಸುವ ಸಾಧ್ಯತೆ ಇರುವುದರಿಂದ ವಾಹನವನ್ನು ಏಕಮುಖ ಸಂಚಾರದ ಮೂಲಕ ಸಾಗಲು ಅನುವು ಮಾಡಿಕೊಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ವರುಣನ ಆರ್ಭಟ

ಬೆಳಗಾವಿ: ಕಳೆದ ಜೂನ್ ತಿಂಗಳಲ್ಲಿ ಕೈಕೊಟ್ಟು ಆತಂಕ ಮೂಡಿಸಿದ್ದ ಮಳೆರಾಯ, ಜುಲೈ ಆರಂಭದಲ್ಲೇ ಬೆಳಗಾವಿ ಜಿಲ್ಲೆಯಾದ್ಯಂತ ಭರ್ಜರಿ ಎಂಟ್ರಿ ಕೊಟ್ಟಿದ್ದಾನೆ.

ಬುಧವಾರ ತಡರಾತ್ರಿಯವರೆಗೂ ನಗರದಲ್ಲಿ ಎಡಬಿಡದೆ ಸುರಿದ ಮಳೆ, ಗುರುವಾರವೂ ದಿನವಿಡೀ ಮುಂದುವರಿದಿದೆ. ಮಧ್ಯೆ ಮಧ್ಯೆ ಕೆಲಕಾಲ ಬಿಡುವು ನೀಡಿದ್ದನ್ನು ಹೊರತು ಪಡಿಸಿದರೆ, ದಿನವಿಡೀ ಜಿಟಿಜಿಟಿ ಮಳೆಯಾಗಿದ್ದು ಇಡೀ ವಾತಾವರಣ ತಂಪಾಗುವಂತೆ ಮಾಡಿದೆ.



ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನಗರದ ಜನಜೀವನ ಕೊಂಚ ಅಸ್ತವ್ಯಸ್ತಗೊಂಡಿದೆ. ಮಾರುಕಟ್ಟೆ ಪ್ರದೇಶಗಳಲ್ಲಿ ಗ್ರಾಹಕರ ಸುಳಿವು ಕಡಿಮೆಯಾಗಿದ್ದರಿಂದ ವ್ಯಾಪಾರ-ವಹಿವಾಟುಗಳು ತೀರಾ ಮಂದಗತಿಯಲ್ಲಿ ಸಾಗಿದ್ದವು. ಇನ್ನು ನಗರದ ಪ್ರಮುಖ ರಸ್ತೆಗಳಲ್ಲಿ ಸಾರ್ವಜನಿಕರು ಹಾಗೂ ಉದ್ಯೋಗಿಗಳು ಕೊಡೆ ಹಿಡಿದು, ರೈನ್‌ಕೋಟ್ ಧರಿಸಿ ಸಂಚರಿಸುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಯಂತೆ 146 ಮೀ.ಮೀ. ಮಳೆಯಾಗಬೇಕಿತ್ತು. ಆದರೆ, ಕೇವಲ 104 ಮೀ.ಮೀ. (ಶೇ.68ರಷ್ಟು) ಮಾತ್ರ ಮಳೆಯಾಗಿದ್ದರಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿದ್ದವು. ಅದರಲ್ಲೂ ಪ್ರಮುಖವಾಗಿ ಬೆಳಗಾವಿ, ಖಾನಾಪುರ, ಕಾಗವಾಡ, ನಿಪ್ಪಾಣಿ, ಬೈಲಹೊಂಗಲ ಹಾಗೂ ಚನ್ನಮ್ಮನ ಕಿತ್ತೂರು ತಾಲೂಕುಗಳಲ್ಲಿ ತೀವ್ರ ಮಳೆ ಕೊರತೆಯಾಗಿದ್ದರಿಂದ ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದರು.

ಆದರೆ, ಜುಲೈ ಆರಂಭದಲ್ಲೇ ವರುಣದೇವ ಕೃಪೆ ತೋರಿರುವುದು ಕೃಷಿಕರಲ್ಲಿ ಹೊಸ ಭರವಸೆ ಮೂಡಿಸಿದೆ.

ಪಶ್ಚಿಮಘಟ್ಟದ ಸೆರಗಿನಲ್ಲಿರುವ ಖಾನಾಪುರ ತಾಲೂಕಿನಲ್ಲಿ ಅತ್ಯುತ್ತಮ ಮಳೆಯಾಗುತ್ತಿದ್ದು, ನದಿ-ತೊರೆಗಳು ತುಂಬಿ ಹರಿಯುತ್ತಿವೆ. ಇನ್ನುಳಿದಂತೆ ಸವದತ್ತಿ, ಹುಕ್ಕೇರಿ ಹಾಗೂ ಚಿಕ್ಕೋಡಿ ಭಾಗದಲ್ಲೂ ಉತ್ತಮ ತುಂತುರು ಮಳೆಯಾಗುತ್ತಿರುವ ವರದಿಯಾಗಿದೆ.

ಜುಲೈ 1ರಿಂದ 5ರ ವರೆಗೆ ಬೆಳಗಾವಿ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸದ್ಯದ ಪರಿಸ್ಥಿತಿಯಲ್ಲಿ ನಾವು ಉತ್ತಮ ಮಳೆಯ ನಿರೀಕ್ಷೆಯಲ್ಲಿದ್ದೇವೆ. ಸತತವಾಗಿ ಐದು ದಿನಗಳ ಕಾಲ ಮಳೆ ಸುರಿದರೆ ಒಣಗುತ್ತಿರುವ ಕೃಷಿ ಬೆಳೆಗಳಿಗೆ ಮರುಜೀವ ಸಿಗಲಿದ್ದು, ರೈತರಿಗೆ ಅತ್ಯಂತ ಅನುಕೂಲವಾಗಲಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಎಚ್.ಡಿ.ಕೋಳೇಕರ ತಿಳಿಸಿದ್ದಾರೆ.

ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ



ಯಾದಗಿರಿ: ಇಲ್ಲಿನ ಮುದ್ನಾಳ್ ಕ್ರಾಸ್ ಹತ್ತಿರ ಇರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಹುಸಿ ಬಾಂಬ್ ಇ-ಮೇಲ್ ಬಂದಿದ್ದು ಅಧಿಕಾರಿ, ಸಿಬ್ಬಂದಿ, ವಕೀಲರು ಮತ್ತು ಸಾರ್ವಜನಿಕರು ಹೆದರಿ ಕೋರ್ಟ್‌ನಿಂದ ಹೊರ ಬಂದ ಘಟನೆ ಗುರುವಾರ ನಡೆದಿದೆ.

ಇತ್ತೀಚೆಗೆ ಹುಸಿ ಬಾಂಬ್ ಬೆದರಿಕೆ ಕರೆಗಳು ಹೆಚ್ಚಾಗಿದ್ದು, ಈ ಸರದಿ ಯಾದಗಿರಿಗೂ ಬಂದಿದೆ. ಜಮಿಷಾ ಮುಬೀನ್ ಎಂಬ ಮೇಲ್ ಐಡಿಯಿಂದ ಹುಸಿ ಬೆದರಿಕೆ ಕರೆ ಬಂದಿದ್ದು 13 ವಿಷಾನೀಲ ಹಾಗೂ ಆರ್‌ಡಿಎಕ್ಸ್ ಸ್ಫೋಟಿಸುವುದಾಗಿ ತಿಳಿಸಿದೆ.

ಕೂಡಲೇ ಸ್ಥಳಕ್ಕೆ ಯಾದಗಿರಿ ಎಎಸ್‌ಪಿ, ಬಾಂಬ್ ಪತ್ತೆದಳ, ಶ್ವಾನತಂಡ ಭೇಟಿ ನೀಡಿದ್ದು, ಕೋರ್ಟ್‌ನ ವಿವಿಧೆಡೆ ಪೊಲೀಸ್ ತಂಡ ಪರಿಶೀಲನೆ ನಡೆಸಿತು.

ನಂತರ ಕೋರ್ಟ್ ಹೊರಗಿನ ಆವರಣ, ವಾಹನ ಪಾರ್ಕಿಂಗ್ ಸ್ಥಳ ಮತ್ತು ವಕೀಲ ಸಂಘದ ಕಚೇರಿ ಕಟ್ಟಡ, ಕ್ಯಾಂಟಿನ್, ಅಲ್ಲಿ ನಿಲ್ಲಿಸಲಾಗಿದ್ದ ಎಲ್ಲ ವಾಹನಗಳನ್ನು ಶ್ವಾನ ಸುಮಾರು ಎರಡು ಗಂಟೆಗಳ ಕಾಲ ತಪಾಸಣೆ ನಡೆಸಿದರೂ ಬಾಂಬ್ ಪತ್ತೆ ಆಗದ ಕಾರಣ ಇದೊಂದು ಹುಸಿ ಬೆದರಿಕೆ ಆಗಿದೆ ಎಂದು ಖಾತ್ರಿ ಮಾಡಿಕೊಂಡ ಪೊಲೀಸ್ ಇಲಾಖೆ ಯಾವುದೇ ಅಂಜಿಕೆ ಇಲ್ಲ ಎಂದು ತಿಳಿಸಿದೆ.

> ಜಿಲ್ಲಾ ಕೋರ್ಟ್‌ಗೆ ಬಾಂಬ್ ಬೆದರಿಕೆ ಬಂದಿದ್ದರಿಂದ ಕೂಡಲೇ ಎಲ್ಲೆಡೆ ತಪಾಸಣೆ ಮಾಡಲಾಗಿದೆ ಮತ್ತು ಶಹಾಪುರ, ಸುರಪುರ ತಾಲೂಕು ಕೋರ್ಟ್‌ಗಳಲ್ಲಿ ಸಹ ತಪಾಸಣೆ ಮಾಡಿಸಲಾಗಿದೆ. ಎಲ್ಲೂ ಬಾಂಬ್ ಪತ್ತೆಯಾಗಿಲ್ಲ. ಕೋರ್ಟ್‌ನ ಅನುಮತಿ ಪಡೆದು ದೂರು ದಾಖಲಿಸಲಾಗುವುದು.
> ■ **ಪೃಥ್ವಿಕ್ ಶಂಕರ್, ಎಸ್‌ಪಿ**



ಹುಬ್ಬಳ್ಳಿ:ವಿಧಾನ ಪರಿಷತ್ ಸದಸ್ಯ ಲಿಂಗರಾಜ ಪಾಟೀಲ ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಉಪಮುಖ್ಯಮಂತ್ರಿ ಜಿ.ಪರಮೇಶ್ವರ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣ ಸ್ವಾಮಿ, ರುದ್ರಪ್ಪ ಲಮಾಣಿ, ಸಲೀಂ ಅಹ್ಮದ್ ಇದ್ದರು.

ಕೃಷ್ಣಾ ನದಿಗೆ ಹರಿದು ಬಂದ ನೀರು



ಕುಡಚಿ: ರಾಯಬಾಗ ತಾಲೂಕಿನ ಕುಡಚಿ ಪಟ್ಟಣದ ಕೃಷ್ಣಾ ನದಿಗೆ ಗುರುವಾರ ನೀರು ಹರಿದು ಬರುತ್ತಿದ್ದು, ರೈತರಲ್ಲಿ ಸಂತಸ ಮನೆ ಮಾಡಿದೆ. ಕಳೆದ ಎರಡು ದಿನಗಳಿಂದ ರಾಜಾಪುರ ಜಲಾಶಯದಿಂದ 3500 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಗುರುವಾರ ಬೆಳಗ್ಗೆ ಕುಡಚಿಗೆ ತಲುಪಿ ಹರಿದು ಬರುತ್ತಿದೆ. ಮೇ ತಿಂಗಳಲ್ಲಿ ಪ್ರಾರಂಭ ಆಗಬೇಕಿದ್ದ ಮುಂಗಾರು ಮಳೆ ಜುಲೈನಲ್ಲಿ ಪ್ರಾರಂಭವಾಗಿದ್ದು, ಕಳೆದ ಎರಡು ಮೂರು ದಿನದಲ್ಲಿ ಮೋಡ ಕವಿದು ಅಲ್ಲಲ್ಲಿ ತುಂತುರು ಮಳೆ ಪ್ರಾರಂಭವಾಗಿದ್ದು, ಜೊತೆಗೆ ಕಳೆದ ಎರಡು ಮೂರು ತಿಂಗಳಿಂದ ಕೃಷಿಗೆ, ಜನ ಜಾನುವಾರುಗಳಿಗೆ ನೀರಿಲ್ಲದೆ ಪರಿತಪಿಸುವಂತಾಗಿದೆ. ಕೃಷ್ಣಾ ನದಿಗೆ ನೀರು ಹರಿದು ಬರುತ್ತಿರುವುದು ರೈತರಲ್ಲಿ, ಸಾರ್ವಜನಿಕರಲ್ಲಿ ಸಂತಸ ಮನೆ ಮಾಡಿದೆ.

ನಾರದ ಜಯಂತಿ ನಾಳೆ

ಹುಬ್ಬಳ್ಳಿ: ನಗರದ ಲೋಕಹಿತ ಟ್ರಸ್ಟ್ ಹಾಗೂ ವಿಶ್ವ ಸಂವಾದ ಕೇಂದ್ರ ಸಹಯೋಗದಲ್ಲಿ ಆದ್ಯ ಪತ್ರಕರ್ತ ಮಹರ್ಷಿ ನಾರದ ಜಯಂತಿ ಹಾಗೂ ಸನ್ಮಾನ ಸಮಾರಂಭ ಜು.4 ಕ್ಕೆ ಬೆಳಗ್ಗೆ 11 ಗಂಟೆಗೆ ಜೆ.ಸಿ. ನಗರದ ಮುನ್ಸಿಪಲ್ ಎಂಪ್ಲಾಯಿಸ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ವಕ್ತಾರರಾಗಿ ನಿವೃತ್ತ ಅಬಕಾರಿ ದಿವಾಕರ ಹೆಗಡೆ ಭಾಗವಹಿಸಲಿದ್ದು, ಹಿರಿಯ ಪತ್ರಕರ್ತ ಮನೋಜ್ ಪಾಟೀಲ ಹಾಗೂ ಹಿರಿಯ ಛಾಯಾಗ್ರಹಕ ಕಿರಣ ಬಾಕಳೆ ಅವರಿಗೆ ಸನ್ಮಾನಿಸಲಾಗುವುದು ಎಂದು ಲೋಕಹಿತ ಟ್ರಸ್ಟ್ ಕಾರ್ಯದರ್ಶಿ ಶ್ರೀಧರ ನಾಡಗೀರ ತಿಳಿಸಿದ್ದಾರೆ.

ಜನಸ್ತೋಮದ ಮಧ್ಯೆ ಸಂಭ್ರಮದ ಕಾರ ಹುಣ್ಣಿಮೆ

ಹಾವೇರಿ: ತಾಲೂಕಿನ ಕರ್ಜಗಿ ಗ್ರಾಮದ ಕಾರಹುಣ್ಣಿಮೆ ವೈಭವ ಎಂದೇ ಖ್ಯಾತವಾದ ಬ್ರಹ್ಮಲಿಂಗೇಶ್ವರ ಕಾರಹುಣ್ಣಿಮೆ ಮಹೋತ್ಸವ ಗುರುವಾರ ಸಂಜೆ ಸಾವಿರಾರು ಸಂಖ್ಯೆಯ ಜನಸ್ತೋಮದ ಮಧ್ಯೆ ಅತ್ಯಂತ ಸಡಗರ ಸಂಭ್ರಮದಿಂದ ಹಾಗೂ ಹಲವು ಸಂಪ್ರದಾಯಗಳ ಬದ್ಧವಾಗಿ ನಡೆಯಿತು.

ಗ್ರಾಮದ ವೈಶಿಷ್ಟ್ಯವಾಗಿರುವ ಕಾರಹುಣ್ಣಿಮೆ ಹಬ್ಬದ ಮೊದಲ ದಿನ ಮಂಗಳವಾರ ಹೊನ್ನುಗ್ಗಿ, ಬುಧವಾರ ದೊಡ್ಡಬಂಡಿ ಉತ್ಸವ, ಗುರುವಾರ ಕರಕ್ಕಿ ಬಂಡಿ ಉತ್ಸವ ಅದ್ಧೂರಿಯಾಗಿ ನಡೆದವು. ಗುರುವಾರ ಬೆಳಗ್ಗೆ ನಡೆದ ಸಣ್ಣ ಬಂಡಿ ಓಟಕ್ಕೆ ಸಣ್ಣ ಕರುಗಳನ್ನು ಹೂಡಲಾಗಿತ್ತು. ಅತ್ಯಾಕರ್ಷಕ ಅಲಂಕೃತ ಸಣ್ಣ ಎತ್ತುಗಳು ಓಡುವ ನೋಟ ಎಲ್ಲರ ಗಮನ ಸೆಳೆಯಿತು. ದೊಡ್ಡ ಎತ್ತುಗಳನ್ನು ಹೂಡಿ ಓಡಿಸುವ ಬಂಡಿಗೆ ದುಂಡಿತತ್ತರ ಬಂಡಿ ಎನ್ನಲಾಗುತ್ತದೆ. ಈ ಬಂಡಿ ಮಧ್ಯಾಹ್ನ ನಡೆಯಿತು. ವಿವಿಧ ಬಗೆಯ ಎತ್ತುಗಳನ್ನು ಕಟ್ಟಿ ಓಡಿಸಲಾಯಿತು. ಸಂಜೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯ ವೈಭವಗಳೊಂದಿಗೆ ವಿವಿಧ ಅಲಂಕೃತ ವಸ್ತುಗಳು, ಬಲೂನ್‌ಗಳಿಂದ ಸಿಂಗರಿಸಿದ ಎತ್ತುಗಳ ಮೆರವಣಿಗೆ ಸಂಭ್ರಮದಿಂದ ನಡೆಯಿತು. ಮೆರವಣಿಗೆಯುದ್ದಕ್ಕೂ ಯುವಕರು ಕುಣಿದು ಕುಪ್ಪಳಿಸಿದರು.



ಬಳಿಕ ನಡೆದ ಕರಕ್ಕಿಬಟ್ಟು ಎಂದು ಕರೆಯಲ್ಪಡುವ ಕೊನೆಯ ಎರಡು ಬಂಡಿಗಳ ಓಟ ಆಕರ್ಷಣೀಯವಾಗಿತ್ತು. ಬಂಡಿಯನ್ನು ಎಳೆದುಕೊಂಡು ಎತ್ತುಗಳು ಓಡುತ್ತಿದ್ದರೆ ಇನ್ನೊಂದೆಡೆ ಯುವಕರು ಕೇಕೆ, ಶಿಳ್ಳೆ ಹಾಕುತ್ತ ಬಂಡಿಯ ವೇಗ ಹೆಚ್ಚಿಸಲು ಎತ್ತುಗಳನ್ನು ಹುರಿದುಂಬಿಸುತ್ತಿದ್ದ ದೃಶ್ಯ ರೋಮಾಂಚನಗೊಳಿಸಿತು. ಈ ವೈಭವವನ್ನು ಕಣ್ತುಂಬಿಕೊಳ್ಳಲು ಜಿಲ್ಲೆಯ ವಿವಿಧೆಡೆಯಿಂದ ಸಾವಿರಾರು ಜನರು ಆಗಮಿಸಿದ್ದರು.

ಬೆಳಗ್ಗೆಯಿಂದ ರಾತ್ರಿ 10ರವರೆಗೂ ಬ್ರಹ್ಮದೇವರಿಗೆ ಭಕ್ತರಿಂದ ಹಣ್ಣು- ಕಾಯಿ ಸೇವೆ ನಡೆಯಿತು. ಬೇರೆ ಬೇರೆ ಭಾಗದಿಂದ ಭಕ್ತರು ಆಗಮಿಸಿದ್ದರು. ನಂತರ ರಾತ್ರಿ ಬ್ರಹ್ಮದೇವರಿಗೆ ಹೂರಣ, ತುಪ್ಪ ಉಣಿಸುವ ಕಾರ್ಯಕ್ರಮ ವೈಭವದಿಂದ ನಡೆಯಿತು. ವೀರಗಾರರು ಕಣ್ಣಿಗೆ ಬಟ್ಟೆ ಕಟ್ಟಿ ದೇವರಿಗೆ ಹೂರಣ ತಿನ್ನಿಸುವುದು ಇದರ ವಿಶೇಷ. ಹೂರಣ ನೇವೈದ್ಯ ನೀಡುವ ಮೂಲಕ ಹಬ್ಬದ ಸಂಭ್ರಮ ತೆರೆ ಕಂಡಿತು.

ಎಫ್‌ಐಆರ್‌ನಲ್ಲಿ ಬೇರೆ ಹೆಸರು ದಾಖಲು | ಸಂಚಾಲಕಿ ಹೇಮಾವತಿ ಆರೋಪ

ಬಾಲಕನಿಂದ ಬಾಲಕಿ ಗರ್ಭಿಣಿ

ಧಾರವಾಡ: ಪ್ರೀತಿ-ಪ್ರೇಮದ ನಾಟಕವಾಡಿ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಅವಳು ಗರ್ಭಿಣಿಯಾದ ನಂತರ ಜೀವ ಬೆದರಿಕೆ ಹಾಕಿ ಮೋಸ ಮಾಡಿದ ಘಟನೆ ಹುಬ್ಬಳ್ಳಿ ತಾಲೂಕಿನ ಕುಸುಗಲ್ ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.



ಈ ಪ್ರಕರಣದಲ್ಲಿ ಹುಬ್ಬಳ್ಳಿ ಗ್ರಾಮೀಣ ಠಾಣೆ ಪೊಲೀಸರು ಅಸಲಿ ಆರೋಪಿಯನ್ನು ರಕ್ಷಿಸಲು ಎಫ್‌ಐಆರ್‌ನಲ್ಲಿ ಬೇರೊಬ್ಬ ಬಾಲಕನ ಹೆಸರು ದಾಖಲಿಸಿದ್ದಾಗಿ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕಿ ಹೇಮಾವತಿ, ಸುದ್ದಿಗೋಷ್ಠಿಯಲ್ಲಿ ಆರೋಪ ಮಾಡಿದರು.

ಅನಾಥ ಬಾಲಕಿಗೆ ವಂಚನೆ: ಮೂಲತಃ ಅಂಚಟಗೇರಿ ಗ್ರಾಮದ ಸಂತ್ರಸ್ತ ಬಾಲಕಿಗೆ ತಂದೆ-ತಾಯಿಗಳೇ ಇಲ್ಲ, ಆಕೆಯನ್ನು ಕುಸುಗಲ್ ಗ್ರಾಮದ ಅಜ್ಜಿ ಸಾಕಿ ಸಲಹುತ್ತಿದ್ದಳು. ಇನ್ನು ಹುಬ್ಬಳ್ಳಿಯ ಗಾಮನಗಟ್ಟಿ ಅಪ್ರಾಪ್ತ ಬಾಲಕನ ತಾಯಿ ತವರು ಮನೆಯೂ ಕುಸುಗಲ್ ಎಂದು ತಿಳಿಸಿದರು.

ಈ ಗ್ರಾಮಕ್ಕೆ ಆಗಾಗ ಬಂದು ಹೋಗುತ್ತಿದ್ದ ಬಾಲಕ, ಬಾಲಕಿ ಜೊತೆಗೆ ಪ್ರೀತಿಯ ನಾಟಕವಾಡಿದ ಆತ, ಲೈಂಗಿಕ ಕ್ರಿಯೆ ನಡೆಸಿದ್ದಾನೆ. ಪರಿಣಾಮ ಬಾಲಕಿ ಪ್ರಸ್ತುತ 9 ತಿಂಗಳ ಗರ್ಭಿಣಿ. ವೈದ್ಯರು ಜು.21 ಹೆರಿಗೆ ದಿನಾಂಕ ನೀಡಿದ್ದಾಗಿ ಸಹ ಮಾಹಿತಿ ನೀಡಿದರು. ಬಾಲಕಿ ಗರ್ಭಿಣಿ ಎಂಬ ವಿಷಯ ತಿಳಿಯುತ್ತಿದ್ದಂತೆ, ಬಾಲಕ ಆಕೆಯೊಂದಿಗೆ ಸಂಪರ್ಕ ಕಡಿದುಕೊಂಡಿದ್ದಾನೆ. ಅಷ್ಟೇ ಅಲ್ಲದೆ, ಯಾರ ಬಳಿಯೂ ನನ್ನ ಹೆಸರು ಹೇಳಬಾರದು ಎಂದು ಬಾಲಕಿಗೆ ಪ್ರಾಣ ಬೆದರಿಕೆ ಹಾಕಿದ್ದಾನೆ ಎಂದು ಹೇಮಾವತಿ ದೂರಿದರು.

ಪೊಲೀಸರ ವಿರುದ್ಧ ಆರೋಪ: ಈ ಇಡೀ ಪ್ರಕರಣವೇ ಮುಚ್ಚಿ ಹಾಕಲು ಹುಬ್ಬಳ್ಳಿ ಗ್ರಾಮೀಣ ಠಾಣೆಯ ಪೊಲೀಸರು ಶಾಮೀಲಾಗಿ, ಎಫ್‌ಐಆರ್‌ನಲ್ಲಿ ನಿಜವಾದ ಅಪರಾಧಿಯ ಹೆಸರನ್ನು ಬರೆಯುವ ಬದಲು, ಬೇರೊಬ್ಬ ಬಾಲಕನ ಹೆಸರನ್ನು ಸಹ ನಮೂದಿಸಿದ್ದಾರೆ ಎಂದು ಆರೋಪ ಮಾಡಿದರು.

ಸಂತ್ರಸ್ತ ಅನಾಥ ಬಾಲಕಿಗೆ ಸರ್ಕಾರದಿಂದ ರೂ.10 ಲಕ್ಷ ಪರಿಹಾರ ನೀಡಬೇಕು.

ಗರ್ಭಿಣಿ ಬಾಲಕಿಗೆ ಉಚಿತ ವೈದ್ಯಕೀಯ ಸೌಲಭ್ಯ, ವಿಮಾ ಸೌಲಭ್ಯದ ಜೊತೆಗೆ ಸರ್ಕಾರಿ ಆಶ್ರಯ ಮನೆ ಕಲ್ಪಿಸಬೇಕು ಎಂದು ಹೇಮಾವತಿ ಸರ್ಕಾರಕ್ಕೆ ಒತ್ತಾಯ ಮಾಡಿದರು. ಅನಾಥ ಅಪ್ರಾಪ್ತ ಬಾಲಕಿಗಾದ ಅನ್ಯಾಯದ ವಿರುದ್ಧ ಜಿಲ್ಲಾಡಳಿತ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ತಕ್ಷಣವೇ ಮಧ್ಯಪ್ರವೇಶಿಸಿ, ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ನೈಜ ಆರೋಪಿ ವಶಕ್ಕೆ ಪಡೆದು, ಕಾನೂನು ಸಂಘರ್ಷಕ್ಕೆ ಒಳಪಡಿಸುವಂತೆ ಆಗ್ರಹಿಸಿದರು.

> ಬಾಲಕನಿಗೆ 21 ವರ್ಷ ತುಂಬಿದ ಹಾಗೂ ಕಾನೂನು ಸಂಘರ್ಷದಿಂದ ಬಿಡುಗಡೆ ನಂತರ ಬಾಲಕಿಯ ಜೊತೆಗೆ ಕಾನೂನು ಬದ್ಧವಾಗಿವಾಗಿಯೇ ಅವಳಿಗೆ ನ್ಯಾಯ ಸಿಗುವಂತೆ ದೌರ್ಜನ್ಯ ಎಸಗಿದ ಬಾಲಕ ಜೊತೆಯಲ್ಲಿ ಮದುವೆ ಮಾಡಿಸಬೇಕು.
> ■ **ಹೇಮಾವತಿ ಟಿ**, ರಾಜ್ಯ ಸಂಚಾಲಕಿ ದಲಿತ ಸಂಘರ್ಷ ಸಮಿತಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಐದು ದಿನಗಳಿಂದ ಸುರಿಯುತ್ತಿದ್ದ ಭಾರೀ ಮಳೆ ಗುರುವಾರ ಸ್ವಲ್ಪ ಶಾಂತವಾಗಿದ್ದು ಆಗಾಗ ಮಳೆ ಸುರಿದು ಮೋಡ ಕವಿದ ವಾತಾವರಣ ಮುಂದುವರಿದಿದೆ.

ಮೂರು ದಿನಗಳ ಕಾಲ ನಿರಂತರ ಮಳೆ ಸುರಿದ ಪರಿಣಾಮ ಹೊನ್ನಾವರ ತಾಲೂಕಿನ ರಾಮತೀರ್ಥ ತಿರುವಿನಲ್ಲಿ ಗುಡ್ಡ ಕುಸಿತ ಉಂಟಾಗಿದ್ದು ಗುಡ್ಡದ ಮಣ್ಣು ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಬಿದ್ದು ಕೆಲ ಕಾಲ ಸಂಚಾರಕ್ಕೆ ಅಡಚಣೆ ಉಂಟಾಯಿತು. ಸಾಕಷ್ಟು ಪ್ರಮಾಣದಲ್ಲಿ ಗುಡ್ಡದ ಮಣ್ಣು ಕುಸಿದು ಹೆದ್ದಾರಿಗೆ ಬಂದಿದ್ದು ಆ ಸಮಯದಲ್ಲಿ ಯಾವುದೇ ಸಂಚಾರ ಇರಲಿಲ್ಲ ಎಂದು ತಿಳಿದು ಬಂದಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಹೊನ್ನಾವರ ತಾಲೂಕು ಆಡಳಿತ ಮತ್ತು ಪೊಲೀಸ್ ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ದೌಡಾಯಿಸಿ ಜೆಸಿಬಿ ಯಂತ್ರದ ಮೂಲಕ ಮಣ್ಣು ತೆರವು ಕಾರ್ಯ ನಡೆಸಿ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರೂ ಮತ್ತಷ್ಟು ಗುಡ್ಡ ಕುಸಿತದ ಸಾಧ್ಯತೆ ಇರುವುದರಿಂದ ಗುಡ್ಡದ ಕೆಳಗಿನ ರಸ್ತೆಯಲ್ಲಿ ಸಂಚಾರ ಬಂದ್ ಮಾಡಿ ಒಂದೇ ಬದಿಯ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಕಾರವಾರ ಮತ್ತು ಅಂಕೋಲಾ ತಾಲೂಕುಗಳಲ್ಲಿ ಬೆಳಿಗ್ಗೆ ಮಳೆ ಮುಂದುವರಿದಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಕಾರವಾರ ತಾಲೂಕಿನ ಅಂಗನವಾಡಿ,ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮತ್ತು ಅಂಕೋಲಾ ತಾಲೂಕಿನ ಅಂಗನವಾಡಿ ಕೇಂದ್ರಗಳಿಗೆ ಒಂದು ದಿನಕ್ಕೆ ಸೀಮಿತವಾಗಿ ರಜೆ ಘೋಷಣೆ ಮಾಡಲಾಗಿತ್ತು.

ಜಿಲ್ಲೆಯಲ್ಲಿ ಜು.3 ಮತ್ತು 4 ರಂದು ಮಳೆ ಸುರಿಯುವ ಕುರಿತಂತೆ ಆರೆಂಜ್ ಅಲರ್ಟ್ ನೀಡಲಾಗಿದೆ. ಜುಲೈ 5 ರಂದು ಭಾರೀ ಬಿರುಗಾಳಿ ಮಳೆಯಾಗುವ ಮುನ್ಸೂಚನೆ ಇದೆ.

ತಲೆಮರೆಸಿಕೊಂಡಿದ್ದ ವ್ಯಕ್ತಿ ಬಂಧನೆ

ಯಲ್ಲಾಪುರ: ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ವಾರೆಂಟ್ ಆರೋಪಿಯನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ತಾಲೂಕಿನ ಬಿಳಕಿ ಗ್ರಾಮದ ಜಡಗಿನಕೊಪ್ಪ ನಿವಾಸಿ ಪ್ರಕಾಶ್ ಕೃಷ್ಣಾ ಸಿದ್ದಿ (26) ಬಂಧಿತ ಆರೋಪಿ. ಆರೋಪಿಯ ವಿರುದ್ಧ ಯಲ್ಲಾಪುರ ಜೆಎಂಎಫ್‌ಸಿ ನ್ಯಾಯಾಲಯ ಜಾಮೀನು ರಹಿತ ವಾರೆಂಟ್ ಹೊರಡಿಸಿತ್ತು. ಖಚಿತ ಮಾಹಿತಿ ಮೇರೆಗೆ ಜುಲೈ 2ರಂದು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದೆ.

ಪ್ರಕಾಶ್ ವಿರುದ್ಧ ಯಲ್ಲಾಪುರ ಮತ್ತು ಮುಂಡಗೋಡ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ದಾಖಲಾಗಿರುವ ಇನ್ನೂ ನಾಲ್ಕು ಪ್ರಕರಣಗಳಲ್ಲಿಯೂ ಜಾಮೀನು ರಹಿತ ವಾರೆಂಟ್ ಜಾರಿಯಲ್ಲಿತ್ತು. ಅವುಗಳಲ್ಲಿ ಯಲ್ಲಾಪುರ ಠಾಣೆಯ ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಕಳವು ಪ್ರಕರಣಗಳು, ಮುಂಡಗೋಡ ಠಾಣೆಯ ಎರಡು ಕಳವು ಪ್ರಕರಣಗಳು ಸೇರಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಪಿಐ ರಮೇಶ್ ಹಾನಾಪುರ ನೇತೃತ್ವದಲ್ಲಿ ಪಿಎಸ್‌ಐಗಳಾದ ರಾಜಶೇಖರ ವಂದಲಿ, ಸಿದ್ದಪ್ಪ ಗುಡಿ, ಮಹಾವೀರ ಕಾಂಬಳೆ ಹಾಗೂ ಸಿಬ್ಬಂದಿಗಳಾದ ಗೋಪಾಲ್ ಚವ್ಹಾಣ, ಸಂತೋಷ ಬಾಳೇರ, ಬಸವರಾಜ,ಪರಶುರಾಮ ದೊಡಮನಿ, ಮಾಹಂತೇಶ ಕಡಪಟ್ಟಿ, ಇತರರು ಭಾಗವಹಿಸಿದ್ದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62099	66555
ಬಿಳಿಗೋಟು	21600	33700
ಕೆಂಪುಗೋಟು	30099	35099
ಬೆಟ್ಟೆ	40000	44150
ರಾಶಿ	48649	51009
ಚಾಲಿ	43600	48000

ಯಲ್ಲಾಪುರ	ಕನಿಷ್ಠ	ಗರಿಷ್ಠ
ರಾಶಿ	60601	79421
ಬೆಟ್ಟೆ	53199	57459
ಕೆಂಪುಗೋಟು	45129	62421
ಬಿಳಿಗೋಟು	40669	55659
ಚಾಲಿ	22601	34913
ಕೋಕಾ	13692	34773
ಕಾಳುಮೆಣಸು	32129	47489



ಗೋಕರ್ಣ: ಹಿರೇಗುತ್ತಿ ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ವೈದ್ಯಾಧಿಕಾರಿಯಾಗಿ ಡಾ. ಶ್ರೀವರ ನಾಗರಾಜ ನಾಯಕ ಗುರುವಾರ ಅಧಿಕಾರ ಸ್ವೀಕರಿಸಿದರು. ಈ ವೇಳೆ ಡಾ. ಶ್ರೀವರ ನಾಯಕರವರ ತಂದೆ ನಿವೃತ್ತ ಡಿ.ಡಿ.ಪಿ.ಐ ನಾಗರಾಜ ಬೀರಣ್ಣ ನಾಯಕ(ಅಡಿಗೋಣ) ಹಾಗೂ ತಾಯಿ, ಹಿರೇಗುತ್ತಿ ಕಾಲೇಜಿನ ಉಪನ್ಯಾಸಕಿಯಾದ ನೇತ್ರಾವತಿ ವಿ. ನಾಯಕ, ಎನ್. ರಾಮು ಹಿರೇಗುತ್ತಿ, ಶಿವಾ ನಾಯಕ ಸೇರಿದಂತೆ ಆಸ್ಪತ್ರೆಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರ ವಿತರಣೆ

ಅಂಕೋಲಾ: ತಾಲೂಕಿನ ಸವಿತಾ ಸಮಾಜ ಸುಧಾರಣಾ ಸಂಘದ ವತಿಯಿಂದ ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳನ್ನು ವಿತರಿಸಲಾಯಿತು.

ವಿವಿಧ ಹಂತಗಳಲ್ಲಿ ಓದುತ್ತಿರುವ ಅಂಕೋಲಾ ಸುತ್ತ ಮುತ್ತಲಿನ 42 ಜನ ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳನ್ನು ಸಮಾಜದ ಪ್ರಮುಖರು ವಿತರಿಸಿದರು.

ಈ ಸಂದರ್ಭದಲ್ಲಿ ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಆನಂದು ಮಹಾಲೆ ಅಧ್ಯಕ್ಷತೆವಹಿಸಿ ಮಾತನಾಡಿ, ಶೈಕ್ಷಣಿಕ ಉದ್ದೇಶಗಳಿಗೆ ಸಹಾಯ ಸಹಕಾರ ನೀಡಲು ಸಮಾಜ ಸಹಕಾರ ನೀಡಬೇಕು ಎಂದರು.

ಸಂಘದ ನೂತನ ಗೌರವಾಧ್ಯಕ್ಷ ನಾರಾಯಣ ಮಹಾಲೆ ಮಾತನಾಡಿ ಸಮಾಜದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಾಯ ಸಹಕಾರ ನೀಡುವ ಸಮಾಜ ಬಾಂಧವರ ಕೊಡುಗೆ ಸದಾ ಮುಂದುವರಿಯಲಿ ಎಂದರು.

ಸಂಘದ ಖಜಾಂಚಿ ಪ್ರಕಾಶ ಪಿ ಮಲ್ಯ ಮಾತನಾಡಿದರು. ಸಮಾಜದ ಹಿರಿಯ ಕಮಲಾಕರ ಗೋಪಾಲ ಮಹಾಲೆ,ರತ್ನಾಕರ ಮಹಾಲೆ,ಉಪಾಧ್ಯಕ್ಷ ಸದಾನಂದ ಮಹಾಲೆ,ಕಾರ್ಯದರ್ಶಿ ನಂದಕಿಶೋರ ಮಹಾಲೆ, ಕೃಷ್ಣಾನಂದ ಮಹಾಲೆ, ಸಂಘದ ಪದಾಧಿಕಾರಿಗಳು,ಸದಸ್ಯರು ವಿದ್ಯಾರ್ಥಿಗಳು,ಸಮಾಜದ ಪ್ರಮುಖರು ಉಪಸ್ಥಿತರಿದ್ದರು.



ಅಂಕೋಲಾ: ತಾಲೂಕಿನ ಸವಿತಾ ಸಮಾಜ ಸುಧಾರಣಾ ಸಂಘದ ವತಿಯಿಂದ ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳನ್ನು ವಿತರಿಸಲಾಯಿತು. ಸವಿತಾ ಸಮಾಜದ ಅಧ್ಯಕ್ಷ ಆನಂದು ಮಹಾಲೆ, ಸಂಘದ ನೂತನ ಗೌರವಾಧ್ಯಕ್ಷ ನಾರಾಯಣ ಮಹಾಲೆ, ಸಂಘದ ಖಜಾಂಚಿ ಪ್ರಕಾಶ ಪಿ ಮಲ್ಯ ಇತರರು ಇದ್ದರು.

ಜು. 1ರಿಂದ ವಿಬಿ– ಜಿ ರಾಮಜಿ ಜಾರಿ | ಜಿಪಂ ಸಿಇಒ ಡಾ. ದಿಲೀಷ್ ಶಶಿ ಹೇಳಿಕೆ

ಗ್ರಾಮೀಣ ಭಾಗದ ಅಭಿವೃದ್ಧಿಗೆ ಆದ್ಯತೆ

ಕಾರವಾರ: ಕೇಂದ್ರ ಸರ್ಕಾರ ಪುರಸ್ಕೃತ ಹೊಸ ಯೋಜನೆ ''ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಅಜೀವಿಕ ಮಿಷನ್'' ಜು. 1ರಿಂದ ಜಾರಿಗೆ ಬಂದಿದ್ದು, ಜಿಲ್ಲೆಯಲ್ಲಿಯೂ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಅರ್ಹ ಗ್ರಾಮೀಣ ಕುಟುಂಬಕ್ಕೆ ಇನ್ಮುಂದೆ 100 ದಿನಗಳ ಬದಲಾಗಿ 125 ಮಾನವ ದಿನಗಳ ಕಡ್ಡಾಯ ಉದ್ಯೋಗ ಅವಕಾಶ ಕಲ್ಪಿಸುವ ಜೊತೆಗೆ ಗ್ರಾಮೀಣ ಪ್ರದೇಶದ ಸಮಗ್ರ ಮತ್ತು ಸ್ಯಾಚುರೇಷನ್ ಆಧಾರಿತ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ಜಿಪಂ ಸಿಇಒ ಡಾ. ದಿಲೀಷ್ ಶಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು (ಗ್ರಾಉ), ಅನುಷ್ಠಾನ ಇಲಾಖೆಗಳ ಅಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಿಬ್ಬಂದಿ ಸೇರಿದಂತೆ ಎಲ್ಲ ಹಂತದ ಅಧಿಕಾರಿ ಸಿಬ್ಬಂದಿಗಳಿಗೆ ಈಗಾಗಲೇ ಮಾಸ್ಟರ್ ಟ್ರೇನರ್ ಗಳಿಂದ ತರಬೇತಿಯನ್ನು ನೀಡಲಾಗಿದೆ.

ದಿನಗೂಲಿ 370 ರೂ. ನಿಂದ 382ಕ್ಕೆ ಏರಿಕೆ

ವಿಬಿ-ಜಿ ರಾಮ್-ಜಿ ಯೋಜನೆಯಡಿ ದಿನಗೂಲಿಯನ್ನು 370 ರೂ. ನಿಂದ 382 ರೂ. ಏರಿಕೆ ಮಾಡಿ ಆದೇಶ ಹೊರಡಿಸಿದ್ದು, ಪುರುಷ ಮತ್ತು ಮಹಿಳೆಯರಿಗೆ ಸಮಾನ ಕೂಲಿ ಮುಂದುವರೆಯಲಿದೆ. ಕೂಲಿ ಹಣವನ್ನು ಗರಿಷ್ಠ 15 ದಿನಗಳ ಒಳಗಾಗಿ ಕೂಲಿಕಾರರ ಬ್ಯಾಂಕ್ ಖಾತೆಗಳಿಗೆ ಕಡ್ಡಾಯವಾಗಿ ಜಮೆ ಮಾಡಬೇಕು. ವಿಳಂಬವಾದರೆ ದಂಡದ ರೂಪದಲ್ಲಿ ಪರಿಹಾರ ನೀಡಬೇಕಾಗುತ್ತದೆ.

ಹೊಸ ಯೋಜನೆಯಡಿ ಗ್ಯಾರಂಟಿ ಕಾರ್ಡ್ ನೀಡುವವರಿಗೆ ಮನರೇಗಾ ಯೋಜನೆಯಡಿ ನೀಡಲಾಗಿದ್ದ ಉದ್ಯೋಗ ಚೀಟಿಗಳನ್ನೆ ಮಾನ್ಯ ಮಾಡಿ, ಆಸಕ್ತರಿಗೆ ಕೆಲಸ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಜೂನ್ 30ರ ವರೆಗೆ ಮನರೇಗಾ ಯೋಜನೆಯಡಿ ಪ್ರಗತಿಯಲ್ಲಿದ್ದ ಕಾಮಗಾರಿಗಳಲ್ಲಿ ವಿಬಿ-ಜಿ ರಾಮ್-ಜಿ ಯೋಜನೆ ನಿಯಮಕ್ಕೆ ಒಳಪಟ್ಟ ಕಾಮಗಾರಿಗಳನ್ನು ತಡೆರಹಿತವಾಗಿ ಮುಂದುವರೆಸಲು ಅವಕಾಶವಿದ್ದು, ಯೋಜನೆ ಬದಲಾಗುತ್ತಿರುವ ಕಾರಣಕ್ಕಾಗಿ ಯಾವೊಬ್ಬ ಕೂಲಿಕಾರರು ಒಂದು ದಿನವೂ ಉದ್ಯೋಗ ಅವಕಾಶದಿಂದ ವಂಚಿತರಾಗುವ ಪ್ರಮೇಯ ಎದುರಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಾರ್ಗಸೂಚಿಯಂತೆ ನೊಂದಾಯಿತ ಎಲ್ಲ ಕೂಲಿಕಾರರ ಇ-ಕೆವೈಸಿ ಕಡ್ಡಾಯವಾಗಿರುವುದರಿಂದ ಬಾಕಿ ಉಳಿದಿರುವ ಕೂಲಿಕಾರರ ಇ-ಕೆವೈಸಿ ಪ್ರಕ್ರಿಯೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ.

ಹೊಸ ಕಾಯಿದೆಯಡಿ ನಿಯಮಾನುಸಾರ ಎಲ್ಲ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯೋಜನೆ ಜಾರಿಗೆ ತರಲು ಸೂಚನೆ ನೀಡಲಾಗಿದ್ದು, ಗ್ರಾಮೀಣ ಭಾಗದ ಎಲ್ಲ ಕೂಲಿಕಾರರು ಕೆಲಸ ಅರಸಿ ದೂರದ ಪಟ್ಟಣಗಳಿಗೆ ವಲಸೆ ಹೋಗದೆ ಸ್ವಂತ ಊರಿನಲ್ಲಿಯೇ ಹೊಸ ಯೋಜನೆಯಡಿ ಕೂಲಿಕೆಲಸ ಮತ್ತು ಜೀವನೋಪಾಯ ಸೌಲಭ್ಯ ಪಡೆದುಕೊಳ್ಳಬೇಕು. ಆ ಮೂಲಕ ಸರ್ಕಾರದಿಂದ ಜಾರಿಗೆ ತರಲಾದ ಜನಪರ ಯೋಜನೆಯ ಶತ ಪ್ರತಿಶತ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ನೋಟಿಸ್ ಜಾರಿಗೆ ಮುಚ್ಚಂಡಿ ಕಾರಣ: ಆರೋಪ

ಮುಂಡಗೋಡ: ಬೆಂಗಳೂರಿನ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಿಂದ 35 ಜನರಿಗೆ ನೋಟಿಸ್ ಜಾರಿಯಾಗಿದ್ದು, ಇಷ್ಟೆಲ್ಲ ಸಮಸ್ಯೆಯಾಗಲು ಪಪಂ ಸಿಬ್ಬಂದಿ ಮಂಜುನಾಥ ಮುಚ್ಚಂಡಿ ಅವರೇ ನೇರ ಕಾರಣವಾಗಿದ್ದಾರೆ. ಹೀಗಾಗಿ ಈ ಸಮಸ್ಯೆ ಅವರೇ ಸರಿ ಪಡಿಸಬೇಕೆಂದು ಪಪಂ ಮುಖ್ಯಾಧಿಕಾರಿಗಳ ಬಳಿ ಸ್ಥಳೀಯರು ಪಟ್ಟು ಹಿಡಿದರು.

ಬುಧವಾರ ಪಪಂ ಕಂದಾಯ ನಿರೀಕ್ಷಕ ಮಂಜುನಾಥ ಮುಚ್ಚಂಡಿ ಅವರನ್ನು ಸ್ಥಳೀಯರು ನ್ಯಾಯಾಲಯದಿಂದ ನೋಟಿಸ್ ಜಾರಿಯಾಗಲು ನೀವೆ ಕಾರಣವೆಂದು ಸಾರ್ವಜನಿಕರು ತೀವ್ರ ತರಾಟೆಗೆ ತೆಗೆದುಕೊಂಡಿದ್ದರು.ಅಲ್ಲದೆ ಸಮಸ್ಯೆ ಬಗೆಹರಿಸಲು ಪಟ್ಟು ಹಿಡಿದು ಘೇರಾವ ಹಾಕಿದ್ದರು. ನಂತರ ವಿಷಯ ತಿಳಿದು ಪಿಎಸ್ಐ ಮಂಜುನಾಥ ಗೌಡರ ಅವರು ಜನರನ್ನು ಸಮಾಧಾನ ಪಡಿಸಿ ಮುಖ್ಯಾಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಸಮಸ್ಯೆ ಬಗೆಹರಿಸೋಣ ಎಂದು ಜನರನ್ನು ಮನವೊಲಿಸಿದ್ದರು.

ಅದರಂತೆ ಗುರುವಾರ ಅರಣ್ಯ ಹಕ್ಕು ಹೋರಾಟ ಸಮಿತಿ ಹಾಗೂ ಸ್ಥಳೀಯರು ಪಪಂ ಮುಖ್ಯಾಧಿಕಾರಿ ಸಂತೋಷ ಕುಮಾರ ಅವರ ಬಳಿ ಚರ್ಚಿಸಿದರು.

ಇಂದು ಸಹ ಕಂದಾಯ ನಿರೀಕ್ಷಕ ಮಂಜುನಾಥ ಮುಚ್ಚಂಡಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು, 35 ಜನರಿಗೆ ಬೆಂಗಳೂರಿನ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಿಂದ, ಅರಣ್ಯ ಪ್ರದೇಶ ಒತ್ತುವರಿ ಮಾಡಲಾಗಿದೆ. ತಾವೇ ಖುದ್ದಾಗಿ ಹಾಜರ ಆಗಬೇಕೆಂದು ನೋಟಿಸ್ ಜಾರಿ ಮಾಡಿದೆ. ಇದರಿಂದ ಜನರು ಆತಂಕಕ್ಕೆ ಒಳಗಾಗಿದ್ದಾರೆ. ಸುಮಾರು 50-60ವರ್ಷಗಳಿಂದ ಈ ಮೂರು ವಾರ್ಡಿನಲ್ಲಿ ಸುಮಾರು 900ಕ್ಕೂ ಹೆಚ್ಚು ಕುಟುಂಬ ವಾಸವಾಗಿದೆ. ನಿಮ್ಮ ಪಪಂಯಿಂದಲೆ ಉತ್ತಾರ, ಫಾರಂ ನಂ3 ನೀಡಲಾಗಿದೆ. ಬಡವರೇ ಹೆಚ್ಚು ಇದ್ದಾರೆ. ಎಸ್ಸಿ -ಎಸ್ಟಿ, ಹಿಂದೂಳಿದ ವರ್ಗ, ಅಲ್ಪಸಂಖ್ಯಾತ ಸೇರಿದಂತೆ ಎಲ್ಲ ಸಮುದಾಯ ಈ ಬಡಾವಣೆಯಲ್ಲಿ ವಾಸವಿವೆ. ಆದರೆ ಇದೀಗ ಅರಣ್ಯ ಪ್ರದೇಶ ಒತ್ತುವರಿ ಮಾಡಲಾಗಿದೆ ಎಂದು ಬೆಂಗಳೂರಿನ ನ್ಯಾಯಾಲಯ ನೋಟೀಸ್ ಜಾರಿ ಮಾಡಿದೆ. ಇದಕ್ಕೆ ಯಾರೂ ಹೋಣೆ. ಸ್ಥಳೀಯ ನ್ಯಾಯಾಲಯವಾಗಿದ್ದರೆ ಹೋರಾಟ ಮಾಡತ್ತಿದ್ದೇವು. ಇದು ಬೆಂಗಳೂರಿನ ನ್ಯಾಯಾಲಯವಾಗಿದೆ. ಅಲ್ಲಿ ಹೋಗಿ ಬರಲು ಸಾಧ್ಯವೇ, ಇನ್ನು ಹಲವರಿಗೆ ನೋಟಿಸ್ ಬರುವ ಸಾಧ್ಯತೆ ಇದೆ. ಇದಕ್ಕೆ ಮುಚ್ಚಂಡಿ ಅವರೇ ಕಾರಣ ಹೀಗಾಗಿ ಇದನ್ನು ಅವರೇ ಬಗೆಹರಿಸಬೇಕು ಎಂದು ಆಗ್ರಹಿಸಿದರು.



ನಂತರ ಜನರನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಾಧಿಕಾರಿಗಳು ನ್ಯಾಯಾಲಯದಲ್ಲಿ ಪ್ರಕರಣ ಇರುವುದ್ದರಿಂದ ಹೆಚ್ಚು ಮಾತನಾಡಲು ಬರುವುದಿಲ್ಲ, ಈ ಬಗ್ಗೆ ಶಾಸಕರ ಬಳಿ ಚರ್ಚಿಸಲಾಗುವುದು. ಎರಡು ದಿನಗಳ ಸಮಯಾವಕಾಶ ನೀಡಬೇಕೆಂದು ಮನವಿ ಮಾಡಿದರು.

3,95,023 ಎನ್ಯುಮರೇಷನ್ ನಮೂನೆಗಳ ವಿತರಣೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ-2026 ಪ್ರಕ್ರಿಯೆ ಚುರುಕಿನಿಂದ ಸಾಗಿದ್ದು, ಜಿಲ್ಲೆಯಲ್ಲಿ ಒಟ್ಟು 12,30,037 ಮತದಾರರಿದ್ದು,11,58,776 ಮಂದಿಯ ಮ್ಯಾಪಿಂಗ್ ಮಾಡಿದ್ದು, ಇದುವರೆಗೂ ಜಿಲ್ಲೆಯಾದ್ಯಂತ ಒಟ್ಟು 3,95,023 ಎನ್ಯುಮರೇಷನ್ ಫಾರ್ಮ್‌ಗಳನ್ನು ವಿತರಿಸಲಾಗಿದ್ದು, 3036 ಫಾರ್ಮ್ ಗಳನ್ನು ಗಣಕೀಕರಣ ಗೊಳಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಕೆ. ಲಕ್ಷ್ಮಿ ಪ್ರಿಯಾ ತಿಳಿಸಿದ್ದಾರೆ.

ಈವರೆಗಿನ ಮನೆ ಮನೆ ಭೇಟಿಯ ಸಂದರ್ಭದಲ್ಲಿ ಸ್ಥಳಾಂತರ, ಮರಣ ಹಾಗೂ ದ್ವಿಪ್ರತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 70 ಮತದಾರರನ್ನು ಗುರುತಿಸಲಾಗಿದೆ. ಇದರಲ್ಲಿ 18 ಶಾಶ್ವತ ವಲಸೆ ಹಾಗೂ 49 ಮರಣ ಹೊಂದಿದ ಪ್ರಕರಣಗಳು ಸೇರಿವೆ ಎಂದು ತಿಳಿಸಿದ್ದಾರೆ.

ನಿಮ್ಮೊಳಗಿನ ಕೌಶಲ್ಯ ನಿಮಗೆ ದಾರಿದೀಪ

ಅಂಕೋಲಾ: ಇಂದಿನ ಸ್ಪರ್ಧಾತ್ಮಕ ಕಾಲ ಘಟ್ಟದಲ್ಲಿ ಎಲ್ಲ ವೃತ್ತಿಗೂ ಬೆಲೆ ಇದೆ ವಿಶೇಷ ವಾಗಿ ಕೌಶಲ್ಯ ಆಧಾರಿತ ವೃತ್ತಿ ವಿಶೇಷ ಪ್ರಾಮುಖ್ಯತೆ ಪಡೆಯುತ್ತಿದೆ. ವಿದ್ಯಾರ್ಥಿಗಳಾದ ನೀವು ನಿಮ್ಮ ಆಸಕ್ತ ಕ್ಷೇತ್ರದಲ್ಲಿ ಪರಿಣಿತಿ ಹೊಂದಿ ಬದುಕನ್ನು ನಡಿಸಿ ಎಂದು ಕಟ್ಟಡ ಒಳಾಂಗಣ ವಿನ್ಯಾಸಕಿ ಮತ್ತು ಶಾಂತಿಕಾ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷೆ ನಮ್ರತಾ ನಾಯಕ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪಟ್ಟಣದ ಪಿ ಎಂ ಪದವಿ ಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾ ಸಾಂಸ್ಕೃತಿಕ ಚಟುವಟಿಕೆ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾದ ಶಿರಸಿ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದ ಅಧೀಕ್ಷಕಿ ಮತ್ತು ಕಾಲೇಜಿನ ಪೂರ್ವ ವಿದ್ಯಾರ್ಥಿನಿ ಭಾರತಿ ನಾಯ್ಕ ಮಾತನಾಡಿ ತಮ್ಮ ಕಾಲೇಜು ದಿನಗಳನ್ನ ಸ್ಮರಿಸಿಕೊಂಡು ವಿದ್ಯಾರ್ಥಿ ಜೀವನದ ಸದುಪಯೋಗ ಪಡಿಸಿಕೊಳ್ಳಿ ಎಂದರು.

ವೈದ್ಯ ದಿನದ ನಿಮಿತ್ತ ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಜಗದೀಶ್ ನಾಯ್ಕ ರನ್ನು ಸನ್ಮಾನಿಸಿ ಗೌರವಿಸಲಾಯಿತು.

ಡಾಕ್ಟರ್ ಜಗದೀಶ್ ನಾಯಿಕ, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ವಸಂತ ನಾಯ್ಕ, ಸಮಿತಿಯ ಸದಸ್ಯೆ ಭಾಗೀರಥಿ ಹೆಗಡೆ ಕಟ್ಟೆ ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ಮಕ್ಕಳಿಗೆ ಪೆನ್ನು ನೀಡಿ ಸ್ವಾಗತಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಪ್ರಭಾರಿ ಪ್ರಾಚಾರ್ಯ ರಮಾನಂದ ನಾಯಕ ಮಾತನಾಡಿದರು. ಉಪನ್ಯಾಸಕ ರಮೇಶ್ ಗೌಡ ಎಂ. ಸ್ವಾಗತಿಸಿದರು. ಕ್ರೀಡಾ ವಿಭಾಗದ ಉಪಾಧ್ಯಕ್ಷ ಶ್ರೀನಿವಾಸ ಯು ಕೆ ಜೀಮಾಖಾನ ವಿಭಾಗದ ಮುನ್ನೋಟ ಪ್ರಸ್ತುತ ಪಡಿಸಿದರು. ಸಾಂಸ್ಕೃತಿಕ ವೇದಿಕೆಯ ಉಪಾಧ್ಯಕ್ಷ ಉಲ್ಲಾಸ ಹುದ್ದಾರ ಅತಿಥಿಗಳನ್ನು ಪರಿಚಯಿಸಿದರು. ಉಪನ್ಯಾಸಕಿ ವಿದ್ಯಾ ನಾಯ್ಕ ಎಲ್ಲರ ಉಪಕಾರ ಸ್ಮರಿಸಿದರು. ಉಪನ್ಯಾಸಕಿ ಸರಿತ ಹರಿಕಾಂತ್ ಕಾರ್ಯಕ್ರಮ ನಿರ್ವಹಿಸಿದರು. ವಿದ್ಯಾರ್ಥಿ ಪ್ರತಿನಿಧಿ ಶಿವಾಜಿ ಮತ್ತು ಸುಷ್ಮಾ ಗೌಡ ಉಪಸ್ಥಿತರಿದ್ದರು.ಬೋಧಕೇತರ ಸಿಬ್ಬಂದಿ ವಿನಾಯಕ ನಾಯ್ಕ ಮತ್ತು ಗಣಪತಿ ಗೌಡ ಸಹಕರಿಸಿದರು.



ಮಂಗಳೂರು ಹೈಕೋರ್ಟ್ ಪೀಠದ ವ್ಯಾಪ್ತಿಗೆ ಉ.ಕ ಜಿಲ್ಲೆ ಸೇರಿಸದಂತೆ ಮನವಿ

ದಾಂಡೇಲಿ: ಮಂಗಳೂರಿನಲ್ಲಿ ಪ್ರಸ್ತಾಪಿತ ಹೈಕೋರ್ಟ್ ಪೀಠದ ವ್ಯಾಪ್ತಿಗೆ ಉತ್ತರ ಕನ್ನಡ ಜಿಲ್ಲೆಯನ್ನು ಸೇರಿಸುವ ಪ್ರಸ್ತಾವನೆಯನ್ನು ವಿರೋಧಿಸಿ, ಉತ್ತರ ಕನ್ನಡ ಜಿಲ್ಲೆಯನ್ನು ಯಾವುದೇ ಕಾರಣಕ್ಕೂ ಧಾರವಾಡ ಹೈಕೋರ್ಟ್ ಪೀಠದ ವ್ಯಾಪ್ತಿಯಿಂದ ಕೈಬಿಡಬಾರದೆಂದು ಆಗ್ರಹಿಸಿ ಆಲ್ ಇಂಡಿಯಾ ಲಾಯರ್ಸ್ ಯೂನಿಯನ್ ಸದಸ್ಯರು ಹಾಗೂ ಹೈಕೋರ್ಟ್ ವಕೀಲರು ಶಾಸಕ ಆರ್.ವಿ. ದೇಶಪಾಂಡೆ ಅವರಿಗೆ ಮನವಿ ಸಲ್ಲಿಸಿದರು.

ದೇಶಪಾಂಡೆಯವರಿಗೆ ನೀಡಿದ ಮನವಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಬಹುತೇಕ ತಾಲೂಕುಗಳಿಗೆ ಧಾರವಾಡವೇ ಭೌಗೋಳಿಕವಾಗಿ ಸಮೀಪದಲ್ಲಿದ್ದು, ರಸ್ತೆ ಸಂಪರ್ಕ, ಸಾರ್ವಜನಿಕ ಸಾರಿಗೆ ಹಾಗೂ ನ್ಯಾಯಾಂಗ ವ್ಯವಹಾರಗಳ ದೃಷ್ಟಿಯಿಂದಲೂ ಹೆಚ್ಚು ಅನುಕೂಲಕರವಾಗಿದೆ. ಇಂತಹ ಸಂದರ್ಭದಲ್ಲಿ ಜಿಲ್ಲೆಯನ್ನು ಮಂಗಳೂರು ಪೀಠದ ವ್ಯಾಪ್ತಿಗೆ ಸೇರಿಸುವುದು ಅವೈಜ್ಞಾನಿಕ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ನಿರ್ಧಾರವಾಗಲಿದೆ.

ಮಂಗಳೂರಿಗೆ ಪ್ರಕರಣಗಳ ವಿಚಾರಣೆಗೆ ತೆರಳಬೇಕಾದರೆ ಜಿಲ್ಲೆಯ ಬಹುತೇಕ ಭಾಗಗಳ ಕಕ್ಷಿದಾರರು, ವಕೀಲರು, ಸರ್ಕಾರಿ ಅಧಿಕಾರಿಗಳು ಹಾಗೂ ಸಾಕ್ಷಿದಾರರು ಹೆಚ್ಚಿನ ದೂರ ಪ್ರಯಾಣಿಸಬೇಕಾಗುತ್ತದೆ. ಇದರಿಂದ ಸಮಯ ಮತ್ತು ಹಣದ ಹೆಚ್ಚುವರಿ ಹೊರೆ ಬೀಳುವುದರ ಜೊತೆಗೆ ನ್ಯಾಯದಾನ ಪ್ರಕ್ರಿಯೆಯ ಮೇಲೆಯೂ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆಯಿದೆ.



ಮಂಗಳೂರಿನಲ್ಲಿ ಹೊಸ ಹೈಕೋರ್ಟ್ ಪೀಠ ಸ್ಥಾಪನೆಗೆ ವಿರೋಧವಿಲ್ಲ. ಆದರೆ ಅದರ ಹೆಸರಿನಲ್ಲಿ ಈಗಾಗಲೇ ಧಾರವಾಡ ಪೀಠದ ವ್ಯಾಪ್ತಿಯಲ್ಲಿರುವ ಉತ್ತರ ಕನ್ನಡ ಜಿಲ್ಲೆಯನ್ನು ಬೇರ್ಪಡಿಸುವುದು ನ್ಯಾಯಸಮ್ಮತವಲ್ಲ. ಈ ಕುರಿತು ಸರ್ಕಾರ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳುವ ಮುನ್ನ ಜಿಲ್ಲೆಯ ಜನಪ್ರತಿನಿಧಿಗಳು, ವಕೀಲರ ಸಂಘಟನೆಗಳು ಹಾಗೂ ಸಾರ್ವಜನಿಕರ ಅಭಿಪ್ರಾಯವನ್ನು ಪರಿಗಣಿಸಬೇಕು ಎಂದು ಅವರು ಆಗ್ರಹಿಸಿದರು.

ಮನವಿ ಸಲ್ಲಿಸಿದ ನಿಯೋಗದಲ್ಲಿ ಎಐಎಲ್‌ಯು ಸದಸ್ಯರಾದ ರತ್ನದೀಪಾ, ಅಫ್ರಿನ್ ಕಿತ್ತೂರ, ಗಿರೀಶ ಭಟ್, ವಿಶ್ವನಾಥ ಹೆಗಡೆ, ಪ್ರವೀಣ ತರೇಕರ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

ಮೀನುಗಾರ ಆತ್ಮಹತ್ಯೆ

ಭಟ್ಕಳ: ವ್ಯಕ್ತಿಯೊಬ್ಬ ಮನೆಯಲ್ಲೇ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮುಂಡಳ್ಳಿ ಸಮೀಪದ ಕೆಪ್ಪಿಮನೆ-ಹಾವಳಿಕಂಠದಲ್ಲಿ ನಡೆದಿದೆ.

ಮೃತರನ್ನು ಹರೀಶ ಗೋವಿಂದ ಮೋಗೇರ (35) ಎಂದು ಗುರುತಿಸಲಾಗಿದೆ. ಈತ ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದ.

ವೈಯಕ್ತಿಕ ಕಾರಣಗಳಿಂದ ಮಾನಸಿಕವಾಗಿ ನೊಂದಿದ್ದ ಈತ ತಮ್ಮ ಮನೆಯ ಅಡುಗೆ ಕೋಣೆಯಲ್ಲಿ ಸೀಲಿಂಗ್ ಫ್ಯಾನ್ ಅಳವಡಿಸಲು ಅಳವಡಿಸಿದ್ದ ಕಬ್ಬಿಣದ ರಾಡಿಗೆ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಘಟನೆಯ ಬಗ್ಗೆ ಮೃತನ ಸಂಬಂಧಿಕ ವಾಸು ನಾಗಪ್ಪ ಮೋಗೇರ ಅವರು ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿ ಚರಂಡಿಗೆ ಇಳಿದ ಜೀಪ್

ಗೋಕರ್ಣ: ರಾಜ್ಯ ಹೆದ್ದಾರಿ ಮೂಲಕೇರಿ ಬಳಿ ಜೀಪ್ ಚಾಲಕನ ನಿಯಂತ್ರಣ ತಪ್ಪಿಸಿ ಚರಂಡಿಗೆ ಇಳಿದ ಘಟನೆ ಗುರುವಾರ ನಡೆದಿದೆ. ಗೋಕರ್ಣದಿಂದ ಮಾದನಗೇರಿ ಮೂಲಕ ಹುಬ್ಬಳ್ಳಿಗೆ ತೆರಳುತ್ತಿದ್ದ ವಾಹನ ರಸ್ತೆ ಚರಂಡಿ ಜಿಗಿದು ಮುಂದೆ ಹೋಗಿ ನಿಂತಿದ್ದು, ಹಿಂಬದಿಯ ಒಂದು ಚಕ್ರ ಚರಂಡಿಯಲ್ಲಿ ಸಿಲುಕಿದ್ದರ ಪರಿಣಾಮ ಪಲ್ಟಿಯಾಗದೆ ನಿಂತಿದ್ದು, ಪ್ರಯಾಣಿಕರು ಜೀವಾಪಾಯದಿಂದ ಪಾರಾಗಿದ್ದಾರೆ. ಈ ಸ್ಥಳದ ಪಕ್ಕದಲ್ಲಿದ್ದ ಹೋಟೆಲ್ ಬಂದ್ ಆಗಿರುವುದರಿಂದ ಜನರಿರದ ಕಾರಣ ಯಾವುದೇ ತೊಂದರೆಯಾಗಿಲ್ಲ.

ಗಾಯಾಳು ವ್ಯಕ್ತಿ ಸಾವು

ಮುಂಡಗೋಡ: ಇಕೋ ವಾಹನವೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ತೀವ್ರ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೇ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದ ಘಟನೆ ಗುರುವಾರ ನಡೆದಿದೆ.

ಕಾಳಗನಕೊಪ್ಪ ಗ್ರಾಮದ ಸುಭಾಷ ತಳಕೇರಿ(48) ಎಂಬಾತನೇ ಮೃತ ವ್ಯಕ್ತಿ. ಬುಧವಾರ ರಾತ್ರಿ ಇಕೋ ವಾಹನವನ್ನು ಚಾಲಕ ಪಟ್ಟಣದಿಂದ ಕಾಳಗನಕೊಪ್ಪ ಕಡೆ ಅತಿವೇಗ ಹಾಗೂ ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಪಟ್ಟಣದ ಕಾಳಗನಕೊಪ್ಪ ಮಾರ್ಗದ ಟಿಂಬರ ಡಿಪೋ ಹತ್ತಿರ ಬೈಕಿಗೆ ನೇರವಾಗಿ ಡಿಕ್ಕಿ ಹೊಡೆದು ವಾಹನ ನಿಲ್ಲಿಸದೇ ಪರಾರಿಯಾಗಿದ್ದಾನೆ. ಈ ಕುರಿತು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿಎಂಎಸ್ ಚುನಾವಣೆಯ ವಿಚಾರ: ಸತ್ಯಕ್ಕೆ ದೊರೆತ ಜಯ

ಯಲ್ಲಾಪುರ: ಸ್ಥಳೀಯ ಟಿಎಂಎಸ್ ಚುನಾವಣೆಯ ವಿಚಾರದಲ್ಲಿ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ನಮಗೆ ಜಯ ದೊರಕಿದ್ದು, ಇದು ಸತ್ಯಕ್ಕೆ ದೊರೆತ ಜಯ ಎಂದು ಟಿಎಂಎಸ್ ನಿಕಟಪೂರ್ವ ಅಧ್ಯಕ್ಷ ಎನ್.ಕೆ.ಭಟ್ಟ ಅಗ್ಗಾಶಿಕುಂಬ್ರಿ ಹೇಳಿದರು.

ಅವರು ಪಟ್ಟಣದ ಟಿಎಂಎಸ ಸಭಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾವಾಗಿ ಕಾನೂನು ಹೋರಾಟಕ್ಕೆ ಇಳಿದವರಲ್ಲ, ಅಧಿಕಾರ, ಹಣದ ಬಲದಿಂದ ಸಂಸ್ಥೆಯ ಹಿತಕ್ಕೆ ಧಕ್ಕೆ ತರುವ, ಸದಸ್ಯರ ಹಕ್ಕು ಮೊಟಕುಗೊಳಿಸುವ ಪ್ರಯತ್ನ ನಡೆದಾಗ ಅನಿವಾರ್ಯವಾಗಿ ಕಾನೂನು ಹೋರಾಟಕ್ಕೆ ಇಳಿಯಬೇಕಾಯಿತು ಎಂದರಲ್ಲದೇ ಸಂಸ್ಥೆಗೆ ಜನರಿಂದ ಆಯ್ಕೆಯಾಗುವ ಪದ್ಧತಿ ರದ್ದುಗೊಳಿಸಿ, ಪ್ರಾಥಮಿಕ ಸಹಕಾರಿ ಸಂಘಗಳಿಂದ ಅ ವರ್ಗದ ಸದಸ್ಯರನ್ನು ಆಯ್ಕೆಗೊಳಿಸುವ ನಿರ್ದೇಶನ ನೀಡುವಂತೆ ಸಹಕಾರ ಇಲಾಖೆಗೆ ಇಡಗುಂದಿ, ಕಿರವತ್ತಿ ಹಾಗೂ ದೇಹಳ್ಳಿ ಸೊಸೈಟಿಯವರು ಆಗ್ರಹಿಸಿದ್ದರು. ಉಪನಿಬಂಧಕರ ಮೇಲೆ ಒತ್ತಡ ಹೇರಿ, ಈ ಬಗ್ಗೆ 15 ದಿನದಲ್ಲಿ ನಿರ್ಣಯಿಸಲು ಸಂಸ್ಥೆಗೆ ಪತ್ರ ಬರೆಯಲಾಗಿತ್ತು. ಸದಸ್ಯ ರೈತರು ಮತ ಚಲಾಯಿಸುವ ಹಕ್ಕನ್ನು ಮೊಟಕುಗೊಳಿಸುವ ನಿರ್ಣಯದ ವಿರುದ್ಧ ನಾವು ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದೆವು. ಅಲ್ಲಿ ಪ್ರಕರಣ ಇರುವಾಗಲೇ ಈ ಮೂರೂ ಸಹಕಾರಿ ಸಂಘಗಳು ಸಹಕಾರಿ ಸಚಿವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು.



ಕಳೆದ ಏಪ್ರಿಲ್‌ನಲ್ಲಿ ಮೂರು ಸಂಘಗಳ ಎಲ್ಲಾ ಪ್ರಕರಣಗಳನ್ನು ವಜಾಗೊಳಿಸಿದ ನ್ಯಾಯಾಲಯ, 10 ದಿನದೊಳಗೆ ಮತ ಎಣಿಕೆ ನಡೆಸಲು ಸೂಚಿಸಿತ್ತು. ನಂತರ ಮತ್ತೆ ಸಹಕಾರಿ ಸಂಘಗಳು ಹೈಕೋರ್ಟಿನ ದ್ವಿಸದಸ್ಯ ಪೀಠದ ಮೊರೆ ಹೋಗಿದ್ದವು. ಪ್ರಕರಣವನ್ನು ಬೇಗ ಇತ್ಯರ್ಥಗೊಳಿಸಿಕೊಡಬೇಕೆಂದು ನಾವು ಸುಪ್ರೀಂ ಕೋರ್ಟ್ ಗೆ ಮನವಿ ಮಾಡಿಕೊಂಡ ಮೇಲೆ, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಪ್ರಕರಣಕ್ಕೆ ತಾರ್ಕಿಕ ಅಂತ್ಯ ದೊರೆತಿದೆ ಎಂದರು.

ಬಿಜೆಪಿ ರಾಜ್ಯ ವಕ್ತಾರ ಹರಿಪ್ರಕಾಶ ಕೋಣೆಮನೆ ಮಾತನಾಡಿ, ಟಿಎಂಎಸ್ ವಿಚಾರಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯ ಧಾರವಾಡದ ವಿಭಾಗೀಯ ದ್ವಿಸದಸ್ಯ ಪೀಠವು ಅಂತಿಮ ತೀರ್ಪು ನೀಡಿದೆ. ಸಂಘದ 'ಅ' ಮತ್ತು 'ಬ' ವರ್ಗದ ಸದಸ್ಯರ ಮತಗಳನ್ನು ಒಟ್ಟುಗೂಡಿಸಿ, ಸಂಘದ ಬೈಲಾ ಪ್ರಕಾರ ಮತಗಳನ್ನು ಎಣಿಸಿ, ಚುನಾವಣೆ ಪ್ರಕ್ರಿಯೆಯನ್ನು ಒಂದು ವಾರದೊಳಗೆ ಮುಗಿಸಿ ವಿಭಾಗೀಯ ಪೀಠಕ್ಕೆ ವರದಿ ಸಲ್ಲಿಸಲು ಚುನಾವಣಾಧಿಕಾರಿಗೆ ಆದೇಶಿಸಿದೆ.

ಈ ತೀರ್ಪಿನ ಬಳಿಕ ಟಿ.ಎಂ.ಎಸ್ ಸಂಸ್ಥೆ ವಿರುದ್ಧ ನ್ಯಾಯಾಲಯಕ್ಕೆ ಹೋಗಿದ್ದ ಸಹಕಾರಿ ಸಂಘಗಳ ಪರ ವಕೀಲರು ವಿಭಾಗೀಯ ಪೀಠಕ್ಕೆ ಮರು ಮನವಿ ಮಾಡಿ ಈಗ ನೀಡಿರುವ ತೀರ್ಪನ್ನು ಅಮಾನತ್ತು ಮಾಡಿ ತಾವು ಸುಪ್ರೀಂ ಕೋರ್ಟಿಗೆ ಹೋಗಲು ಅವಕಾಶ ನೀಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಈ ಮನವಿಯನ್ನು ಮಾನ್ಯ ಮಾಡದ ವಿಭಾಗೀಯ ಪೀಠ ತಾನು ಮಾಡಿರುವ ಆದೇಶವನ್ನು ತಾನೇ ಅಮಾನತ್ತಿನಲ್ಲಿ ಇಡುವುದಿಲ್ಲ, ಅರ್ಜಿದಾರರು ಸುಪ್ರೀಮ್ ಕೋರ್ಟಿಗೆ ಹೋಗಲು ಸ್ವತಂತ್ರರೆಂದು ಹೇಳಿದೆ ಎಂದು ತಿಳಿಸಿದರು.

ಸ್ಥಳೀಯ ಪ್ರಮುಖರಾದ ಸುಬ್ಬಣ್ಣ ಬೋಳ್ಮನೆ, ರಾಘವೇಂದ್ರ ಭಟ್ಟ, ವೆಂಕಟರಮಣ ಭಟ್ಟ ಕಿರಕುಂಭತ್ತಿ, ಕೆ.ಟಿ.ಹೆಗಡೆ, ವಿಘ್ನೇಶ್ವರ ಮೆಣಸುಮನೆ ಇತರರಿದ್ದರು.

ದೇವಸ್ಥಾನಕ್ಕೆ 1 ಲಕ್ಷ ರೂ. ಡಿಡಿ ವಿತರಣೆ



ಬನವಾಸಿ: ಸಮೀಪದ ಅಂಡಗಿ ಗ್ರಾಮದಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರಾದ 1 ಲಕ್ಷ ರೂ.ಗಳ ಡಿ.ಡಿ.ಯನ್ನು ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಎಸ್.ಜಿ. ಮಂಜುನಾಥ್ ಅವರು ಶ್ರೀ ಬಸವೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿಯವರಿಗೆ ಬುಧವಾರ ಹಸ್ತಾಂತರಿಸಿದರು.

ದೇವಸ್ಥಾನದ ಅಭಿವೃದ್ಧಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ನೀಡಿದ ಆರ್ಥಿಕ ನೆರವನ್ನು ಪಡೆದ ಸಮಿತಿಯವರು ಈ ನೆರವನ್ನು ದೇವಸ್ಥಾನದ ಉಳಿದ ಜೀರ್ಣೋದ್ಧಾರ ಕಾರ್ಯಗಳಿಗೆ ಬಳಸಲಾಗುವುದು ಎಂದು ಸಮಿತಿಯವರು ತಿಳಿಸಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಗಣಪತಿ ಗೌಡ, ಕಾರ್ಯದರ್ಶಿ ಶ್ರೀಕಾಂತ್ ನಾಯ್ಕ್, ಸದಸ್ಯರಾದ ಸಿ.ಬಿ. ಗೌಡ, ಮಂಜುನಾಥ್ ಗೌಡ, ಒಕ್ಕೂಟದ ಅಧ್ಯಕ್ಷ ರಾಜಕುಮಾರ್ ಗೌಡ, ಮೇಲ್ವಿಚಾರಕ ಭಾಸ್ಕರ್ ಆರ್. ಶೆಟ್, ಸೇವಾಪ್ರತಿನಿಧಿಗಳಾದ ವಿನಾಯಕ್, ವಿನಾಯಕ ಹೊಸಕೊಪ್ಪ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಎಸ್ಪಿಯಿಂದ ಪ್ರಶಂಸನಾ ಪತ್ರ ವಿತರಣೆ

ಭಟ್ಕಳ: ನ್ಯಾಯಾಲಯಗಳು ಹೊರಡಿಸುವ ವಾರಂಟ್‌ಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಉತ್ತಮ ಸಾಧನೆ ತೋರಿದ ಭಟ್ಕಳ ನಗರ ಪೊಲೀಸ್ ಠಾಣೆಯ ಸಿವಿಲ್ ಹೆಡ್ ಕಾನ್‌ಟೇಬಲ್‌ಗಳಾದ ಗಿರೀಶ ಅಂಕೋಲೇಕರ ಮತ್ತು ಉದಯ ನಾಯ್ಕ ಅವರಿಗೆ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಿಂದ ಪ್ರಶಂಸನಾ ಪತ್ರ ನೀಡಿ ಸನ್ಮಾನಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಂಸನಾ ಪತ್ರವನ್ನು ವಿತರಿಸಲಾಯಿತು. ವಾರಂಟ್ ಜಾರಿ ಕಾರ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಶೇ.90ರಷ್ಟು ಯಶಸ್ಸು ಸಾಧಿಸಿರುವ ಇವರ ಸೇವೆಯನ್ನು ಇಲಾಖೆ ವಿಶೇಷವಾಗಿ ಗುರುತಿಸಿದೆ. ಪ್ರಕರಣಗಳ ತನಿಖೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಹೊರಡಿಸಿದ ವಾರಂಟ್‌ಗಳನ್ನು ಜಾರಿಗೊಳಿಸಲು ನಿರಂತರವಾಗಿ ಶ್ರಮಿಸಿ, ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಪತ್ತೆಹಚ್ಚಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಲ್ಲಿ ಇಬ್ಬರೂ ಸಿಬ್ಬಂದಿ ಮಹತ್ವದ ಪಾತ್ರ ವಹಿಸಿದ್ದಾರೆ. ಇದರ ಪರಿಣಾಮವಾಗಿ ಹಲವು ಪ್ರಕರಣಗಳ ವಿಚಾರಣೆ ಮತ್ತು ಇತ್ಯರ್ಥ ಪ್ರಕ್ರಿಯೆ ವೇಗ ಪಡೆಯಲು ನೆರವಾಗಿದೆ ಎಂದು ಪ್ರಶಂಸನಾ ಪತ್ರದಲ್ಲಿ ಉಲ್ಲೇಖಿಸಲಾಗಿದೆ.



ಕಿರುಸುದ್ದಿ

ಸ್ವಗ್ರಾಮಕ್ಕೆ ಆಗಮಿಸಿದ ಯೋಧನಿಗೆ ಸ್ವಾಗತ

ಹಾನಗಲ್ಲ: ಸತತ 18 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೈನಿಕನಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ಸ್ವಗ್ರಾಮಕ್ಕೆ ಮರುಳಿದ ಬಸವರಾಜ ಶಿವಪ್ಪ ಮೆಳ್ಳಿಗಟ್ಟಿ ಯೋಧನಿಗೆ ತಾಲೂಕಿನ ಹೇರೂರ ಗ್ರಾಮಸ್ಥರು ಹಾಗೂ ಕುಟುಂಭಸ್ಥರು ಭವ್ಯವಾಗಿ ಸ್ವಾಗತಿಸಿದರು.

ಗುರುವಾರ ಇಲ್ಲಿನ ಗ್ರಾಮದೇವಿ ದೇವಸ್ಥಾದಲ್ಲಿ ಪೂಜೆ ಸಲ್ಲಿಸುವ ಮೂಲಕ ಯೋಧನಿಗೆ ತೆರೆದವಾಹನದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಡೊಳ್ಳು ,ಜಾಂಜ್, ಪಟಾಕಿ ಸಿಡಿಸಿ ಸ್ವಾಗತಿಸಿಕೊಂಡರು. ಇದಕ್ಕೂ ಮೊದಲು ಯೋಧ ಬಸವರಾಜ್ ಮೆಳ್ಳಿಗಟ್ಟಿ ಗ್ರಾಮ ಪ್ರವೇಶಿಸಿದಂತೆ ತಾಲೂಕು ಮಾಜಿ ಸೈನಿಕ ಸಂಘದವರು ಸ್ವಾಗತಿಸಿದರು. ನಂತರ ಗ್ರಾಮದಲ್ಲಿ ಮುತ್ತೈದೆಯರು ಆರತಿಯೊಂದಿಗೆ ಹೂಮಳೆ ಸುರಿಸುವದರೊಂದಿಗೆ ಯೋಧನಿಗೆ ಗ್ರಾಮಸ್ಥರು ಕುಟುಂಬಸ್ಥರೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡರು. ಬಳಿಕ ಗ್ರಾಮದೇವಿ ಸಭಾಭವನದಲ್ಲಿ ಸಭಾ ಕಾರ್ಯಕ್ರಮಗಳು ಜರುಗಿದವು.

ರಟ್ಟಿಹಳ್ಳಿ ಕೊಲೆ ಪ್ರಕರಣ ಕ್ರಮಕ್ಕೆ ಆಗ್ರಹ

ಹಾವೇರಿ: ಜಿಲ್ಲೆಯ ರಟ್ಟಿಹಳ್ಳಿ ಪಟ್ಟಣದಲ್ಲಿ ಶಿವಾಜಿರಾವ್ ಬೈರೋಜಿ ಎಂಬ ವ್ಯಕ್ತಿಯನ್ನು ಕ್ಷುಲ್ಲಕ ಕಾರಣಕ್ಕೆ ಕೊಲೆ ಮಾಡಿರುವುದು ಅತ್ಯಂತ ಖಂಡನೀಯ. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಅಪರಾಧಿಗಳಿಗೆ ಯಾವುದೇ ಭಯ ಇಲ್ಲದಂತಾಗಿದೆ. ಡಿಜಿಪಿ ತಕ್ಷಣವೇ ತಪ್ಪಿತಸ್ಥರ ವಿರುದ್ಧ



ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.ಈ ಕುರಿತು ಎಕ್ಸ್ ಮಾಡಿರುವ ಅವರು ಪೊಲೀಸ್ ಠಾಣೆಗಳು ವಸೂಲಿ ಕೇಂದ್ರಗಳಾಗಿದ್ದು, ಅಪರಾಧಿಗಳಿಗೆ ಯಾವುದೇ ಭಯ ಇಲ್ಲದಂತಾಗಿದೆ. ಆರೋಪಿಗಳ ವಿರುದ್ಧ ದೂರು ದಾಖಲಿಸಿದರೂ ಪೊಲೀಸರು ಬಂಧಿಸದೇ ಅವರನ್ನು ರಾಜಾರೋಷವಾಗಿ ತಿರುಗಾಡಲು ಬಿಟ್ಟಿದ್ದು, ಅಪರಾಧಿಗಳಿಗೆ ಯಾವುದೇ ಭಯ ಇಲ್ಲದಂತಾಗಿದೆ. ಡಿಜಿಪಿ ತಕ್ಷಣವೇ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಇಂದು ಹಾನಗಲ್ಲಿನಲ್ಲಿ ಪ್ರತಿಭಟನಾ ರ‍್ಯಾಲಿ

ಹಾನಗಲ್ಲ: ಹಾನಗಲ್ಲ ತಾಲೂಕಿನ ನರೇಗಲ್ಲಿನಲ್ಲಿ ಹಿಂದುಗಳ ಮೇಲೆ ಅನ್ಯ ಕೋಮಿನವರ ಹಲ್ಲೆಯನ್ನು ಖಂಡಿಸಿ ಹಿಂದು ಜಾಗರಣ ವೇದಿಕೆ ಹಾವೇರಿ ಜಿಲ್ಲಾ ಘಟಕ ಶುಕ್ರವಾರ ಜುಲೈ 3 ರಂದು ಹಾನಗಲ್ಲಿನಲ್ಲಿ ಪ್ರತಿಭಟನಾ ರ‍್ಯಾಲಿ ಆಯೋಜಿಸಿದೆ.

ಶುಕ್ರವಾರ ಬೆಳಿಗ್ಗೆ 11 ಘಂಟೆಗೆ ತಹಶೀಲ್ದಾರ ಕಛೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಆರೋಗ್ಯ ತಪಾಸಣೆ, ಯಕ್ಷಗಾನ ಪ್ರದರ್ಶನ ನಾಳೆ

ಹಾವೇರಿ: ಇಲ್ಲಿಯ ಬಂಟರ ಸಂಘ, ಹೋಟೆಲ್ ಮಾಲೀಕರ ಸಂಘ, ಗಜಾನನ ಯುವಕ ಮಂಡಳ ದಾನೇಶ್ವರಿನಗರ ಹಾಗೂ ಸರ್ಜಿ ರೇಣುಕಾ ದೇವಧರ ಆಸ್ಪತ್ರೆ ಸಹಯೋಗದಲ್ಲಿ ಜು.4ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಮತ್ತು ಯಕ್ಷಗಾನ ಪ್ರದರ್ಶನ ಆಯೋಜಿಸಲಾಗಿದೆ. ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ದಾನೇಶ್ವರಿ ನಗರದ ಬಂಟರ ಭವನದಲ್ಲಿ ಮಧುಮೇಹ, ಹೃದಯ ಸಂಬಂಧಿ ಕಾಯಿಲೆ ಹಾಗೂ ಸಾಮಾನ್ಯ ಕಾಯಿಲೆಗಳ ಕುರಿತು ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಲಿದೆ. ಇದೇ ವೇಳೆ ಸ್ವಯಂ ಪ್ರೇರಿತ ರಕ್ತದಾನ ಶಿಬಿರವೂ ಜರುಗಲಿದೆ. ಸಂಜೆ 7 ಗಂಟೆಗೆ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ, ಮಂದಾರ್ತಿ, ಉಡುಪಿ ಜಿಲ್ಲೆ ಇದರ ಕಲಾವಿದರಿಂದ ಯಕ್ಷಗಾನ ಬಯಲಾಟ ಪ್ರದರ್ಶನವಾಗಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಸಂಘಟನೆ ಪದಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ನಿಧನ ಸುದ್ದಿ

ಬಸವರಾಜಪ್ಪ ಹಾದಿಮನಿ

ರಾಣೇಬೆನ್ನೂರ: ಇಲ್ಲಿನ ರಾಜರಾಜೇಶ್ವರಿ ನಗರದ ನಿವಾಸಿ ಬಸವರಾಜಪ್ಪ ಶಿವಪ್ಪ ಹಾದಿಮನಿ(60) ಗುರುವಾರದಂದು ನಿಧನರಾದರು. ಮೃತರಿಗೆ ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಹೊಂದಿದ್ದರು.





ಹಾನಗಲ್ಲ: ಸತತ 18 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೈನಿಕನಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿ ತಾಯ್ನಾಡಿಗೆ ಮರುಳಿದ ಬಸವರಾಜ ಶಿವಪ್ಪ ಮೆಳ್ಳಿಗಟ್ಟಿ ಯೋಧನಿಗೆ ತಾಲೂಕಿನ ಹೇರೂರ ಗ್ರಾಮಸ್ಥರು ಹಾಗೂ ಕುಟುಂಬಸ್ಥರು ಭವ್ಯವಾಗಿ ಸ್ವಾಗತಿಸಿದರು.

ಗೃಹಜ್ಯೋತಿ ಪರಿಶೀಲನೆಗೆ ಎಲ್ಲರೂ ಸಹಕರಿಸಿ: ಖಾದ್ರಿ

ಶಿಗ್ಗಾಂವಿ: ರಾಜ್ಯ ಸರ್ಕಾರದ ಮಹತ್ವಾಂಕ್ಷೆ ಯೋಜನೆಗಳಲ್ಲೊಂದಾದ ಗೃಹಜ್ಯೋತಿ ಫಲಾನುಭವಿಗಳ ದಾಖಲೆ ಪರಿಶೀಲನಾ ಕಾರ್ಯ ನಡೆಯುತ್ತಿದ್ದು, ಎಲ್ಲರೂ ಸಹಕರಿಸುವಂತೆ ಹೆಸ್ಕಾಂ ಅಧ್ಯಕ್ಷರಾದ ಅಜೀಮ್‌ಪೀರ್ ಖಾದ್ರಿ ಮನವಿ ಮಾಡಿದ್ದಾರೆ.

ಜಿಲ್ಲೆಯ ಶಿಗ್ಗಾಂವಿ ಪಟ್ಟಣದ ಮೆಹಬೂಬ್ ನಗರದಲ್ಲಿ ಗುರುವಾರ ಗೃಹಜ್ಯೋತಿ ಫಲಾನುಭವಿಗಳ ಪರಿಶೀಲನಾ ಕಾರ್ಯ ವೀಕ್ಷಿಸಿದ ಬಳಿಕ ಮಾತನಾಡಿದ ಅವರು, ಕಳೆದ ಮೂರು ವರ್ಷಗಳಿಂದ ರಾಜ್ಯದ ಜನರಿಗೆ ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡುತ್ತಿದ್ದೇವೆ. ಇದೊಂದು ಯಶಸ್ವಿ ಯೋಜನೆಯಾಗಿದೆ ಎಂದರು.

ಹೆಸ್ಕಾಂ ವ್ಯಾಪ್ತಿಯಲ್ಲಿ ಜುಲೈ 1ರಿಂದ ದಾಖಲೆಗಳ ಪರಿಶೀಲನೆಗಾಗಿ ಹೆಸ್ಕಾಂ ಸಿಬ್ಬಂದಿ ಮನೆ-ಮನೆಗೆ ಭೇಟಿ ನೀಡುತ್ತಿದ್ದಾರೆ. ಫಲಾನುಭವಿಗಳು ತಮ್ಮ ಆಧಾರ್ ಕಾರ್ಡ್, ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ (ವೋಟರ್ ಐಡಿ), ಪ್ಯಾನ್ ಕಾರ್ಡ್, ಬಾಡಿಗೆ ಒಪ್ಪಂದದ ಪತ್ರಗಳು (ಅನ್ವಯಿಸುವಲ್ಲಿ ಮಾತ್ರ), ರೇಷನ್ ಕಾರ್ಡ್ (ಪಡಿತರ ಚೀಟಿ) ಸೇರಿದಂತೆ ಇತರೆ ಅಗತ್ಯ ದಾಖಲೆಗಳನ್ನು ತೋರಿಸಬೇಕು. ಹೆಸ್ಕಾಂ ಸಿಬ್ಬಂದಿಯು ಮನೆ ಮಾಲೀಕರು ಅಥವಾ ಬಾಡಿಗೆದಾರರಿಂದ ಮಾಹಿತಿ ಪಡೆದು ಸೇವಾ ಸಿಂಧು ತಂತ್ರಾಂಶದಲ್ಲಿ ದಾಖಲಿಸಲಿದ್ದಾರೆ. ಸಾರ್ವಜನಿಕರು ಈ ಪ್ರಕ್ರಿಯೆಗೆ ಸಹಕರಿಸಬೇಕೆಂದು ಕೋರಿದರು.

ಫಲಾನುಭವಿಗಳ ದಾಖಲೆಗಳ ಪರಿಶೀಲನಾ ಕಾರ್ಯದ ಬಗ್ಗೆ ಜನರಿಗೆ ತಿಳಿ ಹೇಳಿದ ಅಧ್ಯಕ್ಷರು, ಸ್ವತಃ ತಾವೇ ಒಂದು ಅರ್ಜಿಯನ್ನು ಭರ್ತಿ ಮಾಡಿದರು. ಈ ಸಂದರ್ಭದಲ್ಲಿ ಹೆಸ್ಕಾಂ ಅಧಿಕಾರಿಗಳು, ಪಟ್ಟಣದ ಮುಖಂಡರು ಸೇರಿದಂತೆ ಹಲವರು ಹಾಜರಿದ್ದರು.



ಶಿಗ್ಗಾಂವಿ: ಜಿಲ್ಲೆಯ ಶಿಗ್ಗಾಂವಿ ಪಟ್ಟಣದ ಮೆಹಬೂಬ್ ನಗರದಲ್ಲಿ ಗುರುವಾರ ಗೃಹಜ್ಯೋತಿ ಫಲಾನುಭವಿಗಳ ಪರಿಶೀಲನಾ ಕಾರ್ಯವನ್ನು ಹೆಸ್ಕಾಂ ಅಧ್ಯಕ್ಷರಾದ ಅಜೀಮ್‌ಪೀರ್ ಖಾದ್ರಿ ಅವರು ವೀಕ್ಷಿಸಿದರು.ಈ ಸಂದರ್ಭದಲ್ಲಿ ಹೆಸ್ಕಾಂ ಅಧಿಕಾರಿಗಳು, ಪಟ್ಟಣದ ಮುಖಂಡರು ಸೇರಿದಂತೆ ಹಲವರು ಹಾಜರಿದ್ದರು.

ಗ್ರಾಮಗಳ ಸಮಗ್ರ ಅಭಿವೃದ್ಧಿ ವಿಬಿ-ಜಿ ರಾಮಜಿಯ ಉದ್ದೇಶ

ಹಾವೇರಿ: ಜಿಲ್ಲೆಯಾದ್ಯಂತ ಜುಲೈ 1ರಿಂದ ವಿಕಸಿತ ಭಾರತ್-ಗ್ಯಾರಂಟಿ ಫಾರ್ ರೋಜ್ಗಾರ್ ಮತ್ತು ಅಜೀವಿಕ ಮಿಷನ್-ಗ್ರಾಮೀಣ (ವಿಬಿ- ಜಿ ರಾಮಜಿ) ಯೋಜನೆ ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ಪ್ರದೇಶದ ಪ್ರತಿ ಅರ್ಹ ಕುಟುಂಬದ ಜೀವನೋಪಾಯವನ್ನು ಭದ್ರಪಡಿಸುವುದು, ಉದ್ಯೋಗಾವಕಾಶ ವಿಸ್ತರಿಸುವುದು, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಶಾಶ್ವತ ಆಸ್ತಿಗಳ ನಿರ್ಮಾಣದ ಮೂಲಕ ಗ್ರಾಮಗಳ ಸಮಗ್ರ ಅಭಿವೃದ್ಧಿ ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ ಎಂದು ಜಿಪಂ ಸಿಇಒ ದಲ್ಜಿತ್‌ಕುಮಾರ ಹೇಳಿದರು.



ಯೋಜನೆಯಡಿ ಪ್ರತಿ ಅರ್ಹ ಗ್ರಾಮೀಣ ಕುಟುಂಬಕ್ಕೆ ವರ್ಷದಲ್ಲಿ 125 ದಿನ ಅಕುಶಲ ಕೂಲಿ ಉದ್ಯೋಗ ನೀಡಲು ಅವಕಾಶವಿದೆ. ಗ್ರಾಮೀಣ ಕುಟುಂಬಗಳಿಗೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ನೀಡಿ, ವಲಸೆ ಕಡಿಮೆ ಮಾಡುವ ಜೊತೆಗೆ ಆರ್ಥಿಕವಾಗಿ ಸದೃಢ ಜೀವನ ನಡೆಸಲು ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರದ ಅಧಿಸೂಚನೆಯಂತೆ 2026-27ನೇ ಸಾಲಿಗೆ ಪ್ರತಿ ದಿನದ ಕೂಲಿ ದರ ರೂ.382/- ನಿಗದಿಪಡಿಸಲಾಗಿದ್ದು, ಜುಲೈ 1ರಿಂದ ಜಾರಿಗೆ ಬಂದಿದೆ ಎಂದರು.

ಕೇಂದ್ರ ಸರ್ಕಾರದ ಅನುಮೋದಿತ 318 ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳಲು ನಿರ್ದೇಶನಗಳನ್ನು ಅನುಷ್ಠಾನಾಧಿಕಾರಿಗಳಿಗೆ ನೀಡಲಾಗಿದೆ. ಈಗಾಗಲೇ ಪ್ರಗತಿಯಲ್ಲಿರುವ ಅರ್ಹ ಕಾಮಗಾರಿಗಳನ್ನು ಸಹ ವಿಬಿ- ಜಿ ರಾಮ ಜಿ) ಯೋಜನೆಯಡಿ ಮುಂದುವರಿಸಬಹುದಾಗಿದೆ. ಗ್ರಾಮೀಣ ರಸ್ತೆ, ಕೆರೆ-ಕಟ್ಟೆಗಳ ಅಭಿವೃದ್ಧಿ, ಮಳೆನೀರು ಸಂಗ್ರಹಣೆ, ಜಲ ಸಂರಕ್ಷಣೆ, ವನೀಕರಣ, ಕೃಷಿ ಅಭಿವೃದ್ಧಿ, ತೋಟಗಾರಿಕೆ, ಸಾರ್ವಜನಿಕ ಆಸ್ತಿ ನಿರ್ಮಾಣ, ಗ್ರಾಮ ಸ್ವಚ್ಛತೆ, ನೀರಿನ ಸಂರಕ್ಷಣೆ ಹಾಗೂ ಇತರೆ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತದೆ. ಈ ಹೊಸ ಯೋಜನೆಯಡಿ 318 ಕಾಮಗಾರಿಗಳನ್ನು 4 ವರ್ಗೀಕರಣ ಮಾಡಲಾಗಿದೆ ಎಂದರು. ಜಲ ಸಂಬಂಧಿತ ಕಾರ್ಯಗಳ ಮೂಲಕ ಜಲ ಭದ್ರತೆಯಡಿ, 6 ಉಪವರ್ಗ ಮಾಡಲಾಗಿದೆ. ಇದರಡಿ 107 ಕಾಮಗಾರಿಗಳನ್ನು ಕೈಗೊಳ್ಳ ಬಹುದಾಗಿದೆ. ಮೂಲ ಗ್ರಾಮೀಣ ಮೂಲ ಸೌರ್ಯ ಅಡಿ 9 ಉಪವರ್ಗ ಮಾಡಲಾಗಿದೆ. ಇದರಡಿ 90 ಕಾಮಗಾರಿಗಳನ್ನು ಕೈಗೊಳ್ಳ ಬಹುದಾಗಿದೆ. ಜೀವನೋಪಾಯ ಸಂಬಂಧಿತ ಮೂಲಸೌಕರ್ಯಅಡಿ, 9 ಉಪವರ್ಗ ಮಾಡಲಾಗಿದೆ. ಇದರಡಿ 86 ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ. ತೀವ್ರ ಹವಾಮಾನ ಘಟನೆಗಳ ಶಮನಕ್ಕಾಗಿ ಕಾರ್ಯಗಳು ಅಡಿ, 5 ಉಪವರ್ಗ ಮಾಡಲಾಗಿದೆ. ಇದರಡಿ 35 ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ. ತನ್ಮೂಲಕ ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ವೇಗ ನೀಡುವುದಾಗಿದೆ ಎಂದು ಹೇಳಿದರು.

ಜಿ.ಪಂ. ಉಪ ಕಾರ್ಯದರ್ಶಿ ಡಾ. ಪುನೀತ್ ಮಾತನಾಡಿ, ಜಿಲ್ಲೆಯ ಎಲ್ಲ ತಾಲೂಕಿನ, ಗ್ರಾಮ ಪಂಚಾಯತಿಗಳ ಹಾಗೂ ಇಲಾಖೆಯ ಅನುಷ್ಠಾನ ಅಧಿಕಾರಿಗಳಿಗೆ, ತಾಂತ್ರಿಕ ಸಿಬ್ಬಂದಿಗಳ ಮತ್ತು ಸಿಬ್ಬಂದಿಗಳಿಗೆ ಹೊಸ ಯೋಜನೆ ತರಬೇತಿ ನೀಡಲಾಗಿದ್ದು, ಜಿಲ್ಲೆಯ ಗ್ರಾಮ ಪಂಚಾಯತಿಗಳಲ್ಲಿ ಯೋಜನೆ ಅನುಷ್ಠಾನ ಪ್ರಾರಂಭಿಸಲಾಗಿದೆ ಎಂದು ಸಲಹೆ ನೀಡಿದರು. ಈ ವೇಳೆ ವಿವಿಧ ಅಧಿಕಾರಿಗಳು ಇದ್ದರು.

ಕಾಯ್ದೆಯ ವೈಶಿಷ್ಟ್ಯಗಳು

- ವರ್ಷಕ್ಕೆ 125 ದಿನಗಳ ಉದ್ಯೋಗ
- ಕೂಲಿ ಮೊತ್ತ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ
- ಪಾರದರ್ಶಕ, ತಂತ್ರಜ್ಞಾನ ಆಧಾರಿತ ಅನುಷ್ಠಾನ.
- ಮಹಿಳೆ ಭಾಗವಹಿಸುವಿಕೆಗೆ ಉತ್ತೇಜನ
- ಗ್ರಾಪಂ ಮೂಲಕ ಬೇಡಿಕೆ ಆಧಾರಿತ ಉದ್ಯೋಗ ವ್ಯವಸ್ಥೆ
- ಕೆಲಸದ ಸ್ಥಳದಲ್ಲಿ ಸುರಕ್ಷತೆ, ಮೂಲ ಸೌಲಭ್ಯ
- ಸಾಮಾಜಿಕ ಲೆಕ್ಕಪರಿಶೋಧನೆ, ಸಾರ್ವಜನಿಕ ಮೇಲ್ವಿಚಾರಣೆಗೆ ಒತ್ತು
- ಗ್ರಾಮೀಣ ಜೀವನೋಪಾಯ, ಶಾಶ್ವತ ಅಭಿವೃದ್ಧಿಗೆ ಆದ್ಯತೆ.

ವೈದ್ಯರು ದ್ವಿತೀಯ ಬ್ರಹ್ಮರಿದ್ದಂತೆ: ಶೇಖರಗೌಡ

ಬ್ಯಾಡಗಿ: ಆಸ್ಪತ್ರೆಗೆ ಉಪಚಾರಕ್ಕೆ ಬರುವ ರೋಗಿಗಳನ್ನು ಗುಣಪಡಿಸುವ ವೈದ್ಯರು ದ್ವಿತೀಯ ಬ್ರಹ್ಮರಿದ್ದಂತೆ. ಅದಕ್ಕಾಗಿ ವೈದ್ಯೋ ನಾರಾಯಣೋ ಹರಿ ಎನ್ನುತ್ತಾರೆ ಎಂದು ಪಟ್ಟಣದ ನವಚೈತನ್ಯ ವಿದ್ಯಾಲಯ ಮುಖ್ಯೋಪಾಧ್ಯಾಯ ಬಿ.ಕೆ. ಶೇಖರಗೌಡ ಅಭಿಪ್ರಾಯಪಟ್ಟರು.

ಅವರು ಸ್ಥಳೀಯ ಸುಪ್ರಸಿದ್ಧ ವೈದ್ಯರಾದ ಡಾ. ಪ್ರಕಾಶ ಭಸ್ಮೆ ಅವರನ್ನು ವೈದ್ಯರ ದಿನಾಚರಣೆ ನಿಮಿತ್ತವಾಗಿ ವೈದ್ಯರ ನಿವಾಸದಲ್ಲಿ ಸನ್ಮಾನಿಸಿ ಗೌರವಿಸಿ ಮಾತನಾಡಿದರು.

ಡಾ.ಪ್ರಕಾಶ ಭಸ್ಮೆ ಅವರು ರೋಗಿಗಳ ಜತೆ ಶಾಂತಿ, ಸೌಹಾರ್ದ, ಸಹನೆ, ಸಮಾಧಾನ ಚಿತ್ತದಿಂದ ವರ್ತಿಸಿ ಆತ್ಮೀಯವಾಗಿ ಮಾತನಾಡಿ, ರೋಗಿಗಳಿಗೆ ವೈದ್ಯರಲ್ಲಿ ಭರವಸೆ ಮೂಡುವಂತ ಮಾತುಗಳಿಂದ ರೋಗಿಯ ಅರ್ಧ ಕಾಯಿಲೆ ವಾಸಿಯಾಗುವಲ್ಲಿ ಸಫಲರಾಗಿದ್ದು ಈ ಭಾಗದಲ್ಲಿ ಸಾಕಷ್ಟು ಉತ್ತಮ ಹೆಸರು ಮಾಡಿದ್ದಾರೆ.

ಡಾ. ಪ್ರಕಾಶ ಭಸ್ಮೆ ಅವರು ಎಲ್ಲವನ್ನು ವ್ಯವಹಾರಿಕವಾಗಿ ನೋಡದೇ ರೋಗಿ ಬಗ್ಗೆ ಕಾಳಜಿ ಪೂರಕವಾಗಿ ಚಿಕಿತ್ಸೆ ನೀಡುವಲ್ಲಿ ವೃತ್ತಿ ಪವಿತ್ರ ಕಾಪಾಡಿಕೊಂಡು ಸಾಮಾಜಿಕ ಜಾವಬ್ದಾರಿಹೊಂದಿದ ವೈದ್ಯರಾಗಿದ್ದು ಇಂತ ವೈದ್ಯರ ಅವಶ್ಯಕತೆ ಸಮಾಜಕ್ಕೆ ಒಳ್ಳೆಯದು ಎಂದು ತಿಳಿಸಿದರು.

ಸನ್ಮಾನ ಸ್ವೀಕರಿಸಿ ಡಾ.ಪ್ರಕಾಶ ಭಸ್ಮೆ ಮಾತನಾಡಿ, ಬೇಕರಿ ಪದಾರ್ಥಗಳಾದ ಬಿಸ್ಕತ್ತು, ಕೇಕ್ ಮತ್ತು ಮೈದಾ ಆಧಾರಿತ ತಿನಿಸುಗಳ ಸೇವನೆಯನ್ನು ಕಡಿಮೆ ಮಾಡುವುದು ಆರೋಗ್ಯಕ್ಕೆ ಅತ್ಯುತ್ತಮ ಇವುಗಳಲ್ಲಿ ಅಧಿಕ ಸಕ್ಕರೆ, ಕೊಬ್ಬು ಮತ್ತು ಸಂಸ್ಕರಿಸಿದ ಹಿಟ್ಟು ಇರುತ್ತದೆ. ಬೇಕರಿ ತಿನಿಸುಗಳನ್ನು ತಿನ್ನುವ ಬದಲು ಪ್ರೋಟೀನ್ ಮತ್ತು ತರಕಾರಿಗಳಿರುವ ಪೌಷ್ಟಿಕ ಆಹಾರವನ್ನು ಸೇವಿಸಿ ಆರೋಗ್ಯ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ನವಚೈತನ್ಯ ವಿದ್ಯಾಲಯದ ಶಾಂತೇಶ್ ಪೂಜಾರ, ವಿದ್ಯಾರ್ಥಿಗಳಾದ ಸಿಂಚನ ಇಂಡಿಮಠ ಖುಷಿ ಬಣಗಾರ, ಪ್ರತೀಕ್ಷಾ ಬಿ ಎಸ್, ಕೃತಿಕಾ ಎಲಿ, ಚೈತನ್ಯ ಹಿರೇಮಠ,ವೇದಾ ಕಳಸೂರಮಠ, ಅಭಯ್ ಬಣಕಾರ, ಹಾಲನಗೌಡ ಭದ್ರಗೌಡರ,ಗೋಪಿಕೃಷ್ಣ ಕಿತ್ತೂರ, ಮೋಹಿತ್ ಹಿರೇಮಠ,ಮುಜೀಬ್ ಮುಲ್ಲಾ ಸೇರಿದಂತೆ ಇತರರಿದ್ದರು.



ರಕ್ತಕ್ಕೆ ಧರ್ಮ, ಜಾತಿ ಇಲ್ಲ : ಶಾಸಕ ಶಿವಣ್ಣನವರ



ಬ್ಯಾಡಗಿ: ರಕ್ತ ಎಲ್ಲಿಯೂ ಉತ್ಪಾದನೆ ಆಗುವುದಿಲ್ಲ, ಆದರೆ, ಆರೋಗ್ಯವಂತ ಮನುಷ್ಯರ ದೇಹದಿಂದ ಮಾತ್ರ ರಕ್ತ ದೊರಕುತ್ತದೆ. ಎಲ್ಲರ ರಕ್ತ ಕೆಂಪು ಬಣ್ಣ ಹೊಂದಿದ್ದು ಅದಕ್ಕೆ ಯಾವುದೇ ಧರ್ಮ ಜಾತಿ ಇಲ್ಲ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ರಕ್ತ ದಾನವು ಶ್ರೇಷ್ಠ ದಾನವಾಗಿದ್ದು ಸಾಯುವ ರೋಗಿಗಳನ್ನು ಬದುಕಿಸಿದ ಪುಣ್ಯ ರಕ್ತ ದಾನ ಮಾಡಿದರಿಗೆ ಸಿಗುತ್ತದೆ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

ಪಟ್ಟಣದ ವರ್ತಕರ ಸಂಘದ ಬಯಲು ಸಭಾ ಭವನದಲ್ಲಿ ಮೆಣಸಿನಕಾಯಿ ವರ್ತಕರ ಸಂಘ. ರೋಟರಿ ಕ್ಲಬ್. ಜಿಲ್ಲಾ ಆರೋಗ್ಯ ಇಲಾಖೆ ಹಾಗೂ ಸರಕಾರಿ ತಾಲೂಕು ಆಸ್ಪತ್ರೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸ್ವಯಂ ಪ್ರೇರಿತ ರಕ್ತ ದಾನ ಶಿಬಿರದ ಉದ್ಘಾಟನೆ ಮಾಡಿ ಮಾತನಾಡಿದರು.

ವರ್ತಕರ ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಸುರೇಶಗೌಡ್ರ, ಮಾತನಾಡಿ, ತಮ್ಮ ವರ್ತಕರ ಸಂಘ. ಕಾಲೇಜು. ಬ್ಯಾಂಕ್ ಹಾಗೂ ಇತರ ಸಂಘ ಸಂಸ್ಥೆಗಳು ರಕ್ತ ದಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಬಹಳ ಜನರು ರಕ್ತ ದಾನ ಮಾಡುತ್ತಿದ್ದಾರೆ ಯುವ ಜನತೆ ಭಯ ಇಲ್ಲದೇ ಮುಂದೆ ಬಂದು ರಕ್ತ ದಾನ ಮಾಡುವಂತೆ ಕರೆ ನೀಡಿದರು.

ಹಾವೇರಿ ಸರ್ಕಾರಿ ರಕ್ತ ಬಂಡಾರದ ಅಧಿಕಾರಿ ಡಾ. ಅನುಜ ದೇಸಾಯಿ, ವರ್ತಕರ ಸಂಘದ ಗೌರವ ಕಾರ್ಯದರ್ಶಿ ರಾಜಣ್ಣ ಮೋರಗೇರಿ, ರಾಜಕೀಯ ಮುಖಂಡ ಎಂ. ಎಸ್. ಪಾಟೀಲ, ತಹಶೀಲ್ದಾರ್ ಚಂದ್ರಕಾಂತ್ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಜಿ ಕೋಟಿ, ಪಿ.ಎಸ್‌ಐ. ಭಾರತಿ ಕುರಿ, ಪುರಸಭೆ ಮುಖ್ಯಾಧಿಕಾರಿ ವಿನಾಯಕುಮಾರ ಹೊಳೆಪ್ಪಗೋಳ, ರೋಟರಿ ಕ್ಲಬ್ ಸಹಾಯಕ ಗೌರ್ನರ್ ಬಸವರಾಜ ಸುಂಕಾಪುರ, ಅಧ್ಯಕ್ಷ ಪವಾಡೆಪ್ಪ ಅಚನೂರ, ಕಾರ್ಯದರ್ಶಿ ಕಿರಣ ಮಾಳೇನಹಳ್ಳಿ, ಮಾಜಿ ಅಧ್ಯಕ್ಷರಾದ ಮಾಲತೇಶ ಅರಳಿಮಟ್ಟಿ, ಮಂಜುನಾಥ ಉಪ್ಪಾರ, ಅನಿಲಕುಮಾರ ಬೊಡ್ಡಪಾಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಎಂ. ಎಸ್ ಪಾಟೀಲ, ರಾಜಣ್ಣ ಮೋರಗೇರಿ, ಪಿ ಎಸ್ ಐ ಭಾರತಿ ಕುರಿ, ಮುಖ್ಯಧಿಕಾರಿ ವಿನಾಯಕುಮಾರ, ಮಂಜುನಾಥ ಉಪ್ಪಾರ ರಕ್ತದಾನ ಮಾಡಿದರು.ಹಾಗೂ ರಕ್ತ ಭಂಡಾರದ ವೈದ್ಯರು ಹಾಗೂ ಸಿಬ್ಬಂದಿಗಳನ್ನು ಸನ್ಮಾನ ಮಾಡಲಾಯಿತು.

ಹಳೆ ವಿದ್ಯಾರ್ಥಿಗಳ ಸಂಘದಿಂದ ಶಾಲೆಗೆ ಊಟದ ತಟ್ಟೆ ವಿತರಣೆ

ರಾಣೇಬೆನ್ನೂರ: ತಾಲೂಕಿನ ಆರೇಮಲ್ಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ ಕೆಜಿ ಮತ್ತು ಯುಕೆಜಿ ಮಕ್ಕಳಿಗೆ ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ಉಚಿತವಾಗಿ ಊಟದ ತಟ್ಟೆಗಳನ್ನು ವಿತರಿಸಲಾಯಿತು.



ಶಾಲಾ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಳೆ ವಿದ್ಯಾರ್ಥಿಗಳ ಸಂಘವು ಈ ಸಮಾಜಮುಖಿ ಕಾರ್ಯವನ್ನು ಕೈಗೊಂಡಿದ್ದು, ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ತಟ್ಟೆಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಪದಾಧಿಕಾರಿ ಹಾಗೂ ಮಾಜಿ ಸೈನಿಕ ರವಿಕುಮಾರ ಡಿ ಐರಣಿ ಅವರು, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಮೂಲಭೂತ ಸೌಲಭ್ಯಗಳ ವೃದ್ಧಿಗೆ ಹಳೆ ವಿದ್ಯಾರ್ಥಿಗಳು ನಿರಂತರವಾಗಿ ಸಹಕಾರ ನೀಡಬೇಕು ಇದರಿಂದಾಗಿ ಸರಕಾರಿ ಶಾಲೆಗಳು ಅಭಿವೃದ್ಧಿಯತ್ತ ಸಾಗಲು ಸಾಧ್ಯ ಎಂದರು.

ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ ವೃಂದವು ಹಳೆ ವಿದ್ಯಾರ್ಥಿಗಳ ಸಂಘದ ಈ ಸೇವಾ ಮನೋಭಾವವನ್ನು ಶ್ಲಾಘಿಸಿ, ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ನೀಡಿದ ಸಹಾಯಕ್ಕೆ ಕೃತಜ್ಞತೆ ಸಲ್ಲಿಸಿ ಅವರುಗಳನ್ನು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಗ್ರಂಥಪಾಲಕ ಬಸವರಾಜ ಕೊಳಜಿ, ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಶಾಲೆಯ ಮುಖ್ಯ ಶಿಕ್ಷಕರು,ಸಹ ಶಿಕ್ಷಕರು, ಶಾಲಾ ಸಿಬ್ಬಂದಿ, ಎಸ್‌ಡಿಎಂಸಿ ಸದಸ್ಯರು, ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಚನಗಳ ಸತ್ಯ ಸಂದೇಶಗಳು ನಮ್ಮ ಉಸಿರಾದರೆ ಬದುಕು ಹಸನ

ಹಾನಗಲ್ಲ: ವಚನಗಳ ಸತ್ಯ ಸಂದೇಶಗಳು ನಮ್ಮ ಉಸಿರಾದರೆ ಹಸನ ಬದುಕು ಸಾಧ್ಯವಾಗುವುದಲ್ಲದೆ ಸರಳ ಸಾಮಾಜಿಕ ಸಾಮರಸ್ಯದ ಜೀವನ ಸಾಧ್ಯ ಎಂದು ತಾಲೂಕು ತಹಶೀಲ್ದಾರ್ ವಿಠಲ್ ಚೌಗುಲಾ ತಿಳಿಸಿದರು.

ಗುರುವಾರ ಇಲ್ಲಿನ ತಾಲೂಕು ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಡಾ.ಫ.ಗು.ಹಳಕಟ್ಟಿ ಅವರು ಜನ್ಮದಿನದ ಅಂಗವಾಗಿ ಆಯೋಜಿಸಿದ ವಚನ ಸಂರಕ್ಷಣಾ ದಿನಾಚರಣೆ ಸಂದರ್ಭದಲ್ಲಿ ಫ.ಗು.ಹಳಕಟ್ಟಿ ಅವರು ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಮನಸ್ಸು ವಿವೇಕವನ್ನು ಜಾಗೃತಗೊಳಿಸುವ ವಚನಗಳು ಪ್ರತಿ ಮನೆಯಲ್ಲಿ ಸಂದೇಶಗಳಾಗಬೇಕಾಗಿದೆ. ಆಧುನಿಕ ಸಮಾಜಕ್ಕೆ ವಚನ ಸಂಸ್ಕಾರ ಅತ್ಯಂತ ಆವಶ್ಯಕ. ಸಾಮಾಜಿಕ ಅಸಮಾನತೆ ತೊಲಗಿ ಎಲ್ಲರೂ ಒಟ್ಟಿದಾಗಿ ಬಾಳುವ ಕಾಲ ಇದಾಗಿದ್ದು ಇದಕ್ಕಾಗಿ ಎಲ್ಲರ ಮನಸ್ಸು ಸಹಬಾಳ್ವೆಯತ್ತ ನಡೆಯಬೇಕು ಎಂದರು.



ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮಾರುತಿ ಶಿಡ್ಲಾಪೂರ ಮಾತನಾಡಿ, ವಕೀಲ ವೃತ್ತಿಯನ್ನು ತ್ಯಜಿಸಿ ವಚನ ಸಂಗ್ರಹದ ಮಹತ್ಕಾರ್ಯಕ್ಕೆ ಮುಂದಾದ ಫ.ಗು.ಹಳಕಟ್ಟಿ ಇಡೀ ವಚನ ಸಾಹಿತ್ಯವನ್ನು ಒಟ್ಟಾಗಿ ಕಟ್ಟಿ ಕೊಟ್ಟಿರುವುದು ಮಹತ್ಕಾರ್ಯವಾಗಿದೆ. ಮನೆ ಮಠಗಳಿಗೆ ತೆರಲಿ ಅಲ್ಲಲ್ಲಿ ಬಚ್ಚಿಟ್ಟ, ಪೂಜೆಗಿಟ್ಟ ವಚನಗಳನ್ನು ಶ್ರದ್ಧೆಯಿಂದ ಸಂಗ್ರಹಿಸಿ ಈ ಸಮಾಜಕ್ಕೆ ನೀಡುವಲ್ಲಿ ಪಟ್ಟ ಶ್ರಮ ಸಾರ್ಥಕವಾಗಿದೆ. ಅವರಿಗೆ ಆರ್ಥಿಕ ಬಡತನವಿತ್ತು, ಆದರೆ ಜ್ಞಾನದ ಕ್ರಿಯಾಶೀಲತೆಯ ಬಡತನವಿರಲಿಲ್ಲ, ವಚನಗಳಲ್ಲಿನ ಸತ್ವದ ಅರಿವು ಅವರ ಇಡೀ ಬದುಕನ್ನು ವಚನಕ್ಕಾಗಿಯೇ ಮೀಸಲಿಡುವಂತೆ ಮಾಡಿತು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ವಿ.ಚಿನ್ನೀಕಟ್ಟಿ, ರಚನಾ ಗೋವೇಕರ, ಮಹೇಶ ತಿರಕಾಣಿ, ಗಿರೀಶ ದೇಶಪಾಂಡೆ, ಬಸವರಾಜ ಅಂಗಡಿ, ಜಿ.ಎಸ್.ಪಾಟೀಲ, ಸಿದ್ದು ಗೌರಣ್ಣನವರ, ಮೀನಾಕ್ಷಿ ಲಕ್ಕುಂಡಿ ಸೇರಿದಂತ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ನೂತನ ಕೊಠಡಿಗಳ ನಿರ್ಮಾಣಕ್ಕೆ ಆಗ್ರಹಿಸಿ ಗ್ರಾಮಸ್ಥರಿಂದ ಸತ್ಯಾಗ್ರಹ

ಗುತ್ತಲ: ಶಿಥಿಲಾವಸ್ಥೆಯಲ್ಲಿನ ಕೊಠಡಿಗಳಿಂದ ಮಕ್ಕಳಿಗೆ ಪಾಠ ಕೇಳಲು ತೊಂದರೆಯಾಗಿದ್ದು, ಸುಸ್ಥಿತಿಯಲ್ಲಿರುವ ಕೊಠಡಿಗಳಲ್ಲಿ 2-3 ಕ್ಲಾಸ್ ವಿದ್ಯಾರ್ಥಿಗಳು ಪಾಠ ಕೇಳುವ ಪರಿಣಾಮ ಮಕ್ಕಳ ಶೈಕ್ಷಣಿಕ ಗುಣಮಟ್ಟ ಕುಂಠಿತವಾಗಿ ಮಕ್ಕಳ ಭವಿಷ್ಯ ಹಾಳಾಗುತ್ತಿದ್ದು, ನೂತನ ಕೊಠಡಿಗಳ ನಿರ್ಮಾಣ ಮಾಡುವಂತೆ ಕಳೆದ 4 ವರ್ಷಗಳಿಂದ ಶಿಕ್ಷಣ ಇಲಾಖೆಗೆ ಬೇಡಿಕೆ ಸಲ್ಲಿಸುತ್ತಿದ್ದರೂ ಸಹ ಸ್ಪಂದಿಸದ ಕಾರಣ ಸಮೀಪದ ನೀರಲಗಿ ಗ್ರಾಮಸ್ಥರು ಧರಣಿ ಸತ್ಯಾಗ್ರಹ ಕೈಗೊಂಡರು.



ನಾವು 4 ವರ್ಷಗಳಿಂದ ನಮ್ಮ ಗ್ರಾಮದ ಪ್ರಾರ್ಥಮಿಕ ಶಾಲೆಯ 3 ಕೊಠಡಿಗಳು ಶಿಥಿಲಗೊಂಡಿವೆ. ಅವುಗಳ ಸ್ಥಳದಲ್ಲಿ ನೂತನ ಕೊಠಡಿಗಳನ್ನು ನಿರ್ಮಿಸಿದರೆ. ಮಕ್ಕಳು ಪ್ರತ್ಯೇಕವಾಗಿ ತಮ್ಮ ತಮ್ಮ ಕ್ಲಾಸ್‌ಗಳಲ್ಲಿ ಪಾಠ ಕೇಳುವಂತಾಗುವುದು ಇದರಿಂದ ಮಕ್ಕಳ ಶೈಕ್ಷಣಿಕ ಗುಣಮಟ್ಟ ಸಹ ಉತ್ತಮವಾಗುವುದು. ಇದರಿಂದ ಮಕ್ಕಳ ಭವಿಷ್ಯ ಉಜ್ವಲವಾಗುವುದು ಆದ್ದರಿಂದ ಮಕ್ಕಳಿಗಾಗಿ ಶಾಲಾ ಕೊಠಡಿಗಳನ್ನು ನಿರ್ಮಿಸುವಂತೆ ಕಳೆದ 4ವರ್ಷಗಳಿಂದ ಬೇಡಿಕೆ ಸಲ್ಲಿಸುತ್ತಾ ಬಂದರೂ ಸಹ ನಮ್ಮ ಬೇಡಿಕೆಗಳನ್ನು ಈಡೇರಿಸಿಲ್ಲ ಎಂದು ಆರೋಪಿಸಿದರು.

ನೂತನ ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರದಿಂದ ಆದೇಶ ಬರುವವರೆಗೂ ಧರಣಿ ಸತ್ಯಾಗ್ರಹ ನಡೆಸುತ್ತಿ ದ್ದೇವೆ. ಯಾವುದೇ ಕಾರಣ ಈ ಪ್ರತಿಭಟನೆಯಿಂದ ಹಿಂದಕ್ಕೆ ಸರಿಯುವ ಮಾತೇ ಇಲ್ಲ ಎಂದು ಪಟ್ಟು ಹಿಡಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಡಿಡಿಪಿಐ ಮೋಹನ ದಂಡಿನ, ಬಿಇಓ ಶ್ರೀನಿವಾಸ ಬಿ., ದೈಹಿಕ ಶಿಕ್ಷಣ ಪರಿವೀಕ್ಷಕ ವಿನಾಯಕ ಗಡ್ಡದ, ಪಿಎಸ್‌ಐ ಪರಶುರಾಮ ಲಮಾಣಿ, ಸಿಆರ್‌ಪಿ ಮೈತ್ರಾ ಪುಟ್ಟಣ್ಣನವರ ಪ್ರತಿಭಟನಾ ನಿರತರೊಂದಿಗೆ ಚರ್ಚಿಸಿದರು.

ನಂತರ ಗ್ರಾಮದಲ್ಲಿನ ಒಂದೆರಡು ಕಡೆಗಳಲ್ಲಿ ಮಕ್ಕಳಿಗೆ ತಾತ್ಕಾಲಿಕವಾಗಿ ಪಾಠ ಮಾಡಲು ಕಟ್ಟಡಗಳನ್ನು ಪರಿಶೀಲಿಸಿದರು. ಆದರೆ ಎಲ್ಲಿಯೂ ಸರಿಯಾದ ಕಟ್ಟಡ ದೊರೆಯಲಿಲ್ಲ. ಮಕ್ಕಳಿಗೆ ಶೈಕ್ಷಣಿಕವಾಗಿ ತೊಂದರೆಯಾಗದಂತೆ ಅವರ ಶೈಕ್ಷಣಿಕ ಗುಣಮಟ್ಟ ಏರಿಕೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಂಡು ಮಕ್ಕಳಿಗೆ ಎಲ್ಲ ವ್ಯವಸ್ಥೆ ಮಾಡುತ್ತೇವೆ ಎಂದು ಮನವೊಲಿಸಲು ಡಿಡಿಪಿಐ ಮೋಹನ ದಂಡಿನ, ಬಿಇಓ ಶ್ರೀನಿವಾಸ ಬಿ. ಎಷ್ಟೇ ಪ್ರಯತ್ನಿಸಿದರೂ ಸಹ ಪ್ರತಿಭಟನಾ ನಿರತರು ಸರ್ಕಾರದಿಂದ ನೂತನ ಕೊಠಡಿಗಳ ನಿರ್ಮಾಣಕ್ಕೆ ಆದೇಶದ ಪತ್ರ ಬರೋವರೆಗೂ ನಾವು ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಲ್ಲ ಎಂದರು.

ವಿಜಯರಡ್ಡಿ ಭರಮರಡ್ಡೇರ, ಶಂಭುಲಿಂಗ ಅಣ್ಣಿಗೇರಿ, ಚನ್ನವೀರಯ್ಯ ಹಿರೇಮಠ, ವೆಂಕಟೇಶ ಶೇಷನಗೌಡ್ರ, ವಿ.ಎಂ ಅಣ್ಣಿಗೇರಿ, ಹನುಮಂತ ಬನ್ನಿಮಟ್ಟಿ, ದಯಾನಂದ ಈರಪ್ಪನವರ, ಮಂಜುನಾಥ ನಿಂಬಣ್ಣನವರ, ಬರಮಗೌಡ ದೊಡ್ಡಗೌಡ್ರ, ರಾಮಲಿಂಗ ಅಣ್ಣಿಗೇರಿ, ಲಲಿತಾ ಅಣ್ಣಿಗೇರಿ, ಬೇಬಿ ಚನ್ನದಾಸರ, ರೇಖಾ ಅಣ್ಣಿಗೇರಿ, ವಿಜಯಲಕ್ಷ್ಮಿ ದೇಶಗತ್ತಿ, ಸಂಜೀವ ಘೋರ್ಪಡೆ, ಮಾಲತೇಶ ಓಲೇಕಾರ, ಪ್ರಮೋದ ಮರ್ತರಡ್ಡಿ, ಸಿ.ಡಿ ಬಡಲಿಂಗಣ್ಣನವರ, ಪ್ರಭುರಡ್ಡಿ ಭರಮರಡ್ಡೇರ ಇತರರಿದ್ದರು.

ಬಿಜೆಪಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾಧಾನ್ಯತೆ: ವಿರೂಪಾಕ್ಷಪ್ಪ

ಹಾವೇರಿ: ಪ್ರಸ್ತುತ ಸಮಾಜದಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಮುಖವಾಗಿದ್ದು, ಇಂದು ಮಹಿಳೆ ಸಮಾಜದ ಸರ್ವ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿದ್ದಾಳೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಹೇಳಿದರು.



ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಏರ್ಪಡಿಸಿದ್ದ ಮಹಿಳಾ ಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ ನಿರ್ಣಾಯಕವಾಗಿದ್ದು, ರಾಜಕೀಯ ರಂಗದಲ್ಲಿ ತನ್ನದೇ ಆದ ಕೊಡುಗೆ ನೀಡುವ ಅವಶ್ಯಕತೆ ಇದೆ. ಆದ್ದರಿಂದ ಭಾರತೀಯ ಜನತಾ ಪಾರ್ಟಿ ಮಹಿಳೆಯರಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರಯತ್ನಿಸುತ್ತಿದೆ. ಮುಂಬರುವ ದಿನಗಳಲ್ಲಿ ಭಾರತೀಯ ಜನತಾ ಪಾರ್ಟಿ, ಮಹಿಳಾ ಮೋರ್ಚಾ ಮತ್ತಷ್ಟು ಪ್ರಬಲವಾಗಿ ಬೆಳೆಯಬೇಕು ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಮಹಿಳಾ ಮೋರ್ಚಾ ಉಸ್ತುವಾರಿ ಡಾ.ಸಂತೋ? ಆಲದಕಟ್ಟಿ ಮಾತನಾಡಿ, ಇಂದು ಎಸ್‌ಐಆರ್ ಪ್ರಕ್ರಿಯೆ ರಾಜ್ಯಾದ್ಯಂತ ಜರುಗುತ್ತಿದೆ. ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಎಸ್‌ಐಆರ್ ಪ್ರಾರಂಭವಾಗಿದ್ದು, ನಮ್ಮ ಪಕ್ಷದ ಮಹಿಳಾ ಮೋರ್ಚಾ ತಂಡ ಈ ಪ್ರಕ್ರಿಯೆಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಬೇಕು. ಪಕ್ಷ ಸಂಘಟನೆಯಲ್ಲಿ ಮಹಿಳೆಯರ ಪಾತ್ರ ಅತ್ಯಮೂಲ್ಯವಾದದ್ದು, ಆದ್ದರಿಂದ ಪಕ್ಷದ ತತ್ವ ಸಿದ್ದಾಂತಗಳ ಆಧಾರದ ಮೇಲೆ ಹೆಚ್ಚಿನ ಮಹಿಳೆಯರು ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು ಎಂದರು.

ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಬಸಮ್ಮ ಅಬಲೂರ ಮಾತನಾಡಿ, ಪಕ್ಷ ನೀಡುವ ಪ್ರತಿಯೊಂದು ಸೂಚನೆಯನ್ನು ಪಾಲಿಸಬೇಕು. ಭಾರತೀಯ ಜನತಾ ಪಾರ್ಟಿ, ಮಹಿಳೆಯರಿಗೆ ರಾಜಕೀಯ ರಂಗದಲ್ಲಿ ಹೆಚ್ಚಿನ ಪ್ರಾಧಾನ್ಯತೆ ನೀಡುತ್ತಿದೆ. ಆದ್ದರಿಂದ ಸಮಾಜದ ಮಹಿಳೆಯರನ್ನ ಭಾರತೀಯ ಜನತಾ ಪಕ್ಷದ ಕಡೆ ಸೆಳೆಯುವಲ್ಲಿ ನಾವು ಪ್ರಮುಖ ಪಾತ್ರ ವಹಿಸಬೇಕು. ಹಾಗೂ ಮುಂಬರುವ ದಿನಗಳಲ್ಲಿ ಜಿಲ್ಲೆಯ ಪ್ರತಿಯೊಂದು ಮಂಡಲದಲ್ಲಿ ಮಂಡಲ ಕಾರ್ಯಕಾರಣಿಯನ್ನು ನಡೆಸಿ ಮಹಿಳಾ ಮೋರ್ಚಾ ತಂಡವನ್ನು ಮತ್ತಷ್ಟು ಪ್ರಬಲಗೊಳಿಸಬೇಕು ಎಂದರು.

ಮಹಿಳಾ ಮೋರ್ಚಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿದ್ಯಾ ಶೆಟ್ಟಿ ಮಾತನಾಡಿ, ಡಿಜಿಟಲ್ ಲರ್ನಿಂಗ್ ಪ್ರಶಿಕ್ಷಣ ಕುರಿತು ತರಬೇತಿ ನೀಡಿದರು ಹಾಗೂ ಪಕ್ಷದ ಪ್ರಮುಖ ವಿಷಯಗಳನ್ನ ಕಾರ್ಯಕರ್ತರೊಂದಿಗೆ ಹಂಚಿಕೊಂಡರು. ಸಭೆಯಲ್ಲಿ ಮಹಿಳಾ ಮೋರ್ಚಾದಜಿಲ್ಲಾಪದಾಧಿಕಾರಿಗಳು ಮಂಡಲ ಪದಾಧಿಕಾರಿಗಳು ಹಾಗೂ ಪ್ರಮುಖ ಮಹಿಳಾ ಕಾರ್ಯಕರ್ತರು ಉಪಸ್ಥಿತರಿದ್ದರು. ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲತಾ ಬಡ್ನಿಮಠ ವಂದಿಸಿದರು.

ಕಿರುಸುದ್ದಿ

ನಾಳೆ ಪುಸ್ತಕ ಬಿಡುಗಡೆ, ಉಚಿತ ಹೃದಯ ತಪಾಸಣೆ



• **ರಾಯಬಾಗ:** ತಾಲೂಕಿನ ಮಾಜಿ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಹಾಗೂ ಆರೋಗ್ಯ ಇಲಾಖೆಯ ಶುಶ್ರೂಷಣಾಧಿಕಾರಿಗಳಾದ ಶಿರೂರ ಶ್ರೀಶೈಲ ಅವರ ಐದನೇ ಕೃತಿ ಚುಟುಕು ಸಂಕಲನ ಪ್ರೀತಿ ಬಂಗಾರ ಜು.4ರಂದು ನಗರದ ಗೌಡರ ಪ್ಲಾಟ್ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ ಲೋಕಾರ್ಪಣೆಗೊಳ್ಳಲಿದೆ. ಅಂದು ಉಚಿತ ಹೃದಯ ತಪಾಸಣೆಯೂ ನಡೆಯಲಿದೆ. ಪುಸ್ತಕ ಮುನ್ನುಡಿಯನ್ನು ಬಾಗಲಕೋಟೆ ತಾಲೂಕ ಶಿರೂರಿನ ಕೆ. ಆರ್. ಲಕ್ಕಂ ಕಾಲೇಜಿನ ವಿಶ್ರಾಂತ ಕನ್ನಡ ಪ್ರಾಂಶುಪಾಲರಾದ ಶಿವಶಂಕರ ಮುಳ್ಳೂರ ಹಾಗೂ ಬೆನ್ನುಡಿ ರಾಯಬಾಗದ ಹಿರಿಯ ಸಾಹಿತಿಗಳಾದ ಕುಮಾರ ಯಮನಪ್ಪ ಅವಳೆ ಬರೆದಿದ್ದು, ಉದ್ಘಾಟಕರಾಗಿ ಜಿಪಂ ಮಾಜಿ ಸದಸ್ಯ ಪ್ರಣಯ ವಿ ಪಾಟೀಲ ಆಗಮಿಸಲಿದ್ದಾರೆ. ಸಾಹಿತಿ ಈಶ್ವರ ಮಮದಾಪೂರ ಪುಸ್ತಕ ಲೋಕಾರ್ಪಣೆಗೊಳಿಸಲಿದ್ದಾರೆ. ಮೂಡಲಗಿ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಚಿದಾನಂದ ಮ ಹೂಗಾರ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಶಿವರಾಜ ಅರಳಿ, ಡಾ.ಕುಮಾರ ಎಂ ತಳವಾರ, ಡಾ.ವಿನೋದ ಗಸ್ತಿ ಆಗಮಿಸಲಿದ್ದಾರೆ.



ರಾಯಬಾಗ: ತಾಲೂಕಿನ ನಸಲಾಪುರ ವಲಯ ಹಬರಟ್ಟಿ ಕಾರ್ಯಕ್ಷೇತ್ರದ ಸಂಪಿಗೆ ಜ್ಞಾನ ವಿಕಾಸ ಕೇಂದ್ರ ಸಭೆಯಲ್ಲಿ ಸ್ವ ಉದ್ಯೋಗ ಪ್ರೇರಣಾ ಶಿಬಿರ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಶಾಸಕ ಪ್ರದೀಪ ಈಶ್ವರ ಹೇಳಿಕೆಗೆ ಖಂಡನೆ



• **ರಾಯಬಾಗ:** ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಕುರಿತು ಶಾಸಕ ಪ್ರದೀಪ ಈಶ್ವರ್ ನೀಡಿರುವ ಹೇಳಿಕೆಯನ್ನು ಜೆಡಿಎಸ್ ರಾಷ್ಟ್ರೀಯ ಉಪಾಧ್ಯಕ್ಷ ಬ್ಯಾರಿಸ್ಟರ್ ಪ್ರತಾಪರಾವ್ ಪಾಟೀಲ ತೀವ್ರವಾಗಿ ಖಂಡಿಸಿದ್ದಾರೆ. ಬ್ಯಾಕುಡ ಗ್ರಾಮದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಶಕಗಳ ರಾಜಕೀಯ ಅನುಭವ ಹೊಂದಿರುವ ಹಿರಿಯ ನಾಯಕರ ಬಗ್ಗೆ ಅವಹೇಳನಕಾರಿ ಭಾಷೆಯಲ್ಲಿ ಮಾತನಾಡುವುದು ಸರಿಯಲ್ಲ. ಸಾರ್ವಜನಿಕ ಜೀವನದಲ್ಲಿ ರಾಜಕೀಯ ಸಂಸ್ಕೃತಿ ಮತ್ತು ಹಿರಿಯರಿಗೆ ಗೌರವ ನೀಡುವ ಮನೋಭಾವ ಇರಬೇಕು, ಎಂದು ಹೇಳಿದರು. ಒಂದು ಚುನಾವಣೆಯಲ್ಲಿ ಜನರ ಆಶೀರ್ವಾದದಿಂದ ಗೆಲುವು ಸಾಧಿಸಿದರೆ ಮಾತ್ರ ಎಲ್ಲರನ್ನೂ ಟೀಕಿಸುವ ಹಕ್ಕು ಸಿಗುವುದಿಲ್ಲ. ಅಧಿಕಾರ ಶಾಶ್ವತವಲ್ಲ ಎಂಬುದನ್ನು ಪ್ರತಿಯೊಬ್ಬ ಜನಪ್ರತಿನಿಧಿಯೂ ನೆನಪಿನಲ್ಲಿಟ್ಟುಕೊಳ್ಳಬೇಕು. ವೈಯಕ್ತಿಕ ಟೀಕೆಗಳ ಬದಲು ಜನರ ಸಮಸ್ಯೆಗಳ ಬಗ್ಗೆ ಗಮನಹರಿಸುವುದು ಸೂಕ್ತ, ಎಂದು ಅವರು ಅಭಿಪ್ರಾಯಪಟ್ಟರು. ಜೆಡಿಎಸ್ ಮುಖಂಡ ಶಿವರಾಜ್ ಪಾಟೀಲ ಮಾತನಾಡಿ, ಕುಮಾರಸ್ವಾಮಿ ಅವರ ರಾಜಕೀಯ ಸೇವೆಯನ್ನು ಪ್ರಶ್ನಿಸುವ ಬದಲು ಅವರ ಕಾರ್ಯವನ್ನು ಗೌರವಿಸುವ ಮನೋಭಾವ ಎಲ್ಲರಲ್ಲೂ ಇರಬೇಕು. ಅಗ್ಗದ ಪ್ರಚಾರಕ್ಕಾಗಿ ಇಂತಹ ಹೇಳಿಕೆಗಳನ್ನು ನೀಡುವುದು ಸರಿಯಲ್ಲ, ಎಂದು ತಿಳಿಸಿದ್ದಾರೆ.


ನಿಧನ ಸುದ್ದಿ

ಅನಿಲ ಪಾಟೀಲ



• **ಮುರಗೋಡ:** ಗ್ರಾಮದ ಕಸಬಾಗಲ್ಲಿ ನಿವಾಸಿ ಅನಿಲ ಪರ್ವತಗೌಡ ಪಾಟೀಲ (31) ನಿಧನರಾಗಿದ್ದಾರೆ. ಮೃತರು ತಾಯಿ ಹಾಗೂ ಓರ್ವ ಸಹೋದರ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಬಸನಗೌಡ ಯ ಪಾಟೀಲ



• **ಬೆಳಗಾವಿ :** ತಾಲೂಕಿನ ಪಂತ ಬಾಳೇಕುಂದ್ರಿ ಗ್ರಾಮದ ನಿವಾಸಿ ಬಸನಗೌಡ ಯ ಪಾಟೀಲ (73) ಗುರುವಾರ ಬೆಳಿಗ್ಗೆ ತಮ್ಮ ಸ್ವ ಗೃಹದಲ್ಲಿ ನಿಧನರಾಗಿದ್ದಾರೆ. ಮೃತರು ಪತ್ನಿ ಇಬ್ಬರು ಗಂಡು ಮಕ್ಕಳು, ತಮ್ಮ ತಂಗಿಯಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಚಿಕ್ಕೋಡಿ: ಭಾರತೀಯ ಸೇನೆಯಲ್ಲಿ ಅಗ್ನಿವೀರನಾಗಿ ಆಯ್ಕೆಯಾದ ಪಟ್ಟಣದ ಆರ್ ಡಿ ಪಿಯು ಕಾಲೇಜಿನ ವಿದ್ಯಾರ್ಥಿ ಓಂಕಾರ ದೊಡಮನಿ ಅವರನ್ನು ಪ್ರಾಚಾರ್ಯ ಯು ಎಸ್ ಶಿಂಧೆ ಗುರುವಾರ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಆರ್ ಎ ಮರೆಪ್ಪನವರ್, ಎಂ ಪಿ ಚಟ್ನಿಸ್, ಸುರೇಶ ಪಾಟೀಲ, ಎಂ ಆರ್ ಗುಗ್ಗರಿ, ಎಲ್ ಜಿ ತೋಟಗಿ, ಎಸ್ ಎಸ್ ಶಿಂಧೆ ಇತರರು ಇದ್ದರು.

ಡಾ.ಹಳಕಟ್ಟಿಯವರ ಕೊಡುಗೆ ಅಪಾರ

• **ಬೆಳಗಾವಿ:** ಡಾ.ಫ.ಗು. ಹಳಕಟ್ಟಿ ಅವರು ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಹಲವಾರು ಕೊಡುಗೆಗಳನ್ನು ನೀಡಿದ್ದಾರೆ. ಕಷ್ಟಕರ ಜೀವನದಲ್ಲಿಯೂ ವಚನ ಸಾಹಿತ್ಯಕ್ಕೆ ಕೊಡುಗೆ ನೀಡಿದಂತಹ ಫ.ಗು. ಹಳಕಟ್ಟಿ ಅವರ ತತ್ವ ಸಿದ್ಧಾಂತಗಳನ್ನು ಪಾಲಿಸಲು ನಾಗನೂರು ರುದ್ರಾಕ್ಷಿಮಠದ ಡಾ.ಅಲ್ಲಮಪ್ರಭು ಸ್ವಾಮಿಗಳು ನುಡಿದರು. ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಕುಮಾರ ಗಂಧರ್ವ ರಂಗ ಮಂದಿರದಲ್ಲಿ ಜರುಗಿದ ವಚನ ಪಿತಾಮಹ ಡಾ.ಫ.ಗು ಹಳಕಟ್ಟಿ ರವರ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾರ್ಯಕ್ರಮದ ಉಪನ್ಯಾಸಕರಾಗಿ ಆಗಮಿಸಿದ್ದ ಬೀಮ್ಸ್ ವೈದ್ಯಾಧಿಕಾರಿ ಭವ್ಯ ಸಂಪಗಾರ ಅವರು ಮಾತನಾಡಿ, ಮುಂದಿನ ಪೀಳಿಗೆಗೆ ನಮ್ಮ ಸಾಹಿತ್ಯದ ಪರಂಪರೆಯನ್ನು ಮುಂದುವರಿಸುವ ಉದ್ದೇಶದಿಂದ ತಾಳೆಗರಿಯಲ್ಲಿ ಇರುವ ಸಾಹಿತ್ಯವನ್ನು ಕೈ ಬರಹದಲ್ಲಿ ಬರೆದು ವಚನ ಸಾಹಿತ್ಯವನ್ನು ಸಂಗ್ರಹಿಸಿ ಸಂರಕ್ಷಣೆ ಮಾಡುವಲ್ಲಿ ಡಾ.ಫ.ಗು.ಹಳಕಟ್ಟಿ ಅವರ ಪಾತ್ರ ಅತೀ ಮುಖ್ಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಜಾಗತಿಕ ಲಿಂಗಾಯತ ಮಹಾ ಸಭಾ ಅಧ್ಯಕ್ಷರಾದ ಬಸವರಾಜ ರೊಟ್ಟಿ, ಗಣ್ಯರುಗಳಾದ ರಾಜಶೇಖರ ಭೋಜ, ಅಶೋಕ ಮಳಗಲಿ, ಮುರಗೇಶ ಶಿವಪೂಜಿ ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಸಂಯುಕ್ತ ಆಶ್ರಯದಲ್ಲಿ ನಗರದ ಕುಮಾರ ಗಂಧರ್ವ ರಂಗ ಮಂದಿರದಲ್ಲಿ ಜರುಗಿದ ವಚನ ಪಿತಾಮಹ ಡಾ.ಫ.ಗು ಹಳಕಟ್ಟಿ ರವರ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮ ನಡೆಯಿತು.

ನಕಲಿ ಯೂಟ್ಯೂಬರ್‌ಗಳ ಬ್ಲ್ಯಾಕ್‌ಮೇಲ್ ದಂಧೆಗೆ ಎಸ್ಪಿ ಖಡಕ್ ಎಚ್ಚರಿಕೆ

ಹೆದರಿಸಿದ್ರೆ, ರೌಡಿಶೀಟ್ ಗ್ಯಾರಂಟಿ



• **ಬೆಳಗಾವಿ:** ಜಿಲ್ಲೆಯಲ್ಲಿ ಯೂಟ್ಯೂಬರ್ ಹಾಗೂ ಸೋಷಿಯಲ್ ಮೀಡಿಯಾ ಆಕ್ಟಿವಿಸ್ಟ್‌ಗಳ ಹೆಸರಿನಲ್ಲಿ ಸಾರ್ವಜನಿಕರು ಮತ್ತು ಸರ್ಕಾರಿ ಅಧಿಕಾರಿಗಳನ್ನು ಹೆದರಿಸಿ, ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ ದೊಡ್ಡದೊಂದು ದಂಧೆಗೆ ಬ್ರೇಕ್ ಹಾಕಲು ಪೊಲೀಸ್ ಇಲಾಖೆ ಈಗ ಕಠಿಣ ಕಾನೂನು ಅಸ್ತ್ರವನ್ನು ಕೈಗೆತ್ತಿಕೊಂಡಿದೆ.

ಮಾಧ್ಯಮಗಳ ಹೆಸರಿನಲ್ಲಿ ಸಮಾಜದಲ್ಲಿ ಕಾನೂನುಬಾಹಿರ ಕೃತ್ಯ ಎಸಗುತ್ತಿರುವ ನಕಲಿ ಪತ್ರಕರ್ತರಿಗೆ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಡಾ.ಕೆ.ರಾಮರಾಜನ್ ಅವರು ನೇರವಾಗಿ ಕಠಿಣ ಎಚ್ಚರಿಕೆ ನೀಡಿದ್ದು, ಬ್ಲ್ಯಾಕ್‌ಮೇಲ್ ಮಾಡುವವರ ವಿರುದ್ಧ ಇನ್ಮುಂದೆ 'ರೌಡಿಶೀಟ್' ದಾಖಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಅಧಿಕಾರಿಗಳು, ರೈತರೇ ಇವರ ಟಾರ್ಗೆಟ್: ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಯೂಟ್ಯೂಬ್ ಚಾನೆಲ್ ಹಾಗೂ ಸಾಮಾಜಿಕ ಜಾಲತಾಣಗಳ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ತಾವೇ ಪತ್ರಕರ್ತರೆಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಮುಗ್ಧ ರೈತರಿಂದ ಹಿಡಿದು ವಿವಿಧ ಇಲಾಖೆಯ ಸರ್ಕಾರಿ ಅಧಿಕಾರಿಗಳವರೆಗೆ ಎಲ್ಲರನ್ನೂ ಟಾರ್ಗೆಟ್ ಮಾಡಿ, ತೇಜೋವಧೆ ಮಾಡುವ ಬೆದರಿಕೆ ಒಡ್ಡಿ ಹಣ ವಸೂಲಿ ಮಾಡುವ ದಂಧೆ ವ್ಯಾಪಕವಾಗಿ ನಡೆಯುತ್ತಿರುವುದು ಪೊಲೀಸ್ ಇಲಾಖೆಯ ಗಮನಕ್ಕೆ ಬಂದಿದೆ.

ಈ ಕುರಿತು ನಗರದಲ್ಲಿ ಆಯೋಜಿಸಲಾಗಿದ್ದ ತುರ್ತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್ಪಿ ಕೆ. ರಾಮರಾಜನ್ ಅವರು, ಇಂತಹ ಜಾಲಗಳ ವಿರುದ್ಧ ಇಲಾಖೆ ಸಜ್ಜಾಗಿದೆ ಎಂದು ಸ್ಪಷ್ಟಪಡಿಸಿದರು.

ಯುಟ್ಯೂಬರ್ಸ್ ಅಥವಾ ಸೋಶಿಯಲ್ ಮಿಡಿಯಾ ಹೆಸರಿನಲ್ಲಿ ಯಾರಾದರೂ ವೈಯಕ್ತಿಕ ಇಮೇಜ್ ಹಾಳು ಮಾಡುವ ಬೆದರಿಕೆ ಹಾಕಿ ಹಣಕ್ಕೆ ಬೇಡಿಕೆ ಇಟ್ಟರೆ, ಸಾರ್ವಜನಿಕರು ಹಾಗೂ ಅಧಿಕಾರಿಗಳು ಧೈರ್ಯವಾಗಿ ಬಂದು ಪೊಲೀಸ್ ಇಲಾಖೆಗೆ ದೂರು ನೀಡಬೇಕು. ಅಂತವರ ವಿರುದ್ಧ ಸುಲಿಗೆ ಹಣ ವಸೂಲಿ ಪ್ರಕರಣ ದಾಖಲಿಸಿ, ತಕ್ಷಣವೇ ಬಂಧಿಸಲಾಗುವುದು ಎಂದು ಡಾ. ಕೆ. ರಾಮರಾಜನ್ ತಿಳಿಸಿದ್ದಾರೆ.

ದೂರು ನೀಡಲು ಮುಕ್ತ ಅವಕಾಶ: ಬ್ಲ್ಯಾಕ್‌ಮೇಲ್ ತಂತ್ರಕ್ಕೆ ಹೆದರಿ ಹಣ ನೀಡದೆ, ತಕ್ಷಣವೇ ಹತ್ತಿರದ ಪೊಲೀಸ್ ಠಾಣೆಗೆ ಸಾರ್ವಜನಿಕರು ದೂರು ನೀಡಬಹುದು.

ರೌಡಿಶೀಟರ್ ಪಟ್ಟಿ ಸೇರ್ಪಡೆ: ಮಾಧ್ಯಮದ ಹೆಸರಿನಲ್ಲಿ ವಸೂಲಿಗಿಳಿಯುವ ಕೃತ್ಯ ಮರುಕಳಿಸಿದರೆ ಅಂಥವರ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲಾಗುವುದು. ಮಾಧ್ಯಮ ರಂಗದ ಪಾವಿತ್ರ್ಯತೆಯನ್ನು ಹಾಳುಗೆಡವುತ್ತಾ, ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದ್ದ ನಕಲಿ ಜರ್ನಲಿಸ್ಟ್‌ಗಳ ಸದ್ದಡಗಿಸಲು ಬೆಳಗಾವಿ ಪೊಲೀಸರು ಕೈಗೊಂಡಿರುವ ಈ ನಿರ್ಧಾರಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಶ್ಲಾಘನೆ ವ್ಯಕ್ತವಾಗುತ್ತಿದೆ.

ಖಡಕ್ ನಿಗಾ: ಸಾಮಾಜಿಕ ಜಾಲತಾಣಗಳಲ್ಲಿ ಬ್ಲ್ಯಾಕ್‌ಮೇಲ್ ಉದ್ದೇಶದಿಂದಲೇ ಪೋಸ್ಟ್ ಹಾಗೂ ವಿಡಿಯೊ ಹಾಕುವವರ ಮೇಲೆ ಸೈಬರ್ ಕ್ರೈಂ ವಿಭಾಗ ತೀವ್ರ ನಿಗಾ ಇರಿಸಲಿದೆ.

ನಕಲಿಗಳಿಗೆ ಗೇಟ್‌ಪಾಸ್ !

ಸುದ್ದಿಗೋಷ್ಠಿಯಿಂದ ನಕಲಿಗಳ 'ಹೊರದಬ್ಬಲು' ಆದೇಶಿಸಿದರು. ಸಾಮಾಜಿಕ ಜಾಲತಾಣಗಳ ಹೆಸರಿನಲ್ಲಿ ಅಧಿಕೃತ ಪತ್ರಕರ್ತರ ಸೋಗಿನಲ್ಲಿ ಬರುವ ನಕಲಿಗಳಿಗೆ ಇನ್ಮುಂದೆ ಪೊಲೀಸ್ ಇಲಾಖೆಯ ಗೇಟ್ ಒಳಗೂ ಪ್ರವೇಶವಿರುವುದಿಲ್ಲ. ಇನ್ಮುಂದೆ ಕೇವಲ ಅಧಿಕೃತ ಹಾಗೂ ಸರ್ಕಾರದ ನಿಯಮಾವಳಿಗಳಡಿ ನೋಂದಾಯಿತವಾಗಿರುವ ಮಾಧ್ಯಮ ಸಂಸ್ಥೆಗಳಿಗೆ ಮಾತ್ರ ಪೊಲೀಸ್ ಇಲಾಖೆಯ ಸುದ್ದಿಗೋಷ್ಠಿ ಮತ್ತು ಮಾಹಿತಿ ವಿನಿಮಯಕ್ಕೆ ಮುಕ್ತ ಅವಕಾಶ ನೀಡಲಾಗುವುದು ಎಂದು ಎಸ್ಪಿ ತಿಳಿಸಿದರು.

ಲಾಟರಿ ಮೂಲಕ ರೈತರಿಗೆ ಶೇಂಗಾ ಬಿತ್ತನೆ ಬೀಜ ವಿತರಣೆ

• **ನೇರಲಿ :** ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ರೈತರಿಗೆ ವಿತರಣೆ ಮಾಡಬೇಕಿದ್ದ ಶೇಂಗಾ ಬಿತ್ತನೆ ಬೀಜವನ್ನು ಪಾರದರ್ಶಕ ರೀತಿಯಲ್ಲಿ ಲಾಟರಿ (ಚೀಟಿ ಎತ್ತುವ) ಪದ್ಧತಿಯ ಮೂಲಕ ವಿತರಿಸಲಾಯಿತು.

ಈ ವರ್ಷ ಶೇಂಗಾ ಬಿತ್ತನೆ ಬೀಜಕ್ಕೆ ಹೆಚ್ಚಿನ ಬೇಡಿಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಎಲ್ಲ ರೈತರಿಗೆ ಸಮಾನ ಅವಕಾಶ ಕಲ್ಪಿಸುವ ಉದ್ದೇಶದಿಂದ ಲಾಟರಿ ಪ್ರಕ್ರಿಯೆ ನಡೆಸಲಾಯಿತು. ರೈತರ ಸಮ್ಮುಖದಲ್ಲಿ ನಡೆದ ಲಾಟರಿ ಮೂಲಕ ಆಯ್ಕೆಯಾದ ಫಲಾನುಭವಿಗಳಿಗೆ ಶೇಂಗಾ ಬಿತ್ತನೆ ಬೀಜವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಉಪಸ್ಥಿತರಿದ್ದರು.





ಯರಗಟ್ಟಿ : ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ-2026 ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ತಾಲೂಕು ದಂಡಾಧಿಕಾರಿಗಳು ಹಾಗೂ ತಹಶೀಲ್ದಾರ್ ಎಂ.ವಿ. ಗುಂಡಪ್ಪಗೋಳ ಅಧ್ಯಕ್ಷತೆಯಲ್ಲಿ ಚಾಲನೆ ನೀಡಲಾಯಿತು.

ಆಂತರಿಕ ನೇಮಕಾತಿ: ಆಕ್ಷೇಪಣೆಗೆ ಆಹ್ವಾನ

• **ಬೆಳಗಾವಿ:** ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೂನ್ 30 ರಂದು ಜರುಗಿದ ಡಿ.ಪಿ.ಸಿ ಸಮಿತಿ ಸಭೆಯ ನಡುವಳಿಯಂತೆ, ಕರ ವಸೂಲಿಗಾರ, ಕ್ಲರ್ಕ/ ಕ್ಲರ್ಕ ಕಂ ಡಾಟಾ ಎಂಟ್ರಿ ಆಪರೇಟರುಗಳ ವೃಂದದಿಂದ ಗ್ರೇಡ್-2 ಕಾರ್ಯದರ್ಶಿ/ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗೆ ಸೇವೆಯೊಳಗೆ ಆಂತರಿಕ ನೇಮಕಾತಿ ಮಾಡಲು ಪರಿಷ್ಕೃತ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಸಂಭವನೀಯ ಪಟ್ಟಿಗಳನ್ನು ಜಿಲ್ಲಾ ಪಂಚಾಯತಿಯ ವೆಬ್ಸೈಟ್ http://zpbelagavi.karnataka.gov.in ಹಾಗೂ ತಾಲೂಕು ಪಂಚಾಯತ ಮತ್ತು ಗ್ರಾಮ ಪಂಚಾಯತ ನೋಟಿಸ್ ಬೋರ್ಡಗಳಿಗೆ ಪ್ರಚುರ ಪಡಿಸಲಾಗಿದೆ. ಸದರಿ ಪರಿಷ್ಕೃತ ತಾತ್ಕಾಲಿಕ ಸಂಭವನೀಯ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಲಿಖಿತವಾಗಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ಜುಲೈ 7 ರಂದು ಸಂಜೆ 5.30 ರೊಳಗಾಗಿ ನೇರವಾಗಿ ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಸಲ್ಲಿಸಬಹುದು.

ಇಂಡಕ್ಷನ್ ಪ್ರೋಗ್ರಾಮ್ ಶುಭಾರಂಭ -2026

ಕಷ್ಟ ಮೆಟ್ಟಿ ನಿಲ್ಲಲು ಕಲಿಯಿರಿ

• **ಸಂಕೇಶ್ವರ :** ಸಮೀಪದ ನಿಡಸೋಶಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಇತ್ತೀಚೆಗೆ ಪ್ರಥಮ ವರ್ಷದ ಇಂಡಕ್ಷನ್ ಪ್ರೋಗ್ರಾಮ್ ಶುಭಾರಂಭ -2026 ಎಂಬ ಕಾರ್ಯಕ್ರಮವು ಜರುಗಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ನಿಡಸೋಸಿಯ ಶ್ರೀ ದುರದುಂಡೀಶ್ವರ ಮಠದ ಡಾ. ಶಿವಲಿಂಗೇಶ್ವರ ಸ್ವಾಮೀಜಿ ಮಾತನಾಡಿ, ಬದುಕಿನಲ್ಲಿ- ವಿದ್ಯಾರ್ಥಿ ಜೀವನದಲ್ಲಿ ಬರುವ ಕಷ್ಟಗಳನ್ನು ಹೇಗೆ ಎದುರಿಸಬೇಕು ಎಂಬುವುದನ್ನು ಆಸ್ಟ್ರೇಲಿಯಾದ ನಿಕ್ ಮತ್ತು ವಿಜ್ಞಾನಿ ಚಂದ್ರಶೇಖರ್ ಅವರ ಜೀವನವನ್ನು ನೋಡಿ ಕಲಿಯಬಹುದೆಂದು ಸಲಹೆ ನೀಡಿದರು.

ಅಥಿತಿಗಳಾದ ನಿವೃತ್ತ ಪ್ರಾಂಶುಪಾಲರಾದ ಡಾ. ಎಂ. ಬಿ. ಹೂಗಾರ ಮಾತನಾಡಿ, ಕವಿ, ಕಾವ್ಯ, ಸಾಮಾಜಿಕ, ಸಾಂಸ್ಕೃತಿಕ ಅನುಭವದಲ್ಲಿ ತಂದೆ, ತಾಯಿ, ಗುರು ಕಲಿತ ಶಿಕ್ಷಣ ಸೌಂಸ್ಥೆಗಳ ಕೊಡುಗೆಯನ್ನು ಸ್ಮರಿಸುತ್ತಾ ವಿದ್ಯಾರ್ಥಿ ಜೀವನದಲ್ಲಿ ಅಳವಡಿಸಿಕೊಳ್ಳುವ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಈ ಸಂಧರ್ಭದಲ್ಲಿ ಪ್ರಾಂಶುಪಾಲಕರಾದ ಬಿ. ಆರ್. ಉಮರಾಣಿ, ನಿವೃತ್ತ ಮುಖ್ಯಾಧ್ಯಾಪಕರಾದ ಬಿ. ಎನ್. ರುದ್ರಾಪುರೆ, ಹಳೆಯ ವಿದ್ಯಾರ್ಥಿ ಡಾ. ನಿಖಿಲ್ ಇನಾಮದಾರ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಸ್ವಾಗತ ಗಾಯನ ಶ್ರೀನಿಧಿ ತಂಡದಿಂದ, ಅತಿಥಿ ಪರಿಚಯ ಎಸ್.ಎಂ. ಬಾಗೇವಾಡಿ ನೆರವೇರಿಸಿದರು. ಪ್ರೊ. ಎ. ಕೆ. ಅಂಗಡ ಸ್ವಾಗತಿಸಿದರು. ಪ್ರೊ. ಯು. ಎಸ್. ಗುಡ್ನವರ ಮತ್ತು ಪ್ರೊ. ಎಸ್ .ಐ. ಬೆಳವಿ ಕಾರ್ಯಕ್ರಮವನ್ನು ನಡೆಸಿ ಕೊಟ್ಟರು.



ಶಾಲೆಗೆ ತಟ್ಟೆ, ಗ್ಲಾಸ್ ನೀಡಿದ ಹಳೆಯ ವಿದ್ಯಾರ್ಥಿಗಳು

• **ಅಡಹಳ್ಳಿ :** ತಾವು ಓದಿ ಬೆಳೆದ ಶಾಲೆಯನ್ನು ಮರೆಯದೆ ಅದರ ಸರ್ವ ತೋಮುಖ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳು ಕೈ ಜೋಡಿಸಿದಾಗ ಸರ್ಕಾರಿ ಶಾಲೆಗಳು ಪ್ರಗತಿ ಪಥದತ್ತ ಸಾಗುತ್ತವೆ ಎಂದು ಮುಖ್ಯೋಪಾಧ್ಯಯ ಐ. ಎಸ್. ಹಂಪಣ್ಣವರ ಹೇಳಿದರು.

ಅವರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 2000ನೇ ಬ್ಯಾಚಿನ ವಿದ್ಯಾ ಪೋಷಕ ಗೆಳೆಯರ ಬಳಗ ವತಿಯಿಂದ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ತಟ್ಟೆ ಹಾಗೂ ಗ್ಲಾಸ್ ವಿತರಣಾ ಸಭೆಯಲ್ಲಿ ಮಾತನಾಡಿ, ತಾವು ಓದಿದ ಹಳೇ ಶಾಲೆ ಮರೆಯದೆ ಶಾಲೆಯ ಅಭಿವೃದ್ಧಿಗೆ ಮುಂದಾಗಿರುವುದು ಸ್ವಾಗತಾರ್ಹ ಎಂದರು.

ಶಾಲೆಯ ಹಳೆಯ ವಿದ್ಯಾರ್ಥಿ ಕಿರಣ ಕೆಂಚಣ್ಣವರ ಮಾತನಾಡಿದರು.

ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಪ್ರಕಾಶ ಪೂಜಾರಿ, ಫೂಳಪ್ಪ ಹಿಪ್ಪರಗಿ, ಕನ್ಯಾಕುಮಾರಿ ಹಿಪ್ಪರಗಿ ಮಾತನಾಡಿದರು, ಶಿಕ್ಷಕರಾದ ಸಂಜಯ ಪಾಯಗೌಡರ,. ಎಸ್. ಎ. ಅಸ್ಕಿ, ಟಿ. ಎಸ್. ಮಾದರ, ಆರ್. ಎಸ್. ಬಜಂತ್ರಿ, ಎ. ಎ. ಅಸ್ಕಿ, ಆರ್. ಎಚ್. ಕೋಳಿ, ರಾಜು ಕೆಂಚಣ್ಣವರ. ಜಗದೀಶ ಸೂರ್ಯವಂಶಿ, ಅಜಿತ ಪೂಜಾರಿ, ಮಂಜುನಾಥ ಸೂರ್ಯವಂಶಿ, ಅಪ್ಪಾಸಾಬ ಕೊಹಳ್ಳಿ, ಮುತ್ತಪ್ಪ ಕಾಂಬಳೆ, ಗೋಪಾಲ ಕಲಮಡಿ, ಸುಭಾಷ ಸಿಂದೂರ, ಸುರೇಶ ಗುರುಪಾದಗೋಳ ಕುಡ್ಲಪ್ಪ ಕುಂಬಾರ, ಸಿದ್ದಲಿಂಗ ಪೂಜಾರಿ, ವೆಂಕಯ್ಯ ಪೂಜಾರಿ, ಪಾರ್ವತಿ ತಾಂವಶಿ, ಲಕ್ಷ್ಮೀ ಪೂಜಾರಿ ಸೇರಿದಂತೆ ಅನೇಕರು ಇದ್ದರು.



ಕೂಲಿ ಮೊತ್ತ ಹೆಚ್ಚಳ

ವಿಬಿ-ಜಿ ರಾಮ್ ಜಿ' ಯೋಜನೆ ಜಾರಿ




• **ಬೆಳಗಾವಿ:** ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಆ್ಯಂಡ್ ಅಜೀವಿಕಾ ಮಿಷನ್ ಯೋಜನೆಯು ಜು.1 ರಿಂದ ಜಾರಿಯಾಗಿದ್ದು, ಈ ಹಿಂದೆ ಕೂಲಿಕಾರರಿಗೆ ನಿಗದಿಪಡಿಸಲಾಗಿದ್ದ ಕೂಲಿ ಮೊತ್ತವನ್ನು ಕೂಡ ಹೆಚ್ಚಳ ಮಾಡಲಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಈ ಹಿಂದೆ ಒಬ್ಬ ಕೂಲಿಕಾರರಿಗೆ ಪ್ರತಿ ದಿನಕ್ಕೆ ರೂ.370 ಇದ್ದ ಕೂಲಿ ದರವನ್ನು ರೂ.12 ಹೆಚ್ಚಿಸಲಾಗಿದ್ದು, ಜು.1 ರಿಂದ ರೂ.382 ಕೂಲಿ ದರ ನಿಗದಿಪಡಿಸಲಾಗಿದೆ. ಪ್ರತಿ ಕುಟುಂಬಕ್ಕೆ ವರ್ಷಕ್ಕೆ 100 ದಿನಗಳ ಬದಲಾಗಿ ಈಗ 125 ದಿನಗಳವರೆಗೆ ಉದ್ಯೋಗ ನೀಡಲಾಗುವುದು. ಕೂಲಿಕಾರರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಶೇ.99.44 ರಷ್ಟು ಸಕ್ರಿಯ ಕೂಲಿಕಾರರ ಇ-ಕೆವೈಸಿ: ಜಿಲ್ಲೆಯಲ್ಲಿ ಶೇ.99.44 ರಷ್ಟು ಸಕ್ರಿಯ ಕೂಲಿಕಾರರ ಇ-ಕೆವೈಸಿಯನ್ನು ಈಗಾಗಲೇ ಕೈಗೊಳ್ಳಲಾಗಿದೆ. ಅದೇ ರೀತಿ ಶೇ.89.78 ರಷ್ಟು ನೋಂದಾಯಿತ ಎಲ್ಲ ಕೂಲಿಕಾರರ ಇ-ಕೆವೈಸಿಯನ್ನು ಕೂಡ ಕೈಗೊಳ್ಳಲಾಗಿದೆ. ವಲಸೆ ಹಾಗೂ ತಾಂತ್ರಿಕ ಕಾರಣದಿಂದ ಕೆಲವು ಕೂಲಿಕಾರರ ಇ-ಕೆವೈಸಿ ಬಾಕಿ ಇದ್ದು, ಅದಕ್ಕೂ ಕ್ರಮವಹಿಸಲಾಗುತ್ತಿದೆ. ಇದರಿಂದ ಕೂಲಿಕಾರರ ಎನ್‌ಎಂಎಂಎಸ್ ಹಾಜರಾತಿಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಕಂಡುಬರಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಕೌಶಲ್ಯ ವೃದ್ಧಿಸಿಕೊಳ್ಳಿ: ಪ್ರಕಾಶ



• **ಗೋಕಾಕ:** ಇಂದಿನ ತಾಂತ್ರಿಕ ಯುಗದಲ್ಲಿ ತಮ್ಮಲ್ಲಿರುವ ಕೌಶಲ್ಯಗಳನ್ನು ವೃದ್ಧಿಸಿಕೊಂಡು ಪ್ರತಿಭಾನ್ವಿತರಾಗಿರೆಂದು ರಾಯಚೂರಿನ ಕೆಪಿಸಿಎಲ್‌ನ ಸಹಾಯಕ ಅಭಿಯಂತ ಪ್ರಕಾಶ ತುಳಜನ್ನವರ ಹೇಳಿದರು.

ಅವರು ಬುಧವಾರ ನಗರದ ಕೆಎಲ್‌ಇ ಐಟಿಐ ಕಾಲೇಜಿನ ವಾರ್ಷಿಕೋತ್ಸವ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭ ಉದ್ಘಾಟಿಸಿ ಮಾತನಾಡಿ, ಪ್ರತಿಭಾನ್ವಿತರಿಗೆ ಹೆಚ್ಚಿನ ಉದ್ಯೋಗವಕಾಶಗಳಿವೆ. ಕಠಿಣ ಪರಿಶ್ರಮದಿಂದ ಪ್ರಯತ್ನಶೀಲರಾದರೆ ಯಶಸ್ಸು ನಿಶ್ಚಿತ. ವೃತ್ತಿಪರ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸ್ವಯಂ ಉದ್ಯೋಗದೊಂದಿಗೆ ಇತರ ಕ್ಷೇತ್ರದಲ್ಲೂ ಉದ್ಯೋಗಗಳು ದೊರೆಯುತ್ತವೆ. ತಮ್ಮಲ್ಲಿಯ ಪ್ರತಿಭೆಯ ಸದುಪಯೋಗದಿಂದ ತಮ್ಮ ಬದುಕನ್ನು ರೂಪಿಸಿಕೊಳ್ಳುವಂತೆ ಕರೆ ನೀಡಿದರು. ಪ್ರಾಚಾರ್ಯ ಮಂಜುನಾಥ ಕಂಬಾರ ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ತರಬೇತಿ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ವಿವಿಧ ಕಂಪನಿಗಳಲ್ಲಿ ಉದ್ಯೋಗಗಳು ದೊರೆಯುತ್ತಿವೆ ಎಂದರು. ವೇದಿಕೆಯ ಮೇಲೆ ಸ್ಥಳೀಯ ಕೆಎಲ್‌ಇ ಆಡಳಿತ ಮಂಡಳಿ ಅಧ್ಯಕ್ಷ ಎಮ್ ಡಿ ಚುನಮರಿ, ಆಡಳಿತಾಧಿಕಾರಿ ಜಿ ಎಮ್ ಅಂದಾನಿ ಇದ್ದರು. ಕೆ ವಿ ಕುಲಕರ್ಣಿ ಸ್ವಾಗತಿಸಿದರು. ಪ್ರೇಮಾ ಎಮ್ ಎಸ್ ವಂದಿಸಿದರು.

ಎಸ್‌ಐಆರ್‌ಗೆ ಚಾಲನೆ

• **ರಾಮದುರ್ಗ:** ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)-2026 ಮನೆ ಮನೆಗೆ ಭೇಟಿ ಗಣತಿ ನಮೂನೆಯನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಸನ್ ನಯಿಂ ಸುರಕೋಡರಿಗೆ ಮತದಾರ ನೋದಣಿ ಅಧಿಕಾರಿ ಪ್ರಶಾಂತ ಹನಗಂಡಿ ಹಾಗೂ ತಹಶೀಲ್ದಾರ ಪ್ರಕಾಶ ಗಾಯಕವಾಡ ವಿತರಿಸುವ ಮೂಲಕ ಚಾಲನೆ ನೀಡಿದರು.

ಶಾಸಕ, ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಮತ್ತು ಮಾಜಿ ಶಾಸಕ ಮಹಾದೇವಪ್ಪ ಯಾದವಾಡರ ಮನೆಗೆ ಭೇಟಿ ನೀಡಿ ನಮೂನೆ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಿಡಿಪಿಓ ಶಂಕರ ಕುಂಬಾರ, ಕಂದಾಯ ನಿರೀಕ್ಷಕ ಮಹೇಶ ಟೆಂಗಿನಕಾಯಿ ಮತ್ತು ಗ್ರಾಮ ಆಡಳಿತಾಧಿಕಾರಿ ಮೋಹನ ಬನನ್ನವರ ಇದ್ದರು.



ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ



• **ಯರಗಟ್ಟಿ:** ಪತ್ರಕರ್ತರು ಯಾವುದೇ ಪ್ರಭಾವಕ್ಕೆ ಒಳಗಾಗದೆ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ತಹಶೀಲ್ದಾರ ಎಮ್.ವಿ.ಗುಂಡಪ್ಪಗೋಳ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ತಾಲೂಕ ಮಟ್ಟದ ಕಂದಾಯ, ವೈದ್ಯರ ಮತ್ತು ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸುದ್ದಿಗಳ ಪ್ರಸಾರದಲ್ಲಿ ಸತ್ಯ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಹೊಣೆಗಾರಿಕೆ ಆದ್ಯತೆ ಇರಬೇಕು ಎಂದು ಹೇಳಿದರು. ಚುನಾವಣೆ ಇಲಾಖೆ ಶಿರಸ್ತೇದಾರ ಎಸ್.ಬಿ.ಕುಲಕರ್ಣಿ ಮಾತನಾಡಿದರು. ತಹಶೀಲ್ದಾರ ಎಮ್.ವಿ.ಗುಂಡಪ್ಪಗೋಳ, ವೈದ್ಯರು ಡಾ.ಸಚೀನ ಉಪ್ಪಿನ, ಡಾ.ವಿಜಯ ಬೆನಕಟ್ಟಿ ಹಾಗೂ ಪತ್ರಕರ್ತರು ಶಿವಾನಂದ ಬಳಿಗಾರ, ಕೆ.ಎಫ್.ನದಾಫ, ಈರಣ್ಣ ಹೂಲ್ಲೂರ, ರವಿಕುಮಾರ ಅಣ್ಣಿಗೇರಿ, ಫಿರೋಜ ಖಾದ್ರಿ, ಶಶಿಧರ ಪಾಟೀಲ, ಬಸವರಾಜ ದಳವಾಯಿ, ಮಹಾಂತೇಶ ಗಿಲಾಕಿ, ಜಗದೀಶ ಕೌಜಲಗಿ, ಮಲ್ಲೇಶ ದಳವಾಯಿ, ಪ್ರದೀಪ ಮಠಪತಿ ಅವರನ್ನು ಸನ್ಮಾನಿಸಿದರು. ಗ್ರಾಮ ಆಡಳಿತಾಧಿಕಾರಿ ಎಲ್.ಬಿ.ದಳವಾಯಿ, ಯಲ್ಲಪ್ಪ ಬಾಂಗಿ, ಕೆ.ಎಂ.ಗಡಕರಿ, ಸ್ವರೂಪ ಹಪ್ಪಳಿ, ಲಖನ್ ಪೂಜೇರಿ, ವಿಜಯ ಉಪ್ಪಿನ, ರಾಜು ಜೇವಾಪೂರ, ಮಂಜು ಬಡಿಗೇರ, ರವಿ ತಳವಾರ, ಎಲ್.ಸಿ.ತಳವಾರ ಹಾಗೂ ಸಿಬ್ಬಂದಿ, ಪತ್ರಕರ್ತರು ಇದ್ದರು.

ದೇಸಿ ಪ್ರಮಾಣ ಪತ್ರ ವಿತರಣೆ

• **ಮೂಡಲಗಿ:** ರೈತನೇ ದೇವರು ಆದ್ದರಿಂದ ರೈತನ ಜೀವನದ ಆರ್ಥಿಕ ವ್ಯವಸ್ಥೆ ಸುಧಾರಿಸುವಲ್ಲಿ ಕೃಷಿ ಪರಿಕರಗಳಾದ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಸರಿಯಾದ ಪ್ರಮಾಣ ಹಾಗೂ ಸೂಕ್ತ ಸಮಯದಲ್ಲಿ ಕ್ರಮ ಕೈಗೊಳ್ಳುವುದರಿಂದ ಸುಸ್ಥಿರ ಕೃಷಿಗೆ ನಾಂದಿ ಎಂದು ತಿಳಿಸಿದರು.


ಸಮೀಪದ ಅರಭಾವಿಯ ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಗಳ ಡಿಪ್ಲೋಮಾದ 4ನೇ ತಂಡದ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಧಾರವಾಡದ ರಾಜ್ಯ ನೋಡಲ್ ಅಧಿಕಾರಿ ದೇಸಿ ಹಾಗೂ ಸಂಯೋಜಕ ಸಮೇತಿ (ಉತ್ತರ) ಕೃಷಿ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ. ಎಸ್. ಎನ್.ಜಾಧವ, ಸಹಾಯಕ ಕೃಷಿ ನಿರ್ದೇಶಕ ಎಂ.ಎಂ.ನದಾಫ್, ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಆನಂದ ಬ. ಮಾಸ್ತಿಹೊಳಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ವೇಳೆ ಗೀತಾ ಲೋಳಸೂರಮಠ, ಡಾ. ದಿಲೀಪಕುಮಾರ ಮಸೂತಿ ಇದ್ದರು. ಪ್ರಭಾವತಿ ಅಂಗಡಿ ನಿರೂಪಿಸಿ ವಂದಿಸಿದರು.



36 ಅಭ್ಯರ್ಥಿಗಳಿಗೆ ತರಬೇತಿ

ಕಿರುಸುದ್ದಿ

ಎಲ್ಲರೂ ಎಸ್‌ಐಆರ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿ: ಶಾಸಕ ಹಲಗೇಕರ



ಖಾನಾಪುರ: 18 ವರ್ಷ ತುಂಬಿದ ತಾಲೂಕಿನ ಪ್ರತಿಯೊಬ್ಬ ನಾಗರಿಕರೂ ಸದ್ಯ ಚುನಾವಣಾ ಆಯೋಗದಿಂದ ನಡೆಯುತ್ತಿರುವ ಮತದಾರರ ವಿಶೇಷ ಪರಿಷ್ಕರಣೆಯ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಶಾಸಕ ವಿಠ್ಠಲ ಹಲಗೇಕರ ಹೇಳಿದರು. ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಗುರುವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ''ಈಗಾಗಲೇ ಭಾರತೀಯ ಜನತಾ ಪಕ್ಷದ ವತಿಯಿಂದ ಪ್ರತಿ ಮತಗಟ್ಟೆಯಲ್ಲಿ ಬೂತ್ ಮಟ್ಟದ ಏಜೆಂಟರನ್ನು ನೇಮಕಮಾಡಲಾಗಿದೆ. ಬೂತ್ ಮಟ್ಟದ ಏಜೆಂಟರು ಮತದಾರರ ಮನೆ-ಮನೆಗೆ ತೆರಳಿ ವಿಶೇಷ ಪರಿಷ್ಕರಣೆಯ ಬಗ್ಗೆ ಮಾಹಿತಿ-ಮಾರ್ಗದರ್ಶನ ಮಾಡಲಿದ್ದಾರೆ. ಉದ್ಯೋಗ ಪ್ರಯುಕ್ತ ತಾಲೂಕಿನಿಂದ ಹೊರಗೆ ಹೋಗಿರುವ ಮತದಾರರು ಪರಿಷ್ಕರಣೆಯ ಸಂದರ್ಭದಲ್ಲಿ ತಮ್ಮ ಸ್ವಸ್ಥಾನಗಳಿಗೆ ಮರಳಿ ಮತಗಟ್ಟೆ ಅಧಿಕಾರಿಗಳಿಗೆ ದಾಖಲೆ, ಭಾವಚಿತ್ರ ಒದಗಿಸಬೇಕು ಮತ್ತು ಮತಗಟ್ಟೆ ಅಧಿಕಾರಿ ನೀಡುವ ನಮೂನೆಯನ್ನು ಓದಿ ಸಹಿ ಮಾಡಿ ಕೊಡಬೇಕು'' ಎಂದು ಕೋರಿದರು. ಈ ಸಂದರ್ಭದಲ್ಲಿ ಪಕ್ಷದ ಬ್ಲಾಕ್ ಅಧ್ಯಕ್ಷ ಬಸವರಾಜ ಸಾಣಿಕೊಪ್ಪ, ಮಾಜಿ ಶಾಸಕ ಅರವಿಂದ ಪಾಟೀಲ, ಮುಖಂಡರಾದ ಬಾಬುರಾವ್ ದೇಸಾಯಿ, ಜ್ಯೋತಿಬಾ ರೇಮಾಣಿ, ಸದಾನಂದ ಪಾಟೀಲ, ಧನಶ್ರೀ ದೇಸಾಯಿ, ಚೇತನ ಮನೇರಿಕರ, ಮಲ್ಲಪ್ಪ ಮಾರಿಹಾಳ, ಶ್ರೀಕಾಂತ ಇಟಗಿ, ಸುನೀಲ ಮಡ್ಡಿಮನಿ, ಶಿವಾನಂದ ಚಲವಾದಿ, ಸಂಜಯ ಕುಬಲ ಮತ್ತಿತರರು ಇದ್ದರು.

ಜು.5ರಂದು ಮತ್ತೆ ಸಭೆ

ಹಿರೇ ಬಾಗೇವಾಡಿ: ಹಿರೇ ಬಾಗೇವಾಡಿ ಮಾರ್ಗವಾಗಿ ನಿರ್ಮಾಣವಾಗುತ್ತಿರುವ ಬೆಳಗಾವಿ ಧಾರವಾಡ ಹೊಸ ರೈಲು ಮಾರ್ಗದಿಂದ ಭೂಮಿ ಕಳೆದುಕೊಳ್ಳುತ್ತಿರುವ ರೈತರ ಸಭೆ ಬುಧವಾರ ಸಂಜೆ ಇಲ್ಲಿಯ ಪಡಿಬಸವೇಶ್ವರ ದೇವಸ್ಥಾನದಲ್ಲಿ ನಡೆಯಿತು. ಭೂಮಿ ಕಳೆದುಕೊಳ್ಳುತ್ತಿರುವ ರೈತರಿಗೆ ಸರ್ಕಾರದಿಂದ ಸೂಕ್ತವಾದ ಬೆಲೆ ಸಿಗದಿರುವ ಕಾರಣ ಯೋಗ್ಯ ಬೆಲೆ ಕೊಡುವಂತೆ ಸರ್ಕಾರಕ್ಕೆ ಆಗ್ರಹಿಸಲು ರೈತರು ಚರ್ಚಿಸಿದರು. ಉಗ್ರವಾಗಿ ಹೋರಾಟ ನಡೆಸಿ ಸರ್ಕಾರದಿಂದ ಸೂಕ್ತ ಬೆಲೆ ಪಡೆದುಕೊಳ್ಳುವಂತೆ ಚರ್ಚಿಸಲಾಯಿತು. ಅದರಂತೆ ಜುಲೈ 5ರಂದು ಇದೆ ಪಡಿ ಬಸವೇಶ್ವರ ದೇವಸ್ಥಾನದಲ್ಲಿ ಸಂಜೆ 4 ಗಂಟೆಗೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಚುನ್ನಪ್ಪ ಪೂಜಾರಿ ಹಾಗೂ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಮತ್ತು ಇನ್ನೂ ಹಲವಾರು ರೈತ ಮುಖಂಡರ ಪೂರ್ವಭಾವಿ ಸಭೆಯನ್ನು ನಡೆಸಲು ನಿರ್ಧರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿರುವಂತೆ ರೈತರಿಗೆ ಕರೆ ನೀಡಲಾಯಿತು. ಹಿರೇಬಾಗೇವಾಡಿ ಸೇರಿದಂತೆ ಸುತ್ತಲಿನ ಕೆ.ಕೆ. ಕೊಪ್ಪ, ಮುತ್ನಾಳ, ಚನ್ನಮ್ಮನ ಕಿತ್ತೂರು, ಎಂ.ಕೆ. ಹುಬ್ಬಳ್ಳಿ, ಕಲಾರಕೊಪ್ಪ, ಬಸಾಪುರ, ಹುಣಸಿಕಟ್ಟಿ, ಕಾದ್ರೊಳ್ಳಿ ಇತ್ಯಾದಿ ಗ್ರಾಮಗಳಿಂದ ಬಂದ ರೈತರು ಚರ್ಚೆಯಲ್ಲಿ ಭಾಗವಹಿಸಿದ್ದರು. ಶಶಿಧರ ರೊಟ್ಟಿ ಸುರೇಶ ಗುರುವಣ್ಣವರ, ಬಸವರಾಜ ಕಡೆಮನಿ, ಪಡಿಗೌಡ ಪಾಟೀಲ, ಗೌಸಮೊದ್ದೀನ್ ಜಾಲಿ ಕೊಪ್ಪ, ಎಸ್ ಎಸ್ ಅರಳಿಕಟ್ಟಿ ಮುರುಗೋಡ, ಕಪಲಿ ಸೇರಿದಂತೆ ಹಲವಾರು ಜನ ರೈತರು ಉಪಸ್ಥಿತರಿದ್ದರು.

ಕಣಕುಂಬಿ ಅರಣ್ಯದಲ್ಲಿ ಸರಾಸರಿ 6 ಸೆಂ.ಮೀ ಮಳೆ

ಖಾನಾಪುರ: ಕಳೆದ 24 ಗಂಟೆಗಳ ಅವಧಿಯಲ್ಲಿ ಈ ವರ್ಷದ ಮುಂಗಾರು ಮಳೆ ತಾಲೂಕಿಗೆ ಅಧಿಕೃತವಾಗಿ ಕಾಲಿರಿಸಿದೆ. ತಾಲೂಕಿನ ಜೋಯಿಡಾ ಘಟ್ಟ ಪ್ರದೇಶ, ಕಣಕುಂಬಿ, ಜಾಂಬೋಟಿ, ಹೆಮ್ಮಡಗಾ, ನಾಗರಗಾಳಿ, ಲೋಂಡಾ, ಗುಂಜಿ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿಯಿಂದೀಚೆಗೆ ಉತ್ತಮ ಪ್ರಮಾಣದಲ್ಲಿ ಮಳೆ ಸುರಿಯಲಾರಂಭಿಸಿದೆ. ತಾಲೂಕಿನ ನಾಗರಗಾಳಿಯಲ್ಲಿ 5 ಸೆಂ.ಮೀ, ಲೋಂಡಾ ಸುತ್ತಮುತ್ತ 4.5 ಸೆಂ.ಮೀ, ಗುಂಜಿ ಸುತ್ತಮುತ್ತ 4 ಸೆಂ.ಮೀ, ಪಾರವಾಡ ಅರಣ್ಯದಲ್ಲಿ 7 ಸೆಂ.ಮೀ, ಕಣಕುಂಬಿಯಲ್ಲಿ 6 ಸೆಂ.ಮೀ ಭೀಮಗಡ ಅರಣ್ಯದಲ್ಲಿ 6.5 ಸೆಂ.ಮೀ ಸೇರಿದಂತೆ ಸರಾಸರಿ 6 ಸೆಂ.ಮೀ ಪ್ರಮಾಣದಲ್ಲಿ ಮಳೆಯಾಗಿದೆ. ಕಳೆದ 24 ಗಂಟೆಗಳಿಂದ ತಾಲೂಕಿನ ಅರಣ್ಯ ಪ್ರದೇಶದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆ ಮತ್ತು ಜೋರಾಗಿ ಬೀಸುತ್ತಿರುವ ಗಾಳಿಯ ಕಾರಣ ಕಣಕುಂಬಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ. ಉತ್ತಮ ವರ್ಷಧಾರೆಯ ಕಾರಣ ಮಲಪ್ರಭಾ, ಪಾಂಡರಿ ಮತ್ತು ಮಹದಾಯಿ ನದಿಗಳು ಮತ್ತು ಅವುಗಳ ಜಲಮೂಲಗಳಲ್ಲಿ ನೀರು ಹರಿಯಲಾರಂಭಿಸಿದೆ.

» ಜೋರಾದ ಗಾಳಿ
» ವಿದ್ಯುತ್ ವ್ಯತ್ಯಯ



ಯರಗಟ್ಟಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಗುರುವಾರ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಅವರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.ಈ ಸಂದರ್ಭದಲ್ಲಿ ಡಾ. ಫ.ಗು. ಹಳಕಟ್ಟಿ ಅವರ ಭಾವಚಿತ್ರಕ್ಕೆ ತಹಶೀಲ್ದಾರ್ ಎಮ್. ವ್ಹಿ. ಗುಂಡಪ್ಪಗೋಳ ಅವರು ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಉಪ ತಹಶೀಲ್ದಾರ ಎಸ್. ಎಸ್. ಜಾಧವ, ಸ್ವರೂಪ ಚಪಳಿ, ಕೆ. ಎಂ. ಗಡಕರಿ, ಲಖನ ಪೂಜೇರ, ಎಲ್. ಸಿ. ತಳವಾರ, ಶಾಹೀನ ಮೀತ್ರಕೋಟಿ, ವಿಜಯ ಉಪ್ಪಿನ, ಮಂಜುನಾಥ ಬಡಿಗೇರ, ರವಿ ತಳವಾರ ಇದ್ದರು.

ಪತ್ರಕರ್ತರ ಕಾರ್ಯ ಶ್ಲಾಘನೀಯ

ಸವದತ್ತಿ: ತಮ್ಮ ವೈಯಕ್ತಿಕ ನೋವನ್ನು ಮರೆಮಾಚಿ ಸಮಾಜದ ಸಮಸ್ಯೆ ನಿವಾರಣೆಗೆ ಮುಂದಡಿ ಇಡುವ ಪತ್ರಕರ್ತರ ಕಾರ್ಯ ಶ್ಲಾಘನೀಯ ಎಂದು ಬಿಜೆಪಿ ಮುಖಂಡ ವಿರೂಪಾಕ್ಷಪ್ಪ ಕ ಮಾಮನಿಯವರು ಹೇಳಿದರು.

ಪಟ್ಟಣದ ತಮ್ಮ ಕಾರ್ಯಾಲಯದಲ್ಲಿ ಪತ್ರಿಕಾ ದಿನಾಚರಣೆಯ ನಿಮಿತ್ತ ಸ್ಥಳೀಯ ಎಲ್ಲಾ ಪತ್ರಕರ್ತರಿಗೆ ಮಾಮನಿ ಫೌಂಡೇಶನ್ ವತಿಯಿಂದ ಸನ್ಮಾನಿಸಿ ಗೌರವಿಸಿ ಮಾತನಾಡಿದ ಅವರು, ಪತ್ರಕರ್ತರು ಅಧಿಕಾರಿಗಳ ಮತ್ತು ಸಾರ್ವಜನಿಕರ ನಡುವೆ ಕೊಂಡಿಯಾಗಿ ಸೇವೆ ಸಲ್ಲಿಸಿ ಎಲ್ಲರಿಗೂ ಮಾರ್ಗದರ್ಶನ ಮಾಡುವಂತಹ ಉತ್ತಮವಾದ ವರದಿಗಳನ್ನು ಪ್ರತಿಕೆಗಳಿಗೆ ನೀಡುತ್ತಿದ್ದಾರೆ. ಇಂತಹ ಪತ್ರಕರ್ತರಿಗೆ ಬೆಂಬಲವಾಗಿ ನಿಲ್ಲುವುದರ ಜೊತೆಗೆ ಮಾಮನಿ ಫೌಂಡೇಶನ್ ವತಿಯಿಂದ ಸಹಾಯ ಸೌಲಭ್ಯಗಳನ್ನು ಒದಗಿಸುವುದಾಗಿ ಹೇಳಿದರು.

ಬಸವರಾಜ ಪುಟ್ಟಿ ಮಾತನಾಡಿ, ಬಹಳಷ್ಟು ವರ್ಷಗಳಿಂದ ಪತ್ರಿಕೆಯನ್ನೇ ನಂಬಿ ಬದುಕುತ್ತಿರುವ ಪತ್ರಕರ್ತರು ತಮ್ಮ ನಿಜ ಜೀವನದಲ್ಲಿ ತೊಂದರೆಗಳನ್ನು ಅನುಭವಿಸಿ ಅದನ್ನು ಯಾರ ಮುಂದೆ ಹೇಳಲಾರದೆ ಕಷ್ಟ ನಷ್ಟಗಳನ್ನೇ ಅನುಭವಿಸಿ ಜೀವನ ಸಾಗಿಸುತ್ತಿದ್ದಾರೆ ಎಂದರು. ಶಿವಾನಂದ ತಾರಿಹಾಳ ಮಾತನಾಡಿದರು.

ವೇದಿಕೆಯ ಮೇಲೆ ರಾಜಶೇಖರ ಕಾರದಗಿ, ರಾಜು ನೀಡವಣಿ, ಮಹಾರಾಜಗೌಡ ಪಾಟೀಲ, ಗುರಪ್ಪ ಚಿಕ್ಕುಂಬಿ, ಪುಂಡಲೀಕ ಮಾದರ, ಒಂಟಗುಡಿ ಮಲ್ಲಿಕಾರ್ಜುನ ಸಿಂತ್ರಿ ಉಪಸ್ಥಿತರಿದ್ದರು.



ಸವದತ್ತಿ: ಪತ್ರಿಕಾ ದಿನಾಚರಣೆ ನಿಮಿತ್ತ ಸ್ಥಳೀಯ ಪತ್ರಕರ್ತರನ್ನು ತಮ್ಮ ಕಾರ್ಯಾಲಯದಲ್ಲಿ ಬಿಜೆಪಿ ಮುಖಂಡ ವಿರೂಪಾಕ್ಷಪ್ಪ ಕ ಮಾಮನಿಯವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ರಾಜಶೇಖರ ಕಾರದಗಿ, ರಾಜು ನೀಡವಣಿ, ಮಹಾರಾಜಗೌಡ ಪಾಟೀಲ್, ಗುರಪ್ಪ ಚಿಕ್ಕುಂಬಿ, ಪುಂಡಲಿಕ್ ಮಾದರ, ಒಂಟಗುಡಿ ಮಲ್ಲಿಕಾರ್ಜುನ ಸಿಂತ್ರಿ ಇದ್ದರು.

ಹತ್ತರಗಿ ಸುಕ್ಷೇತ್ರದ ಗುರುಸಿದ್ಧ ಸ್ವಾಮೀಜಿ ಅಭಿಪ್ರಾಯ

ಪತ್ರಿಕೆ ಸಮಾಜದ ಕಣ್ಣು-ಕಿವಿ

ಯಮಕನಮರಡಿ: ಪತ್ರಿಕಾರಂಗವು ಸಮಾಜದ ಕಣ್ಣು ಹಾಗೂ ಕಿವಿಯಾಗಿದ್ದು, ಸತ್ಯ, ನ್ಯಾಯ ಮತ್ತು ಜನಪರ ಮೌಲ್ಯಗಳನ್ನು ಎತ್ತಿಹಿಡಿಯುವ ಮಹತ್ವದ ಜವಾಬ್ದಾರಿಯನ್ನು ಹೊತ್ತಿದೆ ಎಂದು ಹತ್ತರಗಿ ಕಾರಿಮಠದ ಗುರುಸಿದ್ಧ ಸ್ವಾಮೀಜಿ ಹೇಳಿದರು.

ಅವರು ಬುಧವಾರ ಸಮೀಪದ ನಾಗನೂರ ಕೆ.ಎಂ. ಸರ್ಕಾರಿ ಪ್ರೌಢ ಶಾಲೆಯಲ್ಲಿ ಯಮಕನಮರಡಿ ಪತ್ರಕರ್ತರ ಬಳಗ ಹಾಗೂ ಹುಕ್ಕೇರಿ ಸಾಮಾಜಿಕ ಅರಣ್ಯ ಇಲಾಖೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾ ದಿನಾಚರಣೆ ಹಾಗೂ ಪರಿಸರ ದಿನಾಚರಣೆ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಸಚಿವ ಸತೀಶ ಜಾರಕಿಹೊಳಿ ಅವರು ಶೈಕ್ಷಣಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದು, ಅಭಿವೃದ್ಧಿಗೊಂಡ ಶಾಲೆಯಲ್ಲಿ ಪತ್ರಿಕಾ ದಿನಾಚರಣೆ ನಡೆಯುತ್ತಿರುವುದು ಸಂತೋಷ ತಂದಿದೆ ಎಂದರು. ಪತ್ರಕರ್ತರು ಯಾವುದೇ ನಿರೀಕ್ಷೆಯಿಲ್ಲದೆ ನಿಷ್ಪಕ್ಷಪಾತವಾಗಿ ಸಮಾಜ ಸೇವೆ ಸಲ್ಲಿಸುತ್ತಿದ್ದು, ಅವರ ಸೇವೆಯನ್ನು ಗೌರವಿಸಬೇಕು ಎಂದರು.

ಯಮಕನಮರಡಿಯ ಹರಿ ಮಂದಿರದ ಆನಂದ ಗೋಸಾವಿ ಮಹಾರಾಜರು ಮಾತನಾಡಿ, ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ ಬಹುಮಾನ ನೀಡುವ ಮೂಲಕ ಪ್ರತಿಭೆಯನ್ನು ಪ್ರೋತ್ಸಾಹಿಸಲಾಗುತ್ತಿರುವುದು ಶ್ಲಾಘನೀಯ ಎಂದರು. ರಾಜ್ಯದಲ್ಲಿ ಜುಲೈ1ರಂದು ಪತ್ರಿಕಾ ದಿನಾಚರಣೆ ಆಚರಿಸಲಾಗುತ್ತಿದ್ದು, ಮಂಗಳೂರು ಸಮಾಚಾರ ಪತ್ರಿಕೆಯ ಪ್ರಾರಂಭದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು.



ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ನಾಲ್ಕನೇ ಅಂಗವಾಗಿದ್ದು ಪತ್ರಕರ್ತರೊಂದಿಗೆ ಸದಾ ಇರುವೆ

■ ರಾಹುಲ ಜಾರಕಿಹೊಳಿ, ಬೆಳಗಾವಿ ಡಿಸಿಸಿ ಹಾಗೂ ಅಪೆಕ್ಸ್ ಬ್ಯಾಂಕ್ ನಿರ್ದೇಶಕ

» ಪತ್ರಿಕಾ ದಿನಾಚರಣೆ ಅಂಗವಾಗಿ ಕಾಂಗ್ರೆಸ್ ಮುಖಂಡ ಕಿರಣಸಿಂಗ ರಜಪೂತ ಅವರು ಪತ್ರಕರ್ತರಿಗೆ ಹೆಲ್ಮೆಟ್ ಹಾಗೂ ಜಾಕೆಟ್ ವಿತರಿಸಿದರು.

» ಇದೇ ವೇಳೆ ನಾಗನೂರು ಕೆ.ಎಂ ಪ್ರೌಢಶಾಲೆಯ ವಿದ್ಯಾರ್ಥಿ ಸಾಯಿದ್ ಲೋಕಾಪುರೆ ಅವರನ್ನು ಸತ್ಕರಿಸಲಾಯಿತು.

ಪತ್ರಕರ್ತ ಗೋಪಾಲ ಚಪಣಿ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಪತ್ರಕರ್ತರನ್ನು ಗಣ್ಯರು ಸತ್ಕರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕಿರಣ ರಜಪೂತ, ರವೀಂದ್ರ ಜಿಂಡ್ರಾಳಿ, ಮಹಾದೇವ ಪಟೋಳಿ, ದಯಾನಂದ ಪಾಟೀಲ, ಹುಕ್ಕೇರಿ ಸಾಮಾಜಿಕ ಅರಣ್ಯ ಇಲಾಖೆ ಅಧಿಕಾರಿ ಎಚ್. ಎಸ್.ಇಂಗಳಗಿ, ವಿರೂಪಾಕ್ಷಿ ಚೌಗಲಾ, ಪಿಡಿಓ ಶಿವಾನಂದ ವಾಸನವರ, ಬಿ.ಬಿ.ಕೋತೆಕರ, ಕಲ್ಲಪ್ಪಾ ಪಾಮನಾಯಿಕ, ಎ.ಎಂ.ಕರ್ನಾಚಿ, ಪ್ರಭು ಖೋತ, ಅಶೋಕ ತಳವಾರ, ಚೋಮಲಿಂಗ ಪಟೋಳಿ, ಗೋದವ್ವಾ ಅಗಸರ, ಮುಖ್ಯೋಪಾಧ್ಯಾಯರಾದ ತನುಜಾ ಗುಡಸಿ, ಜಡ್.ಎಂ.ಮುಲ್ಲಾ, ಜಬರ್ಹ್ಮದ ಸನದಿ, ಭೈರಪ್ಪಾ ಅಗಸರ, ಮಹಾದೇವ ಮರಗಾಲಿ, ಪರಶುರಾಮ ಸನದಿ, ರವಿ ಘಸ್ತಿ, ಹಣಮಂತ ಅಳದಾಳಿ, ಕಾಶಪ್ಪಾ ಅಗಸರ, ಮಾರುತಿ ಅಗಸರ, ಮುದ್ದು ಬಾನಿ ಹಾಗೂ ಶಾಲೆಯ ಶಿಕ್ಷಕರು ಭಾಗವಹಿಸಿದರು. ಪತ್ರಕರ್ತ ಸಂಜು ಮುಷ್ಟಗಿ ಸ್ವಾಗತಿಸಿದರು. ಎಸ್.ಬಿ.ಮಠಪತಿ ನಿರೂಪಿಸಿ ವಂದಿಸಿದರು.

ದುಶ್ಚಟಗಳಿಗೆ ದಾಸರಾಗದಿರಿ:ಜಿನೇಂದ್ರ

ರಾಯಬಾಗ: ತಾಲೂಕಿನ ಬೆಕ್ಕೇರಿ ವಲಯದ ನಿಡಗುಂದಿ ಸಿ ಕಾರ್ಯಕ್ಷೇತ್ರದ ನಿಡಗುಂದಿ ಸರಕಾರಿ ಪ್ರೌಢಶಾಲೆಯಲ್ಲಿ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಆಚರಿಸಲಾಯಿತು. ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ಉಪಾಧ್ಯಕ್ಷರಾದ ಜಿನೇಂದ್ರ ಖೇಮಲಾಪುರೆ ಶಾಲೆಯ ಮುಖ್ಯ ಗುರುಗಳಾದ ಸತೀಶ್ ಹೊಸಮನಿ ಹಾಗೂ ಲಾಲಸಾಬ ಕಮಿಟಿಯ ಸದಸ್ಯರಾದ ಮಾಯಪ್ಪ ಕಾಂಬಳೆ ಒಕ್ಕೂಟದ ಅಧ್ಯಕ್ಷರಾದ ಅನಿತಾ ಖೇಮಲಾಪುರೆ ಹಾಗೂ ವಲಯದ ಮೇಲ್ವಿಚಾರಕರಾದ ಸಾವಿತ್ರಿ ಜಾಡರ್ ಮತ್ತು ಸೇವಾಪ್ರತಿನಿಧಿ ಗೀತಾ ಮತ್ತು ಶಾಲೆಯ ಮಕ್ಕಳು ಉಪಸ್ಥಿತರಿದ್ದರು. ಜಿನೇಂದ್ರ ಖೇಮಲಾಪುರೆ ಅವರು ಮಾತನಾಡಿ ಇಂದಿನ ಯುವ ಪೀಳಿಗೆ ಚಟಗಳಿಗೆ ಬಲಿ ಆಗದೆ ಒಳ್ಳೆ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಿ ತಂದೆ ತಾಯಿಗೆ ಕೀರ್ತಿ ತರುವಂತೆ ಮಾಡಬೇಕು ಎಂದು ಹೇಳಿದರು.





ಖಾನಾಪುರ ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪ್ರಸನ್ನ ಕುಲಕರ್ಣಿ, ಪ್ರಾಚಾರ್ಯ ಎಸ್.ಕೆ ಅಕಿವಾಟ, ಉಪನ್ಯಾಸಕರಾದ ಶ್ರೀಧರ ಚೆಂಚಣಿ, ಎಫ್.ಡಿ ತಳವಾರ, ಉಮಾಕಿರಣ, ಕುಮಾರ ಹಿರೇಮಠ ಮತ್ತಿತರರು ಇದ್ದರು.

ಐಟಿ-ಬಿಟಿಗೆ ಇನಾಮದಾರ ಕೊಡುಗೆ ಅಪಾರ

ಚನ್ನಮ್ಮನ ಕಿತ್ತೂರು: ಮಾಜಿ ಸಚಿವ ದಿ. ಡಿ ಬಿ ಇನಾಮದಾರ್ ಅವರು ಐಟಿ, ಬಿಟಿ ಸಚಿವರಾಗಿದ್ದಾಗ ತೆಗೆದುಕೊಂಡ ಪಾಲಿಸಿ ನಿರ್ಧಾರಗಳೇ ಇಂದು ಬೆಂಗಳೂರು ಜಾಗತಿಕ ಮಟ್ಟದಲ್ಲಿ ಐಟಿ ಮುಖ್ಯ ಸ್ಥಳವೆಂದು ಗುರುತಿಸಿಕೊಳ್ಳಲು ಕಾರಣವಾಗಿದೆ ಎಂದು ಉತ್ತರಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಸಮೀಪದ ಬೈಲೂರ ಗ್ರಾಮದ ಅಂಬೇಡಕರ ಭವನದಲ್ಲಿ ಗುರುವಾರ ನಡೆದ ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಆಶ್ರಯದಲ್ಲಿ ಡಿ ಬಿ ಇನಾಮದಾರ ಫೌಂಡೇಶನ್ ಹಾಗೂ ಅಲಿಮ್ಕೋ ಸಹಯೋಗದೊಂದಿಗೆ ಮಾಜಿ ಸಚಿವ ದಿ. ಡಿ ಬಿ ಇನಾಮದಾರ ಅವರ 78 ನೇ ಜನ್ಮ ದಿನದ ನಿಮಿತ್ತ ವಿಶಿಷ್ಟಚೇತನರಿಗೆ ಮತ್ತು ವಯೋವೃದ್ಧರಿಗೆ ಅಗತ್ಯ ಸಲಕರಣೆಗಳ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳು ಗ್ರಾಮೀಣ ಭಾಗದ ಜನರಿಗೆ ಹಾಗೂ ವಿಕಲಚೇತನರಿಗೆ ಪರಿಣಾಮಕಾರಿಯಾಗಿ ತಲುಪುತ್ತಿವೆ ಎಂದರು.

» ಸುಮಾರು 70 ವಿಶಿಷ್ಟಚೇತನ ಫಲಾನುಭವಿಗಳಿಗೆ ವಿವಿಧ ಸಲಕರಣೆಗಳನ್ನು ವಿತರಿಸಲಾಯಿತು.

ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ, ಮಾಜಿ ಸಚಿವ ದಿ. ಡಿ ಬಿ ಇನಾಮದಾರ ಅವರು ಸಹಾನುಭೂತಿಯ ರಾಜಕಾರಣಿಯಾಗಿದ್ದರು ಸಮಾಜದಲ್ಲಿ ಎಲ್ಲರನ್ನೂ ಪ್ರೀತಿಯಿಂದ ಕಾಣುವ ಮತ್ತು ಎಂತಹ ಕೋಪದಲ್ಲಿ ಬಂದವರನ್ನೂ ಶಾಂತಗೊಳಿಸುವ ಅದ್ಭುತ ವ್ಯಕ್ತಿತ್ವ ಉಳ್ಳವರಾಗಿದ್ದರು ಎಂದರು.

ಬಿಜೆಪಿ ಮುಖಂಡರಾದ ಲಕ್ಷ್ಮೀ ಇನಾಮದಾರ ಮಾತನಾಡಿದರು.ಬಿಜೆಪಿ ಮಂಡಳ ಅಧ್ಯಕ್ಷ ಶ್ರೀಕರಕುಲಕರ್ಣಿ, ಮುಖಂಡರಾದ ವಿಕ್ರಮ್ ಇನಾಮದಾರ, ರಾಜೇಂದ್ರ ಇನಾಮದಾರ, ಬಸಲಿಂಗಪ್ಪ ಹನಮನಿ, ಫಲಾನುಭವಿ ಗಂಗವ್ವ ಪೂಜೇರಿ ಸೇರಿದಂತೆ ವಿಕಲಚೇತನರು, ಗ್ರಾಮಸ್ಥರು ಉಪಸ್ಥಿತರಿದ್ದರು.

ನಾಗೇಶ ಬೆಣ್ಣಿ ನಿರೂಪಿಸಿದರು, ಶಿವಾನಂದ ಹನುಮಸಾಗರ ಸ್ವಾಗತಿಸಿದರು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ ವಂದಿಸಿದರು.



ರಾಷ್ಟ್ರೀಯ ವೈದ್ಯರ ದಿನಾಚರಣೆ: ಸಾಧಕ ವೈದ್ಯರಿಗೆ ಸನ್ಮಾನ

ಗೋಕಾಕ: ಭಾರತೀಯ ವೈದ್ಯಕೀಯ ಸಂಘ (ಐಎಮ್‌ಎ) ಗೋಕಾಕ್ ಶಾಖೆಯ ವತಿಯಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಸಮಾಜಮುಖಿ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಳಿಗ್ಗೆ ಐಎಂಎ ಸದಸ್ಯರು ಕಡಬಗಟ್ಟಿ ಗುಡ್ಡದಲ್ಲಿ 5 ಕಿ.ಮೀ. ಆರೋಗ್ಯ ನಡಿಗೆ ನಡೆಸಿ, ಆರೋಗ್ಯಕರ ಜೀವನಶೈಲಿ ಹಾಗೂ ನಿಯಮಿತ ವ್ಯಾಯಾಮದ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಸಂಜೆ ಐಎಂಎ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ. ಅಶೋಕ್ ಜೀರಗ್ಯಾಳ ಅವರು ಅಗಲಿದ ಹಿರಿಯ ವೈದ್ಯರನ್ನು ಸ್ಮರಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ನಂತರ ನಡೆದ ವೈಜ್ಞಾನಿಕ ಅಧಿವೇಶನದಲ್ಲಿ ಡಾ. ಅಮಿತ್ ಅಂಬಲೆ ಅವರು ಶಸ್ತ್ರಚಿಕಿತ್ಸೆ ಪೂರ್ವ ರೋಗಿಯ ಸಿದ್ಧತೆ, ಡಾ. ಪ್ರವೀಣ್ ಮೂಡಲಗಿ ಅವರು ಆಪರೇಷನ್ ಥಿಯೇಟರ್ ಸುರಕ್ಷತೆ ಮತ್ತು ತುರ್ತು ಪರಿಸ್ಥಿತಿಗಳ ನಿರ್ವಹಣೆ, ಹಾಗೂ ಡಾ. ಇಮ್ರಾನ್ ಧಂಡರಗಿ ಅವರು ಶಸ್ತ್ರಚಿಕಿತ್ಸೆಯ ನಂತರದ ರೋಗಿಯ ಮೇಲ್ವಿಚಾರಣೆ ಕುರಿತು ಪ್ರಾಯೋಗಿಕ ಹಾಗೂ ಉಪಯುಕ್ತ ಉಪನ್ಯಾಸಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಹಿರಿಯ ವೈದ್ಯರನ್ನು ಸನ್ಮಾನಿಸಲಾಯಿತು. ಸನ್ಮಾನ ಕಾರ್ಯಕ್ರಮವನ್ನು ಡಾ. ಎಸ್ ಎಸ್ ಪಾಟೀಲ, ಡಾ. ಅಶೋಕ್ ಮುರುಗೋಡ್, ಡಾ. ಬಶೀರ್ ಅಹ್ಮದ್ ಹಾಗೂ ಡಾ. ದಿಲೀಪ್ ಬಾಗಿ ಅವರು ನೆರವೇರಿಸಿದರು.



ಕಾರ್ಯಕ್ರಮದ ನಿರೂಪಣೆಯನ್ನು ಡಾ. ಮಲ್ಲಿಕಾರ್ಜುನ ಬೀರನಗಡ್ಡಿ ಹಾಗೂ ಡಾ. ಪ್ರವೀಣ್ ಕೊಪ್ಪದ ಅವರು ನಿರ್ವಹಿಸಿದರು.

ಅಧ್ಯಕ್ಷತೆಯನ್ನು ಡಾ. ವಿಶ್ವನಾಥ್ ವಿ. ಶಿಂಧೋಳಿಮಠ ವಹಿಸಿದ್ದರು. ಶಾಖೆಯ ಗೌರವಕಾರ್ಯದರ್ಶಿ ಡಾ. ಉಮೇಶ್ ನಿಪ್ಪಾಣಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿ ನಿರ್ವಹಿಸಿದರು. ನಿಕಟಪೂರ್ವ ಅಧ್ಯಕ್ಷ ಡಾ. ಕೆಂಪಣ್ಣ ಹಳಿಗೌಡರ ಅವರು ಉಪಸ್ಥಿತರಿದ್ದರು. ಶಾಖೆಯ ಎಲ್ಲಾ ಸದಸ್ಯರು ಉತ್ಸಾಹದಿಂದ ಭಾಗವಹಿಸಿ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನು ಯಶಸ್ವಿಗೊಳಿಸಿದರು.

ಸಹಕಾರ ಸಪ್ತಾಹ ಆಚರಣೆ

ಖಾನಾಪುರ: ಕೇಂದ್ರ ಸರ್ಕಾರ ಅಧೀನದ ಸಹಕಾರ ಸಚಿವಾಲಯ ಆರಂಭಗೊಂಡು ಐದು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಷ್ಟ್ರದಾದ್ಯಂತ ಸಹಕಾರಿ ಸಂಸ್ಥೆಗಳ ಆವರಣದಲ್ಲಿ ವೃಕ್ಷಾರೋಪಣದ ಮೂಲಕ ಸಹಕಾರ ಸಪ್ತಾಹ ಆಚರಣೆ ಮಾಡಲಾಗುತ್ತಿದೆ ಎಂದು ಶಾಸಕ ವಿಠ್ಠಲ ಹಲಗೇಕರ ಮಾಹಿತಿ ನೀಡಿದರು. ಪಟ್ಟಣದ ಖಾನಾಪುರ ಕೋ-ಆಪರೇಟಿವ್ ಬ್ಯಾಂಕ್ ಆವರಣದಲ್ಲಿ ಸಸಿ ನೆಡುವ ಮೂಲಕ ಸಹಕಾರ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, ರಾಜ್ಯ ಸಹಕಾರ ಇಲಾಖೆ, ಸಹಕಾರ ಮಹಾಮಂಡಳ, ಬೆಳಗಾವಿ ಜಿಲ್ಲಾ ಸಹಕಾರಿ ಯೂನಿಯನ್, ಬಿಡಿಸಿಸಿ ಬ್ಯಾಂಕ್ ಮತ್ತು ಇತರೆ ಸಹಕಾರಿ ಸಂಘ-ಸಂಸ್ಥೆಗಳ ವತಿಯಿಂದ ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯವಾಕ್ಯದೊಂದಿಗೆ ಈ ಸಹಕಾರ ಸಪ್ತಾಹ ಆರಂಭಗೊಂಡಿದೆ. ಪ್ರತಿಯೊಂದು ಸಹಕಾರಿ ಸಂಸ್ಥೆಗಳು ತಮ್ಮ ಆವರಣದಲ್ಲಿ ಸಸಿಗಳನ್ನು ನೆಟ್ಟು ಪೋಷಿಸುವ ಮೂಲಕ ಈ ಸಪ್ತಾಹ ಆಚರಣೆ ಯಶಸ್ವಿಗೊಳಿಸಬೇಕು ಎಂದು ಹೇಳಿದರು. ಈ ವೇಳೆ ಮಾಜಿ ಶಾಸಕ ಅರವಿಂದ ಪಾಟೀಲ, ಖಾನಾಪುರ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಅಮೃತ ಶೇಲಾರ, ತಾಲೂಕು ಸಹಕಾರ ನಿಯಂತ್ರಣಾಧಿಕಾರಿ ಬಸವರಾಜ ಕುರೇರ, ಬ್ಯಾಂಕ್ ನಿರೀಕ್ಷಕ ಶಕೀಲ್ ಕಿತ್ತೂರ ಸೇರಿದಂತೆ ಖಾನಾಪುರ ಕೋ-ಆಪ್ ಬ್ಯಾಂಕ್ ನಿರ್ದೇಶಕರು, ಸಿಬ್ಬಂದಿ, ಸಹಕಾರ ಇಲಾಖೆ ಅಧಿಕಾರಿಗಳು, ಗ್ರಾಹಕರು ಇದ್ದರು.



ಎಸ್‌ಐಆರ್ ಪ್ರಕ್ರಿಯೆ ವಿರೋಧಿಸಿ ಆಯೋಗಕ್ಕೆ ಮನವಿ

ಬೆಳಗಾವಿ: ಎಸ್ ಐಆರ್ ಪ್ರಕ್ರಿಯೆಯನ್ನು ಪ್ರಜಾತಾಂತ್ರಿಕಗೊಳಿಸುವ ನಿಟ್ಟಿನಲ್ಲಿ ನಾಗರಿಕ ಸಮಾಜ ಮುಂದಿಟ್ಟಿರುವ ನಾಲ್ಕು ಪ್ರಮುಖ ಹಕ್ಕೊತ್ತಾಯಗಳನ್ನು ಪರಿಗಣಿಸಿ ಸ್ಪಷ್ಟ ಉತ್ತರ ನೀಡಬೇಕೆಂದು ಆಗ್ರಹಿಸಿ, ಎಸ್‌ಐಆರ್ ವಿರೋಧಿ ಜನಪರ ಸಂಘಟನೆಗಳ ಒಕ್ಕೂಟವು ಮಂಗಳವಾರ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿತು.

ಮನವಿಯಲ್ಲಿ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಪ್ರಸ್ತಾಪಿಸಲಾದ ವಿಚಾರಗಳು, ಕೇಳಲಾದ ಪ್ರಶ್ನೆಗಳು, ರಾಜ್ಯದ ಸಾಹಿತಿಗಳು, ಚಿಂತಕರು, ಕಲಾವಿದರು ಹಾಗೂ ರಂಗಕರ್ಮಿಗಳು ಬರೆದ ಪತ್ರ ಮತ್ತು ಕರ್ನಾಟಕ ಸರ್ಕಾರದ ಪತ್ರಕ್ಕೆ ರಾಜ್ಯ ಚುನಾವಣಾ ಆಯೋಗ ಇದುವರೆಗೆ ಯಾವುದೇ ಸ್ಪಷ್ಟನೆ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಲಾಗಿದೆ.



ಸಾರ್ವಜನಿಕ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡದೆ ಇರುವುದು ಪ್ರಜಾತಾಂತ್ರಿಕ ಮೌಲ್ಯಗಳಿಗೆ ವಿರುದ್ಧವಾಗಿದೆ. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಸಂಸ್ಥೆಗಳು ನಾಗರಿಕರ ಪ್ರಶ್ನೆಗಳಿಗೆ ಉತ್ತರಿಸುವುದು ಮೂಲಭೂತ ಕರ್ತವ್ಯವಾಗಿದ್ದು, ಆಯೋಗವು ಈ ಜವಾಬ್ದಾರಿಯಿಂದ ಹಿಂದೆ ಸರಿಯುತ್ತಿರುವುದು ಸಂವಿಧಾನ ವಿರೋಧಿ ನಡೆ ಎಂದು ಸಂಘಟನೆಗಳು ಆರೋಪಿಸಿವೆ.

ಈ ವೇಳೆ ಬಂಡಾಯ ಸಾಹಿತ್ಯ ಸಂಘಟನೆ ಡಾ.ಯಲ್ಲಪ್ಪ ಹಿಮ್ಮಡಿ, ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿಯ ಐನಾ ಶೇಖ್, ಸಿಐಟಿ ಸಂಘಟನೆ ಮಂದಾ ನೇವಗಿ, ಎದ್ದೇಳು ಕರ್ನಾಟಕದ ಯಾಸೀನ್ ಖಾನ್ ಮಕಾಂದಾರ್, ಎಸ್‌ಡಿಪಿಐ ಸಂಘಟನೆ ಮೌಜ್ಜಮ್ ಮುಲ್ತಾನಿ, ಮಜ್ದೂರ್ ನವನಿರ್ಮಾಣ ಸಂಘದ ಕವಿತಾ ಜಾರಕಿಹೊಳಿ, ಮಾನವ ಹಕ್ಕುಗಳ ಹೋರಾಟಗಾರ ವರ್ಷಾ ಪದ್ಮಣ್ಣವರ, ಶುಭಾಂಗಿ ನಿಕ್ಕಮ್, ರಜಿಯಾ ಬೇಗಮ್ ಶೇಖ್, ಸಾಮಾಜಿಕ ಹೋರಾಟಗಾರರು ಸುನಿತಾ ಸುಭೇದಾರ, ತಾನಾಜಿ ಸಾವಂತ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ನಿಯೋಗದಲ್ಲಿದ್ದರು.

ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ

ಚಿಕ್ಕೋಡಿ: ತಾಲೂಕಿನ ಯಕ್ಸಂಬಾ ಪಟ್ಟಣದಲ್ಲಿ ಕೇಂದ್ರ ಚುನಾವಣೆ ಆಯೋಗ, ರಾಜ್ಯ ಚುನಾವಣೆ ಆಯೋಗ ಮತ್ತು ಜಿಲ್ಲಾಡಳಿತದಿಂದ ಹಮ್ಮಿಕೊಂಡ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಮಂಗಳವಾರ ಪ್ರಾರಂಭಿಸಲಾಯಿತು. ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಅವರ ಮನೆಗೆ ತೆರಳಿ ಇನ್ಯುಮಿರೇಷನ್ ಫಾರ್ಮ್ ವಿತರಣೆ ಮಾಡುವಮೂಲಕ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಯಕ್ಸಂಬಾ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸುನೀಲ ಸಪ್ತಸಾಗರೆ, ಮುಖ್ಯಾಧಿಕಾರಿ ಮಹಾಂತೇಶ ನಿಡವಣಿ, ಉಪ ತಹಶೀಲ್ದಾರ ಪ್ರಭಾಕರ ಶಿರಿವಂತ, ಕಂದಾಯ ನಿರೀಕ್ಷಕ ಮಾರುತಿ ನಾಗರಾಳೆ, ಗ್ರಾಮ ಆಡಳಿತಾಧಿಕಾರಿ ಮಲ್ಲಪ್ಪ ಹಟ್ಟಿ, ಉಮೇಶ ಸಾತ್ವರ, ಸಂತೋಷ ಸಾತ್ವರ, ನಿತಿನ ಬಡಿಗೇರ ಇತರರು ಇದ್ದರು.



ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸಿ

ಮೂಡಲಗಿ : ಕಾಲೇಜು ವಿದ್ಯಾರ್ಥಿಗಳಿಗೆ ದುಶ್ಚಟ ಮುಕ್ತ ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಯ ಪಾತ್ರ ಹಾಗೂ ವಿದ್ಯಾರ್ಥಿಗಳು ಪಂಚೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ದುಶ್ಚಟಗಳಿಂದ ದೂರವಿದ್ದು, ಆದರ್ಶ ವ್ಯಕ್ತಿಯಾಗಿ, ಸಮಾಜದ ಒಳಿತಿಗಾಗಿ ದುಶ್ಚಟಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಕೈಗೊಳ್ಳಬೇಕು ಎಂದು ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗಡೆ ಹೇಳಿದರು

ಮೂಡಲಗಿ ತಾಲೂಕಿನ ಕಲ್ಲೋಳಿ ವಲಯದ ಬಸವೇಶ್ವರ ಶಿಕ್ಷಣ ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಇಂದು ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆಯ ಅಂಗವಾಗಿ ಆನ್ಲೈನ್ ಮುಖಾಂತರ ವಿದ್ಯಾರ್ಥಿಗಳಿಗೆ ಹೇಳಿದರು

ಡಾ. ಹೇಮಾವತಿ ಅಮ್ಮನವರು ದುಶ್ಚಟ ಮಾಡುವ ವ್ಯಕ್ತಿಯೊಂದಿಗೆ ಅವನ ಕುಟುಂಬವು ಹಾಳಾಗುತ್ತದೆ. ದುಶ್ಚಟ ಮಾಡುವವನ ಕುಟುಂಬದ ದುಃಖವನ್ನು ಅವನೇ ಸರಿಪಡಿಸಿಕೊಳ್ಳಬೇಕು ಆದ್ದರಿಂದ ವ್ಯಸನಗಳಿಂದ ದೂರವಿರಬೇಕು ಎಂದು ಮಾಹಿತಿ ನೀಡಿದರು.

ಪೊಲೀಸ್ ಇಲಾಖೆಯ ಪೊಲೀಸ್ ಅಧೀಕ್ಷಕ ಡಾ. ವೆಂಕಟೇಶ್ ಪ್ರಸಾದ್ ಇವರು ವ್ಯಸನಕ್ಕೆ ಬಲಿಯಾಗಿ ಸಮಾಜಕ್ಕೆ ಹಾನಿ ಮಾಡುವ ವ್ಯಕ್ತಿಗೆ ಕಾನೂನಿನಲ್ಲಿ ಮರಣದಂಡನೆಯಂತಹ ಕಠಿಣ ಕ್ರಮಗಳಿವೆ.ಮಾದಕ ವಸ್ತುಗಳನ್ನು ಸೇವಿಸುವುದು ಅಪರಾಧ, ಮಾರಾಟ ಮಾಡುವುದು ಅಪರಾಧ, ಉತ್ಪಾದನೆ ಮಾಡುವುದು ಅಪರಾಧ ಆದುದರಿಂದ ಇವುಗಳಿಂದ ದೂರವಿದ್ದು ಉತ್ತಮ ವಿದ್ಯಾರ್ಥಿಗಳಾಗಿ ಎಂದರು



ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಭೋಜರಾಜ ಬೆಳಕೋಡ, ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ ಹಾಗೂ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಡಲಗಿಯ ಯೋಜನಾಧಿಕಾರಿ ಹರೀಶ್ ಕುಮಾರ್ ಬಿ ಬಿ ಇವರು ಗಿಡಕ್ಕೆ ನೀರುಣಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಕಲ್ಲೋಳ್ಳಿಯ ಪ.ಪಂ.ಸಿಇಓ ಆನಂದ ಬಡಿಗೇರ್,ವ್ಹಿ ಜಿ ಕಟ್ಟಿಮನಿ,ವಿಜಯಲಕ್ಷ್ಮಿ, ಗಿರಿಜಾ ಸಿಬ್ಬಂದಿ ವರ್ಗದವರು, ಪ್ರಾಚಾರ್ಯರು ಬಸವೇಶ್ವರ ಪದವಿ ಪೂರ್ವ ಕಾಲೇಜು ಹಾಗೂ ಶಿಕ್ಷಣ ಸಂಸ್ಥೆಯ ಬೋಧಕ ಬೋಧಕೇತರ ವಿದ್ಯಾರ್ಥಿಗಳು ಹಾಗೂ ಗ್ರಾಮ ಅಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಸಮನ್ವಯ ಅಧಿಕಾರಿ ಉಪಸ್ಥಿತರಿದ್ದರು.

ಕಿರುಸುದ್ದಿ

ನಿರಂತರ ವಿದ್ಯುತ್ ನೀಡಲು ರೈತರ ಒತ್ತಾಯ



• **ಕಲಾದಗಿ:** ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ನೀಡಬೇಕು ಎಂದು ಆಗ್ರಹಿಸಿ ತುಳಸಿಗೇರಿ ಗ್ರಾಮದ ರೈತರಿಂದ ಕಲಾದಗಿ ಹೆಸ್ಕಾಂ ಶಾಖಾಧಿಕಾರಿ ನಾಗರಾಜ ಬಂಡಿವಡ್ಡರ ಅವರಿಗೆ ಮನವಿ ಸಲ್ಲಿಸಿದರು.

ತುಳಸಿಗೇರಿ ಗ್ರಾಮದ ರೈತರು ಬೂದಿಹಾಳ ವಿದ್ಯುತ್ ಸ್ಟೇಷನ್‌ಗೆ ತೆರಳಿ ಅಲ್ಲಿನ ಅಸಿಸ್ಟಂಟ ಎಂಜಿನಿಯರ್ ರೇಷ್ಮಾ ಅವರಿಗೆ ನಿರಂತರ 7ಗಂಟೆ ಅವಧಿಗೆ ವಿದ್ಯುತ್ ನೀಡುವಂತೆ ಒತ್ತಾಯಿಸಿದರು. ಅದಕ್ಕೆ ಸ್ಪಂದಿಸಿದ ಅವರು ಗುರುವಾರದಿಂದ ಬೆಳಿಗ್ಗೆ 6ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿದ್ಯುತ್ ನೀಡುವ ಭರವಸೆ ನೀಡಿ ಕಲಾದಗಿ ಶಾಖಾಧಿಕಾರಿಗಳಿಗೂ ಒಂದು ಮನವಿ ಪತ್ರ ನೀಡಲು ತಿಳಿಸಿದ ಅವರ ಸಲಹೆ ಮೇರೆಗೆ ದೂರವಾಣಿ ಮುಖಾಂತರ ಮೌಖಿಕ ಮನವಿ ಆಲಿಸಿದ ಕಲಾದಗಿ ಶಾಖಾಧಿಕಾರಿ ತಕ್ಷಣವೇ ಬೂದಿಹಾಳ ವಿದ್ಯುತ್ ಕೇಂದ್ರಕ್ಕೆ ಬಂದು ರೈತರ ಮನವಿಯನ್ನು ಸ್ವೀಕರಿಸಿ ನಿರಂತರ 7ಗಂಟೆಗಳ ಕಾಲ ವಿದ್ಯುತ್ ನೀಡುವುದಾಗಿ ಭರವಸೆ ನೀಡಿದರು. ಬಸವಂತಪ್ಪ ಬಾಲರಡ್ಡಿ, ಹನಮಂತಗೌಡ ಪಾಟೀಲ, ಮಂಜು ಒಂಟಗೋಡಿ, ವೆಂಕಣ್ಣ ಗದಿಗೆನ್ನವರ, ತಿಮ್ಮಣ್ಣ ಕೊಳತಿ, ಶ್ರೀನಿವಾಸ ದಳವಾಯಿ, ರಾಜು ದಾಸನ್ನವರ, ಬಸವರಾಜ ಲದ್ದಿ, ಬಾಲಚಂದ್ರ ಬುದ್ನಿ, ಮಂಜುನಾಥ ಮುರ್ತನ್ನವರ, ಮುತ್ತಪ್ಪ ಭಂಗಿ, ಸಿದ್ರಾಯ ಮರೆಗುದ್ದಿ, ಮಹಾಂತೇಶ ಲಾಯನ್ನವರ, ಶ್ರೀಕಾಂತ ಲದ್ದಿ ಸೇರಿದಂತೆ ಇತರರಿದ್ದರು.

ಹಿಂದೂ ಸಾಮ್ರಾಜ್ಯೋತ್ಸವ

• **ಗಲಗಲಿ:** ಸ್ಥಳೀಯ ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಜು.4ರಂದು ಶನಿವಾರ ಸಂಜೆ 6.30 ಗಂಟೆಗೆ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕ ಮಹೋತ್ಸವ ನಿಮಿತ್ತ ಹಿಂದೂ ಸಾಮ್ರಾಜ್ಯೋತ್ಸವ ದಿನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಪದವಿ ಪ್ರದಾನ ಸಮಾರಂಭ


• **ಬಾಗಲಕೋಟೆ:** ಬವಿವಿ ಸಂಘದ ಎಸ್.ಸಿ.ನಂದಿಮಠ ಕಾನೂನು ಮಹಾವಿದ್ಯಾಲಯದ 2023–2026ನೇ ಸಾಲಿನ ಪದವಿ ಪ್ರದಾನ ಸಮಾರಂಭ ಜು.4ರಂದು ಶನಿವಾರ ಬೆಳಿಗ್ಗೆ 10 ಗಂಟೆಗೆ ಬಸವೇಶ್ವರ ಎಂಜಿನಿಯರಿಂಗ್ ಕಾಲೇಜು ಗ್ಯಾಲರಿ ಸಭಾಂಗಣದಲ್ಲಿ ನಡೆಯಲಿದೆ. ಬವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಪ್ರಭಾವತಿ ಹಿರೇಮಠ ಮುಖ್ಯ ಅತಿಥಿಯಾಗಿ, ನಿವೃತ್ತ ವಿಶೇಷ ಸಾರ್ವಜನಿಕ ಅಭಿಯೋಜಕ ಕೆ.ಜಿ.ಪುರಾಣಿಕಮಠ ಅತಿಥಿಯಾಗಿ ಆಗಮಿಸಲಿದ್ದು, ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಸಂಘದ ಆಡಳಿತಾಧಿಕಾರಿ ವಿ.ಆರ್.ಶಿರೋಳ ಉಪಸ್ಥಿತರಿರಲಿದ್ದಾರೆ. ಪದವಿ ಪ್ರದಾನ ಸಮಾರಂಭದಲ್ಲಿ 114 ಜನ ಪದವೀಧರರು ಪದವಿ ಸ್ವೀಕರಿಸಲಿದ್ದಾರೆ ಎಂದು ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಂ.ಪಿ.ಚಂದ್ರಿಕಾ ತಿಳಿಸಿದ್ದಾರೆ.

ಶಾಸಕ ತಿಮ್ಮಾಪುರಗೆ ಸಚಿವ ಸ್ಥಾನ ನೀಡಲು ಆಗ್ರಹ



• **ಲೋಕಾಪುರ:** ಶಾಸಕ ಆರ್.ಬಿ.ತಿಮ್ಮಾಪುರ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಮುಖಂಡ ಸಾಗರ ಸತ್ತಿಗೇರಿ ಒತ್ತಾಯಿಸಿದ್ದಾರೆ. ಆರ್.ಬಿ.ತಿಮ್ಮಾಪುರ ಅವರು ತಮ್ಮ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ ಅನುಸರಿಸಿ ಪಕ್ಷಕ್ಕಾಗಿ ಶ್ರಮಿಸಿದ್ದಾರೆ. ಹಾಗೂ ಬಾಗಲಕೋಟೆ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಈ ಭಾಗದ ಜನರ ಜೊತೆ ಉತ್ತಮ ಒಡನಾಟ ಹೊಂದಿ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಅಪಾರ ಕೊಡುಗೆ ನೀಡಿದ್ದಾರೆ.

ಅಡಿಯಪ್ಪ ಮಾಚಪ್ಪನವರ ನಿಧನ



• **ಬೀಳಗಿ:** ತಾಲೂಕಿನ ಅರಕೇರಿ ಗ್ರಾಮದ ಅಡಿಯಪ್ಪ ಹಣಮಪ್ಪ ಮಾಚಪ್ಪನವರ (68) ಮಂಗಳವಾರ ನಿಧನ ಹೊಂದಿದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಇದೆ.



ಇಳಕಲ್: ನಗರದ ಶಹರ ಪೊಲೀಸ್ ಠಾಣೆ ವತಿಯಿಂದ ಮಾದಕ ವಸ್ತುಗಳ ಸೇವನೆ ಹಾಗೂ ಮಾರಾಟ ತಡೆ ಮಾಸಾಚರಣೆ ನಿಮಿತ್ತ ನಗರದ ಬಸವೇಶ್ವರ ವೃತ್ತದಿಂದ ಜಾಗೃತಿ ಜಾಥಾ ಆರಂಭವಾಗಿ ಎಸ್.ಆರ್.ಕಂಠಿ ವೃತ್ತದವರೆಗೆ ತಲುಪಿತು. ಮಹಾಂತೇಶ ನಾಯನೇಗಲಿ, ಧರೆಶ ಕಮತಗಿ, ಆಯುರ್ವೇದ ಮಹಾವಿದ್ಯಾಲಯದ ಡಾ.ಶಂಕರ ಮೈದರಗಿ, ಸಂವಾದ ಜರಲಿ, ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾದಕ ವಸ್ತುಗಳ ಸೇವನೆ ಮಾರಕ

• **ಇಳಕಲ್:** ನಗರದ ಶಹರ ಪೊಲೀಸ್ ಠಾಣೆ ವತಿಯಿಂದ ಮಾದಕ ವಸ್ತುಗಳ ಸೇವನೆ ಹಾಗೂ ಮಾರಾಟ ತಡೆ ಮಾಸಾಚರಣೆ ನಿಮಿತ್ತ ನಗರದ ಬಸವೇಶ್ವರ ವೃತ್ತದಿಂದ ಜಾಗೃತಿ ಜಾಥಾ ಆರಂಭವಾಗಿ ಎಸ್.ಆರ್.ಕಂಠಿ ವೃತ್ತದವರೆಗೆ ತಲುಪಿತು. ಎಸ್.ವಿ.ಎಂ ಹಾಗೂ ಆಯುರ್ವೇದಿಕ ವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿ ಫಯಾಜ್ ಕರೂರ ಮಾತನಾಡಿ, ದುಶ್ಚಟದಿಂದ ದೂರ ಇರಬೇಕು. ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಡಾ.ವಿಜಯ ಮಹಾಂತಶ್ರೀಗಳು ಜೋಳಿಗೆ ಧರಿಸಿ ಎಲ್ಲರ ದುಶ್ಚಟಗಳನ್ನು ನಮ್ಮ ಜೋಳಿಗೆಗೆ ಹಾಕಿ ಜಗತ್ತಿಗೆ ಒಂದು ಒಳ್ಳೆ ಸಂದೇಶ ನೀಡಿದ್ದಾರೆ ಎಂದು ಹೇಳಿದರು.ಸುಭಾಸ ಹುನ್ನಳ್ಳಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಮಾದಕ ವಸ್ತುಗಳ ವ್ಯಸನಕ್ಕೆ ತುತ್ತಾಗಿ ಭವಿಷ್ಯ ಹಾಳುಮಾಡಿಕೊಳ್ಳುತ್ತಿದ್ದಾರೆ. ಮಾದಕ ದ್ರವ್ಯಗಳ ಸೇವನೆಯಿಂದ ಮನುಷ್ಯನ ದೇಹವು ರೋಗಗಳ ಗೂಡಾಗಿ ಕ್ಷೀಣಿಸುತ್ತದೆ. ಆದ್ದರಿಂದ ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳು ಹಾಗೂ ಯುವಜನತೆ ಮಾದಕ ವಸ್ತುಗಳ ಸೇವನೆಯಿಂದ ದೂರವಿರಬೇಕು ಎಂದರು. ಶಹರ ಪೊಲೀಸ್ ಠಾಣೆಯ ಪಿಎಸ್ಐ ಮಂಜುನಾಥ ಪಾಟೀಲ, ಎಎಸ್‌ಐ ಎ.ಪಿ.ಪಾಟೀಲ, ಕೂಡಗಿ ಹಾಗೂ ಪೊಲೀಸ್ ಸಿಬ್ಬಂದಿ ತಳಗೇರಿ, ಎಸ್.ವಿ.ಎಂ.ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಬಿ.ಬಿರಾದಾರ, ಹಿರಿಯ ಪ್ರಾಧ್ಯಾಪಕ ಡಾ.ಬಿ.ಎಂ.ರಾಕೋಡ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸುಭಾಸ ಹುನ್ನಳ್ಳಿ, ಉಪನ್ಯಾಸಕರಾದ ಡಾ.ಪ್ರಶಾಂತ ಅದರಕಟ್ಟಿ, ದೇವೇಂದ್ರಪ್ಪ ಇದ್ದರು.



ಬೀಳಗಿ: ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಅರುಣ ಸಿದ್ಧಾರೂಡ ಪಾಟೀಲ ಭಾರತೀಯ ಸೇನೆಯಲ್ಲಿ ಲೆಪ್ಟಿನೆಂಟ ಹುದ್ದೆಗೆ ಆಯ್ಕೆಯಾದ ಪ್ರಯುಕ್ತ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸನ್ಮಾನಿಸಿ, ಶುಭಕೋರಿದರು. ಹೇಮಲತಾ ಹೊರಟ್ಟಿ, ಬೇಬಿ ಹೊರಟ್ಟಿ, ಜಿಪಂ ಮಾಜಿ ಅಧ್ಯಕ್ಷ ಎಂ. ಎಲ್.ಕೆಂಪಲಿಂಗಣ್ಣವರ, ಬೆಳಗಾವಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲಣ್ಣ ಯಾದವಾಡ, ಹೊಳಿಯಪ್ಪಗೌಡ ಪಾಟೀಲ, ಆನಂದ ಖೋತ, ರಾಜೇಶ್ವರಿ ಕೆಂಪಲಿಂಗಣ್ಣವರ, ರುದ್ರಗೌಡ ಪಾಟೀಲ, ಸಿದ್ಧಾರೂಢ ಪಾಟೀಲ, ಮಲ್ಲು ಹೋಳಿ, ವೀರಣ್ಣ ಖೋತ, ಮರುಳಸಿದ್ದಯ್ಯ ಮಠಪತಿ ಮತ್ತಿತರರಿದ್ದರು.

ಡಾ.ಫ.ಗು.ಹಳಕಟ್ಟಿಯವರ ಜನ್ಮ ದಿನಾಚರಣೆ | ಪೂಜಾರ ಅಭಿಮತ

ಹಳಕಟ್ಟಿಯವರ ಸೇವೆ ಅವಿಸ್ಮರಣೀಯ

• **ಬಾಗಲಕೋಟೆ :** ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಐತಿಹಾಸಿಕ ಪರಂಪರೆಯ ಸಂರಕ್ಷಣೆಯಲ್ಲಿ ಡಾ.ಹಳಕಟ್ಟಿ ಅವರ ಸೇವೆ ಅವಿಸ್ಮರಣೀಯವಾಗಿದೆ ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ತಿಳಿಸಿದರು.

ನವನಗರದ ಸರಕಾರಿ ಆದರ್ಶ ವಿದ್ಯಾಲಯದ ಸಭಾಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ಹಮ್ಮಿಕೊಂಡ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು ಡಾ.ಫ.ಗು ಹಳಕಟ್ಟಿಯವರು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಉಳಿವಿಗಾಗಿ ಸಲ್ಲಿಸಿದ ಸೇವೆ ಸ್ಮರಿಸಿದರು.

ತಮ್ಮ ವಕೀಲ ವೃತ್ತಿಯ ಜೊತೆಗೆ ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಉಳಿವು ಬೆಳವಣಿಗೆಗಾಗಿ ಅವರ ಜೀವನವಿಡಿ ನಡೆಸಿದ ಶ್ರಮ ಇಂದಿನ ಪೀಳಿಗೆಗೆ ಆದರ್ಶವಾಗಿದೆ. ಅವರ ಸಾಧನೆಗಳು ಕನ್ನಡಿಗರಿಗೆ ಸದಾ ಸ್ಫೂರ್ತಿದಾಯಕವಾಗಿದ್ದು ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದಾಖಲೆಗಳು ಮನೆಗೆ ಸೀಮಿತವಾಗಿರಿಸದೇ ಹೊರ ಪ್ರಪಂಚಕ್ಕೆ ತರುವ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಒಂದು ರಾಷ್ಟ್ರದ ನಿಜವಾದ ಸಂಪತ್ತು ಅದರ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯದಲ್ಲಿದೆ. ಆ ಅಮೂಲ್ಯ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸುವ ಕಾರ್ಯವೇ ಅತ್ಯಂತ ಶ್ರೇಷ್ಠ ಸೇವೆಯಾಗಿದ್ದು, ಈ ಸೇವೆಯನ್ನು ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡವರು ಡಾ.ಫ.ಗು. ಹಳಕಟ್ಟಿಯವರಾಗಿದ್ದಾರೆ ಎಂದರು.



ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಅನೀಕುಮಾರ ದಡ್ಡಿ ಮಾತನಾಡಿ ಶರಣರು, ಮಹನೀಯರು ತಮ್ಮ ವಚನ ಸಾಹಿತ್ಯದ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆ. ನಶಿಸಿ ಹೋಗುತ್ತಿರುವ ಸಾಹಿತ್ಯದ ಅಮೂಲ್ಯ ಸಂಪತ್ತನ್ನು ದಾಖಲಿಸುವ ಕೆಲಸ ಡಾ.ಫ.ಗು ಹಳಕಟ್ಟಿಯವರು ಮಾಡಿದ್ದಾರೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆದುಕೊಳ್ಳಬೇಕಿದೆ. ಅಂದಾಗ ಮಾತ್ರ ಅವರ ಹೆಸರಿನಲ್ಲಿ ದಿನಾಚರಣೆಯನ್ನು ಆಚರಿಸಿದಕ್ಕೆ ಸಾರ್ಥಕವಾಗುತ್ತದೆ ಎಂದರು.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮಹತ್ವ, ಪರಂಪರೆಯ ಮೌಲ್ಯ ಹಾಗೂ ಮುಂದಿನ ಪೀಳಿಗೆಗೆ ಅದನ್ನು ಉಳಿಸಿ ಬೆಳೆಸುವ ಅಗತ್ಯತೆಯ ಕುರಿತು ಗುಳೇದಗುಡ್ಡ ನಿವೃತ್ತ ಪ್ರಾಚಾರ್ಯ ಸಿದ್ದಲಿಂಗಪ್ಪ ಬರಗುಂಡಿ ವಿಶೇಷ ಉಪನ್ಯಾಸ ನೀಡಿದರು. ಡಾ.ಹಳಕಟ್ಟಿಯವ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ಹಾಗೂ ಪುಸ್ತಕದ ರೂಪದ ಬಹುಮಾನ ವಿತರಣೆ ಮಾಡಲಾಯಿತು.

ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ, ಸರಕಾರಿ ಆದರ್ಶ ವಿದ್ಯಾಲಯದ ಪ್ರಾಚಾರ್ಯ ವೀರೇಶ ಪತ್ತಾರ, ಖ್ಯಾತ ವೈದ್ಯ ಡಾ.ಎಂ.ಎಸ್.ದಡ್ಡೇನವರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಾಹಿತ್ಯಕ್ಕೆ ಅಪೂರ್ವ ಕೊಡುಗೆ

ಬಸವಾದಿ ಶರಣರ ಸಾವಿರಾರು ವಚನಗಳು ಕಾಲಗರ್ಭದಲ್ಲಿ ಮರೆಯಾಗುತ್ತಿದ್ದ ಸಂದರ್ಭದಲ್ಲಿ ಡಾ.ಫ.ಗು.ಹಳಕಟ್ಟಿಯವರು ಊರೂರು ಸುತ್ತಿ ಮಠ-ಮಂದಿರಗಳು ಹಾಗೂ ಖಾಸಗಿ ಮನೆಗಳಲ್ಲಿ ಸಂಗ್ರಹವಾಗಿದ್ದ ತಾಳೆಗರಿಗಳು ಮತ್ತು ಹಸ್ತಪ್ರತಿಗಳನ್ನು ಹುಡುಕಿ ಅವುಗಳನ್ನು ಸಂರಕ್ಷಿಸಿ, ಮುದ್ರಿಸಿ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ನೀಡಿದ್ದಾರೆ.

ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದೆ: ಪಾಟೀಲ

• **ಕಲಾದಗಿ:** ರಾಜ್ಯದಲ್ಲಿರುವ ಪ್ರತಿ ಸಮುದಾಯಕ್ಕೂ ಸರ್ಕಾರದಿಂದ ಅಗತ್ಯ ಅನುದಾನ ಮೀಸಲಿದ್ದು, ಸಮಾಜದ ಅಭಿವೃದ್ಧಿ ಕಾರ್ಯಗಳಿಗಾಗಿ ಬಳಕೆ ಮಾಡಲಾಗುತ್ತಿದೆ. ಕಾಂಗ್ರೆಸ ಸರ್ಕಾರಕ್ಕೆ ರೈತರ ಬಗ್ಗೆ ಅಪಾರ ಕಾಳಜಿ ಇದ್ದು ಅವರ ಜಮೀನುಗಳಿಗೆ ನೀರೊದಗಿಸುವ ಕೆಲಸ ಮಾಡುತ್ತಿದೆ ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಬೀಳಗಿ ವಿಧಾನಸಭಾ ವ್ಯಾಪ್ತಿಯ ಸೀಮಿಕೇರಿ ಗ್ರಾಮದ ಪರಿಶಿಷ್ಟ ಪಂಗಡ ರೈತರ ಜಮೀನುಗಳಿಗೆ ಏತ ನೀರಾವರಿ ಯೋಜನೆಯ ಮೂಲಕ ನೀರಾವರಿ ಕಲ್ಪಿಸುವ ಕಾಮಗಾರಿ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಈ ಯೋಜನೆ ಮೂಲಕ ಪರಿಶಿಷ್ಟ ಪಂಗಡದ 30ಜನ ರೈತರ ಅಂದಾಜು 100 ಹೆಕ್ಟೇರ್ ಪ್ರದೇಶದ ಕೃಷಿಭೂಮಿಗೆ 500 ಕೆವಿ ವಿದ್ಯುತ್ 40 ಎಚ್‌ಪಿ ಜಾಕವೆಲ್ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ರೈತರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಖಜ್ಜಿಡೋಣಿ ಗ್ರಾಮದಲ್ಲಿ 107 ಲಕ್ಷ ರೂ. ವೆಚ್ಚದಲ್ಲಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ ಮತ್ತು ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಖಜ್ಜಿಡೋಣಿ ಗ್ರಾಮದಲ್ಲಿ 10ಲಕ್ಷ ರೂಗಳ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ, ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಖಜ್ಜಿಡೋಣಿಯಿಂದ ಹನಮನೇರಿ ರಸ್ತೆಗೆ ಖಡೀಕರಣ ಹಾಗೂ ಡಾಂಬರೀಕರಣ ಕಾಮಗಾರಿಗೆ ಭೂಮಿಪೂಜೆ ಮತ್ತು ಅಂಕಲಗಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನಡೆದವು.

ಕೆಪಿಸಿಸಿ ಉಪಾಧ್ಯಕ್ಷ ಎಂ.ಬಿ.ಸೌದಾಗರ, ಕಲಾದಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಸಂಶಿ, ಜಿಪಂ ಮಾಜಿ ಸದಸ್ಯ ಪಾಂಡಪ್ಪ ಪೋಲಿಸ, ತಾಪಂ ಮಾಜಿ ಉಪಾಧ್ಯಕ್ಷ ಸಂಗಣ್ಣ ಮುಧೋಳ, ಪಾಂಡಪ್ಪ ಚನ್ನವ್ವಗೋಳ, ಟಿ.ವಿ.ಪಾಟೀಲ, ರಾಮಪ್ಪ ವಾಸನದ, ಯಲ್ಲಪ್ಪ ತಳವಾರ, ಲಕ್ಷ್ಮಣ ಬಿಲಕೇರಿ, ಗಂಗಪ್ಪ ಮಾದರ, ಸಿದ್ದಪ್ಪ ಹೊರ್ತಿ, ರಾಜು ಸುನಗದ, ಈರಪ್ಪ ನಾಯ್ಕರ, ಬಸಪ್ಪ ನಾಯ್ಕರ, ಅಶೋಕ ಯಡಹಳ್ಳಿ, ಫಕೀರಪ್ಪ ಕೋವಳ್ಳಿ, ಭರಮಪ್ಪ ವಾಲಿಕಾರ, ಹಣಮಂತ ಕೆಂಚನ್ನವರ ಸೇರಿದಂತೆ ಇತರರಿದ್ದರು.



ಮನೆಬಾಗಿಲಿಗೆ ಆರೋಗ್ಯ ಸೇವೆ: ಮೇಟಿ

• **ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಉಮೇಶ ಮೇಟಿ ಗುರುವಾರ ವಿವಿಧ ಗ್ರಾಮಗಳಲ್ಲಿ ಸಾರ್ವಜನಿಕ ಉಪಯೋಗದ ಕಾಮಗಾರಿಗಳಿಗೆ ಚಾಲನೆ ನೀಡಿದರು.

ತಾಲೂಕಿನ ಹಳ್ಳೂರ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪಿಎಂ, ಎಬಿಎಚ್‌ಐಎಂ ಯೋಜನೆಯಡಿ ರೂ.65 ಲಕ್ಷ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಲಿರುವ ಆಯುಷ್ಮಾನ್ ಆರೋಗ್ಯ ಮಂದಿರ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಜನತೆಗೆ ಗುಣಮಟ್ಟದ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಮನೆಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಸರ್ಕಾರ ಆರೋಗ್ಯ ಮೂಲ ಸೌಕರ್ಯಗಳನ್ನು ನಿರಂತರವಾಗಿ ಬಲಪಡಿಸುತ್ತಿದೆ. ಹಳ್ಳೂರ ಗ್ರಾಮದಲ್ಲಿ ನಿರ್ಮಾಣವಾಗಲಿರುವ ಆಯುಷ್ಮಾನ್ ಆರೋಗ್ಯ ಮಂದಿರದಿಂದ ಹಳ್ಳೂರಸೇರಿದಂತೆಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆಉತ್ತಮ ಆರೋಗ್ಯ ಸೇವೆಗಳು ಸುಲಭವಾಗಿ ಲಭ್ಯವಾಗಲಿದ್ದು, ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಇದು ಮಹತ್ವದ ಕೊಡುಗೆಯಾಗಲಿದೆ ಎಂದು ತಿಳಿಸಿದರು. ಬಳಿಕ ಸುರಳಿಕಲ್ ಗ್ರಾಮದಲ್ಲಿ ರೂ. 75 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಬ್ರಿಜ್ ಕಂ ಬ್ಯಾರೇಜ್ ಪುನರುಜ್ಜೀವನ ಕಾಮಗಾರಿಗೆ ಶಾಸಕ ಉಮೇಶ ಮೇಟಿ ಚಾಲನೆ ನೀಡಿದರು. ಕಾಮಗಾರಿ ಪರಿಶೀಲಿಸಿದ ಅವರು, ಗುಣಮಟ್ಟಕ್ಕೆ ಯಾವುದೇ ರಾಜಿ ಮಾಡಿಕೊಳ್ಳದೆ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿದರು. ಸಾರ್ವಜನಿಕರಿಗೆ ದೀರ್ಘಕಾಲದ ಪ್ರಯೋಜನವಾಗುವ ರೀತಿಯಲ್ಲಿ ಕಾಮಗಾರಿ ನಿರ್ವಹಿಸುವಂತೆ ಅಧಿಕಾರಿಗಳಿಗೂ ನಿರ್ದೇಶನ ನೀಡಿದರು.

ಬಸವಂತಪ್ಪ ಮೇಟಿ, ಮಲ್ಲಿಕಾರ್ಜುನ ಮೇಟಿ, ಬಾಯಕ್ಕ ಮೇಟಿ, ಎಸ್.ಎನ್. ರಾಂಪುರ, ಮುತ್ತಣ್ಣ ಮುಳ್ಳೂರು, ಸಂಗಣ್ಣ ಹಂಡಿ, ಬಸವಂತಪ್ಪ ಅಂತಾರತನಿ, ಬಸನಗೌಡ ಪರನಗೌಡ, ಬಿ.ಬಿ.ದೊಡ್ಡಗೌಡ, ಮಂಜು ಹೊಸಗೌಡ, ವೈ.ವೈ.ತಿಮ್ಮಾಪುರ, ರಮೇಶ್ ಕೊಳ್ಳಾರ, ಭೀಮಣ್ಣಗೌಡ ಭೋತಲದಿನ್ನಿ, ಕಾಂಗ್ರೆಸ್ ಮುಖಂಡರು, ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಗ್ರಾಪಂ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಜಾತಿ ನೋಡಿ ಮತ ಚಲಾಯಿಸಬೇಡಿ: ಶಾಸಕ ಸವದಿ

• **ತೇರದಾಳ:** ಅದೃಷ್ಟವಿದ್ದವರಿಗೆ ಮಾತ್ರ ಬಿಜೆಪಿ ಪಕ್ಷದಲ್ಲಿ ದುಡಿಯುವ ಅವಕಾಶ ದೊರಕುತ್ತದೆ. ಈ ದೇಶದ ಋಣ ತೀರಿಸಬೇಕೆನ್ನುವರು ಮಾತ್ರ ಬಿಜೆಪಿಗೆ ಬರಲು ಅವಕಾಶವಿದೆ. ಮತದಾರ ನಮ್ಮ ಪಕ್ಷದ ಸಿದ್ಧಾಂತ ಮತ್ತು ದೇಶದ ನಾಯಕತ್ವ ನೋಡಿ ಮತ ಹಾಕಬೇಕೇ ಹೊರತು ಜಾತಿ ನೋಡಿ ಅಲ್ಲ, ನಮಗೆ ಜಾತಿ ಮಹತ್ವದಲ್ಲ ಈ ದೇಶ ಮಹತ್ವದ್ದು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಪಟ್ಟಣದ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಹಮ್ಮಿಕೊಂಡ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಬಿಜೆಪಿಯೇ ನಮ್ಮ ಜಾತಿ. ನಾವೆಲ್ಲರೂ ಒಂದೇ ತಾಯಿ ಮಕ್ಕಳೆಂದು ತಿಳಿದು ಕೆಲಸ ಮಾಡಿದರೆ ನಮ್ಮ ದೇಶವನ್ನು ಬಲಿಷ್ಠಗೊಳಿಸಬಹುದು. ನಾವೆಲ್ಲರೂ ಪರಸ್ಪರ ಒಂದಾಗಿ ಶುದ್ಧಭಾವದಿಂದ ದೇಶದ ಸೇವೆ ಮಾಡೋಣ ಎಂದರು. ರಾಮಮಂದಿರದೇಣಿಗೆ ವಿಷಯದಲ್ಲಿ ವಿರೋಧ ಪಕ್ಷಗಳು ಮೋದಿಯವರ ಮೇಲೆ ಉದ್ದೇಶಪೂರ್ವಕವಾಗಿ ಅಪಪ್ರಚಾರ ಮಾಡುತ್ತಿರುವದು ಅವರ ದಡ್ಡತನ ಎತ್ತಿ ತೋರಿಸುತ್ತದೆ. ಅವರು ನಮ್ಮ ದೇಶಕ್ಕೆ ಪ್ರಧಾನಿಯಾಗಿ ಸಿಕ್ಕಿರುವುದೇ ನಮ್ಮ ಅದೃಷ್ಟವಾಗಿದೆ. ಅವರು ಇಡೀ ದೇಶವೇ ನನ್ನ ಕುಟುಂಬವೆಂದು ಹೇಳಿದ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ. ಬಿಜೆಪಿ ಅತ್ಯಂತ ಉದಾತ್ತ ಪಕ್ಷವಾಗಿದೆ. ಪಕ್ಷದ ಕಾರ್ಯಕರ್ತರು ಶಿಸ್ತಿನ ಸಿಪಾಯಿಗಳಾದರೆ ಪಕ್ಷದ ಗೆಲುವು ಖಂಡಿತ. ಈ ದೇಶದ ಹಾಗೂ ನಮ್ಮೆಲ್ಲರ ಸಂರಕ್ಷಣೆಗಾಗಿ ಮತ್ತೇ ಮೋದಿಜಿಯವರ ಕೈ ಬಲಪಡಿಸೋಣ ಎಂದರು.



ನಗರ ಘಟಕದ ಮಾಜಿ ಅಧ್ಯಕ್ಷ ಮಹಾವೀರ ಕೊಕಟನೂರ ನೂತನವಾಗಿ ಅಧ್ಯಕ್ಷರಾಗಿ ಆಯ್ಕೆಯಾದ ರಾಮಣ್ಣ ಹಿಡಕಲ್, ಉಪಾಧ್ಯಕ್ಷ ಪ್ರಕಾಶ ಹೊಸಮನಿ ಹಾಗೂ ಕಾರ್ಯದರ್ಶಿ ಶಿತಲ ಗುಳ್ಳನ್ನವರ ಇವರಿಗೆ ಬಿಜೆಪಿ ಪಕ್ಷದ ಧ್ವಜವನ್ನು ಹಸ್ತಾಂತರಿಸಿದರು. ಯುವಮೋರ್ಚಾದ ಅಧ್ಯಕ್ಷರಾಗಿ ಆಯ್ಕೆಯಾದ ಭೀಮು ಮಸೂತಿ, ಉಪಾಧ್ಯಕ್ಷ ಮಹಾಬಲ ಚವಜ, ಕಾರ್ಯದರ್ಶಿ ಪ್ರಮೋದ ಸೊಟ್ಟಿ ಇವರಿಗೂ ಸನ್ಮಾನಿಸಲಾಯಿತು. ಸುರೇಶ ಅಕ್ಕಿವಾಟ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಾಮಣ್ಣ ಹಿಡಕಲ್ ಪ್ರವೀಣ ನಾಡಗೌಡ ಮಾತನಾಡಿದರು. ಬಿಜೆಪಿ ಮುಖಂಡರು ಇದ್ದರು.

ರಕ್ತದಾನದಿಂದ ಜೀವ ಉಳಿಸಲು ಸಾಧ್ಯ

• **ಬಾದಾಮಿ:** ರಕ್ತದಾನ ಮಹಾದಾನ. ರಕ್ತದಿಂದ ಇನ್ನೊಂದು ಜೀವ ಉಳಿಸಲು ಸಾಧ್ಯ. ಪ್ರತಿಯೊಬರೂ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಬೇಕು ಎಂದು ನಿವೃತ್ತ ಪ್ರಾಚಾರ್ಯ ಜಿ.ಬಿ.ಶೀಲವಂತರ ಹೇಳಿದರು.

ನಗರದ ರಾಮದುರ್ಗ ರಸ್ತೆಯ ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಬನಶಂಕರಿ ರಕ್ತ ಕೇಂದ್ರದ ಸಹಯೋಗದಲ್ಲಿ ನಡೆದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ಮಾತನಾಡಿದರು. ಬೇರೆಯವರಿಗೆ ಯಾವುದೇ ಕಾರಣದಿಂದ ತೊಂದರೆಯಾದಾಗ, ಅಪಘಾತ, ರಕ್ತ ಕಡಿಮೆಯಾದವರಿಗೆ ರಕ್ತ ಬೇಕಾಗಿರುತ್ತದೆ. ರಕ್ತದಾನ ಮಾಡಿದರೆ ಅಂತಹ ಸಂಕಷ್ಟದಲ್ಲಿರುವವರಿಗೆ ರಕ್ತ ಹಾಕಬಹುದು ಎಂದು ಹೇಳಿದರು.

ಎಸ್‌ಬಿಐ ಬ್ಯಾಂಕ್ ಕಾನೂನು ಸಲಹೆಗಾರ ಎಂ.ಎಸ್.ಹಿರೇಮಠ ಮಾತನಾಡಿ, ಬ್ಯಾಂಕು ಹಣಕಾಸಿನ ವ್ಯವಹಾರ ಮಾಡುವುದರ ಜೊತೆಗೆ ವಿವಿದ ಸಾಲ ಸೌಲಭ್ಯ, ರಕ್ತದಾನ ಶಿಬಿರ, ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತದೆ ಎಂದು ಹೇಳಿದರು.ಶಾಖಾ ವ್ಯವಸ್ಥಾಪಕ ಶಂಭುಕುಮಾರ ಸಾಹು ಅಧ್ಯಕ್ಷತೆ ವಹಿಸಿದ್ದರು. ಎಸ್‌ಬಿಐ ಸಿಬ್ಬಂದಿ, ಸಾರ್ವಜನಿಕರು ಸೇರಿದಂತೆ 20 ಜನರು ರಕ್ತದಾನ ಮಾಡಿದರು. ದಾವಣಗೆರೆಯ ಮಹಡಿಮನೆ ಶಿವುಕುಮಾರ ಅವರು 108ನೇ ಬಾರಿಗೆ ರಕ್ತದಾನ ಮಾಡಿ ಮಾನವೀಯತೆ ಮೆರೆದರು. ಎಸ್‌ಬಿಐ ಕ್ಷೇತ್ರಾಧಿಕಾರಿ ಶೇಷಗಿರಿರಾವ್ ಕಾರಕೂನ, ಸೇವಾ ವ್ಯವಸ್ಥಾಪಕ ಶಿವಾನಂದ ವಡತಿಲ್ಲೆ, ಕ್ಯಾಶಿಯರ್ ಧೂಳಪ್ಪ ಕಿತ್ತಲಿ, ಬನಶಂಕರಿ ರಕ್ತ ಕೇಂದ್ರದ ಮುಖ್ಯಸ್ಥ ಮುತ್ತು ಶೆಟ್ಟಿ, ಸಿಬ್ಬಂದಿ ಪ್ರಕಾಶ ಚಲವಾದಿ ಸೇರಿದಂತೆ ಎಸ್‌ಬಿಐ ಸಿಬ್ಬಂದಿ, ಸಾರ್ವಜನಿಕರು, ಗ್ರಾಹಕರು ಉಪಸ್ಥಿತರಿದ್ದರು.



ಮಾದಕ ವ್ಯಸನದಿಂದ ಯುವಕರು ದೂರವಿರಲಿ

• **ಜಮಖಂಡಿ:** ವ್ಯಸನ ಮುಕ್ತ ಸಮಾಜ ನಿರ್ಮಾಣವಾಗಲು ಮಾದಕ ವ್ಯಸನದಿಂದ ಯುವಕರು ದೂರ ವಿರಬೇಕು. ಮಾದಕ ವ್ಯಸನದಿಂದ ಕುಟುಂಬ ಸಮಾಜ ಹಾಳಾಗುತ್ತದೆ ಎಂದು ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ ಹೇಳಿದರು.



ತಾಲೂಕು ಕ್ರೀಡಾಂಗಣದಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ ಡ್ರಗ್ಸ್ ಮುಕ್ತ ಕರ್ನಾಟಕ ಅಂಗವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ ಅಭಿಯಾನ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ಯಾವುದೇ ರೀತಿಯ ದುಶ್ಚಟಗಳ ದಾಸರಾಗಬಾರದು. ದೇಶದಲ್ಲಿ 30 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಮದ್ಯಪಾನ, 10 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಗಾಂಜಾ ವ್ಯಸನಿಗಳಾಗಿದ್ದಾರೆ ಎಂಬ ಮಾಹಿತಿ ಇದೆ. ಯುವ ಪೀಳಿಗೆ ದೇಶದ ಭವಿಷ್ಯವಿದ್ದಂತೆ, ಯಾವುದೇ ಚಟಗಳಿಗೆ ದಾಸರಾಗದೇ ನಿಮ್ಮ ಆರೋಗ್ಯವನ್ನು ಚನ್ನಾಗಿ ನೋಡಿಕೊಂಡು ಆರೋಗ್ಯವಂತರಾಗಿರಬೇಕು ಎಂದರು.

ಡಿವೈಎಸ್‌ಪಿ ಸೈಯದ್ ರೋಶನ್ ಜಮೀರ ಮಾತನಾಡಿ, ಯುವ ಸಮುದಾಯವನ್ನು ಹಾಳು ಮಾಡುತ್ತಿರುವ ಮಾದಕ ವಸ್ತುಗಳಿಂದ ಯುವ ಜನತೆ ಎಚ್ಚರಿಕೆ ವಹಿಸಬೇಕು, ಜಿಲ್ಲೆಯಲ್ಲಿ 50 ಸಾವಿರ ವಿದ್ಯಾರ್ಥಿಗಳು ಓದುತ್ತಿದ್ದು ಶೇ. 21ರಷ್ಟು ತಂಬಾಕು, ಮದ್ಯ ಸೇವನೆ, ಮಾದಕ ವಸ್ತುಗಳ ಸೇವನೆ ಶೇ. 15.67 ರಷ್ಟು ವಿದ್ಯಾರ್ಥಿಗಳು ಧೂಮ್ರಪಾನ, ಶೇ.3ರಷ್ಟು ವಿದ್ಯಾರ್ಥಿಗಳು ಗಾಂಜಾ ಸೇವಿಸುತ್ತಾರೆ ಎಂದು ಅಧ್ಯಯನ ದಿಂದ ತಿಳಿದು ಬಂದಿದೆ ಎಂದರು.

ಪೌರಾಯುಕ್ತ ಜ್ಯೋತಿ ಗಿರೀಶ ಮಾತನಾಡಿದರು. ಸಿಪಿಐ ಮಲ್ಲಪ್ಪ ಮಡ್ಡಿ ಮಾದಕ ವಸ್ತುಗಳ ವಿರುದ್ಧ ಪ್ರತಿಜ್ಞಾವಿಧಿ ಬೋಧಿಸಿದರು. ರಬಕವಿ-ಬನಹಟ್ಟಿ ಸಿಪಿಐ ಆರ್. ಕೆ.ಪಾಟೀಲ, ಮುಧೋಳ ಸಿಪಿಐ ನಾಗರೆಡ್ಡಿ, ಗ್ರಾಮೀಣ ಪಿಎಸ್‌ಐ ಗಂಗಾಧರ ಪೂಜೇರಿ, ಸಾವಳಗಿ ಪಿಎಸ್‌ಐ ಅಪ್ಪಣ್ಣ ಐಗಳಿ, ಎಸ್. ಕೆ.ಸಿಂಗನ್ನವರ, ಕಿರಣ ಸತ್ತಿಗೇರಿ, ಸೇರಿದಂತೆ ಉಪವಿಭಾಗದ ಪೊಲೀಸ್ ಅಧಿಕಾರಿಗಳು ಶಿಕ್ಷಕರು, ಉಪನ್ಯಾಸಕರು ಇದ್ದರು. ಪಿಎಸ್‌ಐ ಅನೀಲ ಕುಂಬಾರ ನಿರೂಪಿಸಿ,

ಅವ್ಯವಹಾರ ಖಂಡಿಸಿ ಪ್ರತಿಭಟನೆ

• **ಅಮೀನಗಡ:** ಕಳೆದ ಒಂಬತ್ತು ವರ್ಷಗಳಿಂದ ಶಾಖಾಂಬರಿ ನೇಕಾರ ಸಹಕಾರಿ ಸಂಘದಲ್ಲಿ ನಡೆದಿರುವ ಕೋಟ್ಯಂತರ ರೂ. ಅವ್ಯವಹಾರ ಮತ್ತು ಹಣ ದುರುಪಯೋಗ ಖಂಡಿಸಿ ಸಂಘದ ಸದಸ್ಯರು ಕಳೆದ ಎರಡು ದಿನಗಳಿಂದ ನಿರಂತರ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಈ ಸಂಸ್ಥೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ನೌಕರರ ಪಿಎಫ್ ಹಣ, ಕಟ್ಟಡದ ಬಾಡಿಗೆ ಹಣ ದುರುಪಯೋಗ ಮತ್ತು ಲೆಕ್ಕ ಪರಿಶೋಧನೆಯಲ್ಲಿನ ಗಂಭೀರ ಲೋಪದೋಷಗಳ ಬಗ್ಗೆ ತನಿಖೆಗೆ ಆಗ್ರಹಿಸಿದ್ದಾರೆ.ಆಡಳಿತ ಮಂಡಳಿಯ ಅಧ್ಯಕ್ಷ ಪ್ರವೀಣ ರಾಮದುರ್ಗ ಹಾಗೂ ಉಪಾಧ್ಯಕ್ಷ ಮಂಜುನಾಥ ಮಿಣಜಗಿ ಅವರು ಪ್ರತಿಭಟನಾಕಾರರೊಂದಿಗೆ ಚರ್ಚಿಸಲು ಮುಂದಾದರೂ ಅವರ ಮನವಿ ತಿರಸ್ಕರಿಸಲಾಗಿದೆ. ಈ ಹೋರಾಟಕ್ಕೆ ಜಿಲ್ಲಾ ಕೆಆರ್‌ಎಸ್ ಪಕ್ಷ ಬೆಂಬಲ ವ್ಯಕ್ತಪಡಿಸಿದೆ.ಈ ಕುರಿತು ಪ್ರತಿಕ್ರಿಯಿಸಿರುವ ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಜಾರಖಾನೆ ಅವರು, ಈಗಾಗಲೇ 1.93 ಕೋಟಿ ರೂ. ಹಣ ವಸೂಲಾತಿ ಮಾಡಲಾಗಿದೆ ಮತ್ತು ತನಿಖೆಗಾಗಿ ತಹಶೀಲ್ದಾರರಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ. ನೇಕಾರ ಮುಖಂಡ ಬಸವರಾಜ ಜಿ. ಮಿಣಜಗಿ ಕೆಲ ಪಟ್ಟಭದ್ರ ಹಿತಾಸಕ್ತಿಗಳು ನಮ್ಮನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿವೆ. ಬಡ ನೇಕಾರರಿಗೆ ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



ಸಕ್ಕರೆ ಕಾಯಿಲೆ ಹತೋಟಿಯಲ್ಲಿ ಇಟ್ಟುಕೊಳ್ಳಿ

• **ಕಮತಗಿ:** ಮಿತವಾದ ಆಹಾರ, ಶುಚಿಯಾದ ಆಹಾರ, ನಿಯಮಿತವಾಗಿ ಸೇವಿಸುವುದರಿಂದ ಸಕ್ಕರೆ ಕಾಯಿಲೆ ಹತೋಟಿಗೆ ತರಬಹುದು ಎಂದು ಜವಳಿ ಮಲ್ಟಿಸ್ಪಷಾಲಿಟಿ ಹಾಸ್ಪಿಟಲ್ ಗುಳೇದಗುಡ್ಡ ಖ್ಯಾತ ವೈದ್ಯರಾದ ಡಾ.ಚಂದ್ರಕಾಂತ್ ಎಸ್.ಜವಳಿ ಹೇಳಿದರು.



ಪಟ್ಟಣದಲ್ಲಿ ಜವಳಿ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್ ಗುಳೇದಗುಡ್ಡ ಹಾಗೂ ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ (ರಿ) ಸಹಯೋಗದಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಹೊಳೆಹುಚ್ಚೇಶ್ವರ ಮಹಾಸಂಸ್ಥಾನ ಮಠದ ಸಭಾಭವನದಲ್ಲಿ ಏರ್ಪಡಿಸಿದ್ದ ಸಕ್ಕರೆ ಕಾಯಿಲೆ ಕುರಿತು ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ದಿನನಿತ್ಯ ಜೀವನ ದಲ್ಲಿ ಉಪಯೋಗಿಸು ವಂತಹ ಆಹಾರ ಪದ್ಧತಿ, ವಿತಮಿತವಾಗಿ ಬಳಸುವುದರಿಂದ ಹತೋಟಿಗೆ ತರಬಹು ಎಂದು ತಿಳಿಸಿದರು. ಖ್ಯಾತ ವೈದ್ಯ ಆರ್.ಟಿ.ದೇಶಪಾಂಡೆ ಮಾತನಾಡಿ, ರೋಗಿಗಳು ಯಾವುದೇ ವೈದ್ಯರ ಕಡೆ ಚಿಕಿತ್ಸೆಗೆ ಹೋದರೆ ಆ ವೈದ್ಯರ ಮೇಲೆ ನಂಬಿಕೆ ಇರಬೇಕು. ಇದು ರೋಗಿಯ ಹಾಗೂ ವೈದ್ಯರ ನಡುವೆ ಗಟ್ಟಿಯಾದ ಸೇತುವೆ ನಿರ್ಮಾಣವಾದರೆ ಅದು ಎಂತಹ ಕಾಯಿಲೆ ಇದ್ದರೂ ಸಹ ವೈದ್ಯರು ಆ ರೋಗಿಯಿಂದ ರೋಗ ಸಂಪೂರ್ಣವಾಗಿ ನಿವಾರಿಸುವಲ್ಲಿ ಯಶಸ್ವಿ ಸಾಧಿಸಬಹುದು ಎಂದರು. ಕಮತಗಿ-ಕೋಟೆಕಲ್ಲ ಹೊಳೆ ಹುಚ್ಚೇಶ್ವರ ಮಹಾಸಂಸ್ಥಾನ ಮಠದ ಹುಚ್ಚೇಶ್ವರ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಪಟ್ಟಣ ಪಂಚಾಯತಿ ಅಧ್ಯಕ್ಷಬಸವರಾಜಪು.ಕುಂಬಳಾವತಿ, ಖ್ಯಾತ ವೈದ್ಯ ಡಾ.ರವೀಂದ್ರ ಟಿ. ದೇಶಪಾಂಡೆ, ಡಾ.ಹುಚ್ಚೇಶ ಕಲ್ಯಾಣ್ಮಠ, ಡಾ.ಚಂದ್ರಕಾಂತ ರಕ್ಕಸಗಿ, ಡಾ.ಹೀರಾಳಕಮತಗಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ಸಿಬ್ಬಂದಿ, ಹೆಜ್ಜೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಂಸ್ಥೆ (ರಿ) ಕಮತಗಿ ಅಧ್ಯಕ್ಷ ವೀರಭದ್ರಪ್ಪ ಮುರಾಳ, ಕಾರ್ಯದರ್ಶಿ ಶಂಕರ್ ವನಕಿ, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಭಾಗವಹಿಸಿದ್ದರು.

ಕಿರುಸುದ್ದಿ



ಇಂಡಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ನಗರಾಭಿವೃದ್ಧಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಅಜೀತ ಧನಶೆಟ್ಟಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಪ್ರಶಾಂತ ಕಾಳೆ ಅವರಿಗೆ ಉಪ ವಿಭಾಗಾಧಿಕಾರಿಗಳು ಅರ್ಜಿ ನಮೂನೆ ವಿತರಿಸಿದರು.

ಜಾಗೃತಿ ಜಾಥಾ

• **ಬಸವನಬಾಗೇವಾಡಿ:** ಪಟ್ಟಣದ ಪುರಸಭೆಯ ಸಿಬ್ಬಂದಿ ಹಾಗೂ ಅಕ್ಕನಾಗಮ್ಮ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ಭಾರತೀಯ ಚುನಾವಣಾ ಆಯೋಗದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಅಭಿಯಾನದ ಅಡಿಯಲ್ಲಿ ಸಾರ್ವಜನಿಕ ಜಾಗೃತಿ ಜಾಥಾ ಕಾರ್ಯಕ್ರಮ ಗುರುವಾರ ಹಮ್ಮಿಕೊಳ್ಳಲಾಗಿತು.



ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ ಅವರು ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು ಎಂದರು.

ಜಾಥಾ ಪಟ್ಟಣದ ಪ್ರಮುಖ ರಸ್ತೆಗಳು, ಬಸವೇಶ್ವರ ವೃತ್ತದ ಮೂಲಕ ಸಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಬಿಎಲ್‌ಒಗಳು ಮನೆ-ಮನೆ ಸಮೀಕ್ಷೆಗೆ ಬಂದಾಗ ಸಹಕರಿಸಲು ಜಾಥಾದುದ್ದಕ್ಕೂ ಅರಿವು ಮೂಡಿಸಲಾಯಿತು. ಪುರಸಭೆ ಸಿಬ್ಬಂದಿಗಳಾದ ಕಂದಾಯ ಅಧಿಕಾರಿ ಶಬ್ಬೀರ ರೇವುರಕರ, ವ್ಯವಸ್ಥಾಪಕ ಎಸ್.ಬಿ.ಬಾಗೇವಾಡಿ, ಅಭಿಯಂತರರಾದ ಸಂತೋಷ ಗಿಡಸಣ್ಣನವರ, ಆರೋಗ್ಯ ನಿರೀಕ್ಷಕರಾದ ವಿಜಯಕುಮಾರ ವಂದಾಲ, ಮಹೇಶ ಹಿರೇಮಠ, ಸಿದ್ದರಾಮಗೌಡ ಪಾಟೀಲ, ಅಕ್ಕನಾಗಮ್ಮ ಪ್ರೌಢಶಾಲೆಯ ಮುಖ್ಯಗುರು ಕೆ.ಆರ್. ಲಮಾಣಿ, ಸಹ ಶಿಕ್ಷಕರಾದ ಅಶೋಕ ಹಂಚಲಿ, ಜಿ.ಎಂ.ಗಂಜಾಳ, ಸುರೇಶ ಬಾಗೇವಾಡಿ, ಎಚ್.ವಿ.ಮೇಟಿ, ವಿ.ವಿ.ಅಪನಗಿ, ವಿದ್ಯಾ ಮನಗೂಳಿ, ಜ್ಯೋತಿ ಹಂಗರಗಿ, ಜ್ಯೋತಿ ಮೂಲಿಮನಿ, ವಿಜಯಲಕ್ಷ್ಮೀ ಆಡವಿ, ಸ್ನೇಹ ಪೂಜಾರ, ಸುಮಂಗಲಾ ಚಿಮ್ಮಲಗಿ, ರೂಪಾ ಆಶ್ರಿತ, ಸುಜಾತ ಗಿಡವೀರ, ಎಂ.ವೈ.ಜಾಲವಾದಿ ಇದ್ದರು.

ಜು.6ರಂದು ಫೋನ್-ಇನ್ ಕಾರ್ಯಕ್ರಮ

• **ವಿಜಯಪುರ:** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಮೂಲಕ ಪ್ರಯಾಣಿಕರ ಅನುಕೂಲಕ್ಕಾಗಿ ಅಹವಾಲು ಮತ್ತು ಕುಂದು- ಕೊರತೆಗಳನ್ನು ಆಲಿಸಲು ಜು.6ರಂದು ಮಧ್ಯಾಹ್ನ 3.30ರಿಂದ 4.30ರ ವರೆಗೆ ಫೋನ್-ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದೂರವಾಣಿ ಸಂಖ್ಯೆ: 63664 23887 ಇಲ್ಲಿಗೆ ಸಾರ್ವಜನಿಕರು ಕರೆ ಮಾಡಿ, ತಮ್ಮ ಕುಂದು- ಕೊರತೆಗಳನ್ನು ಪರಿಹರಿಸಿಕೊಳ್ಳಬೇಕೆಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಗ್ರಾಮ ಪಂಚಾಯತಿ ಮೀಸಲು ನಿಗದಿ

• **ವಿಜಯಪುರ:** ಅವಧಿ ಪೂರ್ಣಗೊಂಡ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಗ್ರಾಮ ಪಂಚಾಯತಿಗಳ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಕ್ಷೇತ್ರಕ್ಕೆ ವಿವಿಧ ವರ್ಗಗಳ ಸ್ಥಾನಗಳನ್ನು ಮೀಸಲಿರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 5 ರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಧೀನಕ್ಕೆ ಒಳಪಡುವ ಪ್ರದೇಶಗಳನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸಿ, ಕೋಷ್ಟಕ-1 ಮತ್ತು ಕೋಷ್ಟಕ-2ರಲ್ಲಿ ಪ್ರಾದೇಶಿಕ ಚುನಾವಣಾ ಕ್ಷೇತ್ರಕ್ಕೆ ವಿವಿಧ ವರ್ಗಗಳ ಸ್ಥಾನಗಳನ್ನು ಮೀಸಲು ನಿಗದಿಪಡಿಸಿದ್ದನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದೆ. ತಾಲೂಕುಗಳ ತಹಶೀಲ್ದಾರ್ ಕಚೇರಿ, ತಾಲೂಕು, ಗ್ರಾಮ ಪಂಚಾಯತಿಗಳಲ್ಲಿ ಪ್ರಕಟಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಪ್ರೀತಿ ಪೂಜಾರಿ ನಿಧನ

• **ಸಿಂದಗಿ:** ಸಿಂದಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರಿ ಅವರ ಧರ್ಮಪತ್ನಿ ಪ್ರೀತಿ ಸುರೇಶ ಪೂಜಾರಿ(42) ನಿಧನರಾಗಿದ್ದಾರೆ. ಮೃತರಿಗೆ ಪತಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ ಇದ್ದಾರೆ.



ಸಂತಾಪ: ಶಾಸಕ ಅಶೋಕ ಮನಗೂಳಿ, ಮಾಜಿ ಶಾಸಕ ಅರುಣ ಶಹಾಪುರ, ರಮೇಶ ಭೂಸನೂರ, ಶರಣಪ್ಪ ಸುಣಗಾರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿಯ ನಾಮ ನಿರ್ದೇಶಿತ ಸದಸ್ಯ ಮಲ್ಲಿಕಾರ್ಜುನ ಅಲ್ಲಾಪುರ, ಕಾನಿಪ ತಾಲೂಕು ಅಧ್ಯಕ್ಷ ಮಹಾಂತೇಶ ನೂಲಾನವರ, ಮಾಜಿ ಅಧ್ಯಕ್ಷ ಆನಂದ ಶಾಬಾದಿ ಸಂತಾಪ ವ್ಯಕ್ತಪಡಿಸಿದ್ದಾರೆ.



ಬಸವನಬಾಗೇವಾಡಿ: ಸ್ಥಳೀಯ ಬಸವೇಶ್ವರ ದೇವಸ್ಥಾನದ ಹತ್ತಿರವಿರುವ ಭಾರತೀಯ ಸ್ಟೇಟ್ ಆಫ್ ಇಂಡಿಯಾ ಇದರ 71ನೇ ಸಂಭ್ರಮಾಚಾರಣೆ ನಡೆಯಿತು. ಬ್ಯಾಂಕ್ ವ್ಯವಸ್ಥಾಪಕ ರಾಘವೇಂದ್ರ ಕಟ್ಟಿ, ಸಹಾಯಕ ವ್ಯವಸ್ಥಾಪಕ ವಿಕ್ರಮ ಗಂಗಡಿ, ಶೀತಲ್ ಚನಗೊಂಡ, ಹಣಮಂತ ಮ್ಯಾಗೇರಿ, ಬಸವರಾಜ ಬಸೆಟ್ಟಿ, ರಸಿಕಾ ಕುಲಕರ್ಣಿ, ಮಧು ಕೋನಕೊಂಡ, ಮನೋಜ ಗಾಯಕವಾಡ, ಲಕ್ಷ್ಮೀಪತಿ ಅವಾಲು, ಆರೀಫ್ ಕೊಹೀರ್, ಶಿಲ್ಪಾ ರಾಠೋಡ, ಐ.ಜಿ.ಜಾಗೀರದಾರ ಸೇರಿದಂತೆ ಸಿಬ್ಬಂದಿ ಪಾಲ್ಗೊಂಡಿದ್ದರು.

ವಿಶಿಷ್ಟಚೇತನರಿಗೆ ತ್ರಿಚಕ್ರವಾಹನ ವಿತರಣೆ

• **ಸಿಂದಗಿ:** ವಿಶಿಷ್ಟಚೇತನರು ಸಮಾಜದಲ್ಲಿ ಮುಕ್ತವಾಗಿ ಸಂಚರಿಸಲು ಅವರಿಗೆ ತ್ರಿಚಕ್ರ ವಾಹನ ನೀಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.
ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ 2025-26ನೇ ಸಾಲಿನ ತಾಪಂ ಅನಿರ್ಬಂಧಿತ ಅನುದಾನದಡಿಯಲ್ಲಿ ಅರ್ಹ ಆರು ವಿಕಲಚೇತನ ಫಲಾನುಭವಿಗಳಿಗೆ ಇಂಧನ ಚಾಲಿತ ತ್ರಿಚಕ್ರ ವಾಹನ ವಿತರಿಸಿ ಮಾತನಾಡಿದ ಅವರು, ವಿಕಲಚೇತನರು ಸಮಾಜದಲ್ಲಿ ಸಮಾನವಾಗಿ ಪ್ರಗತಿ ಸಾಧಿಸಲು ಅವರಿಗೆ ಸರಕಾರದಿಂದ ಸಿಗಬೇಕಾದ ಸೌಕರ್ಯ ತಲುಪುವಂತಾಗಬೇಕು ಎಂದರು. ಜೊತೆಗೆ ತ್ವರಿತ ಗತಿಯಲ್ಲಿ ಒದಗಿಸಬೇಕು. ಅವರ ಬದುಕಿಗೆ ಚೈತನ್ಯ ನೀಡಲು ಮತ್ತು ಉಳಿದವರಿಗಿಂತ ನಾವೇನೂ ಕಡಿಮೆ ಇಲ್ಲ ಎಂದು ಸಾಧಿಸಿ ತೋರಿಸಲು ಸರಕಾರ ಸಹಕಾರ ನೀಡುತ್ತದೆ. ಇದರ ಸದುಪಯೋಗವನ್ನು ಎಲ್ಲರೂ ಪಡೆಯಬೇಕು ಎಂದರು. ತಾಪಂ ಇಒ ರಾಮು ಅಗ್ನಿ, ಅಕ್ಷರ ದಾಸೋಹ ಅಧಿಕಾರಿ ಅರವಿಂದ ಡೋಣೂರ, ಜೋಗುರ ಮೋಟಾರ್ಸ್ ಮಾಲೀಕರಾದ ರಮೇಶ ಜೋಗುರ, ಉಮೇಶ ಜೋಗುರ, ಗ್ಯಾರಂಟಿ ಸಮಿತಿ ಅಧ್ಯಕ್ಷ ಅಶೋಕ ಕೋಳಾರಿ, ಸಂತೋಷ ಸಾಲಿ, ಸುನಂದಾ ಯಂಪುರೆ, ಮಹಾನಂದ ಬಮ್ಮಣ್ಣಿ, ಮುತ್ತು ಸಾತಿಹಾಳ, ಶಾಂತು ರಾಣಾಗೋಳ, ಮೋಶಿನ್ ಬೀಳಗಿ, ಶಿವಾನಂದ ಹಡಪದ, ಐಇಸಿ ನರೇಗಾ ಸಂಯೋಜಕ ಭೀಮರಾಯ ಚೌಧರಿ, ರಮೇಶ ನಡುವಿನಕೇರಿ, ಪ್ರಕಾಶ ಹೊಸಮನಿ ಸೇರಿದಂತೆ ಫಲಾನುಭವಿಗಳು, ಕಾರ್ಯಕರ್ತರು ಇದ್ದರು.



ಸಿಂದಗಿ: ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ 2025-26ನೇ ಸಾಲಿನ ತಾಪಂ ಅನಿರ್ಬಂಧಿತ ಅನುದಾನದಡಿಯಲ್ಲಿ ಅರ್ಹ ಆರು ವಿಕಲಚೇತನ ಪಲಾನುಭವಿಗಳಿಗೆ ಶಾಸಕ ಅಶೋಕ ಮನಗೂಳಿ ಇಂಧನ ಜಾಲಿತ ತ್ರಿಕಚ್ರ ವಾಹನ ವಿತರಿಸಿದರು. ತಾಪಂ ಇಒ ರಾಮು ಅಗ್ನಿ, ಅಕ್ಷರ ದಾಸೋಹ ಅಧಿಕಾರಿ ಅರವಿಂದ ಡೋಣೂರ, ಜೋಗುರ ಮೋಟಾರ್ಸ್ ಮಾಲೀಕರಾದ ರಮೇಶ ಜೋಗುರ, ಉಮೇಶ ಜೋಗುರ, ಗ್ಯಾರಂಟಿ ಸಮಿತಿ ಅಧ್ಯಕ್ಷ ಅಶೋಕ ಕೋಳಾರಿ ಇದ್ದರು.

ವಚನ ಸಾಹಿತ್ಯಕ್ಕೆ ಡಾ.ಫ.ಗು.ಹಳಕಟ್ಟಿ ಕೊಡುಗೆ ಅಪಾರ: ಡಾ.ಔದ್ರಾಮ

• **ವಿಜಯಪುರ:** 12ನೇ ಶತಮಾನದ ಶರಣರ ವಚನ ಸಾಹಿತ್ಯವನ್ನು ಸಂಗ್ರಹಿಸಿ, ಸಂರಕ್ಷಿಸಿ ಮನುಕುಲಕ್ಕೆ ತಲುಪಿಸಿದ ಮಹಾನ್ ದಾರ್ಶನಿಕ ಡಾ. ಫ. ಗು. ಹಳಕಟ್ಟಿ ಅವರ ಸೇವೆ ಕನ್ನಡ ಸಾಹಿತ್ಯ ಲೋಕಕ್ಕೆ ಅನನ್ಯ ಕೊಡುಗೆಯಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಹೇಳಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಗುರುವಾರ ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನದ ನಿಮಿತ್ತ ಹಮ್ಮಿಕೊಂಡ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಚನಗಳು ಕೇವಲ ಸಾಹಿತ್ಯವಲ್ಲ, ಬದುಕಿನ ಮೌಲ್ಯಗಳನ್ನು ಬೋಧಿಸುವ ಅಮೂಲ್ಯ ಸಂದೇಶಗಳಾಗಿವೆ. ಅವು ವಿವಿಧ ಭಾಷೆಗಳಿಗೆ ಭಾಷಾಂತರಗೊಂಡು ಜಗತ್ತಿನಾದ್ಯಂತ ಪಸರಿಸಬೇಕು. ವಚನ ಸಾಹಿತ್ಯವನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ಉಳಿಸಿಕೊಟ್ಟ ಡಾ. ಫ. ಗು. ಹಳಕಟ್ಟಿ ಅವರ ಸಾಧನೆ ಯುವಜನರಿಗೆ ಪ್ರೇರಣೆಯಾಗಬೇಕು. ವಿದ್ಯಾರ್ಥಿಗಳು ಇಂತಹ ಮಹನೀಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಡಾ.ವಿ.ಡಿ.ಐಹೊಳ್ಳಿ ಉಪನ್ಯಾಸ ನೀಡಿ ಮಾತನಾಡಿ, ಡಾ. ಫ.ಗು. ಹಳಕಟ್ಟಿ ಅವರ ಜೀವನ, ಸಾಹಿತ್ಯ ಸೇವೆ ಹಾಗೂ ವಚನ ಸಾಹಿತ್ಯ ಸಂರಕ್ಷಣೆಗೆ ಅವರು ನೀಡಿದ ಅಮೂಲ್ಯ ಕೊಡುಗೆ ಹಾಗೂ ಶರಣರ ವಚನಗಳನ್ನು ಸಂಗ್ರಹಿಸಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸಿದ ಡಾ. ಫ.ಗು. ಹಳಕಟ್ಟಿ ಅವರ ಸೇವೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಅವಿಸ್ಮರಣೀಯವಾಗಿದೆ ಎಂದರು.

ವಚನ ಸಾಹಿತ್ಯದಲ್ಲಿರುವ ಮಾನವೀಯ ಮೌಲ್ಯಗಳು, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಸಂದೇಶಗಳನ್ನು ಯುವಜನತೆ ಅಳವಡಿಸಿಕೊಳ್ಳುವ ಅಗತ್ಯವಿದೆ. ಡಾ. ಫ.ಗು. ಹಳಕಟ್ಟಿ ಅವರ ಜೀವನ, ಸಾಧನೆ ಕುರಿತು ಸಹ ವಿಸ್ತಾರವಾಗಿ ಆರ್ಥಿಕ ಸಂಕಷ್ಟಗಳ ನಡುವೆಯೂ ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿ ಶರಣರ ವಚನಗಳನ್ನು ಸಂಗ್ರಹಿಸುವುದು, ಮುದ್ರಿಸುವುದು ಹಾಗೂ ಪ್ರಸಾರಗೊಳಿಸುವ ಕಾರ್ಯಕ್ಕೆ ಜೀವನವನ್ನೇ ಮುಡಿಪಾಗಿಟ್ಟ ಡಾ.ಫ.ಗು. ಹಳಕಟ್ಟಿ ಅವರ ನಿಸ್ವಾರ್ಥ ಸೇವೆ ಮಾದರಿಯಾಗಿದೆ ಎಂದರು.

ಸಮಾಜ ಮುಖಂಡ ಬಿ.ಎನ್. ನೂಲವಿ ಮಾತನಾಡಿ, ಡಾ. ಫ.ಗು. ಹಳಕಟ್ಟಿ ಅವರ ಜೀವನ ಚರಿತ್ರೆ ಹಾಗೂ ವಚನ ಸಂರಕ್ಷಣೆ ಕುರಿತು ಶಾಲಾ-ಕಾಲೇಜುಗಳ ಪಠ್ಯ ಪುಸ್ತಕದಲ್ಲಿ ಸೇರಿಸಲು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಜಿಲ್ಲಾ ಆಯುಷ್ ಇಲಾಖೆ ಅಧಿಕಾರಿ ವಿದ್ಯಾವತಿ ಅಥಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಅಡಿವೆಪ್ಪ ಸಾಲಗಲ್, ಭೀಮರಾಯ ಜಿಗಜಿಣಗಿ, ಸೋಮನಗೌಡ ಕಲ್ಲೂರು, ವಿದ್ಯಾವತಿ ಅಂಕಲಗಿ, ಡಾ.ಎಂ.ಆರ್. ಗುರಿಕರ, ಅಶೋಕ ಅಂಕದ, ಸಂಗಮೇಶ ಮೇತ್ರಿ, ಕೆ.ಎಫ್.ಅಂಕಲಗಿ ಇದ್ದರು.

ಪತ್ರಿಕಾ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದ ಫ.ಗು.ಹಳಕಟ್ಟಿ: ಶಿಕ್ಷಕ ಸಂತೋಷ

• **ಇಂಡಿ:** ವಚನ ಸಾಹಿತ್ಯದ ಜೊತೆಗೆ ಪತ್ರಿಕಾ ಕ್ಷೇತ್ರದಲ್ಲಿ ಛಾಪು ಮೂಡಿಸಿದ್ದ ಫ.ಗು. ಹಳಕಟ್ಟಿ ಅವರ ಬದುಕು ನಮಗೆಲ್ಲ ಪ್ರೇರಣೆ. ವೈಯಕ್ತಿಕ ಜೀವನ ಬದಿಗಿರಿಸಿ ಸಮಾಜದ ಒಳಿತಿಗಾಗಿ ಸಮರ್ಪಿಸಿಕೊಂಡ ಆದರ್ಶ ವ್ಯಕ್ತಿ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನದ ಅಂಗವಾಗಿ ತಾಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಗುರುವಾರ ಏರ್ಪಡಿಸಿದ್ದ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. ವಕೀಲ ವೃತ್ತಿ ಬಿಟ್ಟ ಹಳಕಟ್ಟಿ ಅವರು ಸೈಕಲ್ ಏರಿ ಊರೂರು ಸುತ್ತಿ, ತಾಳೆ ಗರಿ, ಓಲೆಕಟ್ಟನ್ನು ಸಂಗ್ರಹಿಸಿ ಪುಸ್ತಕ ಮುದ್ರಣಕ್ಕೆ ಮುಂದಾಗಿ ಆರ್ಥಿಕ ತೊಂದರೆ ಲೆಕ್ಕಿಸದೇ ವಚನ ಸಾಹಿತ್ಯ ಸಂರಕ್ಷಣೆಗೆ ಬದುಕನ್ನು ಮುಡಿಪಾಗಿಟ್ಟ ಅವರು ಇಂದಿನ ಪೀಳಿಗೆಗೆ ಸ್ಫೂರ್ತಿಯಾಗಿದ್ದಾರೆ ಎಂದು ಹೇಳಿದರು.

ಹಳಕಟ್ಟಿ ಅವರದು ವೈವಿಧ್ಯಮಯ ವ್ಯಕ್ತಿತ್ವ, ಶಿಕ್ಷಣ, ಸಾಹಿತ್ಯ, ಸಹಕಾರ ಕ್ಷೇತ್ರಗಳಿಂದ ಬಾಳು ಬಂಗಾರ ಎಂದು ತಿಳಿದವರು. ಕನ್ನಡ ಮತ್ತು ಕರ್ನಾಟಕ ಅವರ ಜೀವನದ ಉಸಿರಾಗಿತ್ತು. ವಚನ ಸಾಹಿತ್ಯವೆಂಬ ಅನರ್ಘ್ಯ ರತ್ನವನ್ನು ಶೋಧಿಸಿ, ಅನ್ವೇಷಿಸಿ, ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ ಸಂಶೋಧನಾ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಮುಖ್ಯ ಶಿಕ್ಷಕ ಕೆ.ಐ.ಮಕಾನದಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ವಚನ ಸಾಹಿತ್ಯವನ್ನು ಸಂರಕ್ಷಿಸಿ ಜನಮನಕ್ಕೆ ತಲುಪಿಸುವಲ್ಲಿ ಡಾ.ಫ.ಗು.ಹಳಕಟ್ಟಿ ಅವರ ಕೊಡುಗೆ ಅಪಾರ. ಇಂದು ವಚನ ಸಾಹಿತ್ಯ ದೊಡ್ಡಮಟ್ಟದಲ್ಲಿ ಪ್ರಚಾರವಾಗಿರುವುದಕ್ಕೆ ಹಳಕಟ್ಟಿ ಅವರೇ ಪ್ರಮುಖ ಕಾರಣ ಎಂದು ಹೇಳಿದರು.

ಶಿಕ್ಷಕರಾದ ಎಸ್.ಎಸ್.ಅರಬ, ಎನ್.ಬಿ.ಚೌಧರಿ, ಎಸ್.ಪಿ.ಪೂಜಾರಿ, ಜೆ.ಸಿ.ಗುಣಕಿ, ಅತಿಥಿ ಶಿಕ್ಷಕ ಅಫ್ತಾಬ್ ಮುಲ್ಲಾ ಸೇರಿದಂತೆ ಮಕ್ಕಳು ಹಾಜರಿದ್ದರು. ಕೆಜಿಎಸ್ ಶಾಲೆಯ ನಿವೃತ್ತ ಶಿಕ್ಷಕಿ ಎಸ್.ಎನ್. ಡಂಗಿ ಅವರನ್ನು ಸನ್ಮಾನಿಸಲಾಯಿತು.



ಸಮಾಜಕ್ಕೆ ವೈದ್ಯರ ಪಾತ್ರ ಮುಖ್ಯ: ಮನಗೂಳಿ

• **ಸಿಂದಗಿ:** ಸಮಾಜದ ಆರೋಗ್ಯ ಕಾಪಾಡುವಲ್ಲಿ ವೈದ್ಯರ ಸೇವೆ ಅಮೂಲ್ಯ. ಅವರ ತ್ಯಾಗ, ಸಮರ್ಪಣೆ ಮತ್ತು ಮಾನವೀಯ ಸೇವೆ ಪ್ರತಿಯೊಬ್ಬರೂ ಗೌರವಿಸಬೇಕು ಎಂದು ಮಹಿಳಾ ಪ್ರತಿನಿಧಿ, ಐಎಂಎ ಶಸ್ತ್ರ ಚಿಕಿತ್ಸಕರಾದ ಡಾ.ಸಂಧ್ಯಾ ಶಾಂತವೀರ ಮನಗೂಳಿ ಹೇಳಿದರು.

ನಗರದ ತಾಲೂಕು ಶಿಕ್ಷಣ ಪ್ರಸಾರಕ ಮಂಡಳಿಯ ಶಾಂತವೀರ ಪಟ್ಟಾಧ್ಯಕ್ಷರ ಕನ್ಯಾ ಪ್ರೌಢಶಾಲೆ ಹಾಗೂ ಭಾರತೀಯ ವೈದ್ಯಕೀಯ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಖ್ಯಾತ ವೈದ್ಯರು ಹಾಗೂ ಪಶ್ಚಿಮ ಬಂಗಾಳದ ಮಾಜಿ ಸಿಎಂ ಡಾ.ಬಿಧಾನ್ ಚಂದ್ರರಾಯ್ ಅವರ ಜನ್ಮದಿನ ಹಾಗೂ ಪುಣ್ಯತಿಥಿಯ ಸ್ಮರಣಾರ್ಥ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಗುತ್ತದೆ. ವೈದ್ಯಕೀಯ ಕ್ಷೇತ್ರಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆ ಗೌರವಿಸುವ ಸಲುವಾಗಿ ಭಾರತ ಸರ್ಕಾರ ಈ ದಿನವಾಗಿ ಘೋಷಿಸಿದೆ ಎಂದರು.

ಭಾರತೀಯ ವೈದ್ಯಕೀಯ ಸಂಘದ ಕಾರ್ಯಕಾರಿ ಸದಸ್ಯೆ ಡಾ.ಶಾರದಾ ನಾಡಗೌಡ ಮಾತನಾಡಿ, ಸಮಾಜದ ಆರೋಗ್ಯ ರಕ್ಷಣೆ ಮತ್ತು ಜೀವ ಉಳಿಸುವ ಮಹತ್ತರ ಜವಾಬ್ದಾರಿ ಹೊತ್ತಿರುವ ವೈದ್ಯರು ಹಗಲು-ರಾತ್ರಿ ಎನ್ನದೆ ಸೇವೆ ಸಲ್ಲಿಸುತ್ತಿದ್ದಾರೆ. ತುರ್ತು ಪರಿಸ್ಥಿತಿಗಳು, ಸಾಂಕ್ರಾಮಿಕ ರೋಗಗಳು ಹಾಗೂ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿಯೂ ವೈದ್ಯರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿ ಜನರ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದರು.

ಶಾಲೆಯ ಮುಖ್ಯೋಪಾಧ್ಯಾಯ ಎಸ್.ಆರ್.ನಾಯಕ ಮಾತನಾಡಿ, ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವುದರ ಜೊತೆಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು, ರೋಗಗಳ ತಡೆಗಟ್ಟುವಿಕೆ ಹಾಗೂ ಆರೋಗ್ಯಕರ ಜೀವನ ಶೈಲಿಯ ಕುರಿತು ಮಾರ್ಗದರ್ಶನ ನೀಡುವ ಮೂಲಕ ವೈದ್ಯರು ಸಮಾಜದ ಅಮೂಲ್ಯ ಆಸ್ತಿಯಾಗಿದ್ದಾರೆ ಎಂದು ಹೇಳಿದರು.

ಭಾರತೀಯ ವೈದ್ಯಕೀಯ ಸಂಘದ ಕಾರ್ಯದರ್ಶಿ ಡಾ.ಸಂಗಮೇಶ ಪಾಟೀಲ ಶಿಕ್ಷಕರಾದ ಆರ್.ವೈ.ಪರಿಟ್, ಎಸ್.ಎಸ್. ಹತ್ತಿ ಎಸ್.ವಿ.ಮಿರ್ಚಿಕರ್ ದಾನಮ್ಮ ಗಣಾಚಾರಿ, ಸಾಗರ ರಾಥೋಡ, ಸುನೀಲ ನಾಗಾವಿ, ರಾಜು ಎಮ್ಮಿ ಸೇರಿದಂತೆ ಶಾಲೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.



ಐದು ಜನ ಪಂಚಮಸಾಲಿ ಶಾಸಕರಿಗೆ ಸಚಿವ ಸ್ಥಾನ ನೀಡಿ: ಬಿರಾದಾರ

• **ವಿಜಯಪುರ:** ಪಂಚಮಸಾಲಿ ಸಮಾಜದ ರಾಜು ಕಾಗೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಹಾಗೂ ಶಿವಾನಂದ ಪಾಟೀಲ ಸೇರಿ ಐದು ಜನ ಪಂಚಮಸಾಲಿ ಸಮಾಜದ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಪಂಚಮಸಾಲಿ ಸಮಾಜದ ಮುಖಂಡ ಸುರೇಶ ಶಂಕರಗೌಡ ಬಿರಾದಾರ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಂಚಮಸಾಲಿ ಸಮಾಜ ತ್ಯಾಗ, ಶೈಕ್ಷಣಿಕ ಸೇವೆ, ಆಧ್ಯಾತ್ಮಿಕತೆಗೆ ಹೆಸರುವಾಸಿಯಾಗಿದೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವಲ್ಲಿ ಪಂಚಮಸಾಲಿ ಸಮಾಜದ ಪಾತ್ರ ಪ್ರಮುಖವಾಗಿದೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಪಂಚಮಸಾಲಿ ಸಮಾಜಕ್ಕೆ ಸೂಕ್ತವಾದ ಪ್ರಾತಿನಿಧ್ಯ ನೀಡುವಲ್ಲಿ ವಿಫಲವಾಗಿದೆ, ಈ ಸರ್ಕಾರ ಪಂಚಮಸಾಲಿ ಸಮಾಜದ ಋಣದಲ್ಲಿದೆ, ಅದನ್ನು ಕಾಂಗ್ರೆಸ್ ಮರೆಯಬಾರದು, ಹೀಗಾಗಿ ಸಮಾಜಕ್ಕೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಆರು ಬಾರಿ ಶಾಸಕರಾಗಿರುವ ಹಾಗೂ ಜನಪರವಾಗಿ ನಿಷ್ಠೆಯ ಉದಾರಹಣೆಯಾಗಿರುವ ರಾಜು ಕಾಗೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲೇಬೇಕು, ವಿಜಯಪುರ ಜಿಲ್ಲೆಯಿಂದ ಆಯ್ಕೆಯಾದ, ಹಿರಿಯರಾದ ಶಿವಾನಂದ ಪಾಟೀಲ, ಯುವ ಶಾಸಕ ಅಶೋಕ ಮನಗೂಳಿ, ಬೆಳಗಾವಿಯ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಹಾಗೂ ನೆರೆಯ ಬಾಗಲಕೋಟೆ ಜಿಲ್ಲೆಯ ಶಾಸಕ ವಿಜಯಾನಂದ ಕಾಶಪ್ಪನವರ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.



ನಮ್ಮ ಬೇಡಿಕೆಗಳಿಗೆ ಸ್ಪಂದಿಸದೇ ಇದ್ದರೆ ಮುಂದಿನ ದಿನ ಮಾನಗಳಲ್ಲಿ ಇಡಿ ಪಂಚಮಸಾಲಿ ಸಮಾಜ ರಸ್ತೆಗಿಳಿದು ಹೋರಾಟ ಮಾಡಲು ಸಿದ್ಧರಿದ್ದೇವೆ. ಹಿಂದೆ 2ಎ ಹೋರಾಟದಲ್ಲಿ ಲಾಠಿ ಚಾರ್ಜ್ ಮಾಡಿಸಿ ಇಲ್ಲಸಲ್ಲದ ಕೇಸ ಹಾಕಿರುವುದು ನಮ್ಮ ಸಮಾಜ ಎಂದೂ ಮರೆಯುವದಿಲ್ಲ ಮತ್ತು ಆ ಗಾಯ ಮನಸ್ಸಿನಿಂದ ಇನ್ನೂ ಮಾಸಿಲ್ಲ. ಈಗಾಗಲೆ ಮೊದಲನೆ ಸಂಪೂಟ ವಿಸ್ತರಣೆಯಲ್ಲಿ ನಮ್ಮ ಸಮಾಜ ಕಡೆಗಣಿಸಿರುವುದು, ಕಾಂಗ್ರೆಸ್ ಪಕ್ಷ ದೊಡ್ಡ ಪ್ರಮಾದ ಎಸಗಿದೆ. ಪಂಚಮಸಾಲಿ ಸಮಾಜಕ್ಕೆ ಮಾಡುತ್ತಿರುವ ಪ್ರಮಾದವನ್ನು ಕಾಂಗ್ರೆಸ್ ಸರಿಡಪಿಸಿಕೊಳ್ಳಬೇಕು, ಇಲ್ಲವಾದರೆ 2028 ರ ಚುನಾವಣೆಯಲ್ಲಿ ತಕ್ಕ ಉತ್ತರ ಕೊಡಲಾಗುವದು ಎಂದು ಆಗ್ರಹಿಸಿದರು. ಮುಖಂಡರಾದ ಶ್ರೀಶೈಲ ಪಾಟೀಲ, ಡಾ.ಶಿವಾನಂದ ರೇಷ್ಮಿ, ಗಣೇಶ ಮಣೂರ ಇದ್ದರು.

ಮೂಲ ಸೌಕರ್ಯಕ್ಕೆ ಪ್ರಯತ್ನ

• **ದೇವರಹಿಪ್ಪರಗಿ:** ಸಾರ್ವಜನಿಕರಿಗೆ ಉತ್ತಮ ರಸ್ತೆ ವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ ಸಾರಿಗೆ ವಿದ್ಯುತ್ ಶಿಕ್ಷಣ ಸೇರಿದಂತೆ ಪಟ್ಟಣಗಳು ಮತ್ತು ಗ್ರಾಮೀಣ ಭಾಗದ ಎಲ್ಲ ಜನರಿಗೆ ಮೂಲ ಸೌಕರ್ಯ ಒದಗಿಸಿ ಕೊಡಲು ನಿರಂತರ ಶ್ರಮಿಸುವುದಾಗಿ ಶಾಸಕ ರಾಜುಗೌಡ ಪಾಟೀಲ ಹೇಳಿದರು.

ಪಟ್ಟಣದ ಹೊಸೂರು ಬಳಿ 16ನೇ ವಾರ್ಡ ಕಾಲೋನಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿನ ಪ್ರಗತಿ ಕಾಲೋನಿ ಯೋಜನೆಯಡಿ 50 ಲಕ್ಷ ರೂ.ಅನುದಾನದಲ್ಲಿ ನಿರ್ಮಾಣವಾಗಲಿರುವ ಸಿಸಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮತಕ್ಷೇತ್ರದ ವ್ಯಾಪ್ತಿಯಲ್ಲಿ ಈಗಾಗಲೇ ಹಲವಾರು ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಅಧಿಕಾರ ಸಿಕ್ಕಾಗ ನಿಷ್ಠೆಯಿಂದ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ಕ್ಷೇತ್ರದ ಸರ್ವತೋಮುಖ ಏಳಿಗೆಗಾಗಿ ನಾನು ಶಕ್ತಿ ಮೀರಿ ಶ್ರಮಿಸುತ್ತಿದ್ದೇನೆ. ಅಭಿವೃದ್ಧಿ ಕಾಮಗಾರಿಗಳಿಗೆ ಸಾರ್ವಜನಿಕರ ಸಹಕಾರ ಅಗತ್ಯ ಹಾಗೂ ಗುತ್ತಿಗೆದಾರರು ಗುಣಮಟ್ಟದ ರಸ್ತೆ ಮಾಡುವುದರ ಜೊತೆಗೆ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸೂಚನೆ ನೀಡಿದರು. ಪಪಂ ಅಧ್ಯಕ್ಷರ ಪ್ರತಿನಿಧಿ ಬಸಪ್ಪ ದೇವಣಗಾಂವ, ಉಪಾಧ್ಯಕ್ಷ ರಮೇಶ ಮಸಿಬಿನಾಳ, ಜೆಡಿಎಸ್ ಜಿಲ್ಲಾ ಘಟಕದ ಉಪಾಧ್ಯಕ್ಷ ರಿಯಾಜ ತಾಂಬೋಳಿ, ಪಪಂ ಸದಸ್ಯರಾದ ಸುಮಂಗಲಾ ಸೇಬೆನವರ, ಹೊಸನಗರ ಅಂಜುಮನ್ ಕಮಿಟಿ ಅಧ್ಯಕ್ಷ ಲಾಲಸಾಬ್ ಮಳಖೇಡ, ಪ್ರತಿನಿಧಿಗಳಾದ ಸೋಮು ದೇವೂರ, ಮಲ್ಲಯ್ಯ ಜಡಿಮಠ, ಕಾಶಿನಾಥ ವಡವಡಗಿ, ವೀರೇಶ ಕುದರಿ, ನಾಗರಾಜ ಅವಟಿ, ಹಣಮಂತ ಹಳ್ಳದಮನಿ, ನಿಂಗು ನಾಗರಾಳ, ಸುರೇಶ ಒಡೆಯರ, ಭೂಸೇನಾ ಇಲಾಖೆಯ ಎಇಇ ರಾಜಶೇಖರ, ಅಭಿಯಂತರ ಪ್ರಫುಲಕುಮಾರ ಇದ್ದರು.



ವಿವಿಧ ಕಾಮಗಾರಿಗಳ ಅಭಿವೃದ್ಧಿ ಪರಿಶೀಲಿಸಿದ ಪ್ರಕಾಶ ವಡ್ಡರ

• **ವಿಜಯಪುರ:** ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಯರನಾಳ ಗ್ರಾಮ ಪಂಚಾಯಿತಿಗೆ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅವರು ಭೇಟಿ ನೀಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಕಾಮಗಾರಿಗಳನ್ನು ಹಾಗೂ ಸಾರ್ವಜನಿಕ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು.

ಗ್ರಾಮದ ಕೃಷಿ ಮಾರುಕಟ್ಟೆಗೆ ತೆರಳಿ ಅಲ್ಲಿನ ಗೋದಾಮು ಹಾಗೂ ಮಳಿಗೆಗಳನ್ನು ವೀಕ್ಷಿಸಿದರು. ಸಾರ್ವಜನಿಕರಿಗೆ ಉತ್ತಮ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಮಾರುಕಟ್ಟೆ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯವಾಗಿದ್ದು, ಸ್ವಚ್ಛತಾ ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮದಲ್ಲಿನ ಸಮುದಾಯ ಶೌಚಾಲಯಗಳ ಸ್ಥಿತಿಗತಿ ಪರಿಶೀಲಿಸಿದ ಅವರು, ಸಾರ್ವಜನಿಕರು ಅವುಗಳನ್ನು ಸಮರ್ಪಕವಾಗಿ ಬಳಸುವಂತೆ ಜಾಗೃತಿ ಮೂಡಿಸಬೇಕು ಹಾಗೂ ಶೌಚಾಲಯಗಳ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಉಪ ಕಾರ್ಯದರ್ಶಿಗಳು, ಮಕ್ಕಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳು, ಕಟ್ಟಡದ ಸ್ಥಿತಿ ಹಾಗೂ ಅಗತ್ಯ ದುರಸ್ತಿ ಕಾರ್ಯಗಳ ಕುರಿತು ಪರಿಶೀಲಿಸಿದರು. ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಆರೋಗ್ಯ ಮತ್ತು ಕಲಿಕೆಗೆ ಪೂರಕ ವಾತಾವರಣ ನಿರ್ಮಿಸುವಂತೆ ಹಾಗೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವಂತೆ ಸೂಚಿಸಿದರು.

ಗ್ರಾಮದ ಆಯುಷ್ಮಾನ್ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಕೇಂದ್ರದಲ್ಲಿ ಲಭ್ಯವಿರುವ ಆರೋಗ್ಯ ಸೇವೆಗಳು ಹಾಗೂ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿದರು. ಆರೋಗ್ಯ ಕೇಂದ್ರದ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಹಾಗೂ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ಆರೋಗ್ಯ ಸಿಬ್ಬಂದಿ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಸೂಚಿಸಿದರು.



ವಿಬಿ-ಜಿ ರಾಮ್ ಜಿ ಯೋಜನೆಯ ಕುರಿತು ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ನೀಡಿ, ಅರ್ಹ ಗ್ರಾಮೀಣ ಜನರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಯೋಜನೆಯಡಿ ಹೆಚ್ಚಿನ ಕಾಮಗಾರಿಗಳನ್ನು ಕೈಗೊಂಡು ಉದ್ಯೋಗ ಸೃಜನೆಗೆ ಆದ್ಯತೆ ನೀಡಬೇಕು ಹಾಗೂ ಎನ್‌ಎಂಆರ್ ಸೃಜನೆ ಪ್ರಕ್ರಿಯೆಯನ್ನು ತಕ್ಷಣದಿಂದಲೇ ಕೈಗೊಳ್ಳಬೇಕು. ಗ್ರಾಮ ಪಂಚಾಯಿತಿಗೆ ಲಭ್ಯವಿರುವ ಶುದ್ಧ ಕುಡಿಯುವ ನೀರಿನ ಘಟಕದ ಕುರಿತು ಮಾಹಿತಿ ಪಡೆದು, ಘಟಕದ ಸಮರ್ಪಕ ನಿರ್ವಹಣೆ ಮಾಡುವ ಮೂಲಕ ಗ್ರಾಮಸ್ಥರಿಗೆ ನಿರಂತರವಾಗಿ ಶುದ್ಧ ಕುಡಿಯುವ ನೀರು ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.ಗ್ರಾಮದಲ್ಲಿನ ಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕು.

ತಾಲೂಕು ಪಂಚಾಯತಿ ಯೋಜನಾಧಿಕಾರಿ ಎಂ.ಬಿ.ಸೊನ್ನದ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜ್ಯೋತಿ ಶೇಗಾವಿ, ಗ್ರಾಮ ಪಂಚಾಯಥೀ ಸಿಬ್ಬಂದಿ ಹಾಗೂ ಇತರರು ಇದ್ದರು.

ಫ.ಗು.ಹಳಕಟ್ಟಿ ಜನ್ಮದಿನ ಆಚರಣೆ

• **ವಿಜಯಪುರ:** ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಜನ್ಮದಿನ ಗುರುವಾರ ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ನಿಮಿತ್ತ ಡಾ.ಫ.ಗು.ಹಳಕಟ್ಟಿ ಅವರ ಭಾವಚಿತ್ರಕ್ಕೆ ಗಣ್ಯರು ಪೂಜೆ ಸಲ್ಲಿಸಿ ಪುಷ್ಪ ನಮನ ಅರ್ಪಿಸಿದರು. ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ ಮಾತನಾಡಿ, ಡಾ.ಫ.ಗು.ಹಳಕಟ್ಟಿ ಅವರು ಬಿಎಲ್‌ಡಿಇ ಸಂಸ್ಥೆಯನ್ನು ಸ್ಥಾಪಿಸಿ, ಈ ಭಾಗದ ಜನರಿಗೆ ಶೈಕ್ಷಣಿಕ ಸೌಲಭ್ಯ ಕಲ್ಪಿಸಿದರು. ಅಷ್ಟೇ ಅಲ್ಲ ವಚನ ಸಾಹಿತ್ಯಗಳನ್ನು ಸಂರಕ್ಷಿಸಿ ವಚನಪಿತಾಮಹ ಎಂದು ಖ್ಯಾತರಾಗಿದ್ದಾರ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜದ ಪ್ರಗತಿಗೆ ಕಾರಣರಾಗಿದ್ದಾರೆ. ಅವರು ನೀಡಿರುವ ಸಾಮಾಜಿಕ ಕೊಡುಗೆ ನಮಗೆಲ್ಲರಿಗೂ ಆದರ್ಶಪ್ರಾಯವಾಗಿದೆ ಎಂದರು.

ಪರೀಕ್ಷೆ ನಿಯಂತ್ರಣಾಧಿಕಾರಿ ಡಾ.ಎಸ್.ಎಸ್.ದೇವರಮನಿ, ಡೀನ್ ಅಲೈಡ್ ಹೆಲ್ತ್ ಸೈನ್ಸಸ್ ಡಾ.ಎಸ್.ವಿ.ಪಾಟೀಲ, ಡಾ.ಎಸ್.ಎಸ್. ಕಲ್ಯಾಣಶೆಟ್ಟರ, ಹಣಕಾಸು ಅಧಿಕಾರಿ ಬಿ.ಎಸ್.ಪಾಟೀಲ, ಉಪಕುಲಸಚಿವ ಸತೀಶ ಪಾಟೀಲ, ಸಹಾಯಕ ಕುಲಸಚಿವ ಡಾ. ಶ್ರೀಧರ ಬಗಲಿ, ಸಹಾಯಕ ಕಾನೂನು ಅಧಿಕಾರಿ ಐ.ಬಿ.ಮಠಪತಿ ಇದ್ದರು.



ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ



• **ನಾಲತವಾಡ:** ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕಾರ್ಯಕ್ರಮದ ಅಂಗವಾಗಿ ನಾಲತವಾಡ ಪಟ್ಟಣ ಪಂಚಾಯತಿ ವತಿಯಿಂದ ಗುರುವಾರ ಪಟ್ಟಣದಲ್ಲಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು.

ಪಪಂ ಮುಖ್ಯಾಧಿಕಾರಿ ಪ್ರಶಾಂತ ಸಿ. ಅವರು ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ಮತದಾನವು ಪ್ರತಿಯೊಬ್ಬ ನಾಗರಿಕನ ಸಂವಿಧಾನಬದ್ಧ ಹಕ್ಕಾಗಿದ್ದು, 18 ವರ್ಷ ಪೂರ್ಣಗೊಂಡ ಪ್ರತಿಯೊಬ್ಬ ಅರ್ಹ ನಾಗರಿಕರು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದರು.

ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ, ವಿಳಾಸ ಬದಲಾವಣೆ, ಹೆಸರು ಕೈಬಿಡುವಿಕೆ ಸೇರಿದಂತೆ ಅಗತ್ಯ ಬದಲಾವಣೆಗಳನ್ನು ನಿಗದಿತ ಅವಧಿಯೊಳಗೆ ಮಾಡಿಸಿಕೊಳ್ಳಬೇಕು. ಸಾರ್ವಜನಿಕರು ತಮ್ಮ ವ್ಯಾಪ್ತಿಯ ಬೂತ್ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಪಪಂ ಸಿಬ್ಬಂದಿಗಳಾದ ಅನಿಲ್ ಚೆಟ್ಟರ, ಜೆಇ ವೀರೇಶ ದೊಡ್ಡಮನಿ ಸೇರಿದಂತೆ ಸಿಬ್ಬಂದಿ, ಪೌರ ಕಾರ್ಮಿಕರು ಇದ್ದರು.

ಕಿರುಸುದ್ದಿ

ಇಂದು ಜನಾಗ್ರಹ ಸಮಾವೇಶ

ಯಲಬುರ್ಗಾ: ದಲಿತ ಸಮುದಾಯಕ್ಕೆ ಸಿಗಬೇಕಾಗಿರುವ ಸರ್ಕಾರಿ ಅಗತ್ಯ ಸೌಲಭ್ಯಗಳಾದ ಭೂಮಿ ವಸತಿ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲು ಆಗ್ರಹಿಸಿ ಜು.3ರಂದು ಬೆಂಗಳೂರಿನಲ್ಲಿ ಜನಾಗ್ರಹ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)ದ ಸಂಘಟನಾ ಅಧ್ಯಕ್ಷ ಶಿವಾನಂದ ಬಣಕಾರ ಹೇಳಿದರು. ಈ ಕುರಿತು ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಭಿತ್ತಿಪತ್ರವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಮಿತಿಯ ವತಿಯಿಂದ ಜು.3ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ದಲಿತ ಜನಾಗ್ರಹ ಸಮಾವೇಶದಲ್ಲಿ ಉದ್ಯೋಗ ನೇಮಕಾತಿ ಹಾಗೂ ವಿಶೇಷ ಘಟಕ ಯೋಜನೆ ಅನುಷ್ಠಾನ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಈ ಸಮಾವೇಶದ ಮೂಲಕ ಸರ್ಕಾರದ ಗಮನ ಸೆಳೆಯಲಾಗುತ್ತದೆ. ಆದ್ದರಿಂದ ಯಲಬುರ್ಗಾ ತಾಲೂಕಿನ ಎಲ್ಲ ಸಮಾಜದ ಮುಖಂಡರು ಪದಾಧಿಕಾರಿಗಳು ಕಾರ್ಯಕರ್ತರು ಪಾಲ್ಗೊಳ್ಳಬೇಕು ಎಂದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಅಧ್ಯಕ್ಷ ಪುಟ್ಟರಾಜ ಪೂಜಾರ, ದೊಡ್ಡ ಶಿವಾನಂದ ಬಣಕಾರ. ಕಳಕೇಶ ಸೂಡಿ, ಮಲ್ಲಿಕಾರ್ಜುನ ಹಣಗಿ ನಾಗರಾಜ ಹರಿಜನ ಇತರರಿದ್ದರು.

ದಸಾಪ ನೂತನ ಪದಾಧಿಕಾರಿಗಳ ಪದಗ್ರಹಣ

ಸಿಂಧನೂರು: ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಜು.5ರಂದು ದಲಿತ ಸಾಹಿತ್ಯ ಪರಿಷತ್ತು ರಾಯಚೂರು ಜಿಲ್ಲೆ ಮತ್ತು ಜಿಲ್ಲೆಯ ಎಲ್ಲಾ ತಾಲೂಕ ಘಟಕಗಳ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ವಿಶೇಷ ಉಪನ್ಯಾಸ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಆದ್ದರಿಂದ ಈ ಒಂದು ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಪ್ರಗತಿಪರರು,ದಲಿತ ಮುಖಂಡರು, ವಿವಿಧ ಸಂಘಟನೆಗಳ ಹೋರಾಟಗಾರರು, ಬುದ್ದಿಜೀವಿಗಳು ಮತ್ತು ಸಾಹಿತ್ಯಾಸಕ್ತರು ಹಾಗೂ ವಿದ್ಯಾರ್ಥಿ ಯುವಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಕಾರಣರಾಗಬೇಕೆಂದು ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ಹುಸೇನಪ್ಪ ಅಮರಾಪುರ ಮತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಂಗಮುನಿದಾಸ್ ನಾರಲದಿನ್ನಿ ಅವರು ಮನವಿ ಮಾಡಿದ್ದಾರೆ.





ಸಚಿವರ ಜಿಲ್ಲಾ ಪ್ರವಾಸ

ಕೊಪ್ಪಳ: ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರಾದ ಡಾ. ಶರಣಪ್ರಕಾಶ ಆರ್.ಪಾಟೀಲ ಅವರು ಜು.3ರಂದು ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಸಚಿವರು ಅಂದು ಬೆಳಿಗ್ಗೆ 08 ಗಂಟೆಗೆ ಹುಬ್ಬಳ್ಳಿಯಿಂದ ನಿರ್ಗಮಿಸಿ, ರಸ್ತೆ ಮಾರ್ಗವಾಗಿ ಬೆಳಿಗ್ಗೆ 10.15 ಗಂಟೆಗೆ ಕೊಪ್ಪಳಕ್ಕೆ ಆಗಮಿಸುವರು. ಬಳಿಕ 10-30ಕ್ಕೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಲಾಗಿರುವ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಕೃತಿ ವಿಕೋಪದ ಕುರಿತು ಸಭೆಯಲ್ಲಿ ಪಾಲ್ಗೊಳ್ಳುವರು. ನಂತರ ಸಚಿವರು ಅಂದು ಮಧ್ಯಾಹ್ನ 12.15ಕ್ಕೆ ಕೊಪ್ಪಳದಿಂದ ರಸ್ತೆ ಮೂಲಕ ರಾಯಚೂರು ಜಿಲ್ಲೆಗೆ ಪ್ರಯಾಣ ಬೆಳಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆ ಸಾವು

ಮುನಿರಾಬಾದ್: ಇಲ್ಲಿನ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯ ಮುನಿರಾಬಾದ್ ಬೈಪಾಸ್ ಬಳಿ ಬೈಕ್ ಹಾಗೂ ಸರಕು ಸಾಗಣೆ ಲಾರಿ ನಡುವೆ ಗುರುವಾರ ಬೆಳಿಗ್ಗೆ ನಡೆದ ಮುಖಾಮುಖಿ ಡಿಕ್ಕಿಯಲ್ಲಿ ಬೈಕ್ ಹಿಂಬದಿ ಕುಳಿತಿದ್ದ ಮಹಿಳೆಯೊಬ್ಬರು ಗಂಭೀರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರನ್ನು ಹಿಟ್ನಾಳ ಗ್ರಾಮದ ನಿರ್ಮಲಾ ಕೊಟ್ರೇಶಪ್ಪ ಪಲ್ಲೇದ (48) ಎಂದು ಗುರುತಿಸಲಾಗಿದೆ. ಬೈಕ್ ಚಲಾಯಿಸುತ್ತಿದ್ದ ನಿರ್ಮಲಾ ಅವರ ಪತಿ ಕೊಟ್ರೇಶಪ್ಪ ಅವರ ತಲೆಗೆ ಪೆಟ್ಟಾಗಿದ್ದು ಕೊಪ್ಪಳ ಕೆಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮುನಿರಾಬಾದ್ ಮೇಲ್ಸೇತುವೆ ಬಳಿ ಅಪಘಾತ ಸಂಭವಿಸಿದೆ. ದಂಪತಿ ಮುನಿರಾಬಾದ್ ಕಡೆಗೆ ಹೋಗುತ್ತಿದ್ದರು. ಮಹಾರಾಷ್ಟ್ರ ಮೂಲದ ಸರಕು ಸಾಗಣೆ ಲಾರಿ ಹೊಸಪೇಟೆ ಬಾಗದಿಂದ ಸೊಲ್ಲಾಪುರ ಕಡೆಗೆ ಹೊರಟಿತ್ತು. ಮುನಿರಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಯಲಬುರ್ಗಾ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಜು.3ರಂದು ಬೆಂಗಳೂರಿನಲ್ಲಿ ನಡೆಯುವ ಜನಾಗ್ರಹ ಸಮಾವೇಶದ ಭಿತ್ತಿಪತ್ರವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)ದ ಸಂಘಟನಾ ಅಧ್ಯಕ್ಷ ಶಿವಾನಂದ ಬಣಕಾರ ಬಿಡುಗಡೆಗೊಳಿಸಿದರು.

ಹಣಕ್ಕಿಂತ ಜ್ಞಾನ ಸಂಪತ್ತು ಬಹಳ ಮುಖ್ಯ

ಕುಕನೂರು: ಹಣ, ಆಸ್ತಿ ಸಂಪತ್ತಿಗೆ ಮನುಷ್ಯನಿಗೆ ಜ್ಞಾನದ ಸಂಪತ್ತು ಬಹಳ ಮುಖ್ಯ ಎಂದು ಶ್ರೀಅನ್ನದಾನೇಶ್ವರ ಮಠದ ಡಾ.ಮಹಾದೇವ ದೇವರು ಅಭಿಪ್ರಾಯ ಪಟ್ಟರು.

ಪಟ್ಟಣದ ಕುಕನೂರ ಎ-2 ವಲಯದ ಕಾರ್ಯ ಕ್ಷೇತ್ರದ ಸೂರ್ಯೋದಯ ಜ್ಞಾನ ವಿಕಾಸ ಕೇಂದ್ರದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ಜಂಜಾಟ ಜೀವನದಲ್ಲಿ ಎಲ್ಲರೂ ಹಣ, ಆಸ್ತಿ, ಅಂತಸ್ತು ಸಂಪಾದಿಸುವ ಬರದಲ್ಲಿದ್ದಾರೆ. ಅದರ ಜೊತೆಗೆ ಜ್ಞಾನದ ಸಂಪತ್ತು ಬಹಳ ಮುಖ್ಯವಾಗಿದೆ. ತಾಯಂದಿರು ತಮ್ಮ ದುಡಿಮೆಯ ಸಂಪಾದನೆ ಯಲ್ಲಿ ಕೂಡಿಡುವ ಹಣವು ಆಪ್ತ ಕಾಲದ ಸಂದರ್ಭದಲ್ಲಿ ಉಪಯೋಗಕ್ಕೆ ಬರಲಿದೆ ಎಂದರು.

ತಮ್ಮ ದುಡಿಮೆಯ ಜೊತೆಗೆ ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣ ಕೊಡಿಸುವ ಕಡೆಗೆ ಗಮನ ಹರಿಸಬೇಕು. ಬಡವರ ಕಲ್ಯಾಣಕ್ಕಾಗಿ ಸಾಲ ಹಾಗೂ ಧನಸಹಾಯ ಮತ್ತು ದೇವಸ್ಥಾನಗಳ ಜೀರ್ಣೋದ್ಧಾರ ಸೇರಿದಂತೆ ಶಿಕ್ಷಣದ ಸಲುವಾಗಿ ಶಾಲಾ-ಕಾಲೇಜುಗಳಿಗೆ ಅನುದಾನ ಒದಗಿಸುತ್ತಿರುವುದು ನಿಜಕ್ಕೂ ಪ್ರಶಂಸನೀಯ ಎಂದರು.

ಜ್ಞಾನ ವಿಕಾಸ ಸಮನ್ವಯಾಧಿಕಾರಿ ರೇಖಾ ಮಾಳಿಮನಿ, ವಲಯದ ಮೇಲ್ವಿಚಾರಕ ಶ್ರೀಶೈಲ ಮಾತನಾಡಿದರು. ಕೇಂದ್ರದ ಅಧ್ಯಕ್ಷೆ ಶಮಷಾದ್ ಬೇಗಂ, ಸೇವಾ ಪ್ರತಿನಿಧಿ ಗೀತಾ ಸೇರಿದಂತೆ ಇತರರು ಇದ್ದರು.



ಕುಕನೂರು: ಪಟ್ಟಣದ ಕುಕನೂರ ಎ-2 ವಲಯದ ಕಾರ್ಯ ಕ್ಷೇತ್ರದ ಸೂರ್ಯೋದಯ ಜ್ಞಾನ ವಿಕಾಸ ಕೇಂದ್ರದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಶ್ರೀಅನ್ನದಾನೇಶ್ವರ ಮಠದ ಡಾ.ಮಹಾದೇವ ದೇವರು ಉದ್ಘಾಟಿಸಿದರು.

ಅಧಿಕಾರಿಗಳೊಂದಿಗೆ ಸಭೆ : ಜಿಲ್ಲಾಧಿಕಾರಿ ಡಾ.ಸುರೇಶ ಸಲಹೆ

ಸಾವಯವ ಕೃಷಿಗೆ ಯೋಜನೆ ಜಾರಿಗೊಳಿಸಿ

ಕೊಪ್ಪಳ: ಜಿಲ್ಲೆಯಲ್ಲಿ ಸಮಗ್ರ ಸಾವಯವ ಕೃಷಿ ವ್ಯವಸ್ಥೆಯನ್ನು ಸೂಕ್ತ ಯೋಜನೆಗಳನ್ನು ರೂಪಿಸಿ, ಅವುಗಳ ಜಾರಿಗೆ ಕ್ರಮ ಕೈಗೊಳ್ಳುವಂತೆ ಡಿಸಿ ಡಾ.ಸುರೇಶ ಬಿ.ಇಟ್ನಾಳ ಅವರು ಕೃಷಿ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸಲಹೆ ನೀಡಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ನೀರಾವರಿ ಪ್ರದೇಶದಲ್ಲಿ ಹಾಗೂ ವಿಶೇಷವಾಗಿ ಭತ್ತ ಬೆಳೆಯುವ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕಗೊಬ್ಬರಗಳ ಬಳಕೆಯಾಗುತ್ತಿದ್ದು, ಇದು ಜನರ ಆರೋಗ್ಯಕ್ಕೆ ಹಾನಿಕಾರವಾಗುವ ಜೊತೆಗೆ ಭೂಮಿಯ ಫಲವತ್ತತೆಯನ್ನು ಸಹ ಹಾಳು ಮಾಡುತ್ತದೆ. ಇದಕ್ಕಾಗಿ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಈ ಬಗ್ಗೆ ಜಿಲ್ಲೆಯ ರೈತರಿಗೆ ನಿರಂತರ ಅರಿವು ಮೂಡಿಸಬೇಕು. ಜಿಲ್ಲೆಯಲ್ಲಿ ರೇಷ್ಮೆ, ತೋಟಗಾರಿಕೆ, ಪಶುಪಾಲನೆ ಪ್ರಮಾಣವನ್ನು ಹೆಚ್ಚಿಸುವುದರ ಜೊತೆಗೆ ಸಮಗ್ರ ಸಾವಯವ ಕೃಷಿಗೆ ಉತ್ತೇಜನ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಕೃಷಿ ಹೊಂಡ, ಚೆಕ್ ಡ್ಯಾಂಗಳ ನಿರ್ಮಾಣದಂತಹ ಯೋಜನೆಗಳ ಜಾರಿಗೂ ಒತ್ತು ನೀಡಬೇಕೆಂದರು.

ಕೃಷಿ, ತೋಟಗಾರಿಕಾ ಬೆಳೆಗಳಿಗೆ ಪ್ರಧಾನ ಪೋಷಕಾಂಶಗಳು ಮತ್ತು ಲಘು ಪೋಷಕಾಂಶಗಳಿಗೆ ಭೂಮಿಯೇ ಮುಖ್ಯ ಆಧಾರವಾಗಿದೆ. ಆದರೆ, ಮಣ್ಣಿನಿಂದ ಎಲ್ಲಾ ಪೋಷಕಾಂಶಗಳು ಬೆಳೆಗಳಿಗೆ ಬೇಕಾದ ಪ್ರಮಾಣದಲ್ಲಿ ದೊರೆಯದಿರುವ ಕಾರಣ ಬಾಹ್ಯವಾಗಿ ಗೊಬ್ಬರ ನೀಡಲಾಗುತ್ತದೆ. ರೈತರು ಕೇವಲ ಒಂದು ಅಥವಾ ಎರಡು ಪೋಷಕಾಂಶ ಒದಗಿಸುವ ಯೂರಿಯಾ ಹಾಗೂ ಡಿಎಪಿಯ ಬಳಕೆಯನ್ನು ಹೆಚ್ಚಾಗಿ ಮಾಡುತ್ತಾರೆ. ಇದನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು. ಭೂಮಿ ಮತ್ತು ಬೆಳೆಗಳಿಗೆ ಅಗತ್ಯವಿರುವ ಪೋಷಕಾಂಶಗಳನ್ನು ಸಾವಯವ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಹಿಂಡಿ ಗೊಬ್ಬರ, ಎರೆಹುಳಗೊಬ್ಬರ, ಜೈವಿಕ ಗೊಬ್ಬರಗಳ ಬಳಕೆ ಹೆಚ್ಚಿಸಲು ರೈತರಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು ಎಂದು ಹೇಳಿದರು.

2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಕೊಪ್ಪಳ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ರೈತರು ತಮ್ಮ ಬೆಳೆಗಳಿಗೆ ವಿಮಾ ರಕ್ಷಣೆ ಪಡೆಯಲು ನಿಗದಿತ ದಿನಾಂಕದೊಳಗೆ ನೋಂದಾಯಿಸಿಕೊಳ್ಳಬೇಕು. ಇದಲ್ಲದೇ ರೈತರು ತಾವು ಬೆಳೆದ ಬೆಳೆಯನ್ನೇ ಸ್ವಯಂ ಬೆಳೆ ಸಮೀಕ್ಷೆ ಮೂಲಕ ದೃಢೀಕರಿಸಲು ಮತ್ತು ಸರಿಯಾದ ಬೆಳೆಯನ್ನು ನೋಂದಾಯಿಸಲು ಅವಕಾಶವಿದ್ದು, ಈ ಬಗ್ಗೆ ರೈತರಿಗೆ ಅರಿವು ಮೂಡಿಸಬೇಕು ಎಂದು ಸಂಬಂಧಪಟ್ಟ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಪಂ ಸಿಇಒ ವರ್ಣಿತ್ ನೇಗಿ, ಡಿವೈಎಸ್ಪಿ ನಿರ್ಮಲಾ, ಎಸ್ಪಿ ಹೇಮಂತ ಕುಮಾರ್, ಜಂಟಿ ಕೃಷಿ ನಿರ್ದೇಶಕ ಜಿ.ಡಿ.ಕೃಷ್ಣಮೂರ್ತಿ, ತೋಟಗಾರಿಕೆ ಜಂಟಿನಿರ್ದೇಶಕ ಕೃಷ್ಣಪ್ಪ ಉಕ್ಕುಂದ, ಉಪ ಕೃಷಿ ನಿರ್ದೇಶಕ ಎಲ್.ಸಿದ್ದೇಶ್ವರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜಿಲ್ಲೆಯ ಎಲ್ಲ ತಾಲೂಕಿನ ಸಹಾಯಕ ಕೃಷಿ ಅಧಿಕಾರಿಗಳು, ರೈತ ಸಂಪರ್ಕ ಅಧಿಕಾರಿಗಳು, ಗೊಬ್ಬರ ಮಾರಾಟ ಕಂಪನಿಗಳ ಪ್ರತಿನಿಧಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಪೋಸ್ಟರ್ ಬಿಡುಗಡೆ

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕೃಷಿ ಇಲಾಖೆಯಿಂದ ಸಿದ್ದಪಡಿಸಲಾದ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಕುರಿತು ಜಾಗೃತಿ ಮೂಡಿಸುವ ಪೋಸ್ಟರಗಳನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು.

ಅತಿಥಿ ಶಿಕ್ಷಕರ ಬೃಹತ್ ಪ್ರತಿಭಟನಾ ಮೆರವಣಿಗೆ

ಮಸ್ಕಿ: ಸರ್ಕಾರಿ ಶಾಲೆಗಳ ಶೈಕ್ಷಣಿಕ ವ್ಯವಸ್ಥೆಯ ಬೆನ್ನೆಲುಬಾಗಿ ನಿಂತಿರುವ ಅತಿಥಿ ಶಿಕ್ಷಕರ ಬದುಕು ಇಂದು ಬೀದಿಗೆ ಬಂದಿದೆ. ದೇಶದ ಭವಿಷ್ಯ ರೂಪಿಸುವ ಶಿಕ್ಷಕರಿಗೆ ಕನಿಷ್ಠ ಸೇವಾ ಭದ್ರತೆಯೂ ಇಲ್ಲದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ಆಶ್ರಯದಲ್ಲಿ ಇಂದು ಮಸ್ಕಿ ಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಲಾಯಿತು.

ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಸಾಗಿದ ನೂರಾರು ಅತಿಥಿ ಶಿಕ್ಷಕರು, ತಮ್ಮ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದರು. ಇತ್ತೀಚೆಗಷ್ಟೇ ತಾಲೂಕಿನ ಮೆದಿಕಿನಾಳಗ್ರಾಮದಲ್ಲಿ ಅತಿಥಿಶಿಕ್ಷಕರೊಬ್ಬರು ಕರ್ತವ್ಯದಲ್ಲಿದ್ದಾಗಲೇ ಹೃದಯಾಘಾತದಿಂದ ಮೃತಪಟ್ಟ ಘಟನೆಯನ್ನು ಸ್ಮರಿಸಿದ ಪ್ರತಿಭಟನಾಕಾರರು, ಕನಿಷ್ಠ ಸಾಮಾಜಿಕ ಭದ್ರತೆಯೂ ಇಲ್ಲದ ಅತಿಥಿ ಶಿಕ್ಷಕರ ದುಸ್ಥಿತಿಗೆ ಈ ದುರಂತವೇ ಸಾಕ್ಷಿಯಾಗಿದೆ.

ಆದ್ದರಿಂದ ಅತಿಥಿ ಶಿಕ್ಷಕರಿಗೆ ಸೇವೆ ಹಾಗೂ ಉದ್ಯೋಗ ಭದ್ರತೆ, ಗೌರವಧನ ಹೆಚ್ಚಳ,ಸರಿಯಾಗಿ ವೇತನ,ವಿಮೆ ಮತ್ತು ಸಾಮಾಜಿಕ ಭದ್ರತೆ: ಕರ್ತವ್ಯದ ಅವಧಿಯಲ್ಲಿ ಅನಾಹುತ ಸಂಭವಿಸಿದರೆ ಸೂಕ್ತ ವಿಮಾ ಸೌಲಭ್ಯ ಹಾಗೂ ಪರಿಹಾರ ಒದಗಿಸಬೇಕು,ಸೇವಾ ಅನುಭವಕ್ಕೆ ಮಾನ್ಯತೆ, ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಕೃಪಾಂಕ ನೀಡುವ ಮೂಲಕ ಹಿರಿಯ ಅತಿಥಿ ಶಿಕ್ಷಕರಿಗೆ ಮೊದಲ ಆದ್ಯತೆ ನೀಡಬೇಕು ಎಂದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮುಖಂಡರು ಮಾತನಾಡಿ, ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು ಸುಮಾರು 51,000 ಅತಿಥಿ ಶಿಕ್ಷಕರು ಹಗಲಿರುಳು ಶ್ರಮಿಸುತ್ತಿದ್ದಾರೆ. ಆದಾಗ್ಯೂ, ಶಿಕ್ಷಣ ಇಲಾಖೆಯು ಕೇವಲ 9-10 ತಿಂಗಳಿಗೆ ಮಾತ್ರ ನಮ್ಮನ್ನು ಬಳಸಿಕೊಂಡು ಬಳಸಿ ಬಿಸಾಡುವ ವಸ್ತುವಿನಂತೆ ನೋಡುತ್ತಿದೆ.

ರಜೆ ದಿನಗಳಲ್ಲಿ ನಮಗೆ ವೇತನವಿರುವುದಿಲ್ಲ, ಯಾವುದೇ ಭವಿಷ್ಯದ ಭರವಸೆ ಇಲ್ಲದೆ ನಾವು ಎಷ್ಟು ದಿನ ಬದುಕು ಸಾಗಿಸಬೇಕು ಎಂದು ಪ್ರಶ್ನಿಸಿದರು.

ಪ್ರತಿಭಟನೆ ಬಳಿಕ ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರಿಗೆ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಿದರು. ಮಸ್ಕಿ ತಾಲೂಕು ಅತಿಥಿ ಶಿಕ್ಷಕರ ಸಂಘದ ಪದಾಧಿಕಾರಿಗಳು, ಸಿಂಧನೂರು ಲಿಂಗಸುಗೂರ ತಾಲೂಕಿನ ಎಲ್ಲ ಅತಿಥಿ ಶಿಕ್ಷಕರು ಹಾಗೂ ಶಿಕ್ಷಕಿಯರು ಸೇರಿದಂತೆ ವಿವಿಧ ಸಂಘಟನೆಗಳು, ಪೊಲೀಸ್ ಇಲಾಖೆ ಅಧಿಕಾರಿಗಳು ಇದ್ದರು.



ಪಕ್ಷ ಸಂಘಟನೆಗೆ ಆದ್ಯತೆ ನೀಡಿ: ಬಿ.ವಿ.ನಾಯಕ

ಮಾನ್ವಿ: ಕಾರ್ಯಕರ್ತರು ಪಕ್ಷ ಸಂಘಟನೆಗೆ ಆದ್ಯತೆ ನೀಡಬೇಕು ಎಂದು ಮಾಜಿ ಸಂಸದ ಬಿ.ವಿ.ನಾಯಕ ಹೇಳಿದರು.

ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲದ ವತಿಯಿಂದ ಆಯೋಜಿಸಿದ್ದ ಎಸ್ ಐಆರ್ (ಸಮಗ್ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ) ವಿಶೇಷ ಅಭಿಯಾನ ಸಭೆಯಲ್ಲಿ ಅವರು ಮಾತನಾಡಿದರು.

ಮತದಾನದ ಹಕ್ಕು ಪ್ರತಿಯೊಬ್ಬ ಭಾರತೀಯ ನಾಗರಿಕನಿಗೆ ಸಂವಿಧಾನ ನೀಡಿರುವ ಪವಿತ್ರ ಹಕ್ಕಾಗಿದ್ದು, ಅನರ್ಹ ಹಾಗೂ ನಕಲಿ ಮತದಾರರನ್ನು ಮತಪಟ್ಟಿಯಿಂದ ಹೊರಗಿಟ್ಟು ಅರ್ಹ ಮತದಾರರನ್ನು ಮಾತ್ರ ಮತಪಟ್ಟಿಯಲ್ಲಿ ಉಳಿಸುವ ಉದ್ದೇಶದಿಂದ ಚುನಾವಣಾ ಆಯೋಗವು ಎಸ್‌ಐಆರ್ ವಿಶೇಷ ಪರಿಷ್ಕರಣೆ ಅಭಿಯಾನ ನಡೆಸುತ್ತಿದೆ ಎಂದು ಹೇಳಿದರು.

ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ ಮಾತನಾಡಿ, ಮಾನ್ವಿ ಮಂಡಲದಲ್ಲಿ ಬಿಜೆಪಿ ಬಲಿಷ್ಠವಾಗಿದ್ದು, ಕೆಲವರು ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಲು ಯತ್ನಿಸುತ್ತಿದ್ದಾರೆ. ಮಾಜಿ ಸಂಸದ ಬಿ.ವಿ. ನಾಯಕ ಹಾಗೂ ಮಾಜಿ ಶಾಸಕ ಗಂಗಾಧರ ನಾಯಕ ನೇತೃತ್ವದಲ್ಲಿ 29 ದಿನಗಳ ಕಾಲ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಎಸ್.ಐ.ಆರ್. ಅಭಿಯಾನ ನಡೆಸಿ ಯಶಸ್ವಿಗೊಳಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಂತೋಷ ರಾಜಗುರು, ಮಾನ್ವಿ ಮಂಡಲ ಬಿಜೆಪಿ ಅಧ್ಯಕ್ಷ ವೀರಭದ್ರಗೌಡ ಭೋಗಾವತಿ ಮಾತನಾಡಿದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ರವೀಂದ್ರ ಜಲ್ದಾರ್, ಜಿಲ್ಲಾ ಎಸ್.ಐ.ಆರ್. ಉಸ್ತುವಾರಿ ಶರಣಪ್ಪ ನಕ್ಕುಂದಿ, ಮಾಜಿ ಶಾಸಕ ಗಂಗಾಧರ ನಾಯಕ, ಸಿರವಾರ ಮಂಡಲ ಅಧ್ಯಕ್ಷ ಅಮರೇಶಪ್ಪ ಸಾಹುಕರ್, ಕೆ. ನಾಗಲಿಂಗಸ್ವಾಮಿ, ಅಯ್ಯಪ್ಪ ನಾಯಕ ಮ್ಯಾಕಲ್, ಮಲ್ಲನಗೌಡ ನಕ್ಕುಂದಿ, ದೊರೆಬಾಬು, ಶಿವಲಿಂಗಯ್ಯಸ್ವಾಮಿ, ಉಮೇಶ್ ಸಜ್ಜನ್, ಜಿ. ಸುಧಾಕರ್, ಹನುಮೇಶ ನಾಯಕ ಜೀನೂರು, ಗುರುಸಿದ್ದಪ್ಪ ಗೌಡ ಕಣ್ಣೂರು, ಜಯರಾಜ, ಕುಮಾರಸ್ವಾಮಿ, ರುದ್ರಗೌಡ ಸೇರಿದಂತೆ ಬಿಜೆಪಿ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.



ಮಾದಕ ಜಾಹೀರಾತುಗಳಿಂದ ದೂರವಿರಿ: ಪಿಎಸ್‌ಐ ಉಮೇಶ್

ಕನಕಗಿರಿ: 'ಮಾದಕ ವಸ್ತುಗಳಿಗೆ 'ಬೇಡ' ಎಂದು ಹೇಳಿ, ಜೀವನಕ್ಕೆ 'ಹೌದು' ಎಂದು ಹೇಳಿ' ಎಂಬ ಘೋಷವಾಕ್ಯದೊಂದಿಗೆ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ದುರುಪಯೋಗ ಮತ್ತು ಸಾಗಾಣಿಕೆ ವಿರೋಧ ದಿನದ ಅಂಗವಾಗಿ ಕನಕಗಿರಿಯ ಬೆಸ್ಟ್ ಪಿಯು ಕಾಲೇಜಿನಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಿತು.

ಪೊಲೀಸ್ ಇಲಾಖೆ ಮತ್ತು ಬೆಸ್ಟ್ ಪಿಯು ಕಾಲೇಜು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಾದಕ ವಸ್ತುಗಳ ದುಷ್ಪ ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲು ಉಪನ್ಯಾಸಗಳು ಮತ್ತು ಪೋಸ್ಟರ್ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಯಿತು.

ನಂತರ ನಗರ ಠಾಣೆಯ ಪಿಎಸ್‌ಐ ಉಮೇಶ್ ಮಾತನಾಡಿ, ಮಾದಕ ವ್ಯಸನವು ಯುವಜನರ ಭವಿಷ್ಯವನ್ನು ಹಾಳು ಮಾಡುವ ಪ್ರಮುಖ ಕಾರಣವಾಗಿದ್ದು, ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ ಹೆಚ್ಚಿಸುತ್ತದೆ ಎಂದು ಎಚ್ಚರಿಸಿದರು. ವಿದ್ಯಾರ್ಥಿಗಳು ಉತ್ತಮ ಸ್ನೇಹ ಬಳಗವನ್ನು ಆಯ್ಕೆ ಮಾಡಿಕೊಂಡು, ಜೀವನದಲ್ಲಿ ಸಕಾರಾತ್ಮಕ ಗುರಿಗಳನ್ನು ಹೊಂದಬೇಕು. ಮಾದಕ ವಸ್ತುಗಳ ಬಳಕೆಯಿಂದ ಉಂಟಾಗುವ ದೈಹಿಕ ಮತ್ತು ಮಾನಸಿಕ ಹಾನಿಗಳ ಬಗ್ಗೆ ವಿವರಿಸಿ, ಯುವಜನತೆ ಇಂತಹ ದುಷ್ಪಭಾವಗಳಿಂದ ದೂರವಿರಬೇಕು ಎಂದು ಕರೆ ನೀಡಿದರು.

ಬಳಿಕ ಕಾಲೇಜಿನ ಪ್ರಾಂಶುಪಾಲ ರಾಮಪ್ಪ ಮಾತನಾಡಿ, ಯುವಕರು ಕ್ರೀಡೆ, ಯೋಗ ಹಾಗೂ ಉತ್ತಮ ಹವ್ಯಾಸಗಳನ್ನು ಅಳವಡಿಸಿಕೊಂಡು ಆರೋಗ್ಯಕರ ಜೀವನವನ್ನು ನಡೆಸಬೇಕು ಎಂದು ಸಲಹೆ ನೀಡಿದರು. ಜೊತೆಗೆ, ಕೆಲ ಚಿತ್ರರಂಗದ ನಟರು ಪ್ರಚಾರ ಮಾಡುವ ಮಾದಕ ಮತ್ತು ಗುಟಕ ಜಾಹೀರಾತುಗಳಿಂದ ದೂರವಿರಬೇಕೆಂದು ಎಚ್ಚರಿಸಿದರು.

ಪೊಲೀಸ್ ಇಲಾಖೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಎಚ್‌ಕೆಇ ಸಂಸ್ಥೆಯ ವಿದ್ಯಾರ್ಥಿ ಯೋಜನೆಗಳಿಗೆ ಅನುದಾನ: ನಮೋಶಿ ಹರ್ಷ

ಕಲಬುರಗಿ: ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ವ್ಯಾಪ್ತಿಯ ಪಿಡಿಎ ಎಂಜಿನಿಯರಿಂಗ್ ಕಾಲೇಜು, ವಿ.ಜಿ.ಮಹಿಳಾ ಪದವಿ ಕಾಲೇಜು ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು, ರಾಯಚೂರು ಕಾಲೇಜುಗಳ ವಿದ್ಯಾರ್ಥಿಗಳ ಒಟ್ಟು 30 ನವೀನ ಯೋಜನೆಗಳು ಕರ್ನಾಟಕ ಸರ್ಕಾರದ ಕರ್ನಾಟಕ ನವೀನತೆ ಮತ್ತು ತಂತ್ರಜ್ಞಾನ ಸಂಸ್ಥೆ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಉಪಕ್ರಮದಡಿ ಆಯ್ಕೆಯಾಗಿದ್ದು, ಪ್ರತಿ ಕಾಲೇಜಿನ ತಲಾ 10 ವಿದ್ಯಾರ್ಥಿ ಯೋಜನೆಗಳಿಗೆ ಅನುದಾನ ಮಂಜೂರಾಗಿದೆ ಎಂದು ವಿಪ ಸದಸ್ಯ ಶಶೀಲ್ ನಮೋಶಿ ಹರ್ಷ ವ್ಯಕ್ತಪಡಿಸಿದರು.



ನಮ್ಮ ಸಂಸ್ಥೆಯ ಕಾಲೇಜುಗಳು ರಾಜ್ಯ ಮಟ್ಟದಲ್ಲಿ ನವೀನ ಸಂಶೋಧನೆ ಮತ್ತು ವಿದ್ಯಾರ್ಥಿ ಉದ್ಯಮಶೀಲತೆಯಲ್ಲಿ ಗಮನಾರ್ಹ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ. ಸನ್ 2.0 ಯೋಜನೆಯಡಿ ಪಿಡಿಎ ಇಂಜಿನಿಯರಿಂಗ್ ಕಾಲೇಜಿಗೆ 41.50 ಲಕ್ಷ ಹಾಗೂ ವಿ.ಜಿ.ಮಹಿಳಾ ಪದವಿ ಕಾಲೇಜಿಗೆ 42.50 ಲಕ್ಷ ಅನುದಾನ ಮಂಜೂರಾಗಿರುವುದು ಸಂಸ್ಥೆಯ ವಿದ್ಯಾರ್ಥಿಗಳ ಪ್ರತಿಭೆಗೆ ದೊರೆತ ಮಹತ್ವದ ಗೌರವವಾಗಿದೆ ಎಂದರು. ಈ ಸಾಧನೆಯ ಹಿಂದೆ ಶ್ರಮಿಸಿದ ಪಿ.ಡಿ.ಎ.ಎಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಆರ್. ಪಾಟೀಲ್, ಡಾ. ನಾಗೇಂದ್ರ ಎಚ್., ಡಾ.ನಾಗೇಶ್ ಸಾಲಿಮಠ ಹಾಗೂ ಪ್ರೊ. ಸಿದ್ದರಾಮ ಸಂಗೋಳಗಿ, ಹಾಗೂ ವಿ.ಜಿ.ಮಹಿಳಾ ಪದವಿ ಕಾಲೇಜಿನ ಪ್ರಾಚಾರ್ಯೆ ಡಾ.ಆರ್.ಬಿ.ಕೊಂಡಾ, ಡಾ. ರವೀಂದ್ರ ಹಾಗೂ ಡಾ. ಶಿವರಾಜ್ ಗೌನಳ್ಳಿ ಅವರು ವಿದ್ಯಾರ್ಥಿಗಳಿಗೆ ಸಮರ್ಪಕ ಮಾರ್ಗದರ್ಶನ ನೀಡಿ ಯೋಜನೆಗಳ ಆಯ್ಕೆಗೆ ಶ್ರಮಿಸಿದ್ದು, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ನಮೋಶಿ ತಿಳಿಸಿದರು. ಸಾಧನೆಗೈದ ವಿದ್ಯಾರ್ಥಿ ನವೋದ್ಯಮಿಗಳನ್ನು ಎಚ್‌ಕೆಇ ಸಂಸ್ಥೆಯ ಅಧ್ಯಕ್ಷ ಶಶೀಲ್ ನಮೋಶಿ, ಉಪಾಧ್ಯಕ್ಷ ರಾಜಾ ಬಿ. ಭೀಮಳ್ಳಿ, ಕಾರ್ಯದರ್ಶಿ ಉದಯಕುಮಾರ್ ಚಿಂಚೋಳಿ, ಜಂಟಿ ಕಾರ್ಯದರ್ಶಿ ಡಾ.ಕೈಲಾಸ ಪಾಟೀಲ, ಆಡಳಿತ ಮಂಡಳಿಯ ಎಲ್ಲ ಸದಸ್ಯರು ಹಾಗೂ ಸಂಸ್ಥೆಯ ಆಡಳಿತಾಧಿಕಾರಿಗಳಾದ ಡಾ.ಎಸ್.ಎಲ್.ಹಿರೇಮಠ ಅಭಿನಂದಿಸಿ ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆ ಮಾಡುವಂತೆ ಶುಭ ಹಾರೈಸಿದ್ದಾರೆ ಎಂದು ಸಂಸ್ಥೆಯ ಮಾಧ್ಯಮ ಪ್ರಮುಖ ಐ.ಕೆ.ಪಾಟೀಲ್ ತಿಳಿಸಿದ್ದಾರೆ.

ಧುತ್ತರಗಿ ದಂಪತಿ ಕನಸು ಸಾಕಾರಗೊಳಿಸಿದ ರಂಗಕರ್ಮಿ ವಿರೂಪಾಕ್ಷಪ್ಪ

ಹುಸೇನಸಾಬ ಕಟಗಿ

ಹನುಮಸಾಗರ: ಕನ್ನಡ ರಂಗಭೂಮಿ, ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸುಮಾರು ಆರು ದಶಕಗಳ ಕಾಲ ನಿಸ್ವಾರ್ಥ ಸೇವೆ ಸಲ್ಲಿಸಿರುವ ಹಿರಿಯ ರಂಗಕರ್ಮಿ, ಹಾರ್ಮೋನಿಯಂ ಮಾಸ್ಟರ್, ಸಂಗೀತ ನಿರ್ದೇಶಕ ಹಾಗೂ ನಟ ವಿರೂಪಾಕ್ಷಪ್ಪ ಗಾಯದ (ಧುತ್ತರಗಿ) ಅವರು ಕನ್ನಡ ರಂಗಭೂಮಿಯ ಅಪರೂಪದ ಎಲೆಮರೆಕಾಯಿ ಕಲಾಸಾಧಕರಾಗಿ ಗುರುತಿಸಿಕೊಂಡಿದ್ದಾರೆ.

1957ರ ಜೂನ್ 1ರಂದು ಜನಿಸಿದ ವಿರೂಪಾಕ್ಷಪ್ಪ ಗಾಯದ ಅವರು ಬಾಲ್ಯದಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡರು. ಆ ಸಂದರ್ಭದಲ್ಲಿ ಖ್ಯಾತ ಕವಿ ಹಾಗೂ ನಾಟಕಕಾರ ಪಿ.ಬಿ.ಧುತ್ತರಗಿ ಮತ್ತು ಸರೋಜಮ್ಮ ಧುತ್ತರಗಿ ದಂಪತಿಗಳು ಅವರನ್ನು ತಮ್ಮ ಮಗನಂತೆ ಸಾಕಿ-ಬೆಳೆಸಿ ಶಿಕ್ಷಣ ನೀಡಿ, ಕಲೆಯ ಲೋಕಕ್ಕೆ ಪರಿಚಯಿಸಿದರು. ಅವರ ಮಾರ್ಗದರ್ಶನದಲ್ಲೇ ವಿರೂಪಾಕ್ಷಪ್ಪ ಅವರು ಧುತ್ತರಗಿ ಅವರ ಕಲಾ ಪರಂಪರೆಯ ಸಮರ್ಥ ವಾರಸುದಾರರಾಗಿ ಬೆಳೆದರು.

ಇಳಕಲ್‌ನ ವಿಜಯ ಕಲಾ ನಾಟಕ ಸಂಘದೊಂದಿಗೆ ದೀರ್ಘಕಾಲ ಸೇವೆ ಸಲ್ಲಿಸಿರುವ ಅವರು ನಟ, ಸಂಗೀತಗಾರ, ಹಾರ್ಮೋನಿಯಂ ಮಾಸ್ಟರ್ ಹಾಗೂ ನಿರ್ದೇಶಕರಾಗಿ ಅನೇಕ ಯಶಸ್ವಿ ನಾಟಕಗಳಿಗೆ ಜೀವ ತುಂಬಿದ್ದಾರೆ. ಬಾಲ್ಯದಲ್ಲಿಯೇ ಹರ ಗಿರಿಜೆ ಕಲ್ಯಾಣ ನಾಟಕದಲ್ಲಿ ಷಣ್ಮುಖನ ಪಾತ್ರ ನಿರ್ವಹಿಸುವ ಮೂಲಕ ರಂಗಭೂಮಿಗೆ ಕಾಲಿಟ್ಟ ಅವರು, ಬಳಿಕ ಗದುಗು ಹಾಗೂ ಧಾರವಾಡದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ತರಬೇತಿ ಪಡೆದು ತಮ್ಮ ಸಂಗೀತ ಬದುಕಿಗೆ ಭದ್ರ ಅಡಿಪಾಯ ಹಾಕಿಕೊಂಡರು.



1976-77ರಲ್ಲಿ ಸಿಂಧೂರ ಲಕ್ಷ್ಮಣ ನಾಟಕದ ಮೂಲಕ ಹಾರ್ಮೋನಿಯಂ ಮಾಸ್ಟರ್ ಆಗಿ ಸೇವೆ ಆರಂಭಿಸಿದ ಅವರು, ಬಸವೇಶ್ವರ, ಶಿಶುನಾಳ ಶರೀಫ, ಸಿದ್ಧಾರೂಢ ಮಹಾತ್ಮ, ನಾಗಲಿಂಗಲೀಲೆ, ಮಾತಂಗಕನ್ಯ ಸೇರಿದಂತೆ ಹಲವು ನಾಟಕಗಳಿಗೆ ಸಂಗೀತ ನೀಡಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶಗಳಲ್ಲಿ ನೂರಾರು ನಾಟಕ ಪ್ರದರ್ಶನಗಳಲ್ಲಿ ಸಂಗೀತ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಗದಗ ಉತ್ಸವ ಅಭಿನಂದನಾ ಸನ್ಮಾನ, ಕಲಾತಪಸ್ವಿ ಪ್ರಶಸ್ತಿ, ಸಾಂಸ್ಕೃತಿಕ ಸೌರಭ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಭಾಜನರಾಗಿರುವ ಅವರು, 2022-23ನೇ ಸಾಲಿನ ಪಿ.ಬಿ. ಧುತ್ತರಗಿ ಟ್ರಸ್ಟ್ ವಾರ್ಷಿಕ ಗೌರವ ಪ್ರಶಸ್ತಿಯನ್ನೂ ಪಡೆದಿದ್ದಾರೆ. 'ಜೀವ ಇರುವವರೆಗೂ ರಂಗಸೇವೆಯನ್ನು ಕೈಬಿಡಬೇಡ' ಎಂಬ ತಮ್ಮ ಗುರು ಪಿ.ಬಿ. ಧುತ್ತರಗಿ ಅವರ ಮಾತನ್ನೇ ಬದುಕಿನ ಧ್ಯೇಯವನ್ನಾಗಿಸಿಕೊಂಡು ಇಂದಿಗೂ ಕಲಾಸೇವೆಯಲ್ಲಿ ನಿರಂತರ ತೊಡಗಿದ್ದಾರೆ. ಅವರ ಬದುಕು ಪರಿಶ್ರಮ, ಶಿಸ್ತು ಮತ್ತು ಸಮರ್ಪಣೆಯ ಪ್ರತೀಕವಾಗಿ ಯುವ ಕಲಾವಿದರಿಗೆ ಪ್ರೇರಣೆಯಾಗಿದೆ.

ಸುಮಾರು ಆರು ದಶಕಗಳ ಕಾಲ ರಂಗಭೂಮಿಗೆ ಸೇವೆ ಸಲ್ಲಿಸಿರುವ ವಿರೂಪಾಕ್ಷಪ್ಪ ಗಾಯದ ಅವರಿಗೆ ಇನ್ನೂ ಸರ್ಕಾರದಿಂದ ಮಾಸಾಶನ ಅಥವಾ ನಾಟಕ ಅಕಾಡೆಮಿ ಪ್ರಶಸ್ತಿ ದೊರೆಯದಿರುವುದು ವಿಷಾದನೀಯ. ಸರ್ಕಾರ ಇಂತಹ ಹಿರಿಯ ರಂಗಸಾಧಕರನ್ನು ಗುರುತಿಸಿ ಗೌರವಿಸಬೇಕು ಎಂದು ನಿಸರ್ಗ ಸಂಗೀತ ಶಾಲೆಯ ಅಧ್ಯಕ್ಷ ಮಲ್ಲಯ್ಯ ಶಿವಮೂರ್ತಿ ಕೋಮಾರಿ ಹೇಳಿದರು.

ಬದಲಾಗಿ ಇಲ್ಲವಾದರೆ ಗುಂಡಾ ಕಾಯ್ದೆಯಡಿ ಗಡಿಪಾರು: ಕಮಿಷನರ್

ಕಲಬುರಗಿ: ಪದೇ ಪದೆ ಅಪರಾಧ ಮಾಡುತ್ತಾ ಸಮಾಜದಲ್ಲಿ ಧಿಮಾಕು ತೋರಿಸಿದರೆ ಸುಮ್ಮನಿರುವುದಿಲ್ಲ.ಬದಲಾಗಿ ನೆಮ್ಮದಿಯ ಜೀವನ ನಡೆಸದಿದ್ದರೆ ಗುಂಡಾ ಕಾಯ್ದೆ ಜೋಡಿಸಿ ಗಡಿಪಾರು ಮಾಡಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರು ರೌಡಿಶೀಟರ್‌ಗಳಿಗೆ ಖಡಕ್ ವಾರ್ನಿಂಗ್ ನೀಡಿದರು.ನಗರದ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ನಗರದ 10 ಪೊಲೀಸ್ ಠಾಣೆಗಳ ವ್ಯಾಪ್ತಿಯ 'ಟಾಪ್ 10' ರೌಡಿಶೀಟರ್‌ಗಳ ಪರೇಡ್ ನಡೆಸಲಾಯಿತು. ಈ ವೇಳೆ ಪ್ರತಿಯೊಬ್ಬ ರೌಡಿಯ ಇತ್ತೀಚಿನ ಚಲನವಲನ, ಕೋರ್ಟ್ ಕೇಸ್‌ಗಳ ಹಿನ್ನೆಲೆಯನ್ನು ಪರಿಶೀಲಿಸಿದ ಆಯುಕ್ತರು, 'ಬದಲಾದರೆ ಬದುಕುತ್ತೀರಿ, ಇಲ್ಲದಿದ್ದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.ಡಿಸಿಪಿ ಶಾಲೂ, ಡಿಸಿಪಿ ಪ್ರವೀಣ್ ನಾಯಕ್, ಎಸಿಪಿ ಶಿವನಗೌಡ ಪಾಟೀಲ್ ಹಾಗೂ ಪಿಐಗಳಾದ ಮಹಾಂತೇಶ ಪಾಟೀಲ್, ಸುಶೀಲಕುಮಾರ, ಖಾಜಾ ಹುಸೇನ್ ಇತರರಿದ್ದರು.

- ಕಳೆದ ಎರಡು ವರ್ಷಗಳಲ್ಲಿ 7 ರೌಡಿಗಳ ಮೇಲೆ ಗುಂಡಾ ಕಾಯ್ದೆ ಜಾರಿ.
- ಎರಡು ವರ್ಷಗಳಲ್ಲಿ 21 ರೌಡಿಗಳನ್ನು ಜಿಲ್ಲೆಯಿಂದ ಗಡಿಪಾರು ಮಾಡಲಾಗಿದೆ.



ರೌಡಿಸಂ ಹಾಗೂ ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ವೈಯಕ್ತಿಕ ಮತ್ತು ಸಂಘಟಿತ ಅಪರಾಧಗಳಿಗೆ ಕಡಿವಾಣ ಹಾಕಲು 'ರೌಡಿ ನಿಗ್ರಹ ಪಡೆ' ರಚಿಸಿ ನಿರಂತರ ನಿಗಾ ಇಡಲಾಗುತ್ತಿದೆ. ನಿಯಮ ಉಲ್ಲಂಘಿಸುವ ರೌಡಿಗಳ ವಿರುದ್ಧ ಗಡಿಪಾರು, ಗುಂಡಾ ಕಾಯ್ದೆ ಹಾಗೂ ಕೆ-ಕೋಕಾ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುವುದು.

■ ಡಾ.ಶರಣಪ್ಪ ಎಸ್.ಡಿ., ನಗರ ಪೊಲೀಸ್ ಆಯುಕ್ತ

ಧಿಮಾಕು ತೋರಿಸಿದರೆ ಹುಷಾರ್!

ಅಪರಾಧದ ದಿನಗಳು ಮುಗಿದಿವೆ, ಇನ್ನುಂದೆಯಾದರೂ ಬದಲಾಗಿ ಒಳ್ಳೆಯ ಕೆಲಸ ಮಾಡಿಕೊಂಡು ಜೀವನ ನಡೆಸಿ. ಅದನ್ನು ಬಿಟ್ಟು ಮೈಮೇಲೆ ಟ್ಯಾಟೂ ಹಾಕಿಕೊಂಡು, ಕೂದಲು ಬಿಟ್ಟುಕೊಂಡು ಸ್ಟೈಲ್ ಮಾಡುತ್ತಾ, ಸೋಶಿಯಲ್ ಮೀಡಿಯಾದಲ್ಲಿ ಧಿಮಾಕು ತೋರಿಸಿದರೆ ಪರಿಣಾಮ ನೆಟ್ಟಗಿರುವುದಿಲ್ಲ. ಇನ್ನು ಮುಂದೆ ಸಣ್ಣ ಕೇಸ್ ಆದ್ರೂ ಬಿಡುವ ಮಾತೇ ಇಲ್ಲ ಎಂದು ಪೊಲೀಸ್ ಆಯುಕ್ತರು ತಿಳಿಹೇಳಿದರು.

ಕಿರುಸುದ್ದಿ

ಶಾಸಕರ ಮನೆಗೆ ಭೇಟಿ ನೀಡಿ ಮತ ಪರಿಷ್ಕರಣೆ ಮಾಡಿದ ಅಧಿಕಾರಿಗಳು

ಹಗರಿಬೊಮ್ಮನಹಳ್ಳಿ: ತಹಶೀಲ್ದಾರ್ ಆರ್. ಕವಿತಾ ನೇತೃತ್ವದಲ್ಲಿ ಮತದಾರರ ಪರಿಷ್ಕರಣೆ ತಂಡದ ಅಧಿಕಾರಿಗಳು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ಅವರ ಮನೆಗೆ ಭೇಟಿ ನೀಡಿ ಮತದಾರರ ಪರಿಷ್ಕರಣೆಯ ಕಾರ್ಯನಿರ್ವಹಿಸಿದರು.

ಈ ವೇಳೆ ಶಾಸಕ ನೇಮಿರಾಜ್ ನಾಯ್ಕ್ ಮಾತನಾಡಿ, ಕೇಂದ್ರ ಚುನಾವಣಾ ಆಯೋಗದ ಮತದಾರರ ಪರಿಷ್ಕರಣೆಯಿಂದ ಅರ್ಹ ಮತದಾರರನ್ನು ಮತದಾರ ಪಟ್ಟಿಯಲ್ಲಿ ಉಳಿಸಿಕೊಂಡು ಮರಣ ಹೊಂದಿರುವರ ಹೆಸರು ಹಾಗೂ ಎರಡೆರಡು ಕಡೆ ಮತ ಇರುವವರ ಹೆಸರನ್ನು ಒಂದು ಕಡೆ ರದ್ದುಪಡಿಸಲು ವಲಸೆ ಹೋಗಿರುವವರ ಮತ್ತು ವಲಸೆ ಬಂದಿರುವವರ ಮತಗಳನ್ನು ಪರಿಶೀಲಿಸುವ ಜೊತೆ ಅನರ್ಹ ಮತದಾರರನ್ನು ಮತದಾರ ಪಟ್ಟಿಯಿಂದ ತೆಗೆದುಹಾಕಲು ಅರ್ಹ ಮತದಾರರಿಗೆ ಸರ್ಕಾರಿ ಸೌಲಭ್ಯಗಳು ಸಮರ್ಪಕವಾಗಿ ಸಿಗುವಂತಾಗಲು ಮತದಾರರ ಪರಿಷ್ಕರಣೆ ಕಾರ್ಯ ಸಹಕಾರಿಯಾಗಲಿದೆ. ವಾಣಿ ನೇಮಿರಾಜ್ ನಾಯ್ಕ್ ಹಾಗೂ ಮರಿಯಮ್ಮನಹಳ್ಳಿ ಪಪಂ ಮುಖ್ಯ ಅಧಿಕಾರಿಗಳು ಸಿಬ್ಬಂದಿ ಇದ್ದರು.

ಗಂಗೋತ್ರಿ ಪದವಿ ಕಾಲೇಜಿಗೆ ಮೂರು ರ‍್ಯಾಂಕ್



ಕೊಟ್ಟೂರು: 2024–25 ಶೈಕ್ಷಣಿಕ ಸಾಲಿನ ಬಳ್ಳಾರಿ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಡಿಯಲ್ಲಿ ನಡೆದ ಪದವಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಅದರಲ್ಲಿ ಕೊಟ್ಟೂರಿನ ಗಂಗೋತ್ರಿ ಬಿಎಸ್‌ಡಬ್ಲ್ಯೂ ಪದವಿ ಮಹಾವಿದ್ಯಾಲಯಕ್ಕೆ ಮೂರು ರ‍್ಯಾಂಕ್‌ಗಳು ಬಂದಿರುತ್ತವೆ. ಕಾಲೇಜಿನ ವಿದ್ಯಾರ್ಥಿನಿಯಾದ ಬಿ.ಕಾವ್ಯಾ ಪ್ರಥಮ, ಕೆ.ಅರ್ಪಿತಾ ದ್ವಿತೀಯ, ಪಿ.ಎಂ.ಸುದರ್ಶನ್ ಮೂರನೇ ರ‍್ಯಾಂಕ್ ಪಡೆದುಕೊಂಡಿದ್ದಾನೆ. ಈ ಮೂವರು ವಿದ್ಯಾರ್ಥಿಗಳು ಕಾಲೇಜಿನ ಕೀರ್ತಿಯನ್ನು ಎತ್ತಿ ಹಿಡಿದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪ್ರಾಚಾರ್ಯರು ಮತ್ತು ಉಪನ್ಯಾಸಕ ಬಳಗವು ರಾಂಕ್ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆಯನ್ನು ತಿಳಿಸಿ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದೆ. ಮಧ್ಯ ಕರ್ನಾಟಕದ ಏಕೈಕ ಸಮಾಜ ಕಾರ್ಯದ ಪದವಿ ಮಹಾವಿದ್ಯಾಲಯವಾಗಿದ್ದು ವಿಶ್ವವಿದ್ಯಾಲಯದಿಂದ ಪ್ರತಿವರ್ಷ ರಾಂಕ್ ಪಡೆಯುವ ಏಕೈಕ ಪದವಿ ಮಹಾವಿದ್ಯಾಲಯವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ಉನ್ನತ ಶಿಕ್ಷಣ ಒದಗಿಸುವ ಅತ್ಯುತ್ತಮ ಉಪನ್ಯಾಸಕ ಬಳಗವನ್ನು? ಹೊಂದಿರುವ ವಿದ್ಯಾರ್ಥಿಸ್ನೇಹಿ ಮಹಾವಿದ್ಯಾಲಯವಾಗಿದೆ. ವೃತ್ತಿಪರವಾದ ಮತ್ತು ಮೌಲ್ಯಾಧಾರಿತ ಶಿಕ್ಷಣ ನೀಡುವ ಸಂಸ್ಥೆಯಾಗಿದೆ.



ಕರೂರು: ಸಮೀಪದ ಸಿರುಗುಪ್ಪ ತಾಲೂಕಿನ ಹಾಗಲೂರು ಗ್ರಾಮದಲ್ಲಿ ಮೊಹರಂ ಹಬ್ಬದ ಪ್ರಯುಕ್ತ ಮಾರುವೇಷ ಅಥವಾ ಕಳ್ಳಾವೇಶ ತಪ್ಪಡಿ ಮೂಲಕ ಕುಣಿತ ಹಬ್ಬವನ್ನು ಆಚರಿಸಿದರು. ವೇಷಧಾರಿಗಳಾದ ಕೋಟೆಮಿ ನಾಗರಾಜ, ಶಾಂತಮ್ಮ ಇದ್ದರು.



ಕರೂರ: ಸಮೀಪದ ಸಿರುಗುಪ್ಪ ತಾಲೂಕಿನ ಹಾಗಲೂರು ಗ್ರಾಮದಲ್ಲಿ ಕಾರಹುಣ್ಣಿಮೆ ಪ್ರಯುಕ್ತ ಹಬ್ಬದ ಮೂಲಕ ಎತ್ತುಗಳ ಮೆರವಣಿಗೆ ಮಾಡಲಾಯಿತು. ದೇವರಪ್ಪ ರೈತರದ ಮಗನಾದ ಹನುಮಂತಪ್ಪ ಹಾಗೂ ಜಾಗಪ್ಪ ಎತ್ತುಗಳನ್ನು ಮೆರವಣಿಗೆಯಲ್ಲಿ ರೈತರು ಖುಷಿಯಾಗಿ ಮೆರವಣಿಗೆ ಮಾಡಲಾಯಿತು.



ಹಗರಿಬೊಮ್ಮನಹಳ್ಳಿ: ತಹಶೀಲ್ದಾರ್ ಆರ್.ಕವಿತಾ ನೇತೃತ್ವದಲ್ಲಿ ಮತದಾರರ ಪರಿಷ್ಕರಣೆ ತಂಡದ ಅಧಿಕಾರಿಗಳು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ಅವರ ಮನೆಗೆ ಭೇಟಿ ನೀಡಿ ಮತದಾರರ ಪರಿಷ್ಕರಣೆಯ ಕಾರ್ಯನಿರ್ವಹಿಸಿದರು.

ಎಸ್‌ಐಆರ್ ಅಭಿಯಾನ ಯಶಸ್ವಿಗೊಳಿಸಿ

ಬಳ್ಳಾರಿ: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂದು ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಅವರು ಮನವಿ ಮಾಡಿದರು.

ನಗರದ ಸಿರುಗುಪ್ಪ ರಸ್ತೆಯ ಅವಂಬಾವಿ ಪ್ರದೇಶದ ಅವರ ನಿವಾಸಕ್ಕೆ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆಯಲ್ಲಿ ಆಗಮಿಸಿದ ಬೂತ್ ಮಟ್ಟದ ಅಧಿಕಾರಿಗಳಿಗೆ ಎಲ್ಲ ಪೂರಕ ಮಾಹಿತಿ ನೀಡಿದ ಬಳಿಕ ಮಾತನಾಡಿದರು.

ಕರ್ನಾಟಕದಲ್ಲಿ ಆರಂಭಗೊಂಡ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನದಲ್ಲಿ ಪ್ರತಿಯೊಬ್ಬ ಅರ್ಹರು ಭಾಗವಹಿಸಿ ಯಶಸ್ವಿಗೊಳಿಸಬೇಕು. ಮನೆಗೆ ಆಗಮಿಸಿದ ಬಿಎಲ್‌ಒಗಳಿಗೆ ಪೂರಕ ಮಾಹಿತಿ ನೀಡಿ ಅರ್ಜಿಯನ್ನು ಭರ್ತಿ ಮಾಡಿ, ಅಭಿಯಾನವನ್ನು ಯಶಸ್ವಿಗೊಳಿಸಬೇಕು. ಪ್ರಜಾಪ್ರಭುತ್ವವನ್ನು ಬಲಪಡಿಸುವ ಈ ಮಹತ್ವದ ಕಾರ್ಯ ಇದಾಗಿದ್ದು, ಅರ್ಹ ಪ್ರತಿಯೊಬ್ಬ ಮತದಾರರು ಸಕ್ರಿಯವಾಗಿ ಈ ಅಭಿಯಾನದಲ್ಲಿ ಭಾಗವಹಿಸಬೇಕು. ಇದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಇದಕ್ಕೂ ಮುನ್ನ ಬಿಎಲ್‌ಒ ಅಧಿಕಾರಿಗಳಿಗೆ ನೀಡಿದ ಅರ್ಜಿ ಫಾರ್ಮ್ ಭರ್ತಿ ಮಾಡಿ, ನಂತರ ಅವರಿಗೆ ಹಸ್ತಾಂತರಿಸಿ, ಜನರಲ್ಲಿ ಅಭಿಯಾನದ ಕುರಿತು ಜಾಗೃತಿ ಮೂಡಿಸಿದರು.

ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್, ಸೇರಿದಂತೆ ಅಧಿಕಾರಿಗಳು ಇತರರಿದ್ದರು.



ಬಳ್ಳಾರಿ: ನಗರದ ಸಿರುಗುಪ್ಪ ರಸ್ತೆಯ ಅವಂಬಾವಿ ಪ್ರದೇಶದ ಅವರ ನಿವಾಸಕ್ಕೆ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆಯಲ್ಲಿ ಆಗಮಿಸಿದ ಬೂತ್ ಮಟ್ಟದ ಅಧಿಕಾರಿಗಳಿಗೆ ಎಲ್ಲ ಪೂರಕ ಮಾಹಿತಿ ನೀಡಿದರು. ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್, ಸೇರಿದಂತೆ ಅಧಿಕಾರಿಗಳು ಇತರರಿದ್ದರು.

ಶಾಸಕ ಶರಣಗೌಡ ಕಂದಕೂರ ಹೇಳಿಕೆ | ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು

ಕೆಲಸ ಮಾಡಿದ ವ್ಯಕ್ತಿಗೆ ಕೂಲಿ ಕೊಡಿ

ಯಾದಗಿರಿ: ಕೆಲಸ ಮಾಡಿದ ವ್ಯಕ್ತಿಗೆ ಕಡಿಮೆ ಕೂಲಿ ಕೊಟ್ಟರೂ ನಾನು ದುಡಿಯುವುದನ್ನು ನಿಲ್ಲಿಸಿಲ್ಲ ಎಂದು ಶಾಸಕ ಶರಣಗೌಡ ಕಂದಕೂರ ಮಾರ್ಮಿಕವಾಗಿ ನುಡಿದರು.



ಗುರುವಾರ ಗುರಮಠಕಲ್ ಕ್ಷೇತ್ರದ ಗೋಪಾಳಪುರ ಗ್ರಾಮದಲ್ಲಿ ಕೆಕೆಆರ್ಡಿ ವತಿಯಿಂದ ಶಾಲಾ ತರಗತಿ ನಿರ್ಮಾಣ, ಚಿನ್ನಾಕಾರ ಗ್ರಾಮದಲ್ಲಿ ಕೆಕೆಆರ್ಡಿಬಿ ವತಿಯಿಂದ ಅಂಗನವಾಡಿ ಕಟ್ಟಡ 2 ನಿರ್ಮಾಣಕ್ಕೆ ಅಡಿಗಲ್ಲು ಬೆಟ್ಟದಳ್ಳಿ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ, 40 ಲಕ್ಷ ರೂ.ಗಳ ವೆಚ್ಚದಲ್ಲಿ ಸರ್ಕಾರಿ ಶಾಲೆಗೆ 2 ಕೋಣೆಗಳ ನಿರ್ಮಾಣ ಹಾಗೂ ಧರ್ಮಾಪುರ ಗ್ರಾಮದಲ್ಲಿ ನೆರವೇರಿಸಿ ಮಾತನಾಡಿದರು.

ಬೆಟ್ಟದಳ್ಳಿಯಲ್ಲಿ ಗ್ರಾಮಸ್ಥರು ನಮಗೆ ಮೂರು ಬಾರಿ ಚುನಾವಣೆಯಲ್ಲಿ ಲೀಡ್ ಕೊಟ್ಟಿದ್ದೀರಿ. ಆದರೆ, ಕಳೆದ ಚುನಾವಣೆಯಲ್ಲಿ ನನ್ನ ಮೇಲೆ ಮುನಿಸಿಕೊಂಡಿರಿ. ಆದರೂ ಈ ಎತ್ತು ದುಡಿಯುವುದನ್ನು ನಿಲ್ಲಿಸಿಲ್ಲ. ಕ್ಷೇತ್ರದ ಅಭಿವೃದ್ಧಿಯೊಂದೆ ಪ್ರಮುಖ ಗುರಿಯಾಗಿ ಇಟ್ಟುಕೊಂಡು ನಾನು ಮುನ್ನಡೆಯುತ್ತಿದ್ದೇನೆ ಎಂದರು. ಗೋಪಾಳಪುರ ಗ್ರಾಮದಲ್ಲಿ ಜನರ ಕುಂದು ಕೊರತೆ ಆಲಿಸಿದ ಶಾಸಕರು, ಪ್ರತಿ ವರ್ಷ ನಮಗೆ ಸರ್ಕಾರದಿಂದ ಬರುವ ಅನುದಾನ ಬಿಡುಗಡೆಯಾಗಿ ಕಾಮಗಾರಿ ಆರಂಭಿಸಬೇಕಾದರೆ ಸ್ವಲ್ಪ ಸಮಯ ಹಿಡಿಯುತ್ತದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಗ್ರಾಮಕ್ಕೆ 10 ಲಕ್ಷ ರೂ.ಬಿಡುಗಡೆ ಮಾಡುವ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಚಿನ್ನಾಕಾರ ಗ್ರಾಮದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡ ಸುಸಜ್ಜಿತವಾಗಿದ್ದು, ಇಡೀ ಕ್ಷೇತ್ರದಲ್ಲಿ ಇಂಥ ಕಟ್ಟಡವಿಲ್ಲ, ನಮ್ಮ ತಂದೆ ಶಾಸಕರಿದ್ದಾಗ ನಿರ್ಮಾಣವಾದ ಈ ಕಟ್ಟಡ ಉದ್ಘಾಟನೆಗೆ ಅನಿವಾರ್ಯವಾಗಿ ಅವರು ಬರಲು ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮದ ದೊಡ್ಡ ಬೆಟ್ಟಕ್ಕೆ ಹೋಗುವ ರಸ್ತೆ ನಿರ್ಮಾಣ ಕಾಮಗಾರಿಗೆ ಸರ್ಕಾರ ಅನುಮೋದನೆ ನೀಡಿದೆ. ಜೆಪಿಯಿಂದ ಮುಖ್ಯಮಂತ್ರಿಗಳು ಹಿಂದಿನ ಸಿಎಂ ಸಿದ್ದರಾಮಯ್ಯ 10 ಕೋಟಿ ರೂ.ಅನುದಾನ ನೀಡಿದ್ದರು. ಅದರಲ್ಲಿ ಮೂರು ಕೋಟಿ ಅನುದಾನ ಬಿಡುಗಡೆಯಾಗಿದ್ದು, ಒಂದೆರಡು ವಾರಗಳಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದು ಭರವಸೆ ನೀಡಿದರು. ಪಂಚಾಯತ್‌ರಾಜ್ ಎಂಜಿನಿಯರಿಂಗ್ ಇಲಾಖೆಯ ಎಇಇ ಶರಣಬಸವ, ನಿರ್ಮಿತಿ ಕೇಂದ್ರದ ಅಧಿಕಾರಿ ಕಿರಣಕುಮಾರ, ಉಪ ತಹಸೀಲ್ದಾರ ಬಸವರಾಜ ಸಜ್ಜನ್, ಬಿಇಒ ಈರಪ್ಪ ಕನ್ನಳ್ಳಿ, ಸಿಡಿಪಿಒ ಶರಣಬಸವ, ಪಿಡಿಒ ಮಲ್ಲಿಕಾರ್ಜುನ ಸಜ್ಜನ್, ಅನುರಾಧ, ಜೆಡಿಎಸ್ ಜಿಲ್ಲಾಧ್ಯಕ್ಷರಾದ ಸುಭಾಷ್ಚಂದ್ರ ಕಟಕಟಿ, ಅಜಯರಡ್ಡಿ ಎಲ್ಹೇರಿ, ಮಹೇಂದ್ರರಡ್ಡಿ ಕಂದಕೂರ, ಈಶ್ವರ ನಾಯಕ, ಮಲ್ಲಿಕಾರ್ಜುನ ಅರುಣಿ, ಆನಂದ ವಡವಟ, ನರಸಿಂಹಲು ಚಿಂತಗುಂಟಾ, ಆನಂದ ಶಿಳ್ಳೆ ಇದ್ದರು

ಚರಂಡಿ ಸ್ವಚ್ಛ ಮಾಡಲು ಅನುದಾನವಿಲ್ಲವೇ?

ಗ್ರಾಮೀಣ ಭಾಗದಲ್ಲಿ ಚರಂಡಿ ಸ್ವಚ್ಛ ಮಾಡಲೂ ಪಂಚಾಯಿತಿಯಲ್ಲಿ ದುಡ್ಡಿಲ್ಲ ಎಂದರೆ ನಿಜಕ್ಕೂ ತಲೆ ತಗ್ಗಿಸುವ ಸಂಗತಿ. ಜನತೆ ನಾವು ಭೇಟಿ ನೀಡಿದಾಗ ಅಂಗನವಾಡಿ, ಶಾಲಾ ಕಟ್ಟಡ, ಆರೋಗ್ಯ ಅನುದಾನ ಕೇಳಿದರೆ ಶಾಸಕರಾಗಿ ನಾವು ಕೊಡಬಹುದು. ಆದರೆ, ಚರಂಡಿ ಸ್ವಚ್ಛಗೊಳಿಸಲು, ಶುದ್ಧ ಕುಡಿಯುವ ನೀರಿಗೂ ಶಾಸಕರೇ ಅನುದಾನ ಕೊಡಬೇಕಾ? ಎಂದು ಆರ್ಡಿಪಿಆರ್ ಇಲಾಖೆ ಮೇಲಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು. ಅಧಿಕಾರಿಗಳು ಕೆಲಸ ಮಾಡಲಿಲ್ಲ ಎಂದರೆ,ಜನತೆ ನೇರವಾಗಿ ಜನಪ್ರತಿನಿಧಿಗಳಿಗೆ ಬಯ್ಯುತ್ತಾರೆ. ಸಣ್ಣಪುಟ್ಟ ಕೆಲಸ ಮಾಡಲು ನಿಮ್ಮಲ್ಲಿ ಹಣ ಇಲ್ಲ ಎಂದು ನನಗೆ ಪತ್ರ ಕೊಡಿ ನಾನೇ ಶಾಸಕರ ಅನುದಾನ ಕೊಡುತ್ತೇನೆ ಎಂದರು.

ರೈಲ್ವೆ ಮೇಲ್ಸೇತುವೆ ಲೋಕಾರ್ಪಣೆ: ಈ.ತುಕಾರಾಂ

ಕುರುಗೋಡು: ಕುಡತಿನಿಯಿಂದ ಸಿದ್ದಮ್ಮನಹಳ್ಳಿ ಮಾರ್ಗದ ಮೂಲಕ ಕುರುಗೋಡಿನ ಐತಿಹಾಸಿಕ ದೊಡ್ಡ ಬಸವೇಶ್ವರ ಸನ್ನಿಧಾನಕ್ಕೆ ಹೋಗಲು ಮತ್ತು ಎರಡು ಪಟ್ಟಣ ಮತ್ತು ಗ್ರಾಮೀಣ ಭಾಗದ ಜನರ ಸುಗಮ ಸಂಚಾರಕ್ಕಾಗಿ ರೈಲ್ವೆ ಮೇಲ್ಸೇತುವೆ ಲೋಕಾರ್ಪಣೆಯೊಂದಿಗೆ ಬಹು ದಶಕದ ಕನಸು ನನಸಾಗಿದೆ ಎಂದು ಸಂಸದ ಈ.ತುಕಾರಾಂ ಹೇಳಿದರು.

ಕುಡತಿನಿ ಪಟ್ಟಣದ ಸಿದ್ದಮ್ಮನಹಳ್ಳಿ ಬಳಿಯಲ್ಲಿ ಸುಮಾರು 62 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಸುಸಜ್ಜಿತ ರೈಲ್ವೆ ಮೇಲ್ಸೇತುವೆಯನ್ನು ಉದ್ಘಾಟಿಸಿ ಮಾತನಾಡಿ, ಇಲ್ಲಿನ ರೈಲ್ವೆ ಮೇಲ್ಸೇತುವೆ ಮಾಡುವದಕ್ಕೆ ಮೊದಲ ಆಧ್ಯತೆ ನೀಡಿ, ಪೂರ್ಣಗೊಳಿಸಲಾಗಿದೆ. ಇದರಿಂದ ಮಾರ್ಗದಲ್ಲಿ ಸಂಚರಿಸಲು ಬಹಳಷ್ಟು ಜನತೆಗೆ ಅನುಕೂಲವಾಗಿದೆ. ಶಾಸಕರ ಅನುದಾನದ ಸುಮಾರು 42 ಲಕ್ಷ ವೆಚ್ಚದಲ್ಲಿ ಕುಡತಿನಿ ಪಟ್ಟಣದ ಮಹಾದ್ವಾರ ನಿರ್ಮಾಣ ಮಾಡಲಾಗುವುದು. ಜನರ ತೆರಿಗೆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡಲಾಗುವುದು. 38 ಎಕರೆಯಲ್ಲಿ ಸುಮಾರು 240 ಕೋಟಿ ವೆಚ್ಚದಲ್ಲಿ ಮುಂದಿನ 50 ವರ್ಷದಲ್ಲಿ ಮಕ್ಕಳು ಸೇರಿದಂತೆ ಪ್ರತಿಯೊಬ್ಬರಿಗೂ ನೀರಿನ ಸಮಸ್ಯೆ ತಲೆದೋರದಂತೆ ಕುಡತಿನಿ, ವೇಣಿವೀರಾಪುರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ರೂಪಿಸಲಾಗಿದೆ. ಮುಂದಿನ ದಿನದಲ್ಲಿ ಕುಡತಿನಿಯಲ್ಲಿ 30 ಹಾಸಿಗೆವುಳ್ಳ ಆಸ್ಪತ್ರೆ ನಿರ್ಮಾಣಕ್ಕೆ ಅನುದಾತ ತರಲಾಗುವುದು. ಕ್ಷೇತ್ರದ ಅಭಿವೃದ್ಧಿ ಜೊತೆಗೆ ಅಖಂಡ ಬಳ್ಳಾರಿ ಜಿಲ್ಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ನಂತರ ಇಲ್ಲಿನ ಏಳುಬೆಂಚಿ ಗ್ರಾಮಕ್ಕೆ ತೆರಳುವ ರೈಲ್ವೆ ಗೇಟ್ ಬಳಿಯಲ್ಲಿ ಕಾಯ್ದಿರಿಸಿರುವ ಜಾಗದಲ್ಲಿ ಸುಮಾರು 3.47 ಕೋಟಿ ಅನುದಾನದಲ್ಲಿ ಘನತ್ಯಾಜ್ಯ ಅಭಿವೃದ್ಧಿ ಕಾಮಗಾರಿಗೆ ಸಂಸದ ಈ.ತುಕಾರಾಂ, ಶಾಸಕಿ ಅನ್ನಪೂರ್ಣ ಶಂಕುಸ್ಥಾಪನೆ ನೆರವೇರಿಸಿದರು.

ಬ್ಲಾಕ್ ಅಧ್ಯಕ್ಷ ಏಕಾಂಬ್ರಪ್ಪ, ಕುಡತಿನಿ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ವಿ.ರಾಜಶೇಖರ, ಮುಖ್ಯಾಧಿಕಾರಿ ಶಿವಲಿಂಗಪ್ಪ, ಮುಖಂಡರಾದ ವೆಂಕಟರಮಣಬಾಬು, ಕನ್ನೇರಿ ಪಂಪಾಪತಿ, ಸತ್ಯಪ್ಪ, ವೆಂಕಟೇಶ, ಕಾಮೇಶ್ ಸೇರಿದಂತೆ ಸ್ಥಳೀಯ ಮುಖಂಡರು, ಕಾರ್ಯಕರ್ತರು ಮತ್ತು ವಿವಿಧ ಇಲಾಖೆ ಅಧಿಕಾರಿಗಳಿದ್ದರು.



ಶಾಸಕ ಗಣೇಶ್‌ಗೆ ಸಚಿವ ಸ್ಥಾನ ನೀಡಿ

ವಿಜಯನಗರ: ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಸೇರಿದಂತೆ ಕನಿಷ್ಠ ಮೂವರು ವಾಲ್ಮೀಕಿ ಸಮುದಾಯದ ಶಾಸಕರಿಗೆ ಸಂಪುಟದಲ್ಲಿ ಸ್ಥಾನ ಕಲ್ಪಿಸಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಿರುವ ಹೊಸಪೇಟೆ ತಾಲೂಕು ವಾಲ್ಮೀಕಿ ನಾಯಕ ಸಮಾಜ, ಒಂದೊಮ್ಮೆ ಗಣೇಶ್‌ಗೆ ಸಚಿವ ಸ್ಥಾನ ಕೈತಪ್ಪಿದರೆ, ಮುಂದೆ ಜಿಲ್ಲೆಗೆ ಭೇಟಿ ನೀಡುವ ಜಿಲ್ಲಾ ಸಚಿವರಿಗೆ ಘೇರಾವ್ ಹಾಕುವುದಾಗಿ ಎಚ್ಚರಿಸಿದೆ.

ಹೊಸಪೇಟೆಯಲ್ಲಿ ತಾಲೂಕು ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ಗೋಸಲ ಭರಮಪ್ಪ, ಪ್ರಮುಖರಾದ ಜಂಬುನಾಥಹಳ್ಳಿ ರಾಮಣ್ಣ, ದೇವರಮನೆ ಶ್ರೀನಿವಾಸ, ಜಂಬುನಾಥ ವಸಂತ್ ಮತ್ತಿತರರು ಮಾತನಾಡಿ, ಹೊಸಪೇಟೆಯ ನಿವಾಸಿಯಾಗಿರುವ ಜೆ.ಎನ್.ಗಣೇಶ್ ಕಂಪ್ಲಿ ಕ್ಷೇತ್ರದ ಮನೆ ಮಗನಾಗಿದ್ದಾರೆ. ಹೀಗಾಗಿ ಅಲ್ಲಿನ ಮತದಾರರು ಅತಿ ಹೆಚ್ಚು ಮತಗಳಿಂದ ಎರಡನೇ ಬಾರಿಗೆ ಗಣೇಶ್ ಅವರನ್ನು ಆಯ್ಕೆ ಮಾಡಿದ್ದಾರೆ. ಕ್ಷೇತ್ರದೊಂದಿಗೆ ಅಖಂಡ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಈ ಬಾರಿ ರಾಜ್ಯ ಕಾಂಗ್ರೆಸ್ ಸರ್ಕಾದಲ್ಲಿ ಹಿರಿಯ ಶಾಸಕರೊಂದಿಗೆ, ಹೊಸಬರು ಹಾಗೂ ಎರಡನೇ ಬಾರಿಗೆ ಆಯ್ಕೆಯಾದವರಿಗೂ ಸಚಿವ ಸ್ಥಾನ ನೀಡಲಿದ್ದು, ಎರಡನೇ ಬಾರಿಗೆ ಶಾಸಕರಾಗಿರುವ ಗಣೇಶ್‌ಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಸಮಾಜದ ಪ್ರಮುಖರಾದ ಬಂಡೆ ರಂಗಪ್ಪ, ಟಿ.ವೆಂಕಟೇಶ್, ಗುಜ್ಜಲ್ ನಿಂಗಪ್ಪ, ಎಸ್.ಎಸ್. ಚಂದ್ರಶೇಖರ್, ಜೆ.ಎನ್.ಸತ್ಯನಾರಾಯಣ, ಹಿಟ್ನಾಳ್ ಹನುಮಂತ, ಡಿ.ನಾಗರಾಜ್, ಸಣ್ಣಕ್ಕಿ ಚಂದ್ರಶೇಖರ್, ಗಂಗಾಧರ್, ಕಣಿವೆಪ್ಪ, ಜೆ.ಎನ್.ವೆಂಕಟೇಶ್, ಕಣ್ಣೆ ಶ್ರೀಕಂಠ, ಗುಜ್ಜಲ್ ದುರುಗಪ್ಪ, ಪೂಜಾರಿ ಆನಂದ್ ಮತ್ತಿತರರು ಉಪಸ್ಥಿತರಿದ್ದರು.

> ಕಂಪ್ಲಿ ಶಾಸಕ ಜೆ.ಎನ್. ಗಣೇಶ್‌ಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಜು.6ರಂದು ಹೊಸಪೇಟೆಯಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು.
> ■ ಗೋಸಲ ಭರಮಪ್ಪ, ಹೊಸಪೇಟೆ ತಾಲೂಕು ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ



ಸಮಾಜದ ಏಳ್ಗೆಗಾಗಿ ಗಾಣಿಗ ಸಮಾಜ ಒಗ್ಗೂಡುವುದು ಅಗತ್ಯ

ಹುಣಸಗಿ: ಗಾಣಿಗ ಸಮಾಜವು ಒಗ್ಗಟಾದಾಗ ಮಾತ್ರ ರಾಜಕೀಯ ಸ್ಥಾನಮಾನ ಜೊತೆಗೆ ಆರ್ಥಿಕ-ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಸಾಧ್ಯ ಎಂದು ಗಾಣಿಗ ಸಮಾಜದ ರಾಜ್ಯಾಧ್ಯಕ್ಷ ಡಾ.ಸುರೇಶ.ಆರ್.ಸಜ್ಜನ್ ಹೇಳಿದರು.

ಪಟ್ಟಣದಲ್ಲಿ ಗಾಣಿಗ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಗಾಣಿಗ ಸಮಾಜದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ಡಾ.ಸುರೇಶ ಆರ್.ಸಜ್ಜನ್ ಅವರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ವೀರಶೈವ ಲಿಂಗಾಯತ ಸಮುದಾಯದ ಒಳಪಂಗಡಗಳು ತಮ್ಮದೇ ಆದ ಸಂಘಟನೆಗಳನ್ನು ಕಟ್ಟಿಕೊಂಡು ಸಮಾಜದ ಅಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿವೆ. ಅದೇ ಮಾದರಿಯಲ್ಲಿ ಗಾಣಿಗ ಸಮಾಜವನ್ನು ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಬಲಿಷ್ಠಗೊಳಿಸುವ ಉದ್ದೇಶದಿಂದ ರಾಜ್ಯಾಧ್ಯಕ್ಷರ ಜವಾಬ್ದಾರಿ ವಹಿಸಿಕೊಂಡಿದ್ದೇನೆ ಎಂದು ಹೇಳಿದರು. ಮುಖಂಡರಾದ ಗುರುಲಿಂಗಪ್ಪ ಸಜ್ಜನ್ ಅವರು ಮಾತನಾಡಿ, ಸುರೇಶ ಸಜ್ಜನ್ ಅವರು ಸಹಕಾರ ಕ್ಷೇತ್ರ, ಶೈಕ್ಷಣಿಕವಾಗಿ ವೀರಶೈವ ಸಮಾಜಕ್ಕೆ ನೀಡಿದ ಕೊಡುಗೆ ಬಗ್ಗೆ ತಿಳಿಸಿದರು. ಸಮಾಜದ ಮುಖಂಡರಾದ ಬಸವರಾಜ್ ಸಜ್ಜನ್ ಹಾಗೂ ರಾಜು ಸಾಲವಾಡಗಿ ಮಾತನಾಡಿದರು.



ಎಸ್‌ಎಸ್‌ಎಲ್‌ಸಿ, ಪಿಯುಸಿ, ಸೈನಿಕ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳು ಸನ್ಮಾನಿಸಲಾಯಿತು. ನಂತರ ಗಾಣಿಗ ಸಮಾಜದ ನೂತನ ಅಧ್ಯಕ್ಷ ಡಾ.ಸುರೇಶ ಸಜ್ಜನ್ ಅವರನ್ನು ಸಮಾಜದ ವತಿಯಿಂದ ಅದ್ದೂರಿಯಾಗಿ ಸನ್ಮಾನಿಸಿ ಗೌರವಿಸಲಾಯಿತು.

ಸಮಾಜದ ಮುಖಂಡರಾದ ಚಂದ್ರಶೇಖರ ಬೋರಮಗುಂಡ್, ನಿಂಗನಗೌಡ ಕಲ್ಲದೇವನಹಳ್ಳಿ, ಚಂದ್ರಶೇಖರ ಸಜ್ಜನ್, ಪ್ರಕಾಶ ಸಜ್ಜನ್, ಪರಮಣ್ಣ ಕಮತಗಿ ಕಕ್ಕೇರಾ, ವಿಜಯಕುಮಾರ ಗುಡಗುಂಟಿ, ಬಸವರಾಜ್ ಸಜ್ಜನ್, ಪ್ರಕಾಶ್ ಸಜ್ಜನ್, ಪರಮಾನಂದ ಚಟ್ಟಿ, ನಾಗಪ್ಪ ಸಜ್ಜನ್, ಬಸವರಾಜ್ ಕಮತಗಿ ಕಕ್ಕೇರಾ ಸೇರಿದಂತೆ ಸಮಾಜದ ಇತರರಿದ್ದರು. ಸಂಗಮ್ಮ ಸಜ್ಜನ್ ಸ್ವಾಗತಿಸಿ ನಿರೂಪಿಸಿದರು. ಶ್ರೀಶೈಲ ಸಜ್ಜನ್ ವಂದಿಸಿದರು.

ಮುಂದುವರಿದ ಸರ್ಕಾರಿ ಜಾಗ ಒತ್ತುವರಿ ತೆರವು ಕಾರ್ಯಾಚರಣೆ

ಬಳ್ಳಾರಿ: ನಗರದ ವಿವಿಧ ವಾರ್ಡ್‌ಗಳಲ್ಲಿರುವ ಕೋಟ್ಯಂತರ ರೂ. ಮೌಲ್ಯದ ಸರ್ಕಾರಿ ಜಾಗ ಹಾಗೂ ಅಂಗನವಾಡಿ ಕೇಂದ್ರಗಳಿಗೆ ಕಾಯ್ದಿರಿಸಿದ ಜಾಗಗಳಲ್ಲಿ ಅತಿಕ್ರಮಣ ಮಾಡಿದ ಸ್ಥಳಗಳನ್ನು ಜಿಲ್ಲಾಡಳಿತ ಗುರುವಾರ ವಶಕ್ಕೆ ಪಡೆದಿದೆ.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರ ನಿರ್ದೇಶನದಂತೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ ಹಾಗೂ ತಹಶೀಲ್ದಾರ್ ಟಿ.ರೇಖಾ ನೇತೃತ್ವದ ಅಧಿಕಾರಿಗಳ ತಂಡ, ನಗರದ ವಿವಿಧೆಡೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಾರ್ವಜನಿಕ ಮತ್ತು ಸರ್ಕಾರಿ ಜಾಗಗಳನ್ನು ರಕ್ಷಿಸಲಾಯಿತು. ಬೆಳ್ಳಂಬೆಳಗ್ಗೆ ವಿವಿಧ ಯಂತ್ರೋಪಕರಣಗಳ ಮೂಲಕ ಸರ್ಕಾರಕ್ಕೆ ಸೇರಬೇಕಾದ ಜಾಗಗಳನ್ನು ಜಿಲ್ಲಾಡಳಿತದ ವತಿಯಿಂದ ತೆರವುಗೊಳಿಸಲಾಯಿತು. ಬಳ್ಳಾರಿ ನಗರದ ಸಿಟಿಎಸ್ ವಾರ್ಡ್ ನಂ. 21, ಬ್ಲಾಕ್ ನಂ. 03ರ ಟಿ.ಎಸ್ ನಂ.41ರಲ್ಲಿದ್ದ 0.08ಸೆಂಟ್ಸ್ ಜಾಗವನ್ನು ಅಂಗನವಾಡಿ ಕೇಂದ್ರಕ್ಕೆ ನಿಗದಿಪಡಿಸಲಾಗಿದ್ದು, ಇಲ್ಲಿ ಅತಿಕ್ರಮಣಗೊಂಡ ಜಾಗವನ್ನು ಸುಪರ್ದಿಗೆ ಪಡೆದುಕೊಂಡು ಅತಿಕ್ರಮಣದಾರರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ನಾಮಫಲಕ ಅಳವಡಿಸಲಾಗಿದೆ.ವಾರ್ಡ್ ನಂ.22, ಬ್ಲಾಕ್ ನಂ. 11ರ ಟಿ.ಎಸ್ ನಂ.94ವಿಯಲ್ಲಿರುವ ಸುಮಾರು 0.49.6ಸೆಂಟ್ಸ್ ವಿಸ್ತೀರ್ಣದ ಕರ್ನಾಟಕ ಸರ್ಕಾರದ ಬಯಲು ಜಾಗವನ್ನು ಜಿಲ್ಲಾಡಳಿತ ತೆರವುಗೊಳಿಸಿದೆ.



ಸರ್ಕಾರಿ ಆಸ್ತಿಯನ್ನು ಸಾರ್ವಜನಿಕರ ಹಿತಬಲಿಗಾಗಿ ಕಾಯ್ದಿರಿಸಲಾಗಿದ್ದು, ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳು ಇದನ್ನು ಅಕ್ರಮವಾಗಿ ವಶಪಡಿಸಿಕೊಳ್ಳಲು ಯತ್ನಿಸಿದರೆ ಮುಲಾಜಿಲ್ಲದೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಡಳಿತ ಖಡಕ್ ಸೂಚನೆ ನೀಡಿದೆ. ಡಿಡಿಎಲ್‌ಆರ್ ಪ್ರಮೋದ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಜಿ.ಖಲೀಲ್ ಸಾಬ್ ಇತರರಿದ್ದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಚುರುಕು

ಬಳ್ಳಾರಿ: ರಾಜ್ಯದಲ್ಲಿ ಅತ್ಯಂತ ಯಶಸ್ವಿಯಾಗಿ, ಚುರುಕಾಗಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಅಭಿಯಾನ ಜಿಲ್ಲೆಯಾದ್ಯಂತ ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ನಗರದ ಕೋಟೆ ಪ್ರದೇಶದ ಲಿಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ನಿವಾಸಕ್ಕೆ ಬಿಎಲ್‌ಒ ಅಧಿಕಾರಿಗಳ ತಂಡ ಭೇಟಿ ನೀಡಿ, ಪೂರಕ ಮಾಹಿತಿ ಪಡೆದು, ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು.

ಪ್ರಜಾಪ್ರಭುತ್ವದ ಬುನಾದಿಯಾದ ಮತದಾನ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಬುಧವಾರ ಬೆಳಿಗ್ಗೆ ಅಧ್ಯಕ್ಷರ ನಿವಾಸಕ್ಕೆ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಹಾಗೂ ಬೂತ್ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಎನ್ಯುಮರೇಷನ್ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನೆರವೇರಿಸಿದರು.ಅಧಿಕಾರಿಗಳು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಆಧಾರ್ ಜೋಡಣೆ ಕುರಿತು ಸುದೀರ್ಘವಾಗಿ ಚರ್ಚಿಸಿದರು.ಫೋಟೋ ಸ್ಪಷ್ಟತೆ ಹಾಗೂ ನಿಯಮಗಳ ಕುರಿತು ಜಾಗೃತಿ ಮೂಡಿಸಿದರು.

ಚುನಾವಣಾ ಅಧಿಕಾರಿಗಳು ಮತದಾರರ ಗುರುತಿನ ಚೀಟಿಗೆ ಬಳಸಲಾಗುವ ಫೋಟೋಗಳ ತಾಂತ್ರಿಕ ನಿಯಮಗಳ ಬಗ್ಗೆ ಪ್ರಮುಖ ಮಾಹಿತಿಯನ್ನು ಹಂಚಿಕೊಂಡರು. ಮತದಾರರ ಪಟ್ಟಿಯಲ್ಲಿ ಭಾವಚಿತ್ರಗಳು ಅಸ್ಪಷ್ಟವಾಗಿ ಬರುವುದನ್ನು ತಡೆಯಲು ಕೆಲವು ಕಡ್ಡಾಯ ಕ್ರಮಗಳನ್ನು ಪಾಲಿಸಬೇಕು ಎಂದು ಅಧಿಕಾರಿಗಳು ತಿಳಿಸಿದರು. ವಿಶೇಷವಾಗಿ, ಮತದಾರರ ಪಟ್ಟಿಗೆ ಸಲ್ಲಿಸುವ ಫೋಟೋಗಳು ಬಿಳಿ ಹಿನ್ನೆಲೆಯನ್ನು ಹೊಂದಿರಬೇಕು ಹಾಗೂ ಕಡ್ಡಾಯವಾಗಿ ಬಣ್ಣದ ಫೋಟೋಗಳಾಗಿರಬೇಕು. ಒಂದು ವೇಳೆ ಹಿನ್ನೆಲೆಯೂ ಬಿಳಿಯಾಗಿದ್ದು, ಮತದಾರ ಧರಿಸಿರುವ ಶರ್ಟ್ ಅಥವಾ ಉಡುಪೂ ಬಿಳಿಯಾಗಿದ್ದರೆ ಎಲೆಕ್ಟೋರಲ್ ರೋಲ್‌ನಲ್ಲಿ ಭಾವಚಿತ್ರವು ಸ್ಪಷ್ಟವಾಗಿ ಕಾಣಿಸದೆ ಕೇವಲ ಮುಖ ಮಾತ್ರ ಎದ್ದು ಕಾಣುತ್ತದೆ ಮತ್ತು ತಾಂತ್ರಿಕವಾಗಿ ತಪ್ಪು ಎಂದು ಪರಿಗಣಿತವಾಗುವ ಸಾಧ್ಯತೆ ಇರಲಿದೆ. ಈ ಹಿನ್ನೆಲೆ ಅಧಿಕಾರಿಗಳ ಸೂಚನೆಯಂತೆ ಫೋಟೋಗಳನ್ನು ಒದಗಿಸುವುದು ಅತ್ಯಗತ್ಯ ಎಂದರು. ಸಹಾಯಕ ಆಯುಕ್ತ ರಾಜೇಶ್ ಎಚ್.ಡಿ., ತಹಶೀಲ್ದಾರ್ ರೇಖಾ ಸೇರಿದಂತೆ ಅಧಿಕಾರಿಗಳಿದ್ದರು.



ರಾಷ್ಟ್ರೀಯ ವೈದ್ಯರ ದಿನಾಚರಣೆ: ಸನ್ಮಾನ

ಹಗರಿಬೊಮ್ಮನಹಳ್ಳಿ: ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಇಲ್ಲಿನ ಸರ್ಕಾರಿ ಗಂಗಾವತಿ ವೆಂಕೋಬಣ್ಣ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುವ ವೈದ್ಯರನ್ನು ನಾಗಭೂಷಣ ಗದ್ದಿಕೇರಿ ಮತ್ತು ಅವರ ತಂಡದಿಂದ ಸನ್ಮಾನಿಸಲಾಯಿತು.

ಮುಖ್ಯ ವೈದ್ಯಾಧಿಕಾರಿ ಡಾ.ಶಿವಕುಮಾರ್ ಮಾತನಾಡಿ, ವೈದ್ಯಕೀಯ ಸೇವೆ ಇನ್ನಷ್ಟು ಪರಿಣಾಮಕಾರಿಯಾಗಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದೆ ಎಂದು ತಿಳಿಸಿದರು. ವೈದ್ಯರು ಎದುರಿಸುತ್ತಿರುವ ಇಂದಿನ ಪರಿಸ್ಥಿತಿಯ ಕುರಿತು ವಿವರಿಸಿ, ಹಗರಿಬೊಮ್ಮನಹಳ್ಳಿ ಸರ್ಕಾರಿ ಆಸ್ಪತ್ರೆಯನ್ನು ಇನ್ನಷ್ಟು ಉನ್ನತೀಕರಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಡಾ.ತಿಪ್ಪೇಸ್ವಾಮಿ, ಡಾ.ಅಚ್ಯುತ್, ನಾಗಭೂಷಣ ಗದ್ದಿಕೇರಿ ಮಾತನಾಡಿದರು. ಡಾ.ಸಿದ್ಧಾರ್ಥ್, ಡಾ.ರಾಜೇಶ್ ನಾಯಕ್, ಡಾ.ಮಾಲತೇಶ್, ಡಾ.ವಿನಾಯಕ, ಡಾ.ಲಕ್ಷ್ಮೀದೇವಿ, ಡಾ.ಭಾರತಿ ಹಾಗೂ ಡಾ.ಅಂಜುಮ್ ಮುನಿಸಾ, ರಾಷ್ಟ್ರೋತ್ಥಾನ ವಿದ್ಯಾ ಪರಿಷತ್‌ನ ಸೋಮನಗೌಡ್ರು, ದುರ್ಗಣ್ಣ, ಕೊಟ್ರಪ್ಪ, ರಮೇಶ್, ಮಂಜುನಾಥ್, ರಘುನಂದನ್, ವಿರೂಪಾಕ್ಷಿ, ಶ್ರೀನಿವಾಸ್ ಹಂಪಾಪಟ್ಟಣ ಹಾಗೂ ರಾಘವೇಂದ್ರ, ಆಸ್ಪತ್ರೆಯ ಆರೋಗ್ಯ ಅಧಿಕಾರಿಗಳು ಸಿಬ್ಬಂದಿ ಪಾಲ್ಗೊಂಡಿದ್ದರು. ಪ್ರಾರ್ಥನಾ ಗೀತಾ ಶರತ್ ಹಿರೇಮಠ್ ನಿರ್ವಹಿಸಿದರು.



ಸಮಾಜದ ಋಣ ತೀರಿಸಿ: ಕೃಷ್ಣನಾಯಕ್

ಹೂವಿನಹಡಗಲಿ: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಮಹತ್ವದ ಕ್ರಮವಾಗಿ ಸರ್ಕಾರ ಮೊದಲ ಬಾರಿಗೆ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಣೆ ಆರಂಭಿಸಿದೆ. ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಾಸಕ ಎಲ್.ಕೃಷ್ಣನಾಯಕ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಸೊಪ್ಪಿನ ಕಾಳಮ್ಮನವರ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ಪಠ್ಯಪುಸ್ತಕ ವಿತರಿಸಿ ಮಾತನಾಡಿದರು.ಸರ್ಕಾರದ ಶೈಕ್ಷಣಿಕ ಕಲ್ಯಾಣ ಯೋಜನೆಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ.ಜ್ಞಾನ, ಕೌಶಲ್ಯ ಹಾಗೂ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣದಿಂದ ದೊರೆಯುವ ಅವಕಾಶಗಳನ್ನು ಸಮಾಜದ ಅಭಿವೃದ್ಧಿಗೆ ಬಳಸುವ ಮೂಲಕ ತಮ್ಮ ಸಾಮಾಜಿಕ ಋಣವನ್ನು ತೀರಿಸಬೇಕು ಎಂದರು.

ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾದ ವಾತಾವರಣ ನಿರ್ಮಿಸುವುದು ಸರ್ಕಾರದ ಆದ್ಯತೆಯಾಗಿದ್ದು, ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಕೊಟ್ರಗೌಡ ಅಯ್ಯನಗೌಡ್ರ ಮಾತನಾಡಿ, ತಂತ್ರಜ್ಞಾನ ಯುಗದ ಅಗತ್ಯತೆಗಳಿಗೆ ಅನುಗುಣವಾಗಿ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯರಿಗಾಗಿ ಪ್ರಸ್ತ ಶೈಕ್ಷಣಿಕ ವರ್ಷದಿಂದ ಕಂಪ್ಯೂಟರ್ ಸೈನ್ಸ್ ವಿಷಯವನ್ನು ಆರಂಭಿಸಲಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿನಿಯರಿಗೆ ಆಧುನಿಕ ತಾಂತ್ರಿಕ ಶಿಕ್ಷಣದ ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದರು. ವಿದ್ಯಾರ್ಥಿನಿಯರಲ್ಲಿ ನಾಯಕತ್ವ, ಶಿಸ್ತು, ಸಾಮಾಜಿಕ ಬದ್ಧತೆ, ಸಹಾನುಭೂತಿ ಹಾಗೂ ಸೇವಾ ಮನೋಭಾವ ಬೆಳೆಸುವ ಉದ್ದೇಶದಿಂದ ಕಾಲೇಜಿಗೆ ಎರಡು ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕಗಳಿಗೆ ಇಲಾಖೆಯಿಂದ ಅನುಮೋದನೆ ದೊರೆತಿದೆ. ಈ ಘಟಕಗಳ ಮೂಲಕ ವಿದ್ಯಾರ್ಥಿನಿಯರು ಸಮುದಾಯ ಸೇವೆ, ಸಾಮಾಜಿಕ ಜಾಗೃತಿ ಹಾಗೂ ರಾಷ್ಟ್ರ ನಿರ್ಮಾಣದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದು, ಅವರ ವ್ಯಕ್ತಿತ್ವ ವಿಕಸನಕ್ಕೂ ಇದು ಪೂರಕವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಉಪನ್ಯಾಸಕರಾದ ಬಸೆಟ್ಟಿ ಪ್ರಕಾಶ್, ಶಿವಕುಮಾರ್, ದುಷ್ಯಂತ, ಶ್ರೀಕಾಂತ್, ಆರತಿ, ಶಂಕರ್, ಪರಂಜ್ಯೋತಿ, ಉಮಾ ಹಾಗೂ ರಶ್ಮಿ ಉಪಸ್ಥಿತರಿದ್ದರು. ಎನ್‌ಎಸ್‌ಎಸ್ ಅಧಿಕಾರಿಗಳಾದ ವೀರೇಶ್ ಹಾಗೂ ಮಂಜುನಾಥ್ ಭಾಗವಹಿಸಿದ್ದರು.

